ಅವಲಂಬಿಸಿರಬೇಕು. ಜನಸಾಂದ್ರತೆಯು ಚ.ಕಿ.ಮೀಗೆ ಕನಿಷ್ಠ ೪೦೦ರಷ್ಟಾದರೂ ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡುಪ್ರದೇಶ, ಅಧಿಸೂಚಿತ(ನೋಟಿಫೈಡ್) ಪ್ರದೇಶಗಳು ಪಟ್ಟಣಗಳ ವ್ಯಾಪ್ತಿಗೆ ಬರುತ್ತವೆ. ತುಮಕೂರು ಜಿಲ್ಲೆಯಲ್ಲಿ ವರ್ಗ–I ಕ್ಕೆ ಸೇರಿದ ಪಟ್ಟಣಗಳು ೧೯೭೧ರವರೆಗೂ ಯಾವುದು ಇರಲಿಲ್ಲ. ೧೯೮೧ ರಿಂದ ೨೦೧೧ ರವರೆಗೂ ಈ ವರ್ಗಕ್ಕೆ ಸೇರಿದ ಒಂದು (ತುಮಕೂರು) ಪಟ್ಟಣವಿದ್ದು ಇದು ಕ್ರಮವಾಗಿ ೧,೦೮,೬೭೦, ೧,೭೯,೮೭೭, ೨,೪೮,೯೨೯ ಹಾಗೂ ೩೦೨೧೪೩ (೨೦೧೧) ಜನಸಂಖ್ಯೆಯನ್ನು ಹೊಂದಿತ್ತು. ವರ್ಗ–IIರ ಪಟ್ಟಣ ೫೦,೦೦೦ ರಿಂದ ೯೯,೯೯೯ ಜನಸಂಖ್ಯೆಯನ್ನು ಹೊಂದಿರಬೇಕು. ೧೯೬೧ರ ವರೆಗೂ ವರ್ಗ–II ಕ್ಕೆ ಸೇರಿದ ಯಾವುದೇ ಪಟ್ಟಣಗಳು ಜಿಲ್ಲೆಯಲ್ಲಿ ಇರಲಿಲ್ಲ. ಆದರೆ ೧೯೭೧ ರಲ್ಲಿ ಒಂದು ಪಟ್ಟಣ ಮಾತ್ರ ಈ ವರ್ಗದಲ್ಲಿದ್ದು, ೭೦,೪೭೬ ಜನಸಂಖ್ಯೆಯನ್ನು ಹೊಂದಿತ್ತು, ೧೯೮೧ ಹಾಗೂ ೧೯೯೧ ರಲ್ಲಿ ಈ ವರ್ಗಕ್ಕೆ ಸೇರಿದ ಪಟ್ಟಣಗಳಿರಲಿಲ್ಲ. ಆದರೆ, ೨೦೦೧ರಲ್ಲಿ ಎರಡು (ಶಿರಾ ಮತ್ತು ತಿಪಟೂರು) ಪಟ್ಟಣಗಳಿದ್ದು, ಅವುಗಳ ಒಟ್ಟು ಜನಸಂಖ್ಯೆ ೧,೦೩,೧೯೨ ಆಗಿತ್ತು. ೨೦೧೧ ರಲ್ಲೂ ಈ ವರ್ಗದಲ್ಲಿ ಎರಡು ಪಟ್ಟಣಗಳಿದ್ದು (ಶಿರಾ ಮತ್ತು ತಿಪಟೂರು) ೧,೧೭,೦೯೭ ಜನಸಂಖ್ಯೆಗೆ ಹೆಚ್ಚಳ ಕಂಡಿತು. ೧೯೩೧ರವರೆಗೂ ವರ್ಗ–III ಕ್ಕೆ ಸೇರಿದ ಯಾವುದೇ ಪಟ್ಟಣಗಳಿರಲಿಲ್ಲ. ಈ ವರ್ಗಕ್ಕೆ ಸೇರಬೇಕಾದರೆ ೨೦,೦೦೦ ರಿಂದ ೪೯,೯೯೯ ಜನಸಂಖ್ಯೆ ಇರಬೇಕು. ಈ ವರ್ಗಕ್ಕೆ ೧೯೪೧ ರಲ್ಲಿ ಒಂದು ಪಟ್ಟಣ (೨೧,೮೯೩), ೧೯೫೧ರಲ್ಲಿ ಒಂದು ಪಟ್ಟಣ (೩೫,೯೯೯), ೧೯೬೧ರಲ್ಲಿ ಒಂದು ಪಟ್ಟಣ (೪೭,೨೭೭), ೧೯೭೧ರಲ್ಲಿ ಒಂದು ಪಟ್ಟಣ (೨೨,೫೯೨), ೧೯೮೧ರಲ್ಲಿ ಎರಡು ಪಟ್ಟಣ (೫೮,೧೩೩) ಹಾಗೂ ೧೯೯೧ರಲ್ಲಿ ನಾಲ್ಕು ಪಟ್ಟಣಗಳು (೧,೧೪,೫೦೬), ೨೦೦೧ ರಲ್ಲಿ ನಾಲ್ಕು ಪಟ್ಟಣಗಳು (೧,೦೭,೧೦೪) ಹಾಗೂ ೨೦೧೧ ರಲ್ಲಿ ನಾಲ್ಕು ಪಟ್ಟಣಗಳಿದ್ದು (೧,೧೫,೦೦೬) ಕಂಸದಲ್ಲಿ ನೀಡಿರುವ ಸಂಖ್ಯೆಯು ಅವುಗಳ ಒಟ್ಟು ಜನಸಂಖ್ಯೆಯನ್ನು ಸೂಚಿಸುತ್ತವೆ. ವರ್ಗ– IVಕ್ಕೆ ಸೇರಿದ ಪಟ್ಟಣ ೧೯೦೧ರಲ್ಲಿ ಒಂದು (೧೧,೮೮೮), ೧೯೨೧ರಲ್ಲಿ ಒಂದು (೧೪,೨೪೬), ೧೯೩೧ ರಲ್ಲಿ ಒಂದು(೧೮,೧೯೬), ೧೯೫೧ರಲ್ಲಿ ಎರಡು (೨೩,೯೮೫), ೧೯೬೧ರಲ್ಲಿ ಐದು (೬೩,೧೮೨) ೧೯೭೧ರಲ್ಲಿ ನಾಲ್ಕು (೫೮,೯೧೪), ೧೯೮೧ರಲ್ಲಿ ಐದು (೭೭,೮೫೬), ೧೯೯೧ರಲ್ಲಿ ಐದು (೭೩,೪೨೩), ೨೦೦೧ ರಲ್ಲಿ ಮೂರು (೪೩,೭೪೧) ಹಾಗೂ ೨೦೧೧ ರಲ್ಲಿ ನಾಲ್ಕು (೬೨,೨೦೯) ಪಟ್ಟಣಗಳಿದ್ದವು. ವರ್ಗ–V ಕ್ಕೆ ಸೇರಿದ ಪಟ್ಟಣಗಳು ೫,೦೦೦ ರಿಂದ ೯,೯೯೯ ಜನಸಂಖ್ಯೆಯನ್ನು ಹೊಂದಿರಬೇಕು. ೧೯೦೧ರಲ್ಲಿ ಎರಡು (೧೧,೭೦೬), ೧೯೧೧ರಲ್ಲಿ ಮೂರು (೧೬,೮೦೦), ೧೯೨೧ರಲ್ಲಿ ನಾಲ್ಕು (೨೨,೪೩೪), ೧೯೩೧ರಲ್ಲಿ ಆರು (೩೫,೫೩೫), ೧೯೪೧ ರಲ್ಲಿ ನಾಲ್ಕು (೨೬,೨೮೫), ೧೯೫೧ರಲ್ಲಿ ನಾಲ್ಕು (೨೯,೮೫೭), ೧೯೬೧ರಲ್ಲಿ ಎರಡು (೧೪,೪೫೬), ೧೯೭೧ರಲ್ಲಿ ಐದು (೩೭,೦೪೮), ೧೯೮೧ರಲ್ಲಿ ಮೂರು (೨೪,೫೮೧), ೧೯೯೧ರಲ್ಲಿ ಒಂದು (೯,೪೮೬) ಪಟ್ಟಣವಿದ್ದರೆ, ೨೦೦೧ ಹಾಗೂ ೨೦೧೧ ರಲ್ಲಿ ಈ ವರ್ಗಕ್ಕೆ ಸೇರಿದ ಯಾವುದೇ ಪಟ್ಟಣಗಳಿರಲಿಲ್ಲ. ವರ್ಗ–VI ಕ್ಕೆ ಸೇರಿದ ಪಟ್ಟಣಗಳು ೫,೦೦೦ ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರಬೇಕು. ಈ ವರ್ಗದಲ್ಲಿ ೧೯೦೧ರಲ್ಲಿ ಹದಿನೈದು (೩೫,೦೭೪), ೧೯೧೧ರಲ್ಲಿ ಏಳು (೨೦,೧೮೯), ೧೯೨೧ರಲ್ಲಿ ಐದು (೧೪,೮೪೮), ೧೯೩೧ರಲ್ಲಿ ಮೂರು (೭,೮೫೫), ೧೯೪೧ರಲ್ಲಿ ಐದು(೧೩,೯೬೪), ೧೯೫೧ರಲ್ಲಿ ನಾಲ್ಕು(೧೫,೯೨೧), ೧೯೬೧ರಲ್ಲಿ ಮೂರು(೧೪,೦೭೪), ೧೯೭೧ರಲ್ಲಿ ಒಂದು(೧,೫೭೭), ೧೯೮೧ರಲ್ಲಿ ಒಂದು(೩,೦೪೪), ೧೯೯೧ರಲ್ಲಿಒಂದು (೪,೮೭೧), ೨೦೦೧ ರಲ್ಲಿ ಒಂದು (೪,೨೩೬) ಹಾಗೂ ೨೦೧೧ ರಲ್ಲಿ ಒಂದು ಪಟ್ಟಣವಿದ್ದು (೨,೬೨೩) ಜನಸಂಖ್ಯೆಯನ್ನು ಹೊಂದಿತ್ತು. ಜಿಲ್ಲೆಯಲ್ಲಿನ ಪಟ್ಟಣ ಪ್ರದೇಶ ಹಾಗೂ ಅವುಗಳ ಜನಸಂಖ್ಯೆಯು ೨೦೧೧ರ ಜನಗಣತಿಯಂತೆ ಹೀಗಿವೆ. (ಕಂಸದಲ್ಲಿರುವ ಅಂಕಿಗಳು ಕ್ರಮವಾಗಿ ಪುರುಷರ ಮತ್ತು ಸ್ತ್ರೀಯರ ಸಂಖ್ಯೆಯನ್ನು ಸೂಚಿಸುತ್ತವೆ). ಚಿಕ್ಕನಾಯಕನಹಳ್ಳಿ ೨೩,೨೦೬ (೧೧,೪೪೪/೧೧,೭೬೨) ಹುಳಿಯಾರ್ ೧೪,೩೦೪ (೭,೦೮೪/೭,೨೨೦), ಸಿರಾ ೫೭,೫೫೪ (೨೯,೦೫೮/೨೮,೪೯೬), ಪಾವಗಡ ೨೮,೪೮೬ (೧೪,೨೯೯/೧೪,೧೮೭), ಮಧುಗಿರಿ ೨೯,೧೫೪ (೧೪,೫೮೪/೧೪,೫೭೫), ಕೊರಟಗೆರೆ ೧೫,೨೬೫ (೭,೬೦೦/೭,೬೬೫), ತುಮಕೂರು ೩,೦೨,೧೪೩ (೧,೫೨,೯೨೫ / ೧೪೯೨೧೮), ಗುಬ್ಬಿ ೧೮,೪೪೬ (೯,೨೨೬/೯,೨೨೦), ತಿಪಟೂರು ೫೯೫೪೩ (೨೯,೯೪೯/೨೯,೫೯೪), ತುರುವೇಕೆರೆ ೧೪,೧೯೪ (೭,೦೫೯/೭,೧೩೫), ಆದಿತ್ಯಪಟ್ಟಣ ೨,೬೨೩ (೧,೩೩೮/೧,೨೮೫) ಹಾಗೂ ಕುಣಿಗಲ್ ೩೪,೧೫೫ (೧೭,೩೧೮/೧೬,೮೩೭). ೨೦೧೧ ರ ಜನಗಣತಿ ಪ್ರಕಾರ ಜಿಲ್ಲೆಯ ಪಟ್ಟಣಪ್ರದೇಶದ ಜನಸಾಂದ್ರತೆಯು ೪೧೧೧ ಆಗಿದ್ದು, ವಿವರಕ್ಕೆ ಕೋಷ್ಟಕ ೩.೧೪ ನೋಡಿ. ಪಟ್ಟಣ ಜನಸಂಖ್ಯೆಯಲ್ಲಿನ ಬೆಳವಣಿಗೆಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಕೋಷ್ಟಕ ೩.೧೫ ನೋಡಿ.

## ಕೋಷ್ಟಕ.೩.೧೪: ೧೯೦೧ ರಿಂದ ೨೦೧೧ ರವರೆಗಿನ ಜನಗಣತಿಯಂತೆ ಜಿಲ್ಲೆಯ ವಿವಿಧ ನಗರಗಳ ಜನಸಂಖ್ಯೆ ಮತ್ತು ಅವುಗಳ ಸ್ಥಿತಿಗತಿ

| | | ೧೯೦೧ | ೧೯೧೧ | ೧೯೨೧ | ೧೯೩೧ | ೧೯೪೧ | ೧೯೫೧ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ | ೨೦೧೧ | ಜನಸಾಂದ್ರತೆ ೨೦೧೧ರ ಗಣತಿ |
|---|---|---|---|---|---|---|---|---|---|---|---|---|---|---|
| ೧ | ಚಿಕ್ಕನಾಯಕನಹಳ್ಳಿ (ಟಿಎಂಸಿ) | ೬೧೧೩ | ೫೧೮೮ | ೬೪೩೨ | ೬೬೧೨ | ೩೩೧೩ | ೮೩೮೮ | ೧೦೩೭೫ | ೧೩೦೬೧ | ೧೫೫೯೬ | ೧೭೬೬೩ | ೨೨೩೮೯ | ೨೩೨೦೬ | ೪೪೬೦ |
| ೨ | ಹುಳಿಯಾರು (ಸಿ.ಟಿ) ಚಿಕ್ಕನಾಯಕನಹಳ್ಳಿ ತಾ॥ | – | – | – | – | – | – | – | – | – | – | ೧೪೩೦೪ | – | – |
| ೩ | ಕೊರಟಗೆರೆ (ಟಿ.ಪಿ) | ೨೮೧೧ | ೨೯೬೫ | ೩೦೨೮ | ೨೯೩೮ | ೨೯೭೯ | ೩೬೯೫ | ೪೩೦೧ | ೫೮೯೪ | ೮೦೮೫ | ೧೧೫೩೧ | ೧೩೬೫೫ | ೧೫೨೬೫ | ೧೧೩೭೯ |
| ೪ | ಕುಣಿಗಲ್ (ಟಿಎಂಸಿ) | ೧೮೦೨ | ೧೪೦೫ | ೩೦೪೪ | ೫೩೪೧ | ೫೮೪೬ | ೮೯೦೮ | ೧೦೫೬೬ | ೧೩೪೩೭ | ೧೮೦೭೬ | ೨೩೨೩೨ | ೩೦೩೪೩ | ೩೪೧೫೫ | ೫೩೪೨ |
| ೫ | ಮಧುಗಿರಿ(ಟಿಎಂಸಿ) | ೪೦೬೦ | ೪೫೪೫ | ೫೧೪೩ | ೫೮೬೫ | ೧೪೬೦ | ೫೪೧೬ | ೧೧೨೭೫ | ೧೪೧೧೭ | ೧೮೦೮೨ | ೨೧೮೨೮ | ೨೬೩೦೪ | ೨೯೧೫೯ | ೩೨೮೮ |
| ೬ | ಗುಬ್ಬಿ (ಟಿಪಿ) | ೫೫೯೩ | ೩೪೬೪ | ೫೨೬೩ | ೫೬೬೩ | ೬೧೨೯ | ೭೧೪೫ | ೮೫೪೩ | ೯೫೩೭ | ೧೧೬೬೭ | ೧೩೮೧೪ | ೧೬೮೦೫ | ೧೮೪೪೬ | ೩೮೩೭ |
| ೭ | ಪಾವಗಡ (ಟಿ.ಎಂ.ಸಿ) | ೨೮೪೦ | ೨೫೯೪ | ೨೫೨೯ | ೨೭೫೦ | ೩೫೩೪ | ೪೪೮೦ | ೫೯೧೩ | ೯೦೦೪ | ೧೪೪೩೫ | ೧೯೩೦೬ | ೨೮೦೬೮ | ೨೮೪೮೬ | ೪೨೭೨ |
| ೮ | ಶಿರಾ(ಸಿಎಂಸಿ) | ೪೦೫೯ | ೫೫೭೩ | ೫೫೯೬ | ೬೮೯೪ | ೬೭೯೭ | ೧೨೧೮೩ | ೧೫೪೦೮ | ೧೮೨೯ | ೨೭೬೬೫ | ೩೩೩೯೩ | ೫೦೦೮೮ | ೫೭೫೫೪ | ೩೮೫೯ |
| ೯ | ತಿಪಟೂರು (ಸಿಎಂಸಿ) | ೩೫೬೦ | ೨೫೩೧ | ೪೩೧೧ | ೫೧೬೦ | ೭೫೧೩ | ೧೧೮೦೩ | ೧೫೫೫೮ | ೨೨೫೯೨ | ೩೦೪೬೮ | ೩೬೦೫೩ | ೫೩೧೦೪ | ೫೯೫೪೩ | ೫೧೭೧ |
| ೧೦ | ತುಮಕೂರು (ಸಿಎಂಸಿ) | ೧೩೯೫೫ | ೬೦೩೯ | ೧೪೨೪೬ | ೧೮೧೯೬ | ೨೧೮೯೩ | ೩೫೯೯೯ | ೪೭೨೭೭ | ೭೦೪೭೬ | ೧೦೮೬೭೦ | ೧೭೯೮೭೭ | ೨೪೮೯೨೯ | ೩೦೨೧೪೩ | ೩೮೭೩ |
| ೧೧ | ತುರುವೇಕೆರೆ (ಟಿ.ಪಿ) | ೨೩೩೩ | ೨೬೮೫ | ೧೯೩೬ | ೨೧೩೬ | ೨೬೭೮ | ೩೭೩೨ | ೪೯೮೩ | ೬೫೩೬ | ೮೯೮೮ | ೧೧೧೧೯ | ೧೭೫೧೭ | ೧೪೯೧೪ | ೩೪೫೯ |
| ೧೨ | ಆದಿತ್ಯ ಪಟ್ಟಣ. ( ಸಿ.ಟಿ.) (ತುರುವೇಕೆರೆ ತಾ) | – | – | – | – | – | – | ೧೫೭೭ | ೩೦೪೪ | ೪೮೭೧ | ೪೨೩೬ | ೨೬೨೩ | ೩೩೮೯ | – |
| | ಜಿಲ್ಲಾ ಮೊತ್ತ | ೫೮೬೬೮ | ೩೬೯೮೯ | ೫೧೫೨೮ | ೬೧೫೮೬ | ೬೨೧೪೨ | ೧೦೫೭೬೨ | ೧೩೮೯೮೯ | ೧೯೦೬೦೭ | ೨೭೨೨೮೪ | ೩೮೨೧೬೩ | ೫೦೭೨೦೨ | ೫೯೦೭೮ | ೪೧೧೧ |

**ಕೋಷ್ಟಕ ೩.೧೫: ೧೯೦೧ ರಿಂದ ೨೦೧೧ ರವರೆಗಿನ ಜಿಲ್ಲೆಯ ಪಟ್ಟಣಗಳ ಸಂಖ್ಯೆ ಹಾಗೂ ಜನಸಂಖ್ಯೆ ವಿವರ**

| ವರ್ಷಗಳು | ಪಟ್ಟಣಗಳ ಸಂಖ್ಯೆ | ಪಟ್ಟಣಗಳ ಜನಸಂಖ್ಯೆ | ಪಟ್ಟಣಗಳ ಜನಸಂಖ್ಯೆಯ ದಶಕವಾರು ಬೆಳವಣಿಗೆ |
|---|---|---|---|
| ೧೯೦೧ | ೧೮ | ೫೮,೬೬೮ | – |
| ೧೯೧೧ | ೧೦ | ೩೬,೯೮೯ | –೨೧,೬೭೯ |
| ೧೯೨೧ | ೧೦ | ೫೧,೫೨೮ | +೧೪,೫೩೯ |
| ೧೯೩೧ | ೧೦ | ೬೧,೫೮೬ | +೧೦,೦೫೮ |
| ೧೯೪೧ | ೧೦ | ೬೨,೧೪೨ | +೫೫೬ |
| ೧೯೫೧ | ೧೧ | ೧,೦೫,೭೬೨ | +೪೩,೬೨೦ |
| ೧೯೬೧ | ೧೧ | ೧,೩೮,೯೮೯ | +೩೩,೨೨೭ |
| ೧೯೭೧ | ೧೨ | ೧,೯೦,೬೦೭ | +೫೧,೬೧೮ |
| ೧೯೮೧ | ೧೨ | ೨,೭೨,೨೮೪ | +೮೧,೬೭೭ |
| ೧೯೯೧ | ೧೨ | ೩,೮೨,೧೬೩ | +೧,೦೯,೮೭೯ |
| ೨೦೦೧ | ೧೧ | ೫,೦೭,೨೦೨ | +೧,೨೫,೦೩೯ |
| ೨೦೧೧ | ೧೨ | ೫,೯೯,೦೭೮ | +೯೧,೮೭೬ |

ಆಧಾರ: ೧೯೦೧ ರಿಂದ ೨೦೧೧ ಜನಗಣತಿ ವರದಿ

## ಪರಿಶಿಷ್ಟ ಜಾತಿ

ಭಾರತೀಯ ಸಂವಿಧಾನದ ೩೪೧ನೇ ವಿಧಿಯಲ್ಲಿ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿ ಜನಾಂಗಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯಲಾಗಿದೆ. ಭಾರತದ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ೧೯೭೬ರಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಆಜ್ಞೆಗೆ ತಿದ್ದುಪಡಿಯನ್ನು ಮಾಡಿದೆ. ಜಿಲ್ಲೆಯಲ್ಲಿ ೨೦೧೧ರ ಜನಗಣತಿಯಂತೆ ೫,೦೬,೯೦೧ ಮಂದಿ ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ೪,೨೯,೯೫೭ ಮಂದಿ ಗ್ರಾಮಾಂತರ ಪ್ರದೇಶಗಳಲ್ಲೂ, ೭೬,೯೪೪ ಮಂದಿ ನಗರ ಪ್ರದೇಶಗಳಲ್ಲೂ ವಾಸಿಸುತ್ತಿದ್ದು, ೨,೫೪,೫೩೫ ಮಂದಿ ಪುರುಷರು ಹಾಗೂ ೨೫೨೩೬೬ ಮಂದಿ ಸ್ತ್ರೀಯರಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ: ೩.೧೬ ನೋಡಿ.

**ಕೋಷ್ಟಕ.೩.೧೬: ೨೦೦೧ ಹಾಗೂ ೨೦೧೧ರ ಜನಗಣತಿಯಂತೆ ಪರಿಶಿಷ್ಟ ಜಾತಿಯ ತಾಲೂಕುವಾರು ಜನಸಂಖ್ಯೆ ವಿವರ**

| ತಾಲೂಕು | | ೨೦೦೧ | | | ೨೦೧೧ | | |
|---|---|---|---|---|---|---|---|
| | | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು |
| **ಚಿಕ್ಕನಾಯಕನಹಳ್ಳಿ** | ಗ್ರಾಮ | ೧೭೧೧೨ | ೧೬೬೫೨ | ೩೩೭೬೪ | ೧೭೪೬೦ | ೧೭೪೧೪ | ೩೪೮೭೪ |
| | ನಗರ | ೧೧೧೯ | ೧೦೮೮ | ೨೨೦೭ | ೧೯೩೫ | ೧೯೯೨ | ೩೯೩೧ |
| | **ಒಟ್ಟು** | **೧೮೨೩೧** | **೧೭೭೪೦** | **೩೫೯೭೧** | **೧೯೩೯೫** | **೧೯೪೦೬** | **೩೮೮೦೫** |
| **ಶಿರಾ** | ಗ್ರಾಮ | ೨೯೨೭೦ | ೨೮೧೧೧ | ೫೭೩೮೧ | ೩೦೯೧೨ | ೩೦೦೬೪ | ೬೦೯೭೬ |
| | ನಗರ | ೪೦೭೨ | ೩೭೫೬ | ೭೮೨೮ | ೪೫೧೪ | ೪೪೪೦ | ೮೯೫೪ |
| | **ಒಟ್ಟು** | **೩೩೩೪೨** | **೩೧೮೬೭** | **೬೫೨೧೦** | **೩೫೪೨೬** | **೩೪೫೦೪** | **೬೯೯೩೦** |
| **ಪಾವಗಡ** | ಗ್ರಾಮ | ೩೧೭೯೫ | ೩೦೧೮೪ | ೬೧೯೭೯ | ೩೧೪೨೭ | ೩೦೭೬೫ | ೬೨೧೯೨ |
| | ನಗರ | ೨೩೯೭ | ೨೩೧೭ | ೪೭೧೪ | ೨೬೩೬ | ೨೫೮೯ | ೫೨೨೫ |
| | **ಒಟ್ಟು** | **೩೪೧೯೨** | **೩೨೫೦೧** | **೬೬೬೯೩** | **೩೪೦೬೩** | **೩೩೩೫೪** | **೬೭೪೧೭** |

**ಕೋಷ್ಟಕ.೩.೧೬:** (ಮುಂದು....)

| | | | | | | | |
|---|---|---|---|---|---|---|---|
| **ಮಧುಗಿರಿ** | ಗ್ರಾಮ | ೨೯೨೮೧ | ೨೭೯೯೩ | ೫೭೨೭೪ | ೩೦೦೧೬ | ೨೯೪೯೪ | ೫೯೫೧೦ |
| | ನಗರ | ೨೦೯೫ | ೧೮೧೩ | ೩೯೦೮ | ೨೫೦೭ | ೨೫೯೧ | ೫೦೯೮ |
| | **ಒಟ್ಟು** | **೩೧೩೭೬** | **೨೯೮೦೬** | **೬೧೧೮೨** | **೩೨೫೨೩** | **೩೨೦೮೫** | **೬೪೬೦೮** |
| **ಕೊರಟಗೆರೆ** | ಗ್ರಾಮ | ೧೭೦೬೩ | ೧೬೩೭೧ | ೩೩೪೩೪ | ೧೭೮೮೯ | ೧೮೦೪೬ | ೩೫೯೩೫ |
| | ನಗರ | ೯೯೬ | ೧೦೩೩ | ೨೦೨೯ | ೧೨೮೬ | ೧೨೭೯ | ೨೫೬೫ |
| | **ಒಟ್ಟು** | **೧೮೦೫೯** | **೧೭೪೦೪** | **೩೫೪೬೩** | **೧೯೧೭೫** | **೧೯೩೨೫** | **೩೮೫೦೦** |
| **ತುಮಕೂರು** | ಗ್ರಾಮ | ೨೮೨೭೬ | ೨೭೧೩೮ | ೫೫೪೧೪ | ೩೧೧೭೪ | ೩೦೦೯೦ | ೬೧೨೬೪ |
| | ನಗರ | ೧೫೨೬೦ | ೧೩೮೯೫ | ೨೯೫೫ | ೧೮೮೫೯ | ೧೮೪೦೮ | ೩೭೨೬೭ |
| | **ಒಟ್ಟು** | **೪೩೫೩೬** | **೪೧೦೩೩** | **೮೪೫೬೯** | **೫೦೦೩೩** | **೪೮೪೯೮** | **೯೮೫೩೧** |
| **ಗುಬ್ಬಿ** | ಗ್ರಾಮ | ೧೯೬೫೯ | ೧೯೧೨೧ | ೩೮೭೮೦ | ೨೦೬೩೪ | ೨೦೩೭೫ | ೪೧೦೦೯ |
| | ನಗರ | ೧೦೬೮ | ೧೦೫೪ | ೨೧೨೨ | ೧೨೪೮ | ೧೩೩೯ | ೨೫೮೭ |
| | **ಒಟ್ಟು** | **೨೦೭೨೭** | **೨೦೧೭೫** | **೪೦೯೦೨** | **೨೧೮೮೨** | **೨೧೭೧೪** | **೪೩೫೯೬** |
| **ತಿಪಟೂರು** | ಗ್ರಾಮ | ೧೨೬೨೦ | ೧೨೭೮೬ | ೨೫೪೦೬ | ೧೨೭೬೭ | ೧೩೨೩೭ | ೨೬೦೦೪ |
| | ನಗರ | ೨೫೯೬ | ೨೪೮೨ | ೫೦೭೮ | ೨೬೭೮ | ೨೬೮೯ | ೫೩೬೭ |
| | **ಒಟ್ಟು** | **೧೫೨೧೬** | **೧೫೨೬೮** | **೩೦೪೮೪** | **೧೫೪೪೫** | **೧೫೯೨೬** | **೩೧೩೭೧** |
| **ತುರುವೇಕೆರೆ** | ಗ್ರಾಮ | ೧೦೪೬೩ | ೧೦೪೧೬ | ೨೦೮೭೯ | ೧೦೩೩೧ | ೧೦೬೧೮ | ೨೦೯೪೯ |
| | ನಗರ | ೧೦೨೦ | ೧೦೦೮ | ೨೦೨೮ | ೯೫೬ | ೧೧೦೫ | ೨೦೬೧ |
| | **ಒಟ್ಟು** | **೧೧೪೮೩** | **೧೧೪೨೪** | **೨೨೯೦೭** | **೧೧೨೮೭** | **೧೧೭೨೩** | **೨೩೦೧೦** |
| **ಕುಣಿಗಲ್** | ಗ್ರಾಮ | ೧೩೩೮೦ | ೧೪೦೫೬ | ೨೭೪೩೬ | ೧೩೩೩೯ | ೧೩೯೦೫ | ೨೭೨೪೪ |
| | ನಗರ | ೧೬೩೫ | ೧೫೯೨ | ೩೨೨೭ | ೧೯೬೩ | ೧೯೧೬ | ೩೮೭೯ |
| | **ಒಟ್ಟು** | **೧೫೦೧೫** | **೧೫೬೪೮** | **೩೦೬೬೩** | **೧೫೩೦೨** | **೧೫೮೨೧** | **೩೧೧೨೩** |
| **ಜಿಲ್ಲಾ ಮೊತ್ತ** | ಗ್ರಾಮ | ೨೦೮೯೧೯ | ೨೦೨೮೨೮ | ೪೧೧೭೪೭ | ೨೧೫೯೪೯ | ೨೧೪೦೦೮ | ೪೨೯೯೫೭ |
| | ನಗರ | ೩೨೨೫೮ | ೩೦೦೩೯ | ೬೨೨೯೭ | ೩೮೫೮೬ | ೩೮೩೫೮ | ೭೬೯೪೪ |
| | **ಒಟ್ಟು** | **೨೪೧೧೭೭** | **೨೩೨೮೬೭** | **೪೭೪೦೪೪** | **೨೫೪೫೩೫** | **೨೫೨೩೬೬** | **೫೦೬೯೦೧** |

ಆಧಾರ: ೨೦೦೧ ಹಾಗೂ ೨೦೧೧ರ ಜನಗಣತಿ ವರದಿ.

## ಪರಿಶಿಷ್ಟ ಪಂಗಡ

ಭಾರತೀಯ ಸಂವಿಧಾನದ ೩೪೨ನೇ ವಿಧಿಯಂತೆ ಪಟ್ಟಿ ಮಾಡಲಾದ ಜಾತಿ, ಉಪಜಾತಿ ಹಾಗೂ ಬುಡಕಟ್ಟುಗಳನ್ನು ಪರಿಶಿಷ್ಟ ಪಂಗಡಗಳೆಂದು ಕರೆಯಲಾಗಿದೆ. ಜಿಲ್ಲೆಯಲ್ಲಿ ೨೦೧೧ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಟ್ಟು ೧,೯೩,೮೧೯ (೯೮,೭೯೫ ಪುರುಷರು + ೯೫೦೨೪ ಸ್ತ್ರೀಯರು) ಜನರಿದ್ದು, ಗ್ರಾಮೀಣ ಪ್ರದೇಶದಲ್ಲಿ ೧,೬೯,೯೩೦ (೮೬,೪೪೭ ಪುರುಷರು + ೮೩,೪೮೩ ಸ್ತ್ರೀಯರು) ಹಾಗೂ ನಗರ ಪ್ರದೇಶದಲ್ಲಿ ೨೩,೮೮೯(೧೨,೩೪೮ ಪುರುಷರು+೧೧,೫೪೧ ಸ್ತ್ರೀಯರು)ಮಂದಿ ನೆಲೆಸಿದ್ದರು. ಕೋಷ್ಟಕ. ೩.೧೭ ರಲ್ಲಿ ೨೦೦೧ ಹಾಗೂ ೨೦೧೧ರ ಜನಗಣತಿಯಂತೆ ಜಿಲ್ಲೆಯಲ್ಲಿದ್ದ ಪರಿಶಿಷ್ಟ ಪಂಗಡದ ತಾಲೂಕುವಾರು ಜನಸಂಖ್ಯೆಯನ್ನು ನೀಡಲಾಗಿದೆ.

## ಕೋಷ್ಟಕ : ೩.೧೭ ಜಿಲ್ಲೆಯ ಪರಿಶಿಷ್ಟ ಪಂಗಡದ ತಾಲೂಕುವಾರು ಜನಸಂಖ್ಯಾ ವಿವರ

| ತಾಲೂಕು | | ೨೦೦೧ | | | ೨೦೧೧ | | |
|---|---|---|---|---|---|---|---|
| | | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು |
| ಚಿಕ್ಕ ನಾಯಕನಹಳ್ಳಿ | ಗ್ರಾಮ | ೭೮೫೭ | ೭೭೧೯ | ೧೫೫೭೬ | ೮೦೦೯ | ೮೦೮೦ | ೧೬೦೮೯ |
| | ನಗರ | ೫೦೨ | ೪೬೨ | ೯೬೪ | ೭೭೨ | ೭೯೩ | ೧೫೬೫ |
| | **ಒಟ್ಟು** | **೮೩೫೯** | **೮೧೮೧** | **೧೬೫೪೦** | **೮೭೮೧** | **೮೮೭೩** | **೧೭೬೫೪** |
| ಶಿರಾ | ಗ್ರಾಮ | ೧೨೮೬೭ | ೧೨೫೩೪ | ೨೫೪೦೧ | ೧೩೪೮೫ | ೧೩೨೮೩ | ೨೬೭೬೮ |
| | ನಗರ | ೧೦೩೪ | ೯೬೪ | ೧೯೯೮ | ೯೬೯ | ೧೦೩೩ | ೨೦೦೨ |
| | **ಒಟ್ಟು** | **೧೩೯೦೧** | **೧೩೪೯೮** | **೨೭೩೯೯** | **೧೪೪೫೪** | **೧೪೩೧೬** | **೨೮೭೭೦** |
| ಪಾವಗಡ | ಗ್ರಾಮ | ೧೮೭೦೬ | ೧೭೯೭೧ | ೩೬೬೭೭ | ೧೯೧೩೩ | ೧೯೦೬೬ | ೩೮೧೯೯ |
| | ನಗರ | ೨೦೦೨ | ೧೯೦೦ | ೩೯೦೨ | ೨೦೧೮ | ೨೦೫೧ | ೪೦೬೯ |
| | **ಒಟ್ಟು** | **೨೦೭೦೮** | **೧೯೮೭೧** | **೪೦೫೭೯** | **೨೧೧೫೧** | **೨೧೧೧೭** | **೪೨೨೬೮** |
| ಮಧುಗಿರಿ | ಗ್ರಾಮ | ೧೪೪೦೭ | ೧೩೮೭೦ | ೨೮೨೭೭ | ೧೪೭೯೧ | ೧೪೬೯೯ | ೨೯೪೯೦ |
| | ನಗರ | ೧೩೭೮ | ೧೨೫೪ | ೨೬೩೨ | ೧೫೫೯ | ೧೫೯೯ | ೩೧೫೮ |
| | **ಒಟ್ಟು** | **೧೫೭೮೫** | **೧೫೧೨೪** | **೩೦೯೦೯** | **೧೬೩೫೦** | **೧೬೨೯೮** | **೩೨೬೪೮** |
| ಕೊರಟಗೆರೆ | ಗ್ರಾಮ | ೭೨೫೯ | ೭೨೫೯ | ೧೪೨೪೬ | ೮೦೩೧ | ೭೯೭೨ | ೧೬೦೦೩ |
| | ನಗರ | ೧೧೨೩ | ೧೧೨೩ | ೨೧೯೯ | ೧೪೦೫ | ೧೪೨೩ | ೨೮೨೮ |
| | **ಒಟ್ಟು** | **೮೩೮೨** | **೮೦೬೩** | **೧೬೪೪೫** | **೯೪೩೬** | **೯೩೯೫** | **೧೮೮೩೧** |
| ತುಮಕೂರು | ಗ್ರಾಮ | ೧೦೧೧೬ | ೯೫೨೫ | ೧೯೬೪೧ | ೧೧೩೯೭ | ೧೦೭೫೫ | ೨೨೧೫೨ |
| | ನಗರ | ೪೯೪೪ | ೪೫೬೮ | ೯೫೧೨ | ೬೩೨೩ | ೬೨೮೦ | ೧೨೬೦೩ |
| | **ಒಟ್ಟು** | **೧೫೦೬೦** | **೧೪೦೯೩** | **೨೯೧೫೩** | **೧೭೭೨೦** | **೧೭೦೩೫** | **೩೪೭೫೫** |
| ಗುಬ್ಬಿ | ಗ್ರಾಮ | ೮೭೮೬ | ೮೫೭೬ | ೧೭೩೬೨ | ೯೧೮೮ | ೯೦೯೨ | ೧೮೨೮೦ |
| | ನಗರ | ೩೬೪ | ೩೪೫ | ೭೦೯ | ೪೩೬ | ೪೩೮ | ೮೭೪ |
| | **ಒಟ್ಟು** | **೯೧೫೦** | **೮೯೨೧** | **೧೮೦೭೧** | **೯೬೨೪** | **೯೫೩೦** | **೧೯೧೫೪** |
| ತಿಪಟೂರು | ಗ್ರಾಮ | ೩೨೭೫ | ೩೧೮೮ | ೬೪೬೩ | ೩೨೦೯ | ೩೨೯೫ | ೬೫೦೪ |
| | ನಗರ | ೬೯೩ | ೬೫೪ | ೧೩೪೭ | ೭೭೫ | ೭೭೫ | ೧೫೫೦ |
| | **ಒಟ್ಟು** | **೩೯೬೮** | **೩೮೪೨** | **೭೮೧೦** | **೩೯೮೪** | **೪೦೭೦** | **೮೦೫೪** |
| ತುರುವೇಕೆರೆ | ಗ್ರಾಮ | ೨೦೩೧ | ೨೦೨೫ | ೪೦೫೬ | ೨೧೧೮ | ೨೦೮೬ | ೪೨೦೪ |
| | ನಗರ | ೧೯೭ | ೨೦೬ | ೪೦೩ | ೨೪೩ | ೨೫೩ | ೪೯೬ |
| | **ಒಟ್ಟು** | **೨೨೨೮** | **೨೨೩೧** | **೪೪೫೯** | **೨೩೬೧** | **೨೩೩೯** | **೪೭೦೦** |
| ಕುಣಿಗಲ್ | ಗ್ರಾಮ | ೧೧೪೩ | ೧೦೮೮ | ೨೨೩೧ | ೧೧೯೭ | ೧೧೩೮ | ೨೩೩೫ |
| | ನಗರ | ೧೧೧ | ೧೧೨ | ೨೨೩ | ೨೦೭ | ೧೮೩ | ೩೯೦ |
| | **ಒಟ್ಟು** | **೧೨೫೪** | **೧೨೦೦** | **೨೪೫೪** | **೧೪೦೪** | **೧೩೨೧** | **೨೭೨೫** |
| ಜಿಲ್ಲಾ ಮೊತ್ತ | ಗ್ರಾಮ | ೯೦೫೫೮ | ೮೯೪೬೬ | ೧೮೦೦೨೪ | ೮೬೪೪೭ | ೮೩೪೮೩ | ೧೬೯೯೩೦ |
| | ನಗರ | ೧೪೭೦೭ | ೧೪೮೨೮ | ೨೯೫೩೫ | ೧೨೩೪೮ | ೧೧೫೪೧ | ೨೩೮೮೯ |
| | **ಒಟ್ಟು** | **೧೦೫೨೬೫** | **೧೦೪೨೯೪** | **೨೦೯೫೫೯** | **೯೮೭೯೫** | **೯೫೦೨೪** | **೧೯೩೮೧೯** |

ಆಧಾರ: ೨೦೦೧ ಹಾಗೂ ೨೦೧೧ರ ಜನಗಣತಿ ವರದಿ

## ವಿಕಲಚೇತನರು

ಕುರುಡರು, ಕಿವುಡರು ಮತ್ತು ಮೂಗರನ್ನು ೧೯೪೧ ಕ್ಕೂ ಮೊದಲಿನ ಜನಗಣತಿಯಲ್ಲಿ ಗಣತಿ ಮಾಡಲಾಗುತ್ತಿದ್ದಿತು. ನಂತರದಲ್ಲಿ ಅದನ್ನು ನಿಲ್ಲಿಸಲಾಯಿತು. ಪುನಃ ೧೯೮೧ರ ಜನಗಣತಿಯಲ್ಲಿ ಅಂಗವಿಕಲರ ಗಣತಿಯನ್ನು ಮಾಡಲಾಗಿದೆ. ವಾಸದ ಮನೆಗಳ ಗಣತಿ ಸಮಯದಲ್ಲಿ ಅಂಗವಿಕಲರನ್ನು ಪ್ರತ್ಯೇಕವಾಗಿ ಗಣತಿ ಮಾಡಲಾಗುತ್ತದೆ. ಆದರೆ ಅನೇಕ ಅಂಗವಿಕಲರು ನಿರ್ವಸಿತರಾಗಿ ಭಿಕ್ಷುಕ ಸಮುದಾಯದಲ್ಲಿದ್ದು, ಜನಗಣತಿ ಮಾಡುವ ಸಮಯದಲ್ಲಿ ಅವರು ಮನೆಗಳಲ್ಲಿ ಅಲಭ್ಯವಾಗುವುದರಿಂದ ಈ ಅಂಕಿ ಅಂಶವು ನೈಜ ಚಿತ್ರವನ್ನು ಸ್ಪಷ್ಟವಾಗಿ ಕೊಡಲಾರದೆಂಬ ಅಭಿಪ್ರಾಯವಿದೆ. ಜನಗಣತಿ ಇಲಾಖೆಯು ನೀಡಿರುವ ೨೦೦೧ರ ಅಂಗವಿಕಲರ (ಅಂಧರು ಮೂಗರು ಕಿವುಡರು ದೈಹಿಕ ಅಂಗವಿಕಲರು ಬುದ್ಧಿ ಮಾಂದ್ಯರು) ಅಂಕಿ ಅಂಶಗಳನ್ನು (ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳನ್ನೊಳಗೊಂಡಂತೆ ಅವರ ವೃತ್ತಿಯನ್ನಾಧರಿಸಿ) ಕೋಷ್ಟಕ ೩.೧೮ ರಲ್ಲಿ ನೀಡಲಾಗಿದೆ.

**ಕೋಷ್ಟಕ ೩.೧೮: ಜನಗಣತಿ ಇಲಾಖೆಯ ೨೦೦೧ರ ವಿಕಲಚೇತನರ ಅಂಕಿ ಅಂಶಗಳ ವಿವರ**

| ವಿವಿಧ ಬಗೆಯ ವಿಕಲಚೇತನರು | ಲಿಂಗ | ಕೆಲಸಗಾರರು | | | | | ಕೆಲಸಗಾರರಲ್ಲದವರು |
|---|---|---|---|---|---|---|---|
| | | ಒಟ್ಟು | ವ್ಯವಸಾಯಗಾರರು | ಕೃಷಿ ಕಾರ್ಮಿಕರು | ಗೃಹ ಕೈಗಾರಿಕ ಕೆಲಸಗಾರರು | ಇತರೆ | |
| ತುಮಕೂರು ಜಿಲ್ಲೆ ಒಟ್ಟು | | | | | | | |
| ವಿಕಲಚೇತನರ ಒಟ್ಟು ಜನಸಂಖ್ಯೆ | **ಒಟ್ಟು** | **೧೮,೯೦೨** | **೮,೬೪೯** | **೪,೨೦೦** | **೮೯೩** | **೫,೧೬೦** | **೩೦,೪೮೯** |
| | ಪುರುಷರು | ೧೩,೦೯೫ | ೬,೪೨೦ | ೨,೧೦೭ | ೪೫೦ | ೪,೧೧೮ | ೧೫,೧೬೭ |
| | ಮಹಿಳೆಯರು | ೫,೮೦೭ | ೨,೨೨೯ | ೨,೦೯೩ | ೪೪೩ | ೧,೦೪೨ | ೧೫,೩೨೨ |
| ಅಂಧರು | **ಒಟ್ಟು** | **೧೦,೨೨೬** | **೪,೯೯೯** | **೨,೧೧೪** | **೪೪೬** | **೨,೬೬೭** | **೧೨,೫೩೮** |
| | ಪುರುಷರು | ೭,೦೦೯ | ೩,೬೬೧ | ೯೯೪ | ೨೧೧ | ೨,೧೪೩ | ೫,೫೭೧ |
| | ಮಹಿಳೆಯರು | ೩,೨೧೭ | ೧,೩೩೮ | ೧,೧೨೦ | ೨೩೫ | ೫೨೪ | ೬,೯೬೭ |
| ಮೂಗರು | **ಒಟ್ಟು** | **೨,೨೪೯** | **೧,೦೩೫** | **೬೩೦** | **೧೧೮** | **೪೬೬** | **೩,೩೭೯** |
| | ಪುರುಷರು | ೧,೪೭೪ | ೭೫೩ | ೩೧೭ | ೪೫ | ೩೪೯ | ೧,೬೬೦ |
| | ಮಹಿಳೆಯರು | ೭೭೫ | ೨೮೨ | ೩೧೩ | ೭೩ | ೧೧೭ | ೧,೭೧೯ |
| ಕಿವುಡರು | **ಒಟ್ಟು** | **೧,೨೨೪** | **೫೯೯** | **೩೩೭** | **೪೩** | **೨೪೫** | **೧,೬೫೭** |
| | ಪುರುಷರು | ೭೯೬ | ೪೩೯ | ೧೪೭ | ೨೯ | ೧೮೧ | ೬೭೬ |
| | ಮಹಿಳೆಯರು | ೪೨೮ | ೧೬೦ | ೧೯೦ | ೧೪ | ೬೪ | ೯೮೧ |
| ದೈಹಿಕ ವಿಕಲಚೇತನರು | **ಒಟ್ಟು** | **೪,೨೬೩** | **೧,೫೬೬** | **೮೭೬** | **೨೫೦** | **೧,೫೭೧** | **೯,೩೯೮** |
| | ಪುರುಷರು | ೩,೨೦೯ | ೧,೨೫೨ | ೫೩೪ | ೧೪೪ | ೧,೨೭೯ | ೫,೪೪೯ |
| | ಮಹಿಳೆಯರು | ೧,೦೫೪ | ೩೧೪ | ೩೪೨ | ೧೦೬ | ೨೯೨ | ೩,೯೪೯ |
| ಬುದ್ಧಿ ಮಾಂದ್ಯರು | **ಒಟ್ಟು** | **೯೪೦** | **೪೫೦** | **೨೪೩** | **೩೬** | **೨೧೧** | **೩,೫೧೭** |
| | ಪುರುಷರು | ೬೦೭ | ೩೧೫ | ೧೧೫ | ೨೧ | ೧೫೬ | ೧,೮೦೬ |
| | ಮಹಿಳೆಯರು | ೩೩೩ | ೧೩೫ | ೧೨೮ | ೧೫ | ೫೫ | ೧,೭೧೧ |
| ಗ್ರಾಮೀಣ | | | | | | | |
| ವಿಕಲಚೇತನರ ಒಟ್ಟು ಜನಸಂಖ್ಯೆ | **ಒಟ್ಟು** | **೧೬,೨೮೭** | **೮,೫೧೫** | **೪,೦೭೮** | **೬೬೧** | **೩,೦೩೩** | **೨೪,೮೯೧** |
| | ಪುರುಷರು | ೧೧,೦೫೦ | ೬,೩೧೫ | ೨,೦೩೩ | ೩೫೪ | ೨,೩೪೮ | ೧೨,೪೮೧ |
| | ಮಹಿಳೆಯರು | ೫,೨೩೭ | ೨,೨೦೦ | ೨,೦೪೫ | ೩೦೭ | ೬೮೫ | ೧೨,೪೧೦ |
| ಅಂಧರು | **ಒಟ್ಟು** | **೮,೬೭೨** | **೪,೯೧೧** | **೨,೦೩೮** | **೩೦೭** | **೧,೪೧೬** | **೧೦,೦೧೫** |
| | ಪುರುಷರು | ೫,೮೦೧ | ೩,೫೯೯ | ೯೪೮ | ೧೫೪ | ೧,೧೦೦ | ೪,೫೮೭ |
| | ಮಹಿಳೆಯರು | ೨,೮೭೧ | ೧,೩೧೨ | ೧,೦೯೦ | ೧೫೩ | ೩೧೬ | ೫,೪೪೩ |

**ಕೋಷ್ಟಕ.೩.೧೮:** (ಮುಂದು....)

| | | | | | | | |
|---|---|---|---|---|---|---|---|
| | **ಒಟ್ಟು** | **೧,೯೯೬** | **೧,೦೨೩** | **೬೧೬** | **೮೦** | **೨೭೭** | **೨,೭೨೧** |
| **ಮೂಗರು** | ಪುರುಷರು | ೧,೨೮೩ | ೭೪೨ | ೩೧೧ | ೩೩ | ೧೯೭ | ೧,೩೨೫ |
| | ಮಹಿಳೆಯರು | ೭೧೩ | ೨೮೧ | ೩೦೫ | ೪೭ | ೮೦ | ೧,೩೯೬ |
| | **ಒಟ್ಟು** | **೧,೧೩೨** | **೫೯೨** | **೩೨೯** | **೩೯** | **೧೭೨** | **೧,೪೨೭** |
| **ಕಿವುಡರು** | ಪುರುಷರು | ೭೨೮ | ೪೩೪ | ೧೪೫ | ೨೭ | ೧೨೨ | ೫೮೧ |
| | ಮಹಿಳೆಯರು | ೪೦೪ | ೧೫೮ | ೧೮೪ | ೧೨ | ೫೦ | ೮೪೬ |
| | **ಒಟ್ಟು** | **೩,೬೪೯** | **೧,೫೪೩** | **೮೫೯** | **೨೧೩** | **೧,೦೩೪** | **೭,೮೫೯** |
| **ದೈಹಿಕ ವಿಕಲಚೇತನರು** | ಪುರುಷರು | ೨,೭೦೮ | ೧,೨೨೯ | ೫೧೮ | ೧೨೭ | ೮೩೪ | ೪,೫೪೨ |
| | ಮಹಿಳೆಯರು | ೯೪೧ | ೩೧೪ | ೩೪೧ | ೮೬ | ೨೦೦ | ೩,೩೧೭ |
| | **ಒಟ್ಟು** | **೮೩೮** | **೪೪೬** | **೨೩೬** | **೨೨** | **೧೩೪** | **೨,೮೬೯** |
| **ಬುದ್ಧಿ ಮಾಂದ್ಯರು** | ಪುರುಷರು | ೫೩೦ | ೩೧೧ | ೧೧೧ | ೧೩ | ೯೫ | ೧,೪೬೧ |
| | ಮಹಿಳೆಯರು | ೩೦೮ | ೧೩೫ | ೧೨೫ | ೯ | ೩೯ | ೧,೪೦೮ |
| **ನಗರ** | | | | | | | |
| | **ಒಟ್ಟು** | **೨,೬೧೫** | **೧೩೪** | **೧೨೨** | **೨೩೨** | **೨,೧೨೭** | **೫,೫೯೮** |
| **ವಿಕಲಚೇತನರ ಒಟ್ಟು ಜನಸಂಖ್ಯೆ** | ಪುರುಷರು | ೨,೦೪೫ | ೧೦೫ | ೭೪ | ೯೬ | ೧,೭೭೦ | ೨,೬೮೧ |
| | ಮಹಿಳೆಯರು | ೫೭೦ | ೨೯ | ೪೮ | ೧೩೬ | ೩೫೭ | ೨,೯೧೭ |
| | **ಒಟ್ಟು** | **೧,೫೫೪** | **೮೮** | **೭೬** | **೧೩೯** | **೧,೨೫೧** | **೨,೫೨೩** |
| **ಅಂಧರು** | ಪುರುಷರು | ೧,೨೦೮ | ೬೨ | ೪೬ | ೫೭ | ೧,೦೪೩ | ೯೯೯ |
| | ಮಹಿಳೆಯರು | ೩೪೬ | ೨೬ | ೩೦ | ೮೨ | ೨೦೮ | ೧,೫೨೪ |
| | **ಒಟ್ಟು** | **೨೫೩** | **೧೨** | **೧೪** | **೩೮** | **೧೮೯** | **೬೫೮** |
| **ಮೂಗರು** | ಪುರುಷರು | ೧೯೧ | ೧೧ | ೬ | ೧೨ | ೧೬೨ | ೩೩೫ |
| | ಮಹಿಳೆಯರು | ೬೨ | ೧ | ೮ | ೨೬ | ೨೭ | ೩೨೩ |
| | **ಒಟ್ಟು** | **೯೨** | **೭** | **೮** | **೪** | **೭೩** | **೨೩೦** |
| **ಕಿವುಡರು** | ಪುರುಷರು | ೬೮ | ೫ | ೨ | ೨ | ೫೯ | ೯೫ |
| | ಮಹಿಳೆಯರು | ೨೪ | ೨ | ೬ | ೨ | ೧೪ | ೧೩೫ |
| | **ಒಟ್ಟು** | **೬೧೪** | **೨೩** | **೧೭** | **೩೭** | **೫೩೭** | **೧,೫೩೯** |
| **ದೈಹಿಕ ವಿಕಲಚೇತನರು** | ಪುರುಷರು | ೫೦೧ | ೨೩ | ೧೬ | ೧೭ | ೪೪೫ | ೯೦೭ |
| | ಮಹಿಳೆಯರು | ೧೧೩ | – | ೧ | ೨೦ | ೯೨ | ೬೩೨ |
| | **ಒಟ್ಟು** | **೧೦೨** | **೪** | **೭** | **೧೪** | **೭೭** | **೬೪೮** |
| **ಬುದ್ಧಿ ಮಾಂದ್ಯರು** | ಪುರುಷರು | ೭೭ | ೪ | ೪ | ೮ | ೬೧ | ೩೪೫ |
| | ಮಹಿಳೆಯರು | ೨೫ | – | ೩ | ೬ | ೧೬ | ೩೦೩ |

**ಆಧಾರ: ೨೦೦೧ರ ಜನಗಣತಿ ವರದಿ**

## ಭಾಷೆಗಳು

ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ಶೇ.೮೩.೪೮ರಷ್ಟು ಜನ ಕನ್ನಡ ಮಾತನಾಡುವವರಿದ್ದರೆ, ೨೦೦೧ರ ಜನಗಣತಿಯಂತೆ ಶೇ.೮೩.೧೬ ಜನ ಕನ್ನಡ ಮಾತನಾಡುವವರಿದ್ದರು. ಹಾಗೆಯೇ ಇದೇ ಅವಧಿಗಳಲ್ಲಿ ಉರ್ದು ಮಾತನಾಡುವವರ ಸಂಖ್ಯೆ ಕ್ರಮವಾಗಿ ಶೇ.೭.೫೧, ಹಾಗೂ ಶೇ,೮.೧೪ ಇತ್ತು. ಅಲ್ಲದೇ ಇದೇ ಅವಧಿಯಲ್ಲಿ ತೆಲುಗು ಭಾಷಿಕರ ಪ್ರಮಾಣವು ಕ್ರಮವಾಗಿ ಶೇ. ೬.೪೯ ಹಾಗೂ ೫.೮೬ ಆಗಿತ್ತು. ಕೋಷ್ಟಕ: ೩.೧೯ರಲ್ಲಿ ೧೯೯೧ ಹಾಗೂ ೨೦೦೧ ರ ಜನಗಣತಿಯಂತೆ ವಿವಿಧ ಭಾಷೆಗಳನ್ನಾಡುವವರ ಸಂಖ್ಯೆ ಹಾಗೂ ಶೇಕಡವಾರು ಅಂಕಿ ಸಂಖ್ಯೆಗಳನ್ನು ನೀಡಲಾಗಿದೆ.

**ಕೋಷ್ಟಕ ೩.೧೯: ಜಿಲ್ಲೆಯಲ್ಲಿರುವ ವಿವಿಧ ಭಾಷೆಗಳನ್ನಾಡುವವರ ಜನಗಣತಿ ವಿವರ**

| ಕ್ರ.ಸಂ | ಭಾಷೆಗಳು | ೧೯೯೧ರ ಜನಗಣತಿ | | ೨೦೦೧ರ ಜನಗಣತಿ | |
|---|---|---|---|---|---|
| | | ಮಾತನಾಡುವವರು | ಶೇಕಡ | ಮಾತನಾಡುವವರು | ಶೇಕಡ |
| | ತುಮಕೂರು ಜಿಲ್ಲೆ | ೨೩೦೫೮೧೯ | ೯೯.೯೬ | ೨೫೮೦೦೬೧ | ೯೯.೮೨ |
| ೧ | ಕನ್ನಡ | ೧೯೨೪೯೬೯ | ೮೩.೪೮ | ೨೧೪೯೪೪೩ | ೮೩.೧೬ |
| ೨ | ಉರ್ದು | ೧೭೩೦೯೭ | ೭.೫೧ | ೨೧೦೫೨೩ | ೮.೧೪ |
| ೩ | ತೆಲುಗು | ೧೪೯೬೫೪ | ೬.೪೯ | ೧೫೧೫೭೩ | ೫.೮೬ |
| ೪ | ಹಿಂದಿ | ೨೪೨೧೯ | ೧.೦೫ | ೩೪೯೬೧ | ೧.೩೫ |
| ೫ | ಮರಾಠಿ | ೧೫೨೮೪ | ೦.೬೬ | ೧೪೯೬೪ | ೦.೫೮ |
| ೬ | ತಮಿಳು | ೧೩೯೬೨ | ೦.೬೧ | ೧೩೮೮೮ | ೦.೫೪ |
| ೭ | ಮಲಯಾಳಂ | ೧೮೬೭ | ೦.೦೮ | ೨೩೨೨ | ೦.೦೯ |
| ೮ | ಕೊಂಕಣಿ | ೭೨೦ | ೦.೦೩ | ೭೧೫ | ೦.೦೩ |
| ೯ | ಗುಜರಾತಿ | ೪೨೬ | ೦.೦೨ | ೬೧೬ | ೦.೦೨ |
| ೧೦ | ಕಾಶ್ಮೀರಿ | ೧೪೮ | ೦.೦೧ | ೧೧೮ | ೦ |
| ೧೧ | ಪಂಜಾಬಿ | ೧೪೩ | ೦.೦೧ | ೧೨೦ | ೦ |
| ೧೨ | ಸಿಂಧಿ | ೯೩ | ೦ | ೮೦ | ೦ |
| ೧೩ | ನೇಪಾಳಿ | ೯೦ | ೦ | ೧೫೭ | ೦.೦೧ |
| ೧೪ | ಒರಿಯಾ | ೭೭ | ೦ | ೧೦೧ | ೦ |
| ೧೫ | ಬೆಂಗಾಲಿ | ೬೮ | ೦ | ೪೩೭ | ೦.೦೨ |
| ೧೬ | ಸಂಸ್ಕೃತ | ೩೧ | ೦ | ೩೪ | ೦ |
| ೧೭ | ಅಸ್ಸಾಮೀ | ೯ | ೦ | ೮ | ೦ |
| ೧೮ | ಮಣಿಪುರಿ | ೨ | ೦ | ೧ | ೦ |

**ಆಧಾರ: ತುಮಕೂರು ಜಿಲ್ಲಾ ಸೆನ್ಸಸ್ ಹ್ಯಾಂಡ್ ಬುಕ್, ೨೦೦೧ರ ಜನಗಣತಿ,**

## ಕೋಷ್ಟಕ ೩.೨೦ : ೨೦೦೧ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿದ್ದ ಸಾಕ್ಷರತೆ ಮತ್ತು ಅನಕ್ಷರತೆ ವಿವರ

| ಕ್ರ.ಸಂ | ವಿದ್ಯಾರ್ಹತೆ | ೧೯೯೧ | | | ೨೦೦೧ | | |
|---|---|---|---|---|---|---|---|
| | | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| | ಒಟ್ಟು ಜನಸಂಖ್ಯೆ | ೨೩,೦೫,೮೧೯ | ೧೧,೭೭,೨೩೩ | ೧೧,೨೮,೫೮೬ | ೨೫.೮೪,೭೧೧ | ೧೩,೧೩,೮೦೧ | ೧೨,೭೦,೯೧೦ |
| ೧ | ಅನಕ್ಷರಸ್ಥರು | ೧೨,೩೯,೮೮೫ (೫೩.೭೭) | ೫,೧೨,೩೭೮ (೪೩.೫೨) | ೭,೨೭,೫೦೭ (೬೪.೪೬) | ೧೦,೫೯,೨೨೬ (೪೦.೯೮) | ೪,೨೬,೪೬೦ (೩೨.೪೬) | ೬,೩೨,೭೬೬ (೪೯.೭೯) |
| ೨ | ಅಕ್ಷರಸ್ಥರು | ೧೦೬೫೯೩೪ (೪೬.೨೩) | ೬೬೪೮೫೫ (೫೬.೪೮) | ೪೦೧೦೭೯ (೩೫.೫೪) | ೧೫೨೫೪೮೫(೫೯.೦೨) | ೮೮೭೩೪೧ (೬೭.೫೪) | ೬೩೮೧೪೪ (೫೦.೨೧) |
| ಅ | ಅಕ್ಷರಸ್ಥರು(ಶಾಲೆಗೆ ಹೋಗದೆ ಶಿಕ್ಷಣದ ಮಟ್ಟ ಸೇರಿದಂತೆ ಅದರ ವರ್ಗೀಕರಣವಿಲ್ಲ | ೧,೪೪೦ (೦.೦೬) | ೮೭೦ (೦.೦೭) | ೫೭೦ (೦.೦೫) | ೨೬,೧೪೦ (೧.೦೧) | ೧೫,೩೪೭ (೧.೧೭) | ೧೦,೭೯೩ (೦.೮೫) |
| ಆ | ಪ್ರಾಥಮಿಕ ಶಿಕ್ಷಣಕ್ಕಿಂತ ಕಡಿಮೆ ಶಿಕ್ಷಣ ಪಡೆದವರು | ೩,೪೦,೩೯೦ (೧೪.೭೬) | ೧,೯೭,೫೫೦ (೧೬.೭೮) | ೧,೪೨,೮೪೦ (೧೨.೬೬) | ೩,೫೩,೭೩೭ (೧೩.೬೯) | ೧,೯೧,೧೮೭ (೧೪.೫೫) | ೧,೬೨,೫೫೦ (೧೨.೭೯) |
| ಇ | ಪ್ರಾಥಮಿಕ ಶಿಕ್ಷಣ ಪಡೆದವರು | ೨,೯೫,೨೯೫ (೧೨.೮೧) | ೧,೭೬,೫೯೩ (೧೫.೦೦) | ೧,೧೮,೭೦೨ (೧೦.೫೨) | ೪,೪೨,೯೮೭ (೧೭.೧೪) | ೨,೪೩,೨೦೮ (೧೮.೫೧) | ೧,೯೯,೭೭೯ (೧೫.೭೨) |
| ಈ | ಮಾಧ್ಯಮಿಕ ಶಿಕ್ಷಣ ಪಡೆದವರು | ೧,೮೫,೩೭೮ (೮.೦೪) | ೧,೧೫,೬೩೩ (೯.೮೨) | ೬೯,೭೪೫ (೬.೧೮) | ೨,೪೬,೯೧೯ (೯.೫೫) | ೧,೪೫,೫೭೬ (೧೧.೦೮) | ೧,೦೧,೩೪೩ (೭.೯೭) |
| ಉ | ಎಸ್.ಎಸ್.ಎಲ್.ಸಿ | ೧,೪೮,೮೧೭ (೬.೪೫) | ೧,೦೦,೬೧೬ (೮.೫೫) | ೪೮,೨೦೧ (೪.೨೭) | ೨,೬೧,೩೮೯ (೧೦.೧೧) | ೧,೫೪,೨೫೧ (೧೧.೭೪) | ೧,೦೭,೧೩೮ (೮.೪೩) |
| ಊ | ಹೈಯರ್ ಸೆಕೆಂಡರಿ/ ಇಂಟರ್ ಮಿಡಿಯಟ್ ಪದವಿ ಪೂರ್ವ ಶಿಕ್ಷಣ ಸೀನಿಯರ್ ಸೆಕೆಂಡರಿ | ೪೨,೬೬೩ (೧.೮೫) | ೩೨,೪೦೩ (೨.೭೫) | ೧೦,೨೬೦ (೦.೯೧) | ೯೪,೩೫೪ (೩.೬೫) | ೬೨,೨೬೮ (೪.೭೪) | ೩೨,೦೮೬ (೨.೫೨) |
| ಋ | ನಾನ್–ಟೆಕ್ನಿಕಲ್ ಡಿಪ್ಲೋಮ ಅಥವಾ ಸರ್ಟಿಫಿಕೇಟ್ ಪದವಿ ಶಿಕ್ಷಣಕ್ಕಿಂತ ಕಡಿಮೆ | ೯,೧೮೪ (೦.೪೦) | ೬,೪೯೪ (೦.೫೫) | ೨,೬೯೦ (೦.೨೪) | ೧,೫೫೯ (೦.೦೬) | ೧,೩೩೫ (೦.೧೦) | ೨೨೪ (೦.೦೨) |
| ಎ | ಟೆಕ್ನಿಕಲ್ ಡಿಪ್ಲೋಮ ಅಥವಾ ಸರ್ಟಿಫಿಕೇಟ್ ಪದವಿ ಶಿಕ್ಷಣಕ್ಕಿಂತ ಕಡಿಮೆ | ೪,೧೭೧ (೦.೧೮) | ೩,೮೬೦ (೦.೩೩) | ೩೧೧ (೦.೦೩) | ೧೯,೦೮೨ (೦.೭೪) | ೧೪,೫೪೯ (೧.೧೧) | ೪,೫೩೩ (೦.೩೬) |
| ಏ | ಪದವೀಧರರು ಮತ್ತು ಅದಕ್ಕಿಂತ ಹೆಚ್ಚು | ೩೮,೫೯೬ (೧.೬೭) | ೩೦,೮೩೬ (೨.೬೨) | ೭,೭೬೦ (೦.೬೯) | ೭೯,೩೧೭ (೩.೦೭) | ೫೯,೬೧೯ (೪.೫೪) | ೧೯,೬೯೮ (೧.೫೫) |

**ಆಧಾರ: ತುಮಕೂರು ಡಿಸ್ಟ್ರಿಕ್ ಸೆನ್ಸಸ್ ಹ್ಯಾಂಡ್ ಬುಕ್, ಅನುಬಂಧ–೭,**

**ಕೋಷ್ಟಕ ೩.೨೧ : ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರತೆ ಮತ್ತು ಅನಕ್ಷರತೆ ವಿವರ**

| | ಸಾಕ್ಷರತೆ | | | ಅನಕ್ಷರತೆ | | |
|---|---|---|---|---|---|---|
| | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| ಒಟ್ಟು | ೧೮,೧೩,೩೯೧ | ೧೦,೦೬,೦೨೪ | ೮,೦೭,೩೬೭ | **೮,೬೫,೫೮೯** | ೩,೪೪,೫೭೦ | ೫,೨೧,೦೧೯ |
| ಗ್ರಾಮೀಣ | ೧೩,೪೪,೪೩೮ | ೭,೬೦,೩೨೨ | ೫,೮೪,೧೧೬ | **೭,೩೫,೪೬೪** | ೨,೮೮,೩೮೮ | ೪,೪೭,೦೭೬ |
| ನಗರ | ೪,೬೮,೯೫೩ | ೨,೪೫,೭೦೨ | ೨,೨೩,೨೫೧ | **೧,೩೦,೧೨೫** | ೫೬,೧೮೨ | ೭೩,೯೪೩ |

ಆಧಾರ: ೨೦೧೧ರ ಜನಗಣತಿ ವರದಿ

## ಧರ್ಮಗಳು

ಜಿಲ್ಲೆಯಲ್ಲಿ ಪ್ರಮುಖವಾಗಿ ಹಿಂದೂ, ಜೈನ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳ ಅನುಯಾಯಿಗಳು ಕಂಡು ಬರುತ್ತಾರೆ. ೨೦೦೧ರ ಜನಗಣತಿಯನ್ವಯ ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿನ ವಿವಿಧ ಧರ್ಮೀಯರ ಸಂಖ್ಯೆಯನ್ನು ಹಾಗೂ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶತಾಂಶವನ್ನೂ (ರಾಜ್ಯದ ಶತಾಂಶದೊಂದಿಗೆ) ನೀಡಲಾಗಿದೆ. ಈ ಅಂಕಿ–ಅಂಶಗಳನ್ನು ಗಮನಿಸಿದರೆ ಜಿಲ್ಲೆಯ ಹಿಂದೂಗಳ ಒಟ್ಟು ಜನಸಂಖ್ಯೆಯ ಶತಾಂಶವು ರಾಜ್ಯದ ಶತಾಂಶಕ್ಕಿಂತಲೂ ಅಧಿಕವಾಗಿದೆ. ಕೋಷ್ಟಕ ೩.೨೨ ಹಾಗೂ ಕೋಷ್ಟಕ ೩.೨೩ ರಲ್ಲಿ ೧೯೯೧ ಹಾಗೂ ೨೦೦೧ ರ ಜನಗಣತಿಯಲ್ಲಿ ಕ್ರಮವಾಗಿ ವಿವಿಧ ಧರ್ಮೀಯರ ಜಿಲ್ಲಾ ಹಾಗೂ ತಾಲೂಕುವಾರು ಜನಸಂಖ್ಯೆಯನ್ನು ನೀಡಲಾಗಿದೆ.

**ಕೋಷ್ಟಕ. ೩.೨೨ ಕರ್ನಾಟಕ ಹಾಗೂ ತುಮಕೂರು ಜಿಲ್ಲೆಯಲ್ಲಿರುವ ವಿವಿಧ ಪ್ರಮುಖ ಧರ್ಮೀಯರ ಜನಸಂಖ್ಯಾ ವಿವರ**

| ರಾಜ್ಯ/ಜಿಲ್ಲೆ | ಧರ್ಮಗಳು | ೧೯೯೧ | | | | ೨೦೦೧ | | | |
|---|---|---|---|---|---|---|---|---|---|
| | | ಗ್ರಾಮೀಣ | | ನಗರ | | ಗ್ರಾಮೀಣ | | ನಗರ | |
| | | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ |
| ಕರ್ನಾಟಕ | ಹಿಂದೂ | ೨,೮೧,೩೨,೮೪೬ | ೭೩.೨ | ೧,೦೨,೯೯,೧೮೧ | ೨೬.೮ | ೩,೧೨,೦೫,೬೯೫ | ೭೦.೪ | ೧,೩೧,೧೫,೫೮೪ | ೨೯.೬ |
| | ಇಸ್ಲಾಂ | ೨೩,೨೯,೩೨೧ | ೪೪.೫ | ೨೯,೦೪,೭೦೨ | ೫೫.೫ | ೨೬,೪೭,೮೨೬ | ೪೧.೦ | ೩೮,೧೫,೩೦೧ | ೫೯.೦ |
| | ಕ್ರಿಶ್ಚಿಯನ್ | ೩,೨೭,೫೧೨ | ೩೮.೧ | ೫,೩೧,೯೬೬ | ೬೧.೯ | ೩,೨೮,೪೧೦ | ೩೨.೫ | ೬,೮೦,೭೫೪ | ೬೭.೫ |
| | ಜೈನ | ೧,೮೮,೩೮೯ | ೫೭.೮ | ೧,೩೭,೭೨೫ | ೪೨.೨ | ೨,೧೮,೯೦೧ | ೫೩.೦ | ೧,೯೩,೭೫೮ | ೪೭.೦ |
| | ಬೌದ್ಧ | ೬೧,೦೦೭ | ೮೩.೬ | ೧೨,೦೦೫ | ೧೬.೪ | ೬೪,೯೪೩ | ೮೩.೫ | ೨೮,೩೫೭ | ೧೬.೫ |
| | ಸಿಖ್ | ೧,೨೨೬ | ೧೨.೧ | ೮,೮೭೫ | ೮೭.೯ | ೨,೮೫೦ | ೧೮.೬ | ೧೨,೪೭೬ | ೮೧.೪ |
| | ಇತರೆ | ೧,೮೪೪ | ೨೯.೨ | ೪,೪೮೧ | ೭೦.೮ | ೭೪,೧೨೮ | ೬೪.೨ | ೪೧,೩೩೨ | ೩೫.೮ |
| | ಧರ್ಮವನ್ನು ತಿಳಿಸದವರು | ೨೭,೨೬೮ | ೭೫.೫ | ೮,೮೫೩ | ೨೪.೫ | ೮೨,೮೬೬ | ೬೮.೯ | ೩೭,೩೮೧ | ೩೧.೧ |
| ತುಮಕೂರು ಜಿಲ್ಲೆ | ಹಿಂದೂ | ೧೮,೩೪,೩೩೬ | ೮೬.೭ | ೨,೮೨,೧೧೯ | ೧೩.೩ | ೧೯,೭೩,೨೩೮ | ೮೪.೦ | ೩,೭೬.೫೬೩ | ೧೬.೦ |
| | ಇಸ್ಲಾಂ | ೮೪,೫೦೬ | ೪೭.೮ | ೯೨,೩೯೯ | ೫೨.೨ | ೯೨,೩೦೮ | ೪೩.೬ | ೧,೧೯,೪೨೪ | ೫೬.೪ |
| | ಕ್ರಿಶ್ಚಿಯನ್ | ೧,೧೮೭ | ೨೦.೨ | ೪,೬೯೧ | ೭೯.೮ | ೧,೭೧೪ | ೨೨.೨ | ೬,೦೨೨ | ೭೭.೮ |
| | ಜೈನ | ೧,೮೮೪ | ೪೧.೩ | ೨,೬೮೨ | ೫೮.೭ | ೧,೮೪೮ | ೩೪.೦ | ೩,೫೮೩ | ೬೬.೦ |
| | ಬೌದ್ಧ | ೨೯ | ೪೮.೩ | ೩೧ | ೫೧.೭ | ೧೨೧ | ೪೭.೬ | ೧೩೩ | ೫೨.೪ |
| | ಸಿಖ್ | ೫೦ | ೩೪.೫ | ೯೫ | ೬೫.೫ | ೧೬೩ | ೪೯.೭ | ೧೬೫ | ೫೦.೩ |
| | ಇತರೆ | ೩೮ | ೩೫.೮ | ೬೮ | ೬೪.೨ | ೫,೨೪೭ | ೯೨.೩ | ೪೩೯ | ೭.೭ |
| | ಧರ್ಮವನ್ನು ತಿಳಿಸದವರು | ೧,೬೨೬ | ೯೫.೪ | ೭೮ | ೪.೬ | ೨,೮೭೦ | ೭೬.೭ | ೮೭೩ | ೨೩.೩ |

ಆಧಾರ: ತುಮಕೂರು ಡಿಸ್ಟ್ರಿಕ್ ಸೆನ್ಸಸ್ ಹ್ಯಾಂಡ್ ಬುಕ್ ೨೦೦೧, ಅನುಬಂಧ:–೫(೪)

## ಕೋಷ್ಟಕ. ೩.೨೩: ವಿವಿಧ ಧರ್ಮೀಯರ ತಾಲೂಕುವಾರು ಜನಸಂಖ್ಯೆ ಹಾಗೂ ಶೇಕಡವಾರು (೧೯೯೧,೨೦೦೧ ರ ಜನಗಣತಿ) ವಿವರ

| ಜಿಲ್ಲೆ/ತಾಲೂಕು | | ಒಟ್ಟು ಜನಸಂಖ್ಯೆ | ಧರ್ಮೀಯವಾರು ಜನಸಂಖ್ಯೆ ಹಾಗೂ ಶೇಕಡವಾರು ಪ್ರಮಾಣ | | | | | | | |
|---|---|---|---|---|---|---|---|---|---|---|
| | | | ಹಿಂದೂ | ಇಸ್ಲಾಂ | ಕ್ರೈಸ್ತ | ಜೈನ | ಬೌದ್ಧ | ಸಿಖ್ | ಇತರೆ ಧರ್ಮೀಯರು | ಧರ್ಮ ತಿಳಿಸದವರು |
| | | ೧೯೯೧ ರ ಜನಗಣತಿ ಪ್ರಕಾರ | | | | | | | | |
| ತುಮಕೂರು ಜಿಲ್ಲೆ | ವಾಸ್ತವಿಕ | ೨೩,೦೫,೮೧೯ | ೨೧,೧೬,೪೫೫ | ೧,೭೬,೯೦೫ | ೫,೮೭೮ | ೪,೫೬೬ | ೬೦ | ೧೪೫ | ೧೦೬ | ೧,೭೦೪ |
| | ಶೇಕಡವಾರು | ೧೦೦ | ೯೧.೭೯ | ೭.೬೭ | ೦.೨೫ | ೦.೨ | ೦.೦ | ೦.೦೧ | ೦.೦ | ೦.೦೭ |
| ಚಿಕ್ಕನಾಯಕನಹಳ್ಳಿ | ವಾಸ್ತವಿಕ | ೧,೯೩,೪೧೯ | ೧,೮೧,೪೦೬ | ೧,೬೨೯ | ೪೮ | ೧೮೧ | – | – | ೩ | ೧೫೨ |
| | ಶೇಕಡವಾರು | ೧೦೦ | ೯೩.೭೯ | ೬.೦೧ | ೦.೦೨ | ೦.೦೯ | ೦.೦ | ೦.೦ | ೦.೦ | ೦.೦೮ |
| ಶಿರಾ | ವಾಸ್ತವಿಕ | ೨,೫೫,೨೩೫ | ೨,೩೪,೭೩೬ | ೨೦,೧೫೯ | ೨೫೦ | ೬೪ | ೧೬ | ೮ | ೨ | – |
| | ಶೇಕಡವಾರು | ೧೦೦ | ೯೧.೯೭ | ೭.೯ | ೦.೧ | ೦.೦೩ | ೦.೦೧ | ೦.೦ | ೦.೦ | ೦.೦ |
| ಪಾವಗಡ | ವಾಸ್ತವಿಕ | ೨,೧೨,೭೬೮ | ೨,೦೨,೯೨೨ | ೯,೩೭೭ | ೫೯ | ೧೩೫ | – | ೪ | ೨ | ೨೬೯ |
| | ಶೇಕಡವಾರು | ೧೦೦ | ೯೫.೩೭ | ೪.೪೧ | ೦.೦೩ | ೦.೦೬ | ೦.೦ | ೦.೦ | ೦.೦ | ೦.೧೩ |
| ಮಧುಗಿರಿ | ವಾಸ್ತವಿಕ | ೨,೪೫,೬೦೦ | ೨,೩೩,೨೨೭ | ೧೧,೬೧೪ | ೪೮ | ೨೫೧ | – | ೪ | ೨ | ೪೫೪ |
| | ಶೇಕಡವಾರು | ೧೦೦ | ೯೪.೯೬ | ೪.೭೩ | ೦.೦೨ | ೦.೧ | ೦.೦ | ೦.೦ | ೦.೦ | ೦.೧೮ |
| ಕೊರಟಗೆರೆ | ವಾಸ್ತವಿಕ | ೧,೪೫,೫೬೦ | ೧,೩೭,೩೩೫ | ೭,೭೭೩ | ೩೪ | ೩೯೭ | – | ೧೩ | ೮ | – |
| | ಶೇಕಡವಾರು | ೧೦೦ | ೯೪.೩೫ | ೫.೩೪ | ೦.೦೨ | .೦೨೭ | ೦.೦ | ೦.೦೧ | ೦.೦೧ | ೦.೦ |
| ತುಮಕೂರು | ವಾಸ್ತವಿಕ | ೪,೨೬,೧೩೭ | ೩,೫೮,೩೧೬ | ೬೧,೦೦೭ | ೪,೦೭೪ | ೨,೨೨೧ | ೪೦ | ೧೦೧ | ೫೯ | ೩೧೯ |
| | ಶೇಕಡವಾರು | ೧೦೦ | ೮೪.೦೮ | ೧೪.೩೨ | ೦.೯೬ | ೦.೫೨ | ೦.೦೧ | ೦.೦೨ | ೦.೦೧ | ೦.೦೭ |
| ಗುಬ್ಬಿ | ವಾಸ್ತವಿಕ | ೨,೩೧,೬೧೫ | ೨,೧೭,೩೬೮ | ೧೩,೧೭೨ | ೧೯೯ | ೫೦೯ | – | ೧ | ೨ | ೩೬೪ |
| | ಶೇಕಡವಾರು | ೧೦೦ | ೯೩.೮೫ | ೫.೬೯ | ೦.೦೯ | ೦.೨೨ | ೦.೦ | ೦.೦ | ೦.೦ | ೦.೧೬ |
| ತಿಪಟೂರು | ವಾಸ್ತವಿಕ | ೧,೯೫,೮೨೬ | ೧,೮೧,೨೮೮ | ೧೩,೩೯೩ | ೬೧೭ | ೩೪೫ | – | ೧೪ | ೨೩ | ೧೪೬ |
| | ಶೇಕಡವಾರು | ೧೦೦ | ೯೨.೫೮ | ೬.೮೪ | ೦.೩೨ | ೦.೧೮ | ೦.೦ | ೦.೦೧ | ೦.೦೧ | ೦.೦೭ |
| ತುರುವೇಕೆರೆ | ವಾಸ್ತವಿಕ | ೧,೬೪,೬೦೯ | ೧,೫೬,೪೫೮ | ೭,೫೭೫ | ೨೩೫ | ೩೪೦ | – | – | ೧ | – |
| | ಶೇಕಡವಾರು | ೧೦೦ | ೯೫.೦೫ | ೪.೬ | ೦.೧೪ | ೦.೨೧ | ೦.೦ | ೦.೦ | ೦.೦ | ೦.೦ |

| | | | | | | | | | |
|---|---|---|---|---|---|---|---|---|---|
| ಕುಣಿಗಲ್ | ವಾಸ್ತವಿಕ | ೨,೩೫,೦೫೦ | ೨,೧೩,೩೯೯ | ೨೧,೨೦೬ | ೩೧೪ | ೧೨೩ | ೪ | – | ೪ | – |
| | ಶೇಕಡವಾರು | ೧೦೦ | ೯೦.೭೯ | ೯.೦೨ | ೦.೧೩ | ೦.೦೫ | ೦.೦ | ೦.೦ | ೦.೦ | ೦.೦ |
| ೨೦೦೧ ರ ಜನಗಣತಿ ಪ್ರಕಾರ | | | | | | | | | | |
| ತುಮಕೂರು ಜಿಲ್ಲೆ | ವಾಸ್ತವಿಕ | ೨೫,೮೪,೭೧೧ | ೨೩,೪೯,೮೦೧ | ೨,೧೧,೭೩೨ | ೭,೭೩೬ | ೫,೪೩೧ | ೨೫೪ | ೩೨೮ | ೫,೬೮೬ | ೩,೭೪೩ |
| | ಶೇಕಡವಾರು | ೧೦೦ | ೯೦.೯೧ | ೮.೧೯ | ೦.೩೦ | ೦.೨೧ | ೦.೦೧ | ೦.೦೧ | ೦.೨೨ | ೦.೧೪ |
| ಚಿಕ್ಕನಾಯಕನಹಳ್ಳಿ | ವಾಸ್ತವಿಕ | ೨,೦೯,೬೨೨ | ೧,೯೧,೪೪೪ | ೧೨,೭೭೯ | ೯೩ | ೨೨೦ | ೧೨ | ೦ | ೪೬೫೨ | ೪೨೨ |
| | ಶೇಕಡವಾರು | ೧೦೦ | ೯೧.೩೩ | ೬.೧೦ | ೦.೦೪ | ೦.೧೦ | ೦.೦೧ | ೦.೦೦ | ೨.೨೨ | ೦.೨೦ |
| ಶಿರಾ | ವಾಸ್ತವಿಕ | ೩,೦೧,೪೭೩ | ೨,೭೩,೮೧೫ | ೨೬,೯೪೧ | ೩೪೦ | ೯೫ | ೬ | ೨೬ | ೬೬ | ೧೮೪ |
| | ಶೇಕಡವಾರು | ೧೦೦ | ೯೦.೮೩ | ೮.೯೪ | ೦.೧೧ | ೦.೦೩೧ | ೦.೦೦ | ೦.೦೧ | ೦.೦೨ | ೦.೦೬ |
| ಪಾವಗಡ | ವಾಸ್ತವಿಕ | ೨,೪೬,೭೫೫ | ೨,೩೪,೮೦೪ | ೧೧,೦೨೧ | ೮೮ | ೧೩೫ | ೨ | ೬ | ೧೪ | ೧೮೫ |
| | ಶೇಕಡವಾರು | ೧೦೦ | ೯೫.೩೫ | ೪.೪೮ | ೦.೦೪ | ೦.೦೫ | ೦.೦೦ | ೦.೦೦ | ೦.೦೧ | ೦.೦೮ |
| ಮಧುಗಿರಿ | ವಾಸ್ತವಿಕ | ೨,೬೫,೮೮೪ | ೨,೫೨,೬೭೬ | ೧೨,೫೬೩ | ೮೭ | ೨೫೭ | ೩ | ೩೪ | ೪೪ | ೨೨೦ |
| | ಶೇಕಡವಾರು | ೧೦೦ | ೯೫.೦೩ | ೪.೭೨ | ೦.೦೩ | ೦.೧೦ | ೦.೦೦ | ೦.೦೧ | ೦.೦೨ | ೦.೦೮ |
| ಕೊರಟಗೆರೆ | ವಾಸ್ತವಿಕ | ೧,೬೦,೯೫೨ | ೧,೫೧,೩೪೨ | ೮,೯೬೭ | ೪೧ | ೩೯೨ | ೨ | ೧೨ | ೧೦ | ೧೮೬ |
| | ಶೇಕಡವಾರು | ೧೦೦ | ೯೪.೦೩ | ೫.೫೭ | ೦.೦೩ | ೦.೦೨೪ | ೦.೦೦ | ೦.೦೧ | ೦.೦೧ | ೦.೧೨ |
| ತುಮಕೂರು | ವಾಸ್ತವಿಕ | ೫,೧೬,೬೬೧ | ೪,೨೭,೫೫೪ | ೭೮,೮೨೨ | ೫,೫೩೬ | ೨,೯೧೮ | ೨೦೧ | ೧೪೭ | ೩೦೯ | ೧೧೭೪ |
| | ಶೇಕಡವಾರು | ೧೦೦ | ೮೨.೭೫ | ೧೫.೨೬ | ೧.೦೭ | ೦.೫೬ | ೦.೦೪ | ೦.೦೩ | ೦.೦೬ | ೦.೨೩ |
| ಗುಬ್ಬಿ | ವಾಸ್ತವಿಕ | ೨,೫೬,೪೧೩ | ೨,೩೯,೫೧೫ | ೧೫,೪೩೧ | ೧೬೩ | ೫೬೪ | ೫ | ೭ | ೩೩೬ | ೩೯೨ |
| | ಶೇಕಡವಾರು | ೧೦೦ | ೯೩.೪೧ | ೬.೦೨ | ೦.೦೬ | ೦.೨೨ | ೦.೦೦ | ೦.೦೦ | ೦.೧೩ | ೦.೧೫ |
| ತಿಪಟೂರು | ವಾಸ್ತವಿಕ | ೨,೧೭,೧೨೪ | ೧,೯೯,೮೩೮ | ೧೫,೧೯೬ | ೭೬೭ | ೩೭೭ | ೧೪ | ೮೦ | ೨೦೯ | ೬೪೩ |
| | ಶೇಕಡವಾರು | ೧೦೦ | ೯೨.೦೪ | ೭.೦೦ | ೦.೩೫ | ೦.೧೭ | ೦.೦೧ | ೦.೦೪ | ೦.೧೦ | ೦.೩೦ |
| ತುರುವೇಕೆರೆ | ವಾಸ್ತವಿಕ | ೧,೭೪,೨೯೭ | ೧,೬೪,೮೯೫ | ೮,೫೮೧ | ೨೦೬ | ೩೩೬ | ೧ | ೪ | ೧೬ | ೨೫೮ |
| | ಶೇಕಡವಾರು | ೧೦೦ | ೯೪.೬೧ | ೪.೯೨ | ೦.೧೨ | ೦.೧೯ | ೦.೦೦ | ೦.೦೦ | ೦.೦೧ | ೦.೧೫ |
| ಕುಣಿಗಲ್ | ವಾಸ್ತವಿಕ | ೨,೩೬,೦೩೦ | ೨,೧೩,೯೧೮ | ೨೧,೪೩೧ | ೪೧೫ | ೧೩೭ | ೮ | ೧೨ | ೩೦ | ೭೯ |
| | ಶೇಕಡವಾರು | ೧೦೦ | ೯೦.೬೩ | ೯.೦೮ | ೦.೧೮ | ೦.೦೬ | ೦.೦೦ | ೦.೦೧ | ೦.೦೧ | ೦.೦೩ |

ಆಧಾರ: ತುಮಕೂರು ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ೨೦೦೧,

**ಹಿಂದೂ (ಸನಾತನ) ಧರ್ಮ**

ಹಿಂದೂ ಧರ್ಮವು ಅನೇಕ ಧಾರ್ಮಿಕ ಪಂಥ ಮತ್ತು ನಂಬಿಕೆಗಳನ್ನು ಒಳಗೊಂಡಿರುವ ಸನಾತನ ಧರ್ಮವಾಗಿದೆ. ಹಿಂದೂಗಳಲ್ಲಿ ಅನೇಕ ಜಾತಿಗಳಿದ್ದರೂ ಪವಿತ್ರ ಯಾತ್ರಾ ಸ್ಥಳಗಳು ಸಾಮಾನ್ಯವಾಗಿ ಒಂದೇ ಆಗಿರುತ್ತವೆ. ನಾಲ್ಕು ವೇದಗಳು, ಹದಿನೆಂಟು ಪುರಾಣಗಳು ಹಾಗೂ ರಾಮಾಯಣ, ಮಹಾಭಾರತ, ಭಾಗವತ ಮತ್ತು ಮಹಾಭಾರತದಲ್ಲಿ ಬರುವ ಭಗವದ್ಗೀತೆ ಹಿಂದೂಗಳ ಪವಿತ್ರ ಗ್ರಂಥಗಳಾಗಿದ್ದು, ಭಾವೈಕ್ಯತೆ ಹಿಂದೂಗಳ ಮುಖ್ಯ ಶಕ್ತಿಯಾಗಿದೆ. ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಹಾಗೂ ಅವರ ವಿವಿಧ ಅವತಾರಗಳನ್ನೂ, ಪರಿವಾರ ದೇವ-ದೇವತೆಗಳನ್ನೂ ಹಿಂದೂಗಳೂ ಭಕ್ತಿಯಿಂದ ಪೂಜಿಸುತ್ತಾರೆ. ಹಿಂದೂ ಧರ್ಮದಲ್ಲಿ ಕಂಡು ಬರುವ 'ಹಿಂದೂ' ಪದವು 'ಸಿಂಧೂ' ನದಿಯ ಮೂಲದಿಂದ ರೂಢಿಗೆ ಬಂದಿದೆ. ಹಿಂದೂ ಧರ್ಮವು ಕೇವಲ ಒಂದು ಮತ ಅಥವಾ ಪಂಥವಾಗಿರದೆ ಅದೊಂದು ಜೀವನಮಾರ್ಗವೆಂದು ಪರಿಗಣಿಸಲಾಗಿದೆ.

ಜಿಲ್ಲೆಯಲ್ಲಿ ಕಂಡುಬರುವ ಹಿಂದೂ ಧರ್ಮದ ಪ್ರಮುಖ ಪ್ರಭೇದಗಳ ಬಗ್ಗೆ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಅದ್ವೈತ**: 'ಅದ್ವೈತ' ಸಿದ್ಧಾಂತವನ್ನು ಪ್ರತಿಪಾದಿಸಿದ (ಸುಮಾರು ಕ್ರಿ.ಶ.೮ನೇ ಶತಮಾನ) ಆದಿ ಶಂಕರಾಚಾರ್ಯರು ಕೇರಳದ ಕಾಲಟಿಯಲ್ಲಿ ಜನಿಸಿದ್ದು, ಶಿವ, ವಿಷ್ಣು, ಕಾರ್ತಿಕೇಯ, ಗಣಪತಿ, ಬ್ರಹ್ಮ ಅಥವಾ ಸೂರ್ಯ ಇವರಲ್ಲಿ ಯಾರನ್ನಾದರೂ ಆರಾಧಿಸಬಹುದೆಂದು ತಮ್ಮ ಅನುಯಾಯಿಗಳಿಗೆ ಉಪದೇಶ ಮಾಡಿದರು. 'ಅಹಂ ಬ್ರಹ್ಮಾಸ್ಮಿ' ಅಥವಾ ಪರಮಾತ್ಮನು ಪ್ರತಿಯೊಬ್ಬ ವ್ಯಕ್ತಿಯಲ್ಲೂ ನೆಲೆಸಿರುವನೆಂಬ ಆತ್ಮ-ಪರಮಾತ್ಮಗಳ ಐಕ್ಯತೆಯ ಪ್ರತೀಕವಾದ 'ಅದ್ವೈತ' ಸಿದ್ಧಾಂತವನ್ನು ಶಂಕರಾಚಾರ್ಯರು ಪ್ರತಿಪಾದಿಸಿದ್ದೇ ಅಲ್ಲದೇ ಬ್ರಹ್ಮಸತ್ಯ, ಜಗತ್ತು ಮಿಥ್ಯೆ ಹಾಗೂ ಮಾಯಾ (ಭ್ರಾಂತಿಕಾರಕ) ತತ್ವಗಳನ್ನು ತಮ್ಮ ಪಂಥದ ಪ್ರಚಾರದಲ್ಲಿ ಉಪದೇಶಿಸಿದರೆಂದು ಪ್ರತೀತಿಯಿದೆ. ಅದ್ವೈತ ಸಿದ್ಧಾಂತದ ಅನುಯಾಯಿಗಳಲ್ಲಿ ಸ್ಮಾರ್ತರು ಹಾಗೂ ತೆಲುಗು ಮೂಲದ ವೇಲನಾಡು, ಸೀರನಾಡು ಹಾಗೂ ಮುಲಕನಾಡು ಎಂಬ ಒಳಪಂಗಡಗಳಿವೆ. ಸ್ಮಾರ್ತರಲ್ಲಿ ಬಡಗನಾಡು, ಬಬ್ಬೂರುಕಮ್ಮಿ ಹಾಗೂ ಹೊಯ್ಸಳ ಕರ್ನಾಟಕಗಳೆಂಬ ಪಂಗಡಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಜಿಲ್ಲೆಯ ಹಲವೆಡೆ ಶೃಂಗೇರಿ ಮಠದ ಶಾಖಾಮಠಗಳು ಅಸ್ತಿತ್ವದಲ್ಲಿವೆ.

**ವಿಶಿಷ್ಟಾ ದ್ವೈತ:** ಶ್ರೀವೈಷ್ಣವ ಅಥವಾ ವಿಶಿಷ್ಟಾದ್ವೈತ ಮತವು ಪೂರ್ವದಿಂದಲೂ ಹಳೇ ಮೈಸೂರು ರಾಜ್ಯದಲ್ಲಿ ಚಾಲ್ತಿಯಲ್ಲಿತ್ತೆಂದು ರಾವ್ ಬಹಾದ್ದೂರ್ ಸಿ ಹಯವದನರಾವ್ ತಮ್ಮ 'ಮೈಸೂರು ಗ್ಯಾಸೆಟಿಯರ್ ಗ್ರಂಥದಲ್ಲಿ ದಾಖಲಿಸಿದ್ದಾರೆ. ನೆರೆಯ ಮಂಡ್ಯ ಜಿಲ್ಲೆಯ 'ಮೇಲುಕೋಟೆ', ಶ್ರೀ ವೈಷ್ಣವ (ಐಯ್ಯಂಗಾರ್ ಎಂದೂ ಕರೆಯಲಾಗುತ್ತದೆ)ರಿಗೆ ಮುಖ್ಯ ಕೇಂದ್ರವಾಗಿದೆ. ಮೇಲುಕೋಟೆಯು ರಾಮಾನುಜರ ತಪೋಭೂಮಿಯಾಗಿದ್ದು, ಅಲ್ಲಿಯ ಚೆಲುವರಾಯಸ್ವಾಮಿ ದೇವಾಲಯ ಅತ್ಯಂತ ಆಕರ್ಷಕ ರಚನೆಯಾಗಿದೆ. ಈ ಮತದ ಮೂಲ, ಭಾಗವತ ಪಂಥವಾದರೂ ತಮಿಳುನಾಡಿನ ಹನ್ನೆರಡು ಮಂದಿ ಆಳ್ವಾರರು ಇದನ್ನು ವ್ಯವಸ್ಥಿತವಾಗಿ ಪ್ರತಿಪಾದಿಸಿದರು. ತಮಿಳುನಾಡಿನ ಚೆನ್ನೈ ಸಮೀಪದ ಶ್ರೀಪೆರಂಬದೂರಿನಲ್ಲಿ ಅಸೂರಿ ಕೇಶವ ಪೆರುಮಾಳ್ ಹಾಗೂ ಭೂಮಿ ಪಿರಾಟ್ಟಿ (ಕಾಂತಿಮತಿ) ದಂಪತಿಯ (ಸು. ಕ್ರಿ.ಶ.೧೦೧೭ರಲ್ಲಿ) ಮಗನಾಗಿ ಜನಿಸಿ ಕಂಚಿ, ಶ್ರೀರಂಗ, ತಿರುಮಲೈ ಹಾಗೂ ಮೇಲುಕೋಟೆಗಳಲ್ಲಿ ಸಂಚರಿಸಿ ೧೨೦ ವರ್ಷಗಳ ದೀರ್ಘಕಾಲ ಜೀವಿಸಿದ್ದ ಅವರು ಶ್ರೀವೈಷ್ಣವ ಧರ್ಮಕ್ಕೆ ಒಂದು ನಿಶ್ಚಿತ ಕಟ್ಟು-ಕಟ್ಟಳೆ, ಸಂಕೇತ ಮತ್ತು ಧಾರ್ಮಿಕ ವಿಧಿ ವಿಧಾನಗಳನ್ನು ನೀಡಿದರು. ಪೂರ್ವಿಕರಿಂದ ಸಂಗ್ರಹಿಸಿದ ಭಕ್ತಿ ಗೀತೆಗಳಲ್ಲಿ ೪,೦೦೦ ಗೀತೆಗಳನ್ನು (ನಾಲಾಯಿರ್ ಪ್ರಬಂಧ) ಒಂದು ನಿಶ್ಚಿತ ಕ್ರಮದಲ್ಲಿ ಜೋಡಿಸಿ ಧಾರ್ಮಿಕ ಆಚರಣೆ ರೂಪಿಸಿ (ನಿಯಮನಪ್ಪಡಿ) ಶ್ರೀವೈಷ್ಣವ ಧರ್ಮಕ್ಕೆ ಪ್ರಬಲವಾದ ಅಡಿಪಾಯವನ್ನು ಹಾಕಿದ ಇವರು ಪ್ರತಿಪಾದಿಸಿದ ವಿಶಿಷ್ಟಾದ್ವೈತ ತತ್ವದ ಪ್ರಕಾರ ಬ್ರಹ್ಮನು ಚಿತ್ ಮತ್ತು ಸಚಿತ್ ಎಂಬ ವಿಶೇಷಣಗಳನ್ನು ಹೊಂದಿರುತ್ತಾನೆ. ಆದುದರಿಂದ ಈ ತತ್ವವು ವಿಶೇಷಣಗಳಿಂದ ಕೂಡಿದ ಅದ್ವೈತ ಅಥವಾ ವಿಶಿಷ್ಟಾದ್ವೈತವೆಂದು ಜನಪ್ರಿಯವಾಯಿತು. ಶ್ರೀವೈಷ್ಣವರಲ್ಲಿ ಪ್ರಮುಖವಾಗಿ ತೇಂಗಲೈ (ದಕ್ಷಿಣ) ಮತ್ತು ವಡಗಲೈ (ಉತ್ತರ) ಎಂಬ ಎರಡು ಸಂಪ್ರದಾಯಗಳು ರೂಢಿಯಲ್ಲಿವೆ. ತೇಂಗಲೈ ಸಂಪ್ರದಾಯಕ್ಕೆ ಮನವಾಲ ನಾಥಮುನಿ ಮತ್ತು ವಡಗಲೈ ಸಂಪ್ರದಾಯಕ್ಕೆ ದೇಶಿಕರ್ ಅವರನ್ನು ಪ್ರಮುಖ ಗುರುಗಳೆಂದು ಪರಿಗಣಿಸಲಾಗುತ್ತದೆ. ಈ ಜಿಲ್ಲೆಯ ಗುಬ್ಬಿ ತಾಲೂಕಿನ ಕಡಬಾ ಮತ್ತು ತುರುವೇಕೆರೆ ತಾಲೂಕಿನ ಮಾಯಸಂದ್ರ, ತುರುವೇಕೆರೆ ಹಾಗೂ ನೊಣವಿನ ಕೆರೆಗಳಲ್ಲಿ ಶ್ರೀವೈಷ್ಣವರು ಅಧಿಕವಾಗಿ ನೆಲೆಸಿರುವುದು ಕಂಡುಬರುತ್ತದೆ.

**ದ್ವೈತ:** ಮಾಧ್ವರೆಂದೂ ಕರೆಯಲಾಗುವ ವೈಷ್ಣವ ಬ್ರಾಹ್ಮಣರು ಅನುಸರಿಸುವ ಸಿದ್ಧಾಂತವೇ 'ದ್ವೈತ ಪಂಥ'. ಆನಂದತೀರ್ಥ ಅಥವಾ ಮಧ್ವಾಚಾರ್ಯರು ಇದರ ಪ್ರವರ್ತಕರು. ಇವರು (ಕ್ರಿ.ಶ. ೧೨೦೦ – ೧೨೮೦ರ) ದಕ್ಷಿಣ ಕನ್ನಡ ಜಿಲ್ಲೆಯ ಪಾಜಕ (ಬೆಳ್ಳೆ) ಕ್ಷೇತ್ರದಲ್ಲಿ ಜನಿಸಿದರೆಂದು ಪ್ರತೀತಿಯಿದೆ. ಇವರ ಪ್ರಕಾರ ವಿಷ್ಣುವಿನ ಆರಾಧನೆಯೇ ಪ್ರಮುಖ, "ಹರಿ ಸರ್ವೋತ್ತಮ ಮತ್ತು ವಾಯು ಜೀವೋತ್ತಮ" ಎಂಬ ತತ್ವ ಹಾಗೂ ಪಂಚಭೇದ ತಾರತಮ್ಯತ್ವವನ್ನು ಸೈದ್ಧಾಂತಿಕವಾಗಿ ಪ್ರತಿಪಾದಿಸಿದರು. ಎಲ್ಲಾ ಜೀವಿಗಳೂ ಪರಮಾತ್ಮನನ್ನು ದಾಸ್ಯಭಾವದಿಂದ ಆರಾಧಿಸಬೇಕು. ಜೀವಾತ್ಮ–ಪರಮಾತ್ಮರು ಇಹ ಮತ್ತು ಪರಲೋಕದಲ್ಲಿ ಪ್ರತ್ಯೇಕವಾಗಿರುತ್ತಾರೆ ಎಂದು ಸಾರಿದರು. ಪ್ರತಿಯೊಬ್ಬ ವ್ಯಕ್ತಿಯೂ ಶ್ರದ್ಧಾಭಕ್ತಿಗಳ ಮೂಲಕ ಆತ್ಮೋನ್ನತಿಯನ್ನು ಸಾಧಿಸಿ ಮೋಕ್ಷವನ್ನು ಪಡೆಯಬಹುದೆಂಬ ಮಧ್ವಾಚಾರ್ಯರ ಬೋಧನೆಯೇ ಮೂಲ ತತ್ವವಾಗಿದೆ. ಈ ಸಂಪ್ರದಾಯದ ಉತ್ತರಾದಿಮಠ, ವ್ಯಾಸರಾಯಮಠ ಹಾಗೂ ರಾಘವೇಂದ್ರರ ಮೃತ್ತಿಕಾ ಬೃಂದಾವನಗಳಿರುವ ಮಠಗಳೂ ಈ ಜಿಲ್ಲೆಯಲ್ಲಿವೆ. ತುಮಕೂರಿನ ಅಗ್ರಹಾರದಲ್ಲಿರುವ ಆಂಜನೇಯ, ಬಯಲು ಆಂಜನೇಯ, ಕ್ಯಾತ್ಸಂದ್ರದ ಆಂಜನೇಯ ಮತ್ತು ಅಜ್ಜಪ್ಪನಹಳ್ಳಿ (ತುಮಕೂರಿನಿಂದ ಐದು ಕಿ.ಮೀ.) ಯ ಆಂಜನೇಯ ವಿಗ್ರಹಗಳನ್ನು ವ್ಯಾಸರಾಯ ಮಠದ ಮೂಲಯತಿಗಳಾದ ವ್ಯಾಸರಾಜತೀರ್ಥರು ಪ್ರತಿಷ್ಠಾಪನೆ ಮಾಡಿದರೆಂದು ಐತಿಹ್ಯವಿದೆ. ಶ್ರಾವಣ ಬಹುಳ ಬಿದಿಗೆಯಂದು ರಾಘವೇಂದ್ರ ಸ್ವಾಮಿಗಳ ಆರಾಧನೆಯನ್ನೂ ಹಾಗೂ ಮಾಘ ಶುದ್ಧ ನವಮಿಯಂದು ಮಧ್ವನವಮಿ (ಮಧ್ವಾಚಾರ್ಯರು ಬದರಿಗೆ ಅದೃಶ್ಯರಾದ ದಿನ)ಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸುವುದು ಇಂದಿಗೂ ರೂಢಿಯಲ್ಲಿದೆ. ಶ್ರೀರಾಮನವಮಿಯನ್ನು ಚೈತ್ರ ಶುದ್ಧ ನವಮಿಯಂದು ಜಿಲ್ಲೆಯಾದ್ಯಂತ ಆಚರಿಸುತ್ತಾರೆ.

**ಶಕ್ತಿ ಆರಾಧನೆ:** ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಶಕ್ತಿ ದೇವತಾರಾಧನಾ ಕೇಂದ್ರಗಳು ಕಂಡು ಬರುತ್ತಿದ್ದು, ಮಾರಮ್ಮ, ಬಿಸಿಲು ಮಾರಮ್ಮ, ದುರ್ಗಮ್ಮ, ಯಲ್ಲಮ್ಮ, ಗಂಗಮ್ಮ, ಮಾತಂಗಮ್ಮ, ಕಾಳಮ್ಮ, ಮೊದಲಾದ ಗ್ರಾಮದೇವತೆಗಳನ್ನು ಪೂಜಿಸಲಾಗುತ್ತದೆ. ಪ್ರತಿಯೊಂದು ಗ್ರಾಮಕ್ಕೂ ಗ್ರಾಮದೇವತೆಯಿದ್ದು, ಬೇಸಿಗೆ ಕಾಲದಲ್ಲಿ ಮಕ್ಕಳಿಗೆ ತಗಲುವ ಆಡಮ್ಮ, ಸಿತಾಳ ಸಿಡುಬು, (ಸಿಡುಬು ಈಗ ಸಂಪೂರ್ಣವಾಗಿ ಹತೋಟಿಯಲ್ಲಿದೆ) ಹಾಗೂ ತಟ್ಟಮ್ಮಗಳನ್ನು ತಡೆಗಟ್ಟಲು ಗ್ರಾಮದೇವತೆಗಳಿಗೆ ವಿಶೇಷ ಪೂಜೆಯನ್ನು ನೆರವೇರಿಸುವುದು ಸಾಮಾನ್ಯವಾಗಿದ್ದು, ಗ್ರಾಮದೇವತೆಯ ಪೂಜಾ ಕಾರ್ಯವನ್ನು ಆಯಾ ಸಮುದಾಯದ ಪುರೋಹಿತ ವರ್ಗವೇ ನಿರ್ವಹಿಸುತ್ತದೆ. ಪ್ರಾಣಿಗಳನ್ನು ಅಂದರೆ ಕೋಳಿ, ಕುರಿ ಮತ್ತು ಮೇಕೆಗಳನ್ನು ಮಾತ್ರ ಗ್ರಾಮದೇವತೆಗಳನ್ನು ಸಂತೃಪ್ತಿ ಪಡಿಸಲು ಬಲಿಯನ್ನು ನೀಡುವುದು ಹಿಂದೆ ರೂಢಿಯಲ್ಲಿತ್ತಾದರೂ ಪ್ರಸ್ತುತ ನಿರ್ಬಂಧಿಸಲ್ಪಟ್ಟಿದೆ.

**ವೀರಶೈವ ಧರ್ಮ:** ವೀರಶೈವ ತತ್ವಗಳನ್ನು ಪ್ರತಿಪಾದಿಸುವ ದರ್ಶನವನ್ನು 'ಶಕ್ತಿ ವಿಶಿಷ್ಟಾದ್ವೈತ' ಸಿದ್ಧಾಂತವೆಂದು ಕರೆಯಲಾಗಿದೆ. ರೇಣುಕಾರಾಧ್ಯ, ಪಂಡಿತಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ ಮತ್ತು ವಿಶ್ವಾರಾಧ್ಯರು ಈ ಸಿದ್ಧಾಂತದ ತಳಹದಿಯನ್ನು ನಿರ್ಮಿಸಿದವರೆಂಬ ಬಲವಾದ ಐತಿಹ್ಯವಿದೆ. ವೀರಶೈವ ಧರ್ಮವು ಬಹುತೇಕ ಕಳಚೂರಿ ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದ ಬಸವೇಶ್ವರರ (ಕ್ರಿ.ಶ.೧೧೩೧–೧೧೬೮) ಕಾಲದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು. ಇವರ ಹಾಗೂ ಆ ನಂತರದ ಹಲವಾರು ಶಿವಶರಣರ 'ವಚನ ಸಾಹಿತ್ಯ' ರಚನೆಯಲ್ಲಿ ಈ ಧರ್ಮದ ಮೂಲತತ್ವ ಮತ್ತು ಉಪದೇಶಗಳು ಅಂತರ್ಗತವಾಗಿದ್ದು ಅವುಗಳ ಆಧಾರದ ಮೇಲೆ ಬೆಳೆದು ಬಂದಿರುವ ಜನಪ್ರಿಯ ಪಂಥವಿದಾಗಿದೆ. ಈ ಧರ್ಮದ ಮೂಲಭೂತ ತತ್ವಗಳನ್ನು ಪ್ರಮುಖವಾಗಿ ಅಷ್ಟಾವರಣ ಮತ್ತು ಷಟ್ಸ್ಥಲವೆಂದು ನಂಬಲಾಗುತ್ತದೆ. ಜಿಲ್ಲೆಯ ಸಿದ್ಧಗಂಗಾ (ಕ್ಯಾತ್ಸಂದ್ರ), ಯಡಿಯೂರು ಮತ್ತು ಗುಬ್ಬಿ ಪ್ರಸಿದ್ಧ ವೀರಶೈವ ಕೇಂದ್ರಗಳಾಗಿವೆ. ತುಮಕೂರಿಗೆ ಅತಿ ಸಮೀಪದಲ್ಲಿರುವ ವೀರಶೈವ ಸಂಪ್ರದಾಯದ ಸಿದ್ಧಗಂಗೆಯ ವಿರಕ್ತ ಮಠವು ಕೇವಲ ಧಾರ್ಮಿಕ ಕೇಂದ್ರವಾಗಿರದೇ ಪ್ರಮುಖವಾದ ಶೈಕ್ಷಣಿಕ ಕೇಂದ್ರವೂ ಆಗಿದೆ. ಈ ಮಠದ ಧರ್ಮಗುರುಗಳಾದ ಶತಾಯುಷಿ ಡಾ॥ ಶಿವಕುಮಾರಸ್ವಾಮಿ (೧೦೮ ವರ್ಷಗಳು) 'ನಡೆದಾಡುವ ದೇವರೆಂದೇ' ಪ್ರಸಿದ್ಧರಾಗಿದ್ದಾರೆ. ಸಿದ್ಧಲಿಂಗೇಶ್ವರರ ಗದ್ದುಗೆ ಇರುವ ಎಡೆಯೂರು, ಈ ಜಿಲ್ಲೆಯಲ್ಲಿರುವ ಇನ್ನೊಂದು ಪ್ರಮುಖ ವೀರಶೈವ ಯಾತ್ರಾಸ್ಥಳವಾಗಿದೆ.

## ನಾಥ ಪಂಥ

ಬೌದ್ಧರ ಮಹಾಯಾನ ಪಂಥ ಮತ್ತು ಶೈವಧರ್ಮಗಳ ಪರಸ್ಪರ ಸಮ್ಮಿಲನದಿಂದ ಬೆಳೆದು ಬಂದ ನಾಥಪಂಥವು ಕರ್ನಾಟಕದ ವಿವಿಧ ಭಾಗಗಳಲ್ಲಿ ವ್ಯಾಪಿಸಿರುವುದು ಉಲ್ಲೇಖಾರ್ಹ. ಮೂಲತ: ಉತ್ತರಪ್ರದೇಶದ 'ಗೋರಕ್‌ಪುರ' ಈ

ಪಂಥದ ಕೇಂದ್ರವಾಗಿದೆ. ಇದು ಘೋರಕ್ನಾಥ ಮತ್ತು ಮತ್ಸ್ಯೇಂದ್ರನಾಥರ ಕಾಲದಲ್ಲಿ ಹೆಚ್ಚು ಜನಪ್ರಿಯವಾಯಿತು. ೧೨ ವರ್ಷಕ್ಕೊಮ್ಮೆ ಮಂಗಳೂರು ಕಡಲ ತೀರದಲ್ಲಿರುವ ಕದ್ರಿಗೆ ಬರುವ ಪರಶುರಾಮ ಝುಂಡಿ ಪಾದಯಾತ್ರೆಯ ಪರಿಣಾಮವಾಗಿ ಕೈಯಲ್ಲಿ ಕಳಶಗಳನ್ನು ಹೊತ್ತು ಬರುವುದು ರೂಢಿಯಲ್ಲಿತ್ತು. ಹೀಗೆ ಪಾದಚಾರಿಗಳಾಗಿ ಪ್ರವಾಸ ಮಾಡುವಾಗ ಕಳಶವು ಕೈಜಾರಿ ಬಿದ್ದ ಸ್ಥಳಗಳಲ್ಲಿ ಅವರು ನೆಲಸಬೇಕಾದುದು ನಿಯಮವಾಗಿತ್ತು. ಹೀಗಾಗಿ ಕರ್ನಾಟಕದ ಹಂಡಿಬಡಗನಾಥ, ಚಿತ್ರದುರ್ಗದ ಏಕನಾಥೇಶ್ವರಿ, ದಕ್ಷಿಣಕನ್ನಡದ ಕದ್ರಿ ಮತ್ತು ವಿಟ್ಲಗಳು ಪ್ರಸಿದ್ಧವಾಗಿವೆ. ತುಮಕೂರು ಜಿಲ್ಲೆಯ ಸಿದ್ಧರಬೆಟ್ಟ ಮತ್ತು ನೆರೆಯ ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಬೆಟ್ಟಗಳೂ ಹಿಂದಿನಿಂದಲೂ ನಾಥಪಂಥದ ಕೇಂದ್ರಗಳಾಗಿ ಬೆಳೆದು ಬಂದಿರುವುದು ವ್ಯಕ್ತವಾಗುತ್ತದೆ. ಇವರು ಕಾಲಭೈರವನ ಆರಾಧಕರಾಗಿದ್ದು ಭೈರವ ಕ್ಷೇತ್ರಗಳಲ್ಲಿ ಕಾಣಸಿಗುತ್ತಾರೆ.

### ಜೈನ ಧರ್ಮ

ಕ್ರಿ.ಪೂ. ಆರನೇ ಶತಮಾನದಲ್ಲಿ ಭಾರತವು ಕಂಡ ಎರಡು ಪ್ರಮುಖ ಧರ್ಮಗಳಲ್ಲಿ ಜೈನಧರ್ಮವೂ ಒಂದಾಗಿದ್ದು, ಇಂದಿಗೂ ಚಾಲ್ತಿಯಲ್ಲಿದೆ. ಕರ್ನಾಟಕದಲ್ಲಿ ಜೈನಧರ್ಮವು ಚಂದ್ರಗುಪ್ತ ಮೌರ್ಯನ ಕಾಲದಲ್ಲೇ ಪ್ರವೇಶ ಮಾಡಿದ್ದಲ್ಲದೇ ಈ ಚಕ್ರವರ್ತಿಯು ತನ್ನ ಕೊನೆಯ ದಿನಗಳನ್ನು ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲೇ ಕಳೆದನೆಂದು ಬಲವಾದ ಐತಿಹ್ಯವಿದೆ. ಜೈನಧರ್ಮೀಯರಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಪ್ರಮುಖ ಪಂಥಗಳಿವೆ. ಕರ್ನಾಟಕದ ಜೈನರು ಪ್ರಧಾನವಾಗಿ ದಿಗಂಬರ ಪಂಥದ ಅನುಯಾಯಿಗಳಾಗಿದ್ದು ಕಂಡುಬರುತ್ತದೆ. ಈ ಪಂಥದ ಗುರುಗಳಿಗೆ ತೀರ್ಥಂಕರರೆಂದು ಕರೆಯಲಾಗುವುದು. ಜೈನರಲ್ಲಿ ಒಟ್ಟು ೨೪ ತೀರ್ಥಂಕರರಿದ್ದು, ಅವರನ್ನು ಧಾರ್ಮಿಕ ಗುರುಗಳೆಂದು ಪೂಜ್ಯ ಭಾವದಿಂದ ಆರಾಧಿಸಲಾಗುತ್ತದೆ. ಜೈನಧರ್ಮೀಯರು ಸಸ್ಯಾಹಾರಿಗಳಾಗಿದ್ದು ಜೀವನದಲ್ಲಿ ಅಹಿಂಸೆಯೇ ಪರಮಧರ್ಮ ಎಂದು ನಂಬಿಕೆಯುಳ್ಳವರು ಜೀವನದಲ್ಲಿ ಹುಟ್ಟು ಮತ್ತು ಸಾವುಗಳ ಬಂಧನದಿಂದ ಮುಕ್ತವಾಗುವುದಕ್ಕೆ ಜೈನರು 'ನಿರ್ವಾಣ'ವೆಂದು ಕರೆಯುತ್ತಾರೆ. ಪಂಚ ಮಹಾವ್ರತಗಳೆಂದು ಕರೆಯಲಾಗುವ ನೀತಿಸಂಹಿತೆಗಳಾದ ಸತ್ಯ, ಅಹಿಂಸೆ, ನಿಸ್ಪೃಹತೆ, ಸದ್ಚಾರಿತ್ರಾ ಮತ್ತು ಪ್ರಾಪಂಚಿಕ ಆಕಾಂಕ್ಷೆಗಳಿಂದ ಸ್ವಾತಂತ್ರ್ಯ ಪಡೆಯುವುದು. ಜೈನರಲ್ಲಿ ಅವರದೇ ಆದ ಪುರೋಹಿತ ವರ್ಗವಿದ್ದು, ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಅನುಷ್ಠಾನ ಮಾಡುವುದು ಇವರ ಪ್ರಮುಖ ಕರ್ತವ್ಯವಾಗಿರುತ್ತದೆ. ಇದು ಸಾಮಾನ್ಯವಾಗಿ ಹಿಂದೂಗಳಲ್ಲಿರುವಂತೆಯೇ ಷೋಡಷ ಸಂಸ್ಕಾರಗಳನ್ನು ಒಳಗೊಂಡಿರುತ್ತದೆ.

### ಇಸ್ಲಾಂ ಧರ್ಮ

ಇಸ್ಲಾಂ ಧರ್ಮವು ಅರಬ್ಬರ ಜೊತೆಗೆ ವ್ಯಾಪಾರ ಸಂಪರ್ಕ ಬೆಳೆದ ಸಂದರ್ಭದಲ್ಲೇ ಕರ್ನಾಟಕವನ್ನು ಪ್ರವೇಶ ಮಾಡಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಅರಬ್ಬರು ನೆಲೆಸಿದ್ದು, ಹಲವಾರು ಶಾಸನಗಳಲ್ಲಿ ಅವರನ್ನು ತಜ್ಜಕರುಗಳೆಂದು ಕರೆಯಲಾಗಿದೆ. ರಾಷ್ಟ್ರಕೂಟರ ಆಡಳಿತಾವಧಿಯಲ್ಲಿ ತಜ್ಜಕನೆಂಬ ರಾಜ್ಯಪಾಲನು ಕೊಂಕಣದಲ್ಲಿದ್ದನೆಂದು ಸಂಜಾಂ ತಾಮ್ರ ಶಾಸನ ದೃಢಪಡಿಸುತ್ತದೆ. ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಮುಸಲ್ಮಾನರ ನೆಲೆಗಳಿದ್ದ ಬಗ್ಗೆ ಅರೇಬಿಯಾದ ಯಾತ್ರಿಕರು ಸಹ ಉಲ್ಲೇಖಿಸಿದ್ದು, ಪಶ್ಚಿಮ ಕರಾವಳಿಯ ಕೆಲವು ಬಂದರುಗಳು ವಾಣಿಜ್ಯ ಮತ್ತು ವ್ಯಾಪಾರ ಕೇಂದ್ರಗಳಾಗಿ ಪ್ರಾಮುಖ್ಯ ಪಡೆದಿದ್ದುದರ ಬಗ್ಗೆ ಉಲ್ಲೇಖ ದೊರೆಯುತ್ತದೆ. ವಿಜಯನಗರದ ಆಳ್ವಿಕೆಯ ಸಮಯದಲ್ಲಿ ಇಸ್ಲಾಂ ಧರ್ಮವು ಕರ್ನಾಟಕದಲ್ಲಿ ಜನಪ್ರಿಯವಾಗಿತ್ತು. ಮೈಸೂರು ಆಡಳಿತವು ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರ ಹತೋಟಿಗೆ ಬಂದ ನಂತರ ಹಳೆಯ ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ಇಸ್ಲಾಂ ಧರ್ಮವು ವ್ಯಾಪಕವಾಗಿ ಹರಡುವಂತಾಯಿತು. ಪ್ರಥಮ ಬಾರಿಗೆ ಟಿಪ್ಪು ಸುಲ್ತಾನನು ತನ್ನ ಆಡಳಿತದ ಕಡತಗಳನ್ನು ಪರ್ಶಿಯನ್ ಮತ್ತು ಮರಾಠಿ ಭಾಷೆಗಳಲ್ಲಿ ದಾಖಲಿಸಲು ಆದೇಶ ನೀಡಿದ ಕಾರಣ ಆ ಪದ್ಧತಿಗೆ 'ಡಬ್ಬಲ್ ದಫ್ತರ್ ಪದ್ಧತಿ' ಎಂಬ ಹೆಸರು ಬಂದಿತು. ತುಮಕೂರು ಜಿಲ್ಲೆಯ ಶಿರಾದಲ್ಲಿದ್ದ ನವಾಬರ ಕಾಲದ ವಾಸ್ತುಶಿಲ್ಪ ರಚನೆಯು ಇಂಡೋ-ಸಾರ್ಸೆನಿಕ್ ಶೈಲಿಯಲ್ಲಿರುವುದು ಗಮನಾರ್ಹ. ಹೀಗೆ ಜಿಲ್ಲೆಯ ಧಾರ್ಮಿಕ ಹಾಗೂ ಸಾರ್ವಜನಿಕ ವಾಸ್ತುಗಳ ನಿರ್ಮಾಣದಲ್ಲಿ ಇಸ್ಲಾಂ ಧರ್ಮದ ಪ್ರಭಾವವನ್ನು ವ್ಯಾಪಕವಾಗಿ ಗುರುತಿಸಬಹುದಾಗಿದೆ.

### ಕ್ರೈಸ್ತ ಧರ್ಮ

ಕ್ರೈಸ್ತ ಧರ್ಮದ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಂಟ್ ಪಂಥಗಳು ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದ್ದು, ಕ್ಯಾಥೋಲಿಕ್ ಪಂಥದವರು ಹೆಚ್ಚಾಗಿ ತುಮಕೂರು ತಾಲೂಕಿನಲ್ಲಿ ಕಂಡುಬರುತ್ತಾರೆ. ಕ್ರಿ.ಶ. ೧೭೭೦ರಲ್ಲೇ ಶಿರಾದಲ್ಲಿ

ಕ್ಯಾಥೋಲಿಕ್ ಇಗರ್ಜಿಯನ್ನು ನಿರ್ಮಿಸಿರುವುದು ಉಲ್ಲೇಖಾರ್ಹ. ಇದೇ ರೀತಿ ವೆಸ್ಲಿಯನ್ ಮಿಶನ್ ಕೇಂದ್ರವನ್ನು ಗುಬ್ಬಿಯಲ್ಲಿ ೧೮೩೭ರಲ್ಲಿ ಆರಂಭಿಸಲಾಯಿತು. ಇವರು ಜೀಸಸ್ ಕ್ರೈಸ್ಟ್ ಮತ್ತು ಪ್ರಥಮ ಪೋಪ್ ಪೀಟರನ ಕಟ್ಟಾ ಅನುಯಾಯಿಗಳಾಗಿದ್ದು, ಏಸುವಿನ ಉಪದೇಶಗಳನ್ನು ಅನುಸರಿಸುವುದರ ಜೊತೆಗೆ ಆತನನ್ನು ತಮ್ಮ ಪರಮ ಧಾರ್ಮಿಕ ಗುರುವೆಂದೂ ಹಾಗೂ ಸಂರಕ್ಷಕನೆಂದೂ ವಿಶೇಷವಾಗಿ ನಂಬುತ್ತಾರೆ. ಆತನ ಎರಡನೇ ಪುನರುತ್ಥಾನವನ್ನು ನಂಬುವುದರ ಜೊತೆಗೆ ಏಸುವಿನ ತೀರ್ಪುಗಳೇ ಅಂತಿಮವೆಂದು ಪರಿಗಣಿಸಿ ಪಾಲಿಸುತ್ತಾರೆ. ಇವರು ಪವಿತ್ರ ಟ್ರಿನಿಟಿ, ನೈಸೀನ್ ದಾಖಲೆ ಮತ್ತು ಪವಿತ್ರ ಮಾರ್ಗವನ್ನು ನಂಬುತ್ತಾರೆ.

## ಜಾತಿ ಮತ್ತು ಬುಡಕಟ್ಟುಗಳು

ಜಾತಿಪದ್ಧತಿಯು ಹಿಂದೂ ಸಮಾಜದ ಒಂದು ವಿಶಿಷ್ಟ ಲಕ್ಷಣವಾಗಿದ್ದು, ಇತರೆ ಕಡೆಗಳಲ್ಲಿ ಕಂಡುಬರುವಂತೆ ಈ ಜಿಲ್ಲೆಯಲ್ಲಿಯೂ ಅನೇಕ ಜಾತಿ ಹಾಗೂ ಉಪ-ಜಾತಿಗಳನ್ನು ಕಾಣಬಹುದಾಗಿದೆ. ರಾಬರ್ಟ್ ರಿಸ್ಲೆಯವರ ಪ್ರಕಾರ "ಜಾತಿ ಎಂದರೆ ಒಬ್ಬ ಮಾನವ ಅಥವಾ ದೈವಸಂಭೂತನಾದ ಕಾಲ್ಪನಿಕ ಪೂರ್ವಜನಿಂದ ತಮ್ಮ ವಂಶವನ್ನು ಗುರುತಿಸುವ ಕೆಲವು ಕುಟುಂಬಗಳ ಸಮೂಹ". ಇದು ಒಂದು ಸಮರೂಪವುಳ್ಳ ಸಮುದಾಯ. ಜಾತಿ ಪದ್ಧತಿಯಲ್ಲಿ ವೈವಿಧ್ಯ ಗುಂಪುಗಳಿದ್ದು, ವಿವಾಹ ಸಂಬಂಧಗಳು ಆಯಾ ಗುಂಪುಗಳ ಪರಿಮಿತಿಯಲ್ಲಿಯೇ ನಡೆಯುತ್ತವೆ. ಆಯಾ ಜಾತಿಯು ಬಹುಮಟ್ಟಿಗೆ ವಂಶಪಾರಂಪರ್ಯವಾಗಿ ಬಂದ ವೃತ್ತಿಯನ್ನು ಆಚರಿಸುವುದಾದರೂ ಇತ್ತೀಚಿನ ದಿನಗಳಲ್ಲಿ ಅದು ಕೆಲವು ಬದಲಾವಣೆಗಳಿಗೂ ಒಳಗಾಗಿದೆ. ಉಡುಗೆ-ತೊಡುಗೆ, ಆಹಾರಾಭ್ಯಾಸ, ವಿವಾಹ, ಅಂತ್ಯಕ್ರಿಯೆ ಮೊದಲಾದ ಧಾರ್ಮಿಕ ಆಚರಣೆ ಹಾಗೂ ರೂಢಿ ಪದ್ಧತಿಗಳು ಜಾತಿಯಿಂದ ಜಾತಿಗೆ ವಿಭಿನ್ನವಾಗಿರುತ್ತವೆ.

'ಬುಡಕಟ್ಟು' ಎಂಬುದು ಅನೇಕ ಕುಲಗಳು, ಅಲೆಮಾರಿ ತಂಡಗಳು ಅಥವಾ ನಿಶ್ಚಿತ ಭೌಗೋಳಿಕ ಪ್ರದೇಶದೊಳಗೆ ವಾಸಿಸುವ ಜನಗಳ ಒಂದು ಸಮೂಹ. ಇವರಲ್ಲಿ ಪ್ರತ್ಯೇಕ ಉಪಭಾಷೆ, ವಿಶಿಷ್ಟ ಸಂಸ್ಕೃತಿ ಹಾಗೂ ಒಂದು ಸಾಮಾನ್ಯ ಸಾಮಾಜಿಕ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಇತರರಿಗಿಂತ ತಾವು ಬೇರೆ ಎಂಬ ಭಾವನೆಯೂ ಈ ಒಳಗುಂಪುಗಳ ಸಮೂಹದಲ್ಲಿರುತ್ತದೆ. ಇವರು ಸಾಮಾನ್ಯವಾಗಿ ಆಧುನಿಕ ಜಗತ್ತಿನಿಂದ ಪ್ರತ್ಯೇಕವಾಗಿ ವಾಸಿಸಲು ಬಯಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಬದಲಾವಣೆಗಳಿಗೆ ಒಳಗಾಗಿದೆ. ಜಿಲ್ಲೆಯ ಬಹುಪಾಲು ಜಾತಿ ಮತ್ತು ಬುಡಕಟ್ಟುಗಳ ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳ ಬಗ್ಗೆ ಸಂಕ್ಷಿಪ್ತವಾಗಿ ಈ ಮುಂದೆ ವಿವರಿಸಲಾಗಿದೆ.

**ಅಗಸ:** ಅಗಸರನ್ನು ದೋಬಿ, ಮಡಿವಾಳ ಮೊದಲಾದ ಹೆಸರುಗಳಿಂದ ಕರೆಯುವುದುಂಟು. ಬಟ್ಟೆ ಸ್ವಚ್ಛ ಮಾಡುವುದು, ವಿವಾಹ, ದೇವರ ಉತ್ಸವ ಮೊದಲಾದ ಸಂದರ್ಭಗಳಲ್ಲಿ ಮಡಿ ಬಟ್ಟೆ ಹಾಸುವುದು ಹಾಗೂ ಪಂಜು (ದೀವಟಿಗೆ) ಹಿಡಿಯುವುದು ಇವರ ಕುಲದ ಪಾರಂಪರಿಕ ವೃತ್ತಿಯಾಗಿದೆ. ಆದರೆ ಈಚೆಗೆ ಇವರು ಕೃಷಿ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಕನ್ನಡ ಭಾಷಿಕರಾದ ಇವರು ಗೌರಿ ಹಬ್ಬದ ಸಮಯದಲ್ಲಿ ಭೂದೇವರನ್ನೂ, ಭೂಮದೇವ ಅಥವಾ ಉಬ್ಬೆಪೂಜೆಯನ್ನೂ ಮಾಡುತ್ತಾರೆ. ಇವರಲ್ಲಿ ಅನೇಕ ಕುಲಗಳಿದ್ದು, ಒಂದೇ ಕುಲದಲ್ಲಿ ವಿವಾಹ ಸಂಬಂಧ ಬೆಳೆಸುವ ಪದ್ಧತಿಯಿಲ್ಲ. ವಿವಾಹವು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ. ತೆರ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಇವರಲ್ಲಿ ರೂಢಿಯಲ್ಲಿವೆ. ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಇವರು ಮಾಂಸಾಹಾರಿಗಳು. ಗ್ರಾಮದೇವತೆಗಳನ್ನು ಪೂಜಿಸುವ ಇವರು ಶ್ರೀವೈಷ್ಣವ ಸಂಪ್ರದಾಯದವರಾಗಿದ್ದು, ತಿರುಪತಿ ವೆಂಕಟರಮಣ, ನರಸಿಂಹ ಮೊದಲಾದ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಇವರು ಮೃತರನ್ನು ಸಾಮಾನ್ಯವಾಗಿ ಹೂಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಗ್ನಿಸಂಸ್ಕಾರ ಮಾಡುವುದೂ ಉಂಟು.

**ಆದಿ ದ್ರಾವಿಡ:** ಇವರು ಮುಖ್ಯವಾಗಿ ಕೃಷಿ ಕಾರ್ಮಿಕರಾಗಿದ್ದು, ಇದು ಅವರ ಪ್ರಧಾನ ಕುಲ ಕಸುಬಾಗಿದೆ. ಇವರನ್ನು ಛಲವಾದಿ ಎಂದೂ ಕರೆಯಲಾಗುತ್ತಿತ್ತು. ಆದರೆ, ಈಗ ಈ ಪದಪ್ರಯೋಗವು ನಿಷೇಧಿಸಲ್ಪಟ್ಟಿದೆ. ಇವರು ಕೃಷಿಯನ್ನೇ ಪ್ರಧಾನವಾಗಿ ಅನುಸರಿಸುತ್ತಿದ್ದರೂ ಇತ್ತೀಚೆಗೆ ಇತರೆ ಉದ್ಯೋಗಗಳನ್ನೂ ಮಾಡುತ್ತಾರೆ. ಇವರಲ್ಲಿ ಜಾತಿ ಪಂಚಾಯತಿಗಳಿವೆ. ಕನ್ನಡ ಭಾಷಿಕರಾದ ಇವರಲ್ಲಿ ಬೆಳ್ಳಿಕುಲ, ವೀಳ್ಯೆಕುಲ, ಹೂವಿನಕುಲ ಮೊದಲಾದ ಕುಲಗಳಿವೆ.

ವಿವಾಹ ಸಂಬಂಧಕ್ಕಾಗಿ ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ತೆರಪದ್ಧತಿ ರೂಢಿಯಲ್ಲಿದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ. ವಿಧವಾ ವಿವಾಹ ಸಂದರ್ಭದಲ್ಲಿ ಸಾಮಾನ್ಯವಾಗಿ ದೇವರ ಸನ್ನಿಧಿಯಲ್ಲಿ ಮಾಂಗಲ್ಯ ಕಟ್ಟುವುದು ರೂಢಿಯಲ್ಲಿದೆ. ಈ ಸಮಾಜದ ಯಜಮಾನರೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವರು. ಮಾಂಸಾಹಾರಿಗಳಾದ ಇವರು ತಮ್ಮ ಕುಲದೇವರನ್ನೂ, ಗ್ರಾಮದೇವತೆಗಳನ್ನೂ ಪೂಜಿಸುವುದಲ್ಲದೆ, ಧರ್ಮಸ್ಥಳದ ಮಂಜುನಾಥ, ಎಡೆಯೂರು ಸಿದ್ಧಲಿಂಗೇಶ್ವರ, ತಿರುಪತಿ ವೆಂಕಟರಮಣ ಮೊದಲಾದ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಸಾಂಪ್ರದಾಯಿಕವಾಗಿ ಮೃತರನ್ನು ಹೂಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಗ್ನಿ ಸಂಸ್ಕಾರ ಮಾಡುವುದೂ ರೂಢಿಯಲ್ಲಿದೆ. ಇವರಲ್ಲಿ ಅವಿಭಕ್ತ ಕುಟುಂಬಗಳು ಹಿಂದೆ ಸಾಮಾನ್ಯವಾಗಿತ್ತು. ಆದರೆ ಇತ್ತೀಚೆಗೆ ಇದು ವಿರಳವಾಗಿದೆ. ಅರೆವಾದ್ಯ, ಕಹಳೆ ಇವರು ನುಡಿಸುವ ಸಾಂಪ್ರದಾಯಕ ವಾದ್ಯಗಳಾಗಿವೆ.

**ಈಡಿಗ:** ಸೇಂದಿ ಇಳಿಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿತ್ತು. ಈಚೆಗೆ ವ್ಯಾಪಾರ, ಬೇಸಾಯ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಮಡ್ಡಿ ಈಡಿಗರು ಮತ್ತು ಬೆಲ್ಲದ ಈಡಿಗರು ಎಂಬ ಎರಡು ಪ್ರಧಾನ ಪಂಗಡಗಳಲ್ಲದೆ ಅನೇಕ ಒಳಪಂಗಡಗಳೂ ಇವೆ. ಇವರು ತೆಲುಗು ಪ್ರದೇಶದಿಂದ ಬಂದು ನೆಲೆಸಿರಬಹುದೆಂಬ ಅಭಿಪ್ರಾಯವಿದೆ. ಕನ್ನಡ ಭಾಷಿಕರಾದ ಇವರಲ್ಲಿ ಜಾತಿ ಪಂಚಾಯಿತಿ ಇದೆ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ರೂಢಿಯಲ್ಲಿವೆ. ಇವರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದು, ಮುನೇಶ್ವರ, ಮಾರಿಯಮ್ಮ, ದುರ್ಗಮ್ಮ ಮೊದಲಾದ ದೇವತೆಗಳನ್ನೂ ಪೂಜಿಸುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ಮೃತರನ್ನು ಹೂಳುವ ಸಂಪ್ರದಾಯವಿದೆ.

**ಉಪ್ಪಾರ:** ಸಾಂಪ್ರದಾಯಿಕವಾಗಿ ಉಪ್ಪಾರರು ಭೂಮಿಯಿಂದ ಉಪ್ಪನ್ನು (ಸೌಳುಪ್ಪು) ತಯಾರಿಸುವ ಕಸುಬಿನವರಾಗಿದ್ದರು. ಇವರು ಪ್ರಧಾನವಾಗಿ ಕೃಷಿಕರು ಹಾಗೂ ಕೂಲಿ ಕಾರ್ಮಿಕರಾಗಿಯೂ ಕಾರ್ಯನಿರ್ವಹಿಸುತ್ತಾರೆ. ಬಹುತೇಕ ಇವರು ಇತರೆ ಕಸುಬುಗಳಾದ ಇಟ್ಟಿಗೆ ಸುಡುವುದು ಹಾಗೂ ಕಾರ್ಖಾನೆಗಳಲ್ಲೂ ಕಾರ್ಯನಿರ್ವಹಿಸುತ್ತಾರೆ. ಕನ್ನಡ ಹಾಗೂ ತೆಲುಗು ಭಾಷಿಕರು ಇವರಲ್ಲಿ ಇರುವುದು ಕಂಡುಬರುತ್ತದೆ. ಆದರೆ, ಇತ್ತೀಚೆಗೆ ಇವರು ನಗರಗಳಲ್ಲಿ ವಾಸಿಸುತ್ತಿರುವುದರಿಂದ ಎಲ್ಲಾ ರೀತಿಯ ನೌಕರಿಗಳಲ್ಲೂ ಕಂಡುಬರುತ್ತಾರೆ. ಇವರಲ್ಲಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ರೂಢಿಯಲ್ಲಿದೆ. ಇವರು ಮೂಲತ: ಶ್ರೀವೈಷ್ಣವರಾಗಿದ್ದು, ಚನ್ನಕೇಶವನನ್ನು ಪೂಜಿಸುತ್ತಾರೆ. ಭಗೀರಥನನ್ನು ತಮ್ಮ ಮೂಲಋಷಿಯೆಂದು ನಂಬಿ ಪೂಜಿಸುತ್ತಾರೆ. ಗ್ರಾಮದೇವತೆಗಳ ಆರಾಧನೆಯೂ ಇವರಲ್ಲಿದೆ. ಇವರು ಮೃತರ ದೇಹಗಳನ್ನು ಸಾಮಾನ್ಯವಾಗಿ ಹೂಳುತ್ತಾರೆ.

**ಒಕ್ಕಲಿಗ:** 'ಒಕ್ಕಲಿಗ' ಎಂದರೆ ಒಕ್ಕಲುತನ ಅಥವಾ ಬೇಸಾಯ ಮಾಡುವವನು ಎಂದರ್ಥ. 'ಒಕ್ಕು' ಎಂಬ ಧಾತುವಿನಿಂದ 'ಒಕ್ಕಲು' 'ಒಕ್ಕಲಿಗ' ಎಂಬ ಪದಗಳು ರೂಢಿಗೆ ಬಂದಿವೆ. ಬೇಸಾಯ ಮಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾದರೂ ಇತ್ತೀಚಿನ ದಿನಗಳಲ್ಲಿ ಇವರು ವ್ಯಾಪಾರ, ನೌಕರಿ ಮೊದಲಾದ ಇತರ ಉದ್ಯೋಗಗಳಲ್ಲೂ ತೊಡಗಿದ್ದಾರೆ. ಇವರಲ್ಲಿ ಗಂಗಡಿಕಾರ, ಕುಂಚುಟಿಗ, ರೆಡ್ಡಿ, ಮೊರಸು, ನೊಣಬ, ಹಳ್ಳಿಕಾರ, ದಾಸೊಕ್ಕಲಿಗ, ಚೋಳೂರು ಒಕ್ಕಲಿಗ ಮೊದಲಾದ ಪಂಗಡಗಳಿದ್ದರೂ, ಜಿಲ್ಲೆಯಲ್ಲಿ ಹೆಚ್ಚಾಗಿ ಗಂಗಡಿಕಾರ, ಮೊರಸು, ಕುಂಚುಟಿಗ, ನೊಣಬ ಉಪ್ಪಿನಕೊಳಗ ಹಾಗೂ ರೆಡ್ಡಿ ಒಕ್ಕಲಿಗರು ಕಂಡುಬರುತ್ತಾರೆ. ಅದರಲ್ಲೂ ಮೊರಸು ಒಕ್ಕಲಿಗರು ಅಧಿಕವಾಗಿ ಜಿಲ್ಲೆಯಲ್ಲಿದ್ದು, ತಮ್ಮತಮ್ಮಲ್ಲೆ ಪರಸ್ಪರ ಸಂಬಂಧಗಳನ್ನೇರ್ಪಡಿಸಿಕೊಳ್ಳುವ ವಿಶಿಷ್ಟ ಸಮುದಾಯವಾಗಿ ಕಂಡುಬರುತ್ತದೆ. ಇವರಲ್ಲಿ ಒಳಪಂಗಡಗಳಿದ್ದರೂ ಸಾಮಾನ್ಯವಾಗಿ ಇವರನ್ನು ಮೊರಸು ಒಕ್ಕಲು ಹಾಗೂ ವಿರಳವಾಗಿ ಹೊಸದೇವರ ಒಕ್ಕಲು ಎಂದು ಪ್ರಧಾನವಾಗಿ ಕರೆಯಲಾಗುತ್ತಿದ್ದು, ಈ ಎರಡು ಪಂಗಡಗಳು ಜಿಲ್ಲೆಯಲ್ಲಿರುವುದು ವ್ಯಕ್ತವಾಗುತ್ತದೆ. ರಾಜ್ಯದ ಪೂರ್ವಭಾಗದಲ್ಲಿರುವ ಮೊರಸು ಒಕ್ಕಲಿಗರು ತಮ್ಮದೇ ಆದ ಹಲವು ವಿಶಿಷ್ಟ ಪದ್ಧತಿಗಳನ್ನು ಆಚರಿಸುತ್ತಾರೆ. ಶಿವನನ್ನು ಭೈರೇದೇವರು ಅಥವಾ ಬೀರೇದೇವರು ಎಂದು ಆರಾಧಿಸುತ್ತಾರೆ. ಇವರ ಕುಲದೇವರ ಕೇಂದ್ರವು ಕೋಲಾರ ಜಿಲ್ಲೆಯ 'ಸೀತಿಬೆಟ್ಟ'ವಾಗಿದೆ. ಹೊಸದೇವರ ಹಬ್ಬ ಸಾಮಾನ್ಯವಾಗಿ ಮಹಿಳೆಯರಿಂದ ಆಚರಿಸಲ್ಪಡುತ್ತದೆ. ಇವರಲ್ಲಿ ಹಲವರು ಈ ಹಬ್ಬವನ್ನು ದೀಪಾವಳಿಯ ಸಂದರ್ಭದಲ್ಲಿ ಆಚರಿಸಿದರೆ ಇನ್ನೂ ಕೆಲವರು ಯುಗಾದಿಯ ಸಂದರ್ಭದಲ್ಲಿ ಆಚರಿಸುತ್ತಾರೆ.

ಗಂಗಡಿಕಾರ ಒಕ್ಕಲಿಗರ ಸಮುದಾಯವು ಗಂಗವಾಡಿಪ್ರಾಂತದಲ್ಲಿದ್ದ ಕಾರಣ ಅವರಿಗೆ ಈ ಹೆಸರು ರೂಢಿಗೆ ಬಂದಿದೆ. ಇವರಲ್ಲಿ ಶೈವ ಹಾಗೂ ವೈಷ್ಣವ ಮತಾವಲಂಬಿಗಳಿದ್ದಾರೆ. ಈ ಜನಾಂಗದಲ್ಲಿ ಬೆಳ್ಳಿ, ಛತ್ರಿ, ಆನೆ, ಎಮ್ಮೆ, ಚಂದ್ರ, ಗುಡಿ, ಚಿನ್ನದಕೊಂಬೆ, ಬೇವು, ಪೆಟ್ಟಿಗೆ ಬುಜ್ಜಣಿಗೆ ಮೊದಲಾದ ಸುಮಾರು ೪೦ ಕುಲಗಳಿವೆ. ಈ ಕುಲಗಳಿಗೆ ಅನುಗುಣವಾಗಿ ಪ್ರತ್ಯೇಕವಾದ ಗಂಡು, ಹೆಣ್ಣು ದೇವರು ಇದ್ದು, ಅವುಗಳನ್ನು ತಮ್ಮ ಕುಲದೇವರೆಂದು ವಿಶೇಷವಾಗಿ ಆರಾಧಿಸುತ್ತಾರೆ. ಒಂದೇ ಕುಲದಲ್ಲಿ ವಿವಾಹ ಸಂಬಂಧ ಬೆಳೆಸುವ ಸಂಪ್ರದಾಯವಿಲ್ಲ. ಗಂಡಿನ ಮನೆಯವರೇ ವಿವಾಹ ಸಂಬಂಧಕ್ಕಾಗಿ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ಸಾಮಾನ್ಯವಾಗಿ ವಿವಾಹವು ಹೆಣ್ಣಿನ ಮನೆಯಲ್ಲಿ ನೆರವೇರುವುದು. ತೆರಪದ್ಧತಿ ರೂಢಿಯಲ್ಲಿದೆ. ಸಾಂಪ್ರದಾಯಿಕ ಕೂಡಿಕೆ ಪದ್ಧತಿಯಿದ್ದು, ವಿವಾಹ ವಿಚ್ಛೇದನಕ್ಕೆ ಅನುಮತಿ ಇದೆ. ವಿವಾಹ ಮೊದಲಾದ ಧಾರ್ಮಿಕ ಕಾರ್ಯಗಳಿಗೆ ಇವರು ಬ್ರಾಹ್ಮಣ ಪುರೋಹಿತರನ್ನು ಆಮಂತ್ರಿಸುವುದು ರೂಢಿಯಲ್ಲಿದೆ. ಇವರು ಶ್ರಾವಣ ಮತ್ತು ಕಾರ್ತೀಕ–ಮಾಸಗಳಲ್ಲಿ ಮಾಂಸಾಹಾರ ಸೇವಿಸುವುದಿಲ್ಲ. ಹುಟ್ಟು ಸಾವು ಸಂದರ್ಭಗಳಲ್ಲಿ ಮೈಲಿಗೆಯನ್ನು ಆಚರಿಸುತ್ತಿದ್ದು, ಆ ಸಮಯದಲ್ಲಿ ದೇವಾಲಯಗಳಿಗೆ ಮತ್ತು ಶುಭಕಾರ್ಯಗಳಿಗೆ ಹೋಗುವುದಿಲ್ಲ. ಮೃತರನ್ನು ಹೂಳುವ ಹಾಗೂ ಮೃತರು ಸಾಯುವುದಕ್ಕೆ ಮುಂಚೆಯೇ ತಮ್ಮ ಇಚ್ಛೆಯನ್ನು ತಿಳಿಸಿದ್ದರೆ, ಅದರಂತೆ ಅಗ್ನಿಸಂಸ್ಕಾರ ಮಾಡುವ ಪದ್ಧತಿಯೂ ಇವರಲ್ಲಿವೆ. ಮಹಾಲಯ ಅಮಾವಾಸ್ಯೆಯ ದಿನ (ಕೆಲವರು ಮಖೆ ಹಬ್ಬದಂದು) ಇವರು ತಮ್ಮ ಹಿರಿಯರಿಗೆ ಎಡೆ ಇಡುವುದು ರೂಢಿಯಲ್ಲಿದೆ. ಇವರು ಆದಿಚುಂಚನಗಿರಿಯ ಭೈರವೇಶ್ವರ, ದೇವರಾಯನದುರ್ಗದ ಲಕ್ಷ್ಮೀನರಸಿಂಹ, ಸೀತೀಬೆಟ್ಟದ ಭೈರವ, ಸೀಬಿಯ ನರಸಿಂಹ, ಮಲೆಮಹಾದೇಶ್ವರ, ತಿರುಪತಿ ವೆಂಕಟೇಶ, ರಂಗನಾಥ, ಚಾಮುಂಡೇಶ್ವರಿ, ಸಾಕಮ್ಮ, ಮಾರಮ್ಮ, ಪಟ್ಟದಲಮ್ಮ ಮೊದಲಾದ ದೇವಾನು ದೇವತೆಗಳನ್ನು ಪೂಜಿಸುತ್ತಾರೆ. ಇವರಲ್ಲಿ ಹೆಚ್ಚಾಗಿ ಆದಿಚುಂಚನಗಿರಿ ಮಠ ಹಾಗೂ ಶಿರಾ ತಾಲೂಕಿನ ಪಟ್ಟನಾಯಕನಹಳ್ಳಿಯ ಗುರುಗುಂಡನ ಮಠಕ್ಕೆ ನಡೆದುಕೊಳ್ಳುವವರೂ ಇದ್ದಾರೆ.

ನೊಣಬರು ಒಂಬತ್ತನೆಯ ಶತಮಾನದಲ್ಲಿ ಜೈನಮತಾವಲಂಬಿಗಳಾಗಿದ್ದರೂ ನಂತರ ನೊಣಬರ ಒಂದು ಶಾಖೆ ಲಿಂಗಾಯತ ಸಂಪ್ರದಾಯವನ್ನು ಅನುಸರಿಸಿತೆಂಬ ಅಭಿಪ್ರಾಯವಿದೆ. 'ನೊಣಬ' ಎಂಬ ಪದವು ಈ ಜಿಲ್ಲೆಯ ಬಹುಭಾಗದಲ್ಲಿ ಆಳ್ವಿಕೆ ಮಾಡಿದ 'ನೊಳಂಬ' (ಗಂಗ ಅರಸರ ಸಮಕಾಲೀನರು) ಎಂಬ ರಾಜಮನೆತನದ ಹೆಸರನ್ನು ಸೂಚಿಸುವ ಪದದಿಂದ ರೂಢಿಗೆ ಬಂದಿದ್ದು ಈ ಪ್ರದೇಶವನ್ನು ಹಿಂದೆ 'ನೊಳಂಬವಾಡಿ' ಎಂದು ಕರೆಯಲಾಗುತ್ತಿತ್ತು. ಇವರ ಆಳ್ವಿಕೆಗೆ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳೂ ಒಳಪಟ್ಟಿದ್ದ ಅಂಶ ಅವರ ಶಾಸನಗಳಿಂದ ವ್ಯಕ್ತವಾಗುತ್ತದೆ.

ಬಹುಪಾಲು ರೆಡ್ಡಿಗಳು ತೆಲುಗು ಮಾತನಾಡುವ ಕೃಷಿಕರಾಗಿದ್ದು, ಅವರಲ್ಲಿ ಸಾಮಾನ್ಯವಾಗಿ ಲಿಂಗಾಯತರು ಮತ್ತು ಲಿಂಗಾಯತರಲ್ಲದವರೆಂಬ ಎರಡು ಒಳಪಂಗಡಗಳಿದ್ದು, ಅನೇಕ ಉಪಪಂಗಡಗಳನ್ನು ಹೊಂದಿರುವುದು ಕಂಡುಬರುತ್ತದೆ. 'ಕಮ್ಮಾರೆಡ್ಡಿಗಳು' ಮತ್ತು ವೇಲನಾಟಿ ರೆಡ್ಡಿಗಳು ವೈಷ್ಣವ ಸಂಪ್ರದಾಯವನ್ನು ಆಚರಿಸುತ್ತಾರೆ. ಇವರಲ್ಲಿರುವ ಇತರರು ಶೈವ ಮತ್ತು ಶ್ರೀವೈಷ್ಣವ ಎರಡೂ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಸಾಮಾನ್ಯವಾಗಿ ಎರಡೂ ಸಂಪ್ರದಾಯದ ದೇವ–ದೇವತೆಗಳನ್ನು ಆರಾಧಿಸುವುದು ರೆಡ್ಡಿಗಳಲ್ಲಿ ರೂಢಿಯಲ್ಲಿದೆ. ವಿಧವಾ ವಿವಾಹವು ಲಿಂಗಾಯತ ರೆಡ್ಡಿಗಳಲ್ಲಿ ಮಾತ್ರ ರೂಢಿಯಲ್ಲಿತ್ತೆಂದು ತಿಳಿದು ಬರುತ್ತದೆ. ಈ ಸಮುದಾಯವನ್ನು ನಿಯಂತ್ರಿಸಲು ಕಟ್ಟೆಮನೆಗಳಿದ್ದು ಅದರ ಮುಖಂಡ (ಒಡೆಯ)ನಿಗೆ 'ಯಜಮಾನ' ಎಂದು ಕರೆಯಲಾಗುತ್ತದೆ.

**ಕುರುಬ:** ಕುರಿಸಾಕಣೆ ಹಾಗೂ ಕಂಬಳಿ ನೇಯುವುದು ಕುರುಬರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಇವರು ಕೂಲಿ, ಒಕ್ಕಲುತನ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಹಾಲುಮತಸ್ಥ ಕುರುಬರು, ಹಂಡೆ ಕುರುಬರು ಮತ್ತು ಕಂಬಳಿ ಕುರುಬರು ಎಂಬ ಮೂರು ಪ್ರಭೇಧಗಳಿದ್ದು, ಪ್ರತಿಯೊಂದರಲ್ಲೂ ಗಿಡ, ಮರ, ಬಳ್ಳಿ, ಪ್ರಾಣಿಗಳ ಕುಲಲಾಂಛನ ಹೊಂದಿರುವ ಹಲವು ಹೊರ ವಿವಾಹದ ಪಂಗಡಗಳಿವೆ. ಇವರನ್ನು ಹತ್ತಿ ಕಂಕಣದವರು ಮತ್ತು ಉಣ್ಣೆ ಕಂಕಣದವರು ಎಂದೂ ವಿಭಾಗಿಸಲಾಗಿದ್ದು, ಒಂದೇ ಕುಲದಲ್ಲಿ ವಿವಾಹವಾಗುವ ಸಂಪ್ರದಾಯವಿಲ್ಲ. ಇವರು ಕನ್ನಡ ಮಾತನಾಡುತ್ತಾರೆ. ಇವರ ಧಾರ್ಮಿಕ ಗುರುಗಳು ಶುದ್ಧ ಶಾಖಾಹಾರಿಗಳಾಗಿದ್ದು ಲಿಂಗಧಾರಿಗಳಾಗಿರುತ್ತಾರೆ. ಆದರೆ, ಇತರ ಕುರುಬರಿಗೆ ಈ ನಿರ್ಬಂಧವಿಲ್ಲ. ಇವರಲ್ಲಿ ತೆರಪದ್ಧತಿ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಸಾಂಪ್ರದಾಯಿಕವಾಗಿ ರೂಢಿಯಲ್ಲಿವೆ. ಇವರು ಮೂಲತ: ಮಾಂಸಾಹಾರಿಗಳಾಗಿದ್ದು, ವಾರದಲ್ಲಿ ಸೋಮವಾರ ಹಾಗೂ ಶನಿವಾರದಂದು ಮಾಂಸವನ್ನು ಸೇವಿಸುವುದಿಲ್ಲ. ಮೈಲಾರ ಲಿಂಗೇಶ್ವರನನ್ನು

ಪೂಜಿಸುತ್ತಾರೆ. ಬೀರೇದೇವರನ್ನು ಇವರು ವಿಶೇಷವಾಗಿ ಆರಾಧಿಸುತ್ತಾರೆ. ಬೀರೇದೇವರ ಗೌರವಾರ್ಥ ಡೊಳ್ಳು ಕುಣಿತವನ್ನು ಪ್ರದರ್ಶಿಸುತ್ತಾರೆ. ಬೀರೇದೇವರನ್ನು ಕೆಲವರು ಸೋಮವಾರ ಮತ್ತೆ ಕೆಲವರು ಗುರುವಾರದಂದು ಪೂಜಿಸುವ ಪದ್ಧತಿಯು ಇವರಲ್ಲಿ ರೂಢಿಯಲ್ಲಿದೆ. ಬೀರೇದೇವರ ಉತ್ಸವವನ್ನು ವಿಜಯದಶಮಿಯ ದಿನ ವಿಶೇಷವಾಗಿ ನಡೆಸುತ್ತಾರೆ. ಆ ಸಂದರ್ಭದಲ್ಲಿ ಮುಡುಕುತೊರೆ ಮಲ್ಲಿಕಾರ್ಜುನನ ಒಕ್ಕಲಿನ ಕುರುಬರು ಕರಡಿ ಚರ್ಮ ತಲೆಗೆ ಧರಿಸಿ, ಕವಡೆ ಪೋಣಿಸಿದ ಹುಲಿಚರ್ಮ ಎದೆಗೆ ಕಟ್ಟಿ ಕೈಯಲ್ಲಿ ಡಮರುಗ ಹಿಡಿದು ಮೆರವಣಿಗೆಯಲ್ಲಿ ಬರುತ್ತಾರೆ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರಿಗೆ ದೀಪಾವಳಿ ವಿಶೇಷ ಹಬ್ಬವಾಗಿದೆ. ಆ ಸಮಯದಲ್ಲಿ ಇವರು ಹಿರಿಯರ ಹಬ್ಬವನ್ನು ಆಚರಿಸುವುದಲ್ಲದೆ ತಮ್ಮ ಡೊಳ್ಳು, ಕೋಲು ಮುಂತಾದವುಗಳನ್ನೂ ಪೂಜಿಸುತ್ತಾರೆ. ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿರುವ ಕನಕಗುರುಪೀಠವು ಇವರಿಗೆ ಧಾರ್ಮಿಕ ಮಠವಾಗಿದೆ. ಇವರು ಮೃತದೇಹಗಳನ್ನು ಸಾಮಾನ್ಯವಾಗಿ ಹೂಳುತ್ತಾರೆ. ಹೊರಗೆ ಹೋಗುವಾಗ ಸಾಮಾನ್ಯವಾಗಿ ಹೆಗಲಮೇಲೆ ಕಂಬಳಿ, ತಲೆಗೆ ಮುಂಡಾಸು ಸುತ್ತಿಕೊಳ್ಳುವುದು ಗ್ರಾಮೀಣ ಪ್ರದೇಶದ ಕುರುಬರ ಸಾಂಪ್ರದಾಯಿಕ ಉಡುಗೆಯಾಗಿತ್ತು. ಇಂದು ಸಾಕಷ್ಟು ಬದಲಾವಣೆಗಳಾಗಿವೆ.

**ಕುರುಹಿನ ಶೆಟ್ಟಿ:** ದೇವಾಂಗದವರಂತೆ ಕುರುಹಿನಶೆಟ್ಟಿ ಅಥವಾ ಪದ್ಮಸಾಲಿಗಳೂ ಮೂಲತ: ನೇಯ್ಗೆಯನ್ನೇ ಸಾಂಪ್ರದಾಯಿಕ ಕುಲಕಸುಬಾಗಿ ಹೋದಿದವರು. ಕುರುಹಿನಶೆಟ್ಟರು ಕನ್ನಡ ಮತ್ತು ತೆಲುಗುಭಾಷೆಗಳನ್ನು ಮಾತನಾಡುತ್ತಾರೆ. ಕುರುಹಿನಶೆಟ್ಟರಲ್ಲಿ ೬೦ ಗೋತ್ರಗಳಿದ್ದು, ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರು ಶೈವ ಹಾಗೂ ಶ್ರೀವೈಷ್ಣವ ಮತಾವಲಂಬಿಗಳಾಗಿರುವರು. ಪುರೋಹಿತರಿಲ್ಲದ ಈ ವರ್ಗದ ಜನ ಮಗು ಹುಟ್ಟಿದ ೧೨ನೇ ದಿನ ಅಥವಾ ಮೂರು ತಿಂಗಳೊಳಗಾಗಿ ನಾಮಕರಣವನ್ನೂ, ಋತುಮತಿಯಾದ ಹೆಣ್ಣಿಗೆ ೧೬ನೇ ದಿನ ಆರತಿ ಶಾಸ್ತ್ರವನ್ನೂ ಮಾಡುತ್ತಾರೆ. ಇವರು ಹುಬ್ಬಳ್ಳಿಯ ನೀಲಕಂಠ ಮಠಕ್ಕೆ ನಡೆದುಕೊಳ್ಳುತ್ತಾರೆ. ಇವರಲ್ಲಿ ಶವಗಳಿಗೆ ಅಗ್ನಿ ಸಂಸ್ಕಾರ ಮಾಡುವ ಪದ್ಧತಿಯು ರೂಢಿಯಲ್ಲಿದೆ. ಇವರು ಆರಾಧಿಸುವ ನೀಲಕಂಠಸ್ವಾಮಿ ದೇವಾಲಯ ತುಮಕೂರಿನಲ್ಲಿದೆ.

**ಕುಂಬಾರ:** ಮಣ್ಣಿನಿಂದ ಮಡಕೆ, ಕುಡಿಕೆಗಳನ್ನು ಮಾಡುವುದು, ಹೆಂಚನ್ನು ತಯಾರಿಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಹಲವರು ವ್ಯಾಪಾರ, ಕೃಷಿ, ಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಕುಂಬಾರಶೆಟ್ಟಿ, ಹರವಿಗುಂಬಾರ, ಬೈಲುಗುಂಬಾರ ಮೊದಲಾದ ಪಂಗಡಗಳಿದ್ದು, ಸಾಂಪ್ರದಾಯಿಕವಾಗಿ ಪರಸ್ಪರ ವಿವಾಹ ಸಂಬಂಧ ಬೆಳೆಸುವ ಪದ್ಧತಿಯಿಲ್ಲ. ಕನ್ನಡ ಭಾಷಿಕರಾದ ಇವರಲ್ಲಿ ಕೆಲವರು ತೆಲುಗು ಬಲ್ಲವರಾಗಿದ್ದಾರೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ತೆರಪದ್ಧತಿ ರೂಢಿಯಲ್ಲಿದ್ದು, ವಿಧವಾ ವಿವಾಹ ಹಾಗೂ ವಿಚ್ಛೇದನಕ್ಕೆ ಅನುಮತಿ ಇದೆ. ಇವರು ಶೈವ ಹಾಗೂ ವೈಷ್ಣವ ಮತಾವಲಂಬಿಗಳಾಗಿದ್ದಾರೆ. ಕುಂಭೇಶ್ವರನನ್ನು ಪೂಜಿಸುವ ಇವರಲ್ಲಿ ಮೃತರನ್ನು ಹೂಳುತ್ತಾರೆ.

**ಕೊರಮ:** ಇವರು ಹಿಂದೆ ಅಲೆಮಾರಿ ಬುಡಕಟ್ಟಿನವರಾಗಿದ್ದಿರಬಹುದೆಂಬ ಅಭಿಪ್ರಾಯವಿದೆ. ಈಗ ಇವರು ಒಂದೆಡೆ ನೆಲೆಸಿದ್ದು, ಇವರು ಹಂದಿ ಸಾಕಣೆ, ಕೃಷಿ, ಕೂಲಿ ಮಾಡುವುದು, ಬುಟ್ಟಿ ಮತ್ತು ಚಾಪೆಗಳನ್ನು ಹೆಣೆಯುವುದೇ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಕೆಲವು ಮಹಿಳೆಯರು ಕಣಿ ಹೇಳುವುದನ್ನು ಉಪವೃತ್ತಿಯನ್ನಾಗಿಸಿಕೊಂಡಿದ್ದು, 'ಕೊರವಂಜಿ' ಎಂದೇ ಪರಿಚಿತರಾಗಿದ್ದಾರೆ. ಇವರಲ್ಲಿ ಒಳವಿವಾಹವಾಗುವ ಅನೇಕ ಪಂಗಡಗಳಿವೆ. ತೆರಪದ್ಧತಿ ರೂಢಿಯಲ್ಲಿದ್ದು, ವಿಧವಾವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಅನುಮತಿಯಿದೆ. ಇವರ ಧಾರ್ಮಿಕ ಕಾರ್ಯಗಳನ್ನು ಅವರ ಕುಲದ ಹಿರಿಯರಾಗಲೀ ಬ್ರಾಹ್ಮಣಪುರೋಹಿತರಾಗಲೀ ನಡೆಸಿಕೊಡುವರು. ಮಾಂಸಾಹಾರಿಗಳಾದ ಇವರು ಮೃತರ ದೇಹಗಳನ್ನು ಹೂಳುತ್ತಾರೆ. ಇವರ ಪ್ರಧಾನ ದೈವ ತಿರುಪತಿ ವೆಂಕಟರಮಣ, ಮುನೇಶ್ವರ, ಮಾರಿಯಮ್ಮ, ಹಲಗಮ್ಮ, ಗಂಗಮ್ಮ ಮೊದಲಾದ ದೇವದೇವತೆಗಳನ್ನೂ ಪೂಜಿಸುವುದುಂಟು.

**ಗಾಣಿಗ:** ಸಾಂಪ್ರದಾಯಿಕವಾಗಿ ಕಲ್ಗಾಣದಿಂದ ಎಣ್ಣೆ ತೆಗೆದು ವ್ಯಾಪಾರ ಮಾಡುವುದು ಇವರ ಪ್ರಮುಖ ಉದ್ಯೋಗವಾಗಿದ್ದು, ಈಚೆಗೆ ಒಕ್ಕಲುತನ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಹೆಗ್ಗಾಣಿಗ ಶೆಟ್ಟರು, ಕೊಂಗಾಣಿಗ ಶೆಟ್ಟರು, ಕಿರುಗಾಣಿಗ ಶೆಟ್ಟರು ಮೊದಲಾದ ಪಂಗಡಗಳಿದ್ದು, ಸಾಂಪ್ರದಾಯಿಕವಾಗಿ ಪರಸ್ಪರ ಪಂಗಡಗಳಲ್ಲಿ ವಿವಾಹ ಸಂಬಂಧ ಮಾಡುವುದು ರೂಢಿಯಲ್ಲಿಲ್ಲ. ಕನ್ನಡ ಭಾಷಿಕರಾದ ಇವರು ಶೈವ ಮತ್ತು ವೈಷ್ಣವ ಪರಂಪರೆಯ ದೇವರನ್ನು ಆರಾಧಿಸುತ್ತಾರೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸುವುದು

ರೂಢಿಯಲ್ಲಿದೆ. ವಿವಾಹವು ಅನುಕೂಲಕ್ಕೆ ತಕ್ಕಂತೆ ಗಂಡಿನ ಮನೆಯಲ್ಲಾಗಲೀ ಹೆಣ್ಣಿನ ಮನೆಯಲ್ಲಾಗಲೀ ನಡೆಯುತ್ತದೆ. ತೆರ ಪದ್ಧತಿ ರೂಢಿಯಲ್ಲಿದೆ. ಮಾಂಸಾಹಾರಿಗಳಾದ ಇವರಿಗೆ ಮಹಾನವಮಿ ವಿಶೇಷ ಹಬ್ಬವೆನಿಸಿಕೊಂಡಿದೆ. ಇವರಲ್ಲಿ ಮೃತರ ದೇಹಗಳನ್ನು ಹೂಳುವ ಪದ್ಧತಿಯಿದೆ. ತಮ್ಮ ಕುಲದೇವರು ಹಾಗೂ ಸ್ಥಳೀಯ ದೇವರುಗಳಿಗೆ ನಡೆದುಕೊಳ್ಳುವ ಇವರಿಗೆ ಧರ್ಮಸ್ಥಳ, ಮಲೆಮಹದೇಶ್ವರ ಮೊದಲಾದವು ಪ್ರಮುಖ ಯಾತ್ರಾ ಸ್ಥಳಗಳಾಗಿವೆ.

**ಗೊಲ್ಲ:** ಯಾದವ ವಂಶಜರಾದ ಇವರು, ಅನೇಕ ವರ್ಷಗಳ ಹಿಂದೆ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ತಾವು ವಲಸೆ ಬಂದವರೆಂದು ಹೇಳಿಕೊಳ್ಳುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಇವರು ಅಧಿಕ ಜನಸಂಖ್ಯೆಯಲ್ಲಿದ್ದರೆಂದು ೧೯೩೧ರ ಜನಗಣತಿ ವರದಿಯಲ್ಲಿ ದಾಖಲಿಸಲಾಗಿದೆ. ಪ್ರಾಚೀನ ಕಾಲದಿಂದಲೂ ಗೋವುಗಳ ಪಾಲನೆ ಮತ್ತು ಸಂರಕ್ಷಣೆ ಹಾಲು ಮತ್ತದರ ಉತ್ಪನ್ನಗಳು ಇವರ ಕುಲಕಸುಬಾಗಿದ್ದು ಈಚೆಗೆ ಕೃಷಿ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲೂ ಇವರು ತೊಡಗಿದ್ದಾರೆ. ಕೋಲಾಟ ಆಡುವುದರಲ್ಲಿ ಎತ್ತಿದ ಕೈ. ಇವರಲ್ಲಿ ಕಾಡುಗೊಲ್ಲ, ಊರುಗೊಲ್ಲ ಮುಂತಾದ ಪಂಗಡಗಳಿವೆ. ತೆಲುಗು ಇವರ ಮೂಲಭಾಷೆಯಾಗಿದ್ದರೂ, ಈಚೆಗೆ ಕನ್ನಡ ಭಾಷಿಕರೂ ಇದ್ದಾರೆ. ಊರುಗೊಲ್ಲರಲ್ಲಿ ಬೊಕ್ಕಸ ಮತ್ತು ಬೀಗಮುದ್ರೆಗಳೆಂಬ ಒಳಪಂಗಡಗಳಿದ್ದು, ಹಿಂದಿನ ಕಾಲದಲ್ಲಿ ರಾಜನ ಖಜಾನೆ ಮತ್ತು ಟಂಕಸಾಲೆಗಳ ಭದ್ರತೆಯನ್ನು ಕಾಪಾಡುವುದು ಇವರ ಮೂಲವೃತ್ತಿಯಾಗಿತ್ತು. ಇವರಲ್ಲಿ ಮನೆವಾಳ್ತನ ರೂಢಿಯಲ್ಲಿತ್ತು. ವಿವಾಹ ಸಂದರ್ಭದಲ್ಲಿ ಗಂಡಿನ ಕಡೆಯವರೇ ವಿವಾಹ ಸಂಬಂಧಕ್ಕಾಗಿ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ತೆರಪದ್ಧತಿ ರೂಢಿಯಲ್ಲಿತ್ತು. ವಿವಾಹವು ಸಾಮಾನ್ಯವಾಗಿ ಗಂಡಿನ ಮನೆಯಲ್ಲೇ ನಡೆಯುತ್ತದೆ. ಎಲ್ಲಾ ಹಿಂದೂ ಹಬ್ಬಗಳನ್ನೂ ಆಚರಿಸುವ ಇವರಿಗೆ ಗೋಕುಲಾಷ್ಟಮಿ (ಶ್ರೀಕೃಷ್ಣಜನ್ಮಾಷ್ಟಮಿ) ವಿಶೇಷ ಹಬ್ಬವಾಗಿದೆ. ವೈಷ್ಣವ ಮತಾವಲಂಬಿಗಳಾದ ಇವರು ಶ್ರೀಕೃಷ್ಣ, ವೆಂಕಟರಮಣ ಮೊದಲಾದ ದೇವರನ್ನು ಪೂಜಿಸುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ಮೃತದೇಹಗಳನ್ನು ಹೂಳುವ ಅಥವಾ ಸುಡುವ ಪದ್ಧತಿಗಳಿವೆ. ಇವರಲ್ಲಿ ಸ್ತ್ರೀಯರು ಕೈಗೆ 'ಕೃಷ್ಣಮುದ್ರೆ' ಅಥವಾ ಗೊಲ್ಲ ಕೊಡಗ' ಧರಿಸುವುದರಿಂದ ವಿಧವೆಯರನ್ನೂ 'ಮುತ್ತೈದೆ'ಯಂದೇ ಪರಿಗಣಿಸುವುದು ವಿಶೇಷವಾಗಿದೆ. ಆರುವನಹಳ್ಳಿ ಕಟ್ಟೆಮನೆಯವರೆಂದು ಕರೆಯಲ್ಪಡುವ ಗೊಲ್ಲ ಜನಾಂಗದ ಕೆಲವರು ಚಿತ್ರಲಿಂಗಸ್ವಾಮಿ (ಜುಂಜಪ್ಪ) ಮತ್ತು ನರಸಿಂಹಸ್ವಾಮಿ ದೇವರುಗಳನ್ನು, ಎಲ್ಲಮ್ಮ ದೇವಿಯನ್ನೂ ಆರಾಧಿಸುತ್ತಾರೆ. ಶ್ರಾವಣ ಮಾಸದಲ್ಲಿ ಚಿತ್ರಲಿಂಗಸ್ವಾಮಿಯನ್ನು ವಿಶೇಷವಾಗಿ ಪೂಜಿಸುತ್ತಾರೆ.

**ತಿಗಳರು:** ಇವರು, ತಮ್ಮನ್ನು ವಹ್ನಿಕುಲಕ್ಷತ್ರಿಯರು, ವನ್ನೇರು ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುವುದುಂಟು. ತರಕಾರಿ, ಹಣ್ಣು, ಹೂವುಗಳ ಕೃಷಿ ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಅನೇಕರು ಕೃಷಿ, ಕೃಷಿಕೂಲಿ ನೌಕರಿ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಈ ಜನರು ಕನ್ನಡ ಅಥವಾ ತಮಿಳು ಮಾತನಾಡುತ್ತಾರೆ. ಇವರಲ್ಲಿ ಹಲವು ಹೊರ ವಿವಾಹದ ಗುಂಪುಗಳಿದ್ದು, ಪ್ರತಿಯೊಂದು ಗುಂಪಿಗೂ ತಮ್ಮ ಪೋಷಕ ದೈವದ ಹೆಸರನ್ನು ಇಟ್ಟಿರುತ್ತಾರೆ. ಅಲ್ಲದೆ ಒಳವಿವಾಹ ಮಾಡಿಕೊಳ್ಳುವ ಎರಡು ಮುಖ್ಯ ಗುಂಪುಗಳಿವೆ. ಅವುಗಳೆಂದರೆ ಹುಳ್ಳಿ ಅಥವಾ ಕನ್ನಡ ತಿಗಳರು ಮತ್ತು ಅರವ (ತಮಿಳು) ತಿಗಳರು ಅಥವಾ ಧರ್ಮರಾಯನ ಒಕ್ಕಲು. ಇವರಲ್ಲಿ ಪುರೋಹಿತ ವರ್ಗವಿಲ್ಲ. ಕುಲದ ಮುಖ್ಯಸ್ಥರೇ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾರೆ. ವಿಧವಾ ವಿವಾಹ ಹಾಗೂ ವಿಚ್ಛೇದನಕ್ಕೆ ಅನುಮತಿಯಿದೆ. ಇವರಲ್ಲಿ ಶೈವರೂ, ವೈಷ್ಣವರೂ ಇದ್ದು, ದ್ರೌಪದಿಯನ್ನು ತಮ್ಮ ಕುಲದೇವತೆಯೆಂದೂ ಆದಿಶಕ್ತಿಯ ಸ್ವರೂಪವೆಂದೂ ದೃಢವಾಗಿ ನಂಬಿದ್ದಾರೆ. ಧರ್ಮರಾಯನ ಭಕ್ತರಾಗಿರುವ ಇವರು ಚೈತ್ರ ಹುಣ್ಣಿಮೆಯಂದು ಆಚರಿಸುವ ಕರಗವು ಒಂದು ವಿಶಿಷ್ಟ ಜಾತ್ರೆಯಾಗಿದೆ. ತಿಗಳರು ಸಾಮಾನ್ಯವಾಗಿ ಮೃತದೇಹಗಳನ್ನು ಹೂಳುತ್ತಾರೆ. ಈ ಜನಾಂಗದವರಲ್ಲಿ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯಿದ್ದು, ಸಮಾಜದ ಆಗುಹೋಗುಗಳನ್ನು ನೋಡಿಕೊಳ್ಳುವುದರಲ್ಲಿ ಯಜಮಾನ ಪ್ರಮುಖ ಪಾತ್ರವಹಿಸುತ್ತಾನೆ.

**ದರ್ಜಿ (ಸಿಂಪಿಗ):** ಬಟ್ಟೆ ಹೊಲಿಯುವುದು ಇವರ ಸಾಂಪ್ರದಾಯಿಕ ಕಸುಬಾಗಿದ್ದು, ಈಚೆಗೆ ಕೆಲವರು ಸಿದ್ಧ ಉಡುಪುಗಳನ್ನು ತಯಾರಿಕೆ, ಮಾರಾಟ, ನೌಕರಿ, ವ್ಯಾಪಾರ ಮುಂತಾದ ಉದ್ಯೋಗಗಳಲ್ಲೂ ತೊಡಗಿದ್ದಾರೆ. ಇವರು ಮೂಲತ: ಮರಾಠಿಗರಾಗಿದ್ದು ತಮ್ಮನ್ನು ಭಾವುಸಾರ ಕ್ಷತ್ರಿಯ, ಚಿಪ್ಪಿಗ, ನಾಮದೇವ, ಸಿಂಪಿ ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುತ್ತಾರೆ. ನಾಮದೇವ ಸಿಂಪಿಗಳು, ತಮ್ಮನ್ನು ಮರಾಠಿ ಸಂತ ನಾಮದೇವನ ಮೂಲದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಚಂದ್ರಿಕಾ ಇವರ ವಿಶೇಷ ದೇವತೆಯಾಗಿದ್ದು, ಆ ದೇವಿಗೆ ಗಣೇಶ ಚತುರ್ಥಿಯ ದಿನ ವಿಶೇಷ ಪೂಜೆ

ಸಲ್ಲುತ್ತದೆ. ಕನ್ನಡ ಹಾಗೂ ಮರಾಠಿ ಮಾತನಾಡುವ ಇವರಲ್ಲಿ ಯಜ್ಞೋಪವೀತ ಧಾರಣೆ ಮತ್ತು ಮಾಂಸಾಹಾರ ಸೇವನೆ ರೂಢಿಯಲ್ಲಿದೆ. ಇವರಲ್ಲಿ ಜಾತಿ ಪಂಚಾಯತಿ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಒಪ್ಪಿತ ಪದ್ಧತಿಯಾಗಿವೆ. ಪಂಡರಾಪುರದ ಪಾಂಡುರಂಗ, ಖಂಡೋಬ, ತುಳಜಾಪುರದ ಅಂಬಾ ಭವಾನಿ, ಕೊಲ್ಹಾಪುರದ ಲಕ್ಷ್ಮೀ ಮೊದಲಾದ ದೇವತೆಗಳಿಗೆ ವಿಶೇಷವಾಗಿ ನಡೆದುಕೊಳ್ಳುವರು. ಇವರು ಮೃತರಿಗೆ ಅಗ್ನಿಸಂಸ್ಕಾರ ಮಾಡುವರು.

**ದೇವಾಂಗ:** ಸಂಸ್ಕೃತ ಮೂಲದ 'ದೇವಾಂಗ" ಪದವು ದೇವರ ಪವಿತ್ರ ಶರೀರ ಎಂಬ ಅರ್ಥವನ್ನು ಕೊಡುತ್ತದೆ. ಒಂದು ಐತಿಹ್ಯದ ಪ್ರಕಾರ ದೇವತೆಗಳಿಗೆ ಹಾಗೂ ಮನುಜರಿಗೆ ಬೇಕಾದ ಬಟ್ಟೆಗಳನ್ನು ನೇಯುವುದಕ್ಕಾಗಿ ಮಹಾದೇವನು ದೇವಾಂಗ ಋಷಿಯನ್ನು ಸೃಷ್ಟಿಸಿದನು. ಆ ಋಷಿಯಿಂದಾಗಿ ಈ ಜನಾಂಗಕ್ಕೆ 'ದೇವಾಂಗ' ಎಂದು ಹೆಸರು ಬಂದಿದೆ. ನೇಕಾರಿಕೆಯು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಕೃಷಿ, ವ್ಯಾಪಾರ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ಕೆಲವರು ತೊಡಗಿದ್ದಾರೆ. ಇವರಲ್ಲಿ ಶಿವಾಚಾರ ದೇವಾಂಗ, ಕನ್ನಡ ದೇವಾಂಗ, ತೆಲುಗು ದೇವಾಂಗ ಹಾಗೂ ಹಟಗಾರರು ಎಂಬ ನಾಲ್ಕು ಗುಂಪುಗಳಿವೆ. ಇವರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಯಜಮಾನನ ಅಧ್ಯಕ್ಷತೆಯಲ್ಲಿ ಕಟ್ಟೆಮನೆಗಳಿವೆ. ಇವರು ಕನ್ನಡ ಹಾಗೂ ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿ ಒಳವಿವಾಹದ ಅನೇಕ ಗುಂಪುಗಳಿವೆ. ಇವರು ಶೈವರಾದರೂ ಕೆಲವರು ವಿಷ್ಣುವನ್ನು ಪೂಜಿಸುತ್ತಾರೆ. ಮಾರಿಯಮ್ಮ, ಮುನೇಶ್ವರ ಮೊದಲಾದ ಗ್ರಾಮದೇವತೆಗಳನ್ನೂ ಪೂಜಿಸುವುದುಂಟು. ಬಾಗಲಕೋಟೆ ಜಿಲ್ಲೆಯ ಬಾದಾಮಿ ಸಮೀಪದ ಬನಶಂಕರಿ (ಶಾಖಾಂಬರಿ) ಇವರ ಬುಡಕಟ್ಟಿನ ದೇವತೆ. ಇವರಲ್ಲಿ ಜನಿವಾರ ಧಾರಣೆ ಹಾಗೂ ಮಾಂಸಾಹಾರ ಪದ್ಧತಿಯಿದೆ. ಇವರು ಮೃತದೇಹಗಳನ್ನು ಹೂಳುತ್ತಾರೆ. ಇವರಲ್ಲಿ ಶ್ರಾದ್ಧ ಪದ್ಧತಿ ರೂಢಿಯಲ್ಲಿಲ್ಲದಿದ್ದರೂ ಮೃತರ ವಾರ್ಷಿಕ ತಿಥಿಯನ್ನು ಕಳಸ ಪೂಜೆ ಮಾಡಿ ತಮ್ಮವರಿಗೆ ಭೋಜನ ಏರ್ಪಡಿಸುವ ಮೂಲಕ ಆಚರಿಸುತ್ತಾರೆ. ಹಂಪೆಯಲ್ಲಿರುವ ಗಾಯತ್ರಿ ಪೀಠದ ಗುರುಗಳು ಇವರ ಧಾರ್ಮಿಕ ಗುರುಗಳಾಗಿದ್ದಾರೆ. ಈ ಜಿಲ್ಲೆಯ ಶಿರಾ, ಹೊಸದುರ್ಗ, ಮಡಕಸಿರಾ, ಪಾವಗಡ ಹಾಗೂ ಮಧುಗಿರಿಗಳಲ್ಲಿ ದೇವಾಂಗ ಸಮುದಾಯದವರು ಸಾಮಾನ್ಯವಾಗಿ ಕಂಡುಬರುತ್ತಾರೆ.

**ನಾಯಿಂದ:** ಇವರು ತಮ್ಮನ್ನು ಹಜಾಮ, ನಯನಕ್ಷತ್ರಿಯ, ಭಜಂತ್ರಿ, ಸವಿತಾ ಸಮಾಜ ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುವುದುಂಟು. ಕ್ಷೌರಿಕ ವೃತ್ತಿ ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ವಿವಾಹ ಮೊದಲಾದ ಶುಭ ಸಮಾರಂಭಗಳಲ್ಲಿ ನಾದಸ್ವರ ಡೋಲುಗಳನ್ನು ನುಡಿಸುತ್ತಾರೆ. ಈಚೆಗೆ ಹಲವರು ಕೃಷಿ ಮತ್ತಿತರ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಮೊರಸು, ಉಪ್ಪಿನ, ಶೀಲವಂತ ಮೊದಲಾದ ಉಪಪಂಗಡಗಳಿವೆ. ಕನ್ನಡ ಇವರ ಮೂಲಭಾಷೆಯಾಗಿದ್ದು, ಹಲವರು ತೆಲುಗು ಭಾಷೆಯನ್ನು ಮಾತನಾಡುವುದೂ ಉಂಟು. ತೆರ (ವಧುದಕ್ಷಿಣೆ) ಪದ್ಧತಿ ಇವರಲ್ಲಿ ರೂಢಿಯಲ್ಲಿದೆ. ಪುರೋಹಿತ ವರ್ಗದವರು ಇಲ್ಲದ ಕಾರಣ ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಶಿವ ಹಾಗೂ ವಿಷ್ಣುವನ್ನು ಪೂಜಿಸುವ ಇವರು ಮುನೇಶ್ವರ, ಗಂಗಮ್ಮ, ಮಾರಿಯಮ್ಮ ಮೊದಲಾದ ದೇವತೆಗಳನ್ನು ಆರಾಧಿಸುತ್ತಾರೆ. ಮಾಂಸಾಹಾರಿಗಳಾದ ಇವರು ಮೃತದೇಹಗಳನ್ನು ಸಾಮಾನ್ಯವಾಗಿ ಹೂಳುತ್ತಾರೆ.

**ಬ್ರಾಹ್ಮಣ:** 'ಬ್ರಾಹ್ಮಣ' ಎಂಬ ಪದವನ್ನು ಮೂಲತ: ಬ್ರಹ್ಮಜ್ಞಾನವನ್ನು ಪಡೆದವ ಎಂದು ಅರ್ಥೈಸಲಾಗುತ್ತದೆ. ಬ್ರಾಹ್ಮಣರಲ್ಲಿ ಪ್ರಮುಖವಾಗಿ ಸ್ಮಾರ್ತರು (ಶಂಕರಾಚಾರ್ಯರ ಅನುಯಾಯಿಗಳು), ವೈಷ್ಣವರು(ಮಧ್ವಾಚಾರ್ಯರ ಅನುಯಾಯಿಗಳು) ಮತ್ತು ಶ್ರೀವೈಷ್ಣವರು (ರಾಮಾನುಜಾಚಾರ್ಯರ ಅನುಯಾಯಿಗಳು) ಎಂಬ ಮೂರು ಪಂಗಡಗಳಿದ್ದು, ಪ್ರತೀ ಪಂಗಡದಲ್ಲೂ ಹಲವು ಉಪಪಂಗಡಗಳಿವೆ. ಸ್ಮಾರ್ತರಲ್ಲಿ ಮುಲಕನಾಡು, ವೇಲನಾಡು, ಸೀರನಾಡು, ಬಡಗನಾಡು, ಬಬ್ಬೂರಕಮ್ಮೆ, ಉಲಚಕಮ್ಮೆ, ಹೊಯ್ಸಳ ಕರ್ನಾಟಕ, ಸಂಕೇತಿ ಮೊದಲಾದವರು; ಮಾಧ್ವರಲ್ಲಿ ದೇಶಸ್ಥರು, ಅರವತ್ತೊಕ್ಕಲು (ಷಾಷ್ಠಿಕ ವಂಶ), ಬಡಗನಾಡು, ಶಿವಳ್ಳಿ (ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ) ಕಣ್ವಶಾಖೆಯವರು (ಶುಕ್ಲಯಜುರ್ವೇದಿಗಳು ಅಥವಾ ಯಾಜ್ಞವಲ್ಕ್ಯರು ಎಂದೂ ಕರೆದುಕೊಳ್ಳುತ್ತಾರೆ) ಮೊದಲಾದ ಉಪ ಪಂಗಡಗಳಿವೆ. ಮಾಧ್ವರಲ್ಲಿ ಉತರಾಧಿ ಮಠದವರು, ರಾಘವೇಂದ್ರ ಮಠದವರು, ವ್ಯಾಸರಾಯ ಮಠದವರು ಹಾಗೂ ಇತರೆ ಮಠಗಳಿಗೆ ನಡೆದುಕೊಳ್ಳುವವರೂ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಶ್ರೀವೈಷ್ಣವರಲ್ಲಿ ತೆಂಗಲೆ ಮತ್ತು ವಡಗಲೆ ಎಂಬ ಎರಡು ಮುಖ್ಯ ಸಂಪ್ರದಾಯಗಳಿದ್ದು, ಅವರಲ್ಲಿ ಮಂಡಯಂ ಐಯ್ಯಂಗಾರ್, ಹೆಮ್ಮಿಗೆಯಾರ್, ತಿರುಮಲಯಾರ್, ಹೆಬ್ಬಾರ್ ಮೊದಲಾದ ಉಪಪಂಗಡಗಳಿವೆ.

ಸ್ಮಾರ್ತರಲ್ಲಿ ಸಂಕೇತಿಗಳು ಕೆಲವು ದ್ರಾವಿಡ ಶಬ್ದ ಮಿಶ್ರಣವಾದ ಭಾಷೆಯನ್ನೂ, ಮುಲಕನಾಡು, ವೇಲನಾಡು ಹಾಗೂ ಸೀರನಾಡು ಸ್ಮಾರ್ತರು ತೆಲುಗು ಭಾಷೆಯನ್ನೂ, ಮಾಧ್ವರಲ್ಲಿ ಶಿವಳ್ಳಿ ಬ್ರಾಹ್ಮಣರು ತುಳು ಭಾಷೆಯನ್ನೂ, ಶ್ರೀವೈಷ್ಣವರು ತಮಿಳು ಭಾಷೆಯನ್ನೂ ಮಾತನಾಡುವವರಾದರೂ ಎಲ್ಲರೂ ಕನ್ನಡ ಬಲ್ಲವರಾಗಿದ್ದಾರೆ.

ಬ್ರಾಹ್ಮಣರನ್ನು ಅನೇಕ ಗೋತ್ರ ಹಾಗೂ ಪ್ರವರಗಳಿಂದ ಗುರುತಿಸಲಾಗುತ್ತದೆ. ಕಾಶ್ಯಪ, ಭಾರದ್ವಾಜ, ಜಮದಗ್ನಿ, ಆತ್ರೇಯಸ, ಹರಿತ್ಸ, ಕೌಂಡಿಣ್ಯ ಮೊದಲಾದವು ಇದಕ್ಕೆ ಉದಾಹರಣೆಯಾಗಿವೆ. ಸಗೋತ್ರ ವಿವಾಹವು ಸಾಮಾನ್ಯವಾಗಿ ಇರುವುದಿಲ್ಲ. ಬ್ರಾಹ್ಮಣರಲ್ಲಿ ಶೋಡಷ (೧೬) ಸಂಸ್ಕಾರಗಳನ್ನು ಒಬ್ಬ ವ್ಯಕ್ತಿಯ ಜೀವಮಾನದಲ್ಲಿ ನೆರವೇರಿಸಬೇಕೆಂಬ ಕಡ್ಡಾಯ ನಿಯಮವಿದೆ. ಅವುಗಳಲ್ಲಿ ಉಪನಯನವೇ (ಬ್ರಹ್ಮೋಪದೇಶ) ಅತಿ ಮುಖ್ಯವಾದುದು. ಸಾಂಪ್ರದಾಯಿಕವಾಗಿ ಬ್ರಾಹ್ಮಣರಲ್ಲಿ ವೈದಿಕರು ಹಾಗೂ ಲೌಕಿಕರೆಂಬ ಎರಡು ವರ್ಗಗಳಿವೆ. ವೈದಿಕರು ಸಾಮಾನ್ಯವಾಗಿ ಪೌರೋಹಿತ್ಯವನ್ನು ಅವಲಂಬಿಸಿ ಜೀವನ ಸಾಗಿಸುತ್ತಾರೆ. ಲೌಕಿಕರೆಂದರೆ ವಿವಿಧ ಉದ್ಯೋಗಗಳಲ್ಲಿ ಅಂದರೆ, ವ್ಯಾಪಾರ, ಗುತ್ತಿಗೆದಾರರು, ಸರ್ಕಾರಿ ಮತ್ತು ಖಾಸಗಿ ಕೆಲಸ  ಮೊದಲಾದ ವೃತ್ತಿಗಳನ್ನು ಮಾಡುತ್ತಾರೆ. ಇವರಲ್ಲಿ ವಧುವಿನ ಪೋಷಕರು ವರನನ್ನು ಹುಡುಕುವುದು ಸಂಪ್ರದಾಯವಾಗಿದ್ದು, ವಿವಾಹವು ವಧುವಿನ ಗೃಹದಲ್ಲಿ ನಡೆಯುತ್ತದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಸಾಂಪ್ರದಾಯಿಕವಾಗಿ ರೂಢಿಯಲ್ಲಿಲ್ಲ. ಇವರು ಸಸ್ಯಾಹಾರಿಗಳು. ಹುಟ್ಟು–ಸಾವುಗಳ ಸಂದರ್ಭದಲ್ಲಿ ೧೦ ದಿನಗಳ ಮೈಲಿಗೆ ಆಚರಿಸುತ್ತಾರೆ. ಇವರಲ್ಲಿ ಮೃತರಿಗೆ ಅಗ್ನಿಸಂಸ್ಕಾರ ಮಾಡುವ ಪದ್ಧತಿಯಿದೆ. ಮಕ್ಕಳು, ಸಾಧು, ಸನ್ಯಾಸಿಗಳು ಸತ್ತಾಗ ಶವಗಳನ್ನು ಹೂಳುವ ಪದ್ಧತಿಯೂ ಆಚರಣೆಯಲ್ಲಿದೆ. ವ್ಯಕ್ತಿ ಸತ್ತ ೩, ೫, ೭ ಅಥವಾ ೯ನೇ ದಿನದಿಂದ ಶ್ರಾದ್ಧವನ್ನು ಆರಂಭಿಸಿ ೧೨ ಹಾಗೂ ೧೩ ದಿನದಂದು ಮುಗಿಸುತ್ತಾರೆ.  ಒಂದು ವರ್ಷದವರೆಗೆ ಮಾಸಿಕ ಶ್ರಾದ್ಧ ವರ್ಷಾಬ್ಧಿಕ ಶ್ರಾದ್ಧ ಹಾಗೂ ವಾರ್ಷಿಕ ಶ್ರಾದ್ಧಗಳನ್ನು ಮಾಡುತ್ತಾರೆ.

**ಬಣಜಿಗ:** 'ಬಣಜಿಗ' ಎಂಬ ಪದವು ವಣಿಕ ಎಂಬ ಸಂಸ್ಕೃತ ಪದದಿಂದ ಬಂದಿದೆ. ಇವರನ್ನು ಬಲಿಜ ಎಂದೂ ಕರೆಯುವುದುಂಟು. ಇವರಲ್ಲಿ ಎಲೆ ಬಣಜಿಗ, ದಾಸ ಬಣಜಿಗ, ನಾಯಿಡು ಬಣಜಿಗ ಮುಂತಾದ ಪಂಗಡಗಳಿದ್ದು, ವ್ಯಾಪಾರ ಇವರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಈಚೆಗೆ ಇವರು ವ್ಯವಸಾಯ ಹಾಗೂ ಇತರೆ ನೌಕರಿಯಲ್ಲಿ ತೊಡಗಿರುತ್ತಾರೆ. ಸೆಟ್ಟಿ ಬಣಜಿಗರು ಸಾಂಪ್ರದಾಯಕವಾಗಿ ಬಳೆ ವ್ಯಾಪಾರ ಮಾಡುವವರಾಗಿದ್ದು, ಕನ್ನಡ ಹಾಗೂ ತೆಲುಗು ಮಾತನಾಡುತ್ತಾರೆ. ತೆಲುಗು ಬಣಜಿಗರು ಶೈವ ಅಥವಾ ವೈಷ್ಣವರಾಗಿರುತ್ತಾರೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ವಿಧವಾ ವಿವಾಹ ಮತ್ತು ವಿವಾಹ ವಿಚ್ಛೇದನಗಳಿಗೆ ಇವರಲ್ಲಿ ಸಾಂಪ್ರದಾಯಿಕ ಅನುಮತಿಯಿಲ್ಲ. ಮಾಂಸಾಹಾರಿಗಳಾದ ಇವರು ಮೃತರನ್ನು ಸಾಮಾನ್ಯವಾಗಿ ಹೂಳುತ್ತಾರೆ. ಆದರೆ ಕೆಲವರು ಸುಡುವುದೂ ಉಂಟು.

**ಬೆಸ್ತ:** ಇವರು ತಮ್ಮನ್ನು ಗಂಗಕುಲ, ಗಂಗಾಮತಸ್ಥರು, ಗಂಗೆ ಮಕ್ಕಳು ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುತ್ತಾರೆ. ಮೀನು ಹಿಡಿಯುವುದು, ದೋಣಿ ತಯಾರಿಸುವುದು ಹಾಗೂ ನಡೆಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಬೇಸಾಯ, ಕೂಲಿ, ನೌಕರಿ ಹಾಗೂ ಇತರೆ ಉದ್ಯೋಗಗಳಲ್ಲಿಯೂ ತೊಡಗಿರುತ್ತಾರೆ. ಕನ್ನಡ ಇವರ ಭಾಷೆಯಾಗಿದ್ದು, ಜಾತಿ ಪಂಚಾಯತಿ ಇವರಲ್ಲಿದೆ.  ಗಂಡಿನ ಮನೆಯವರೇ ವಿವಾಹ ಸಂಬಂಧಕ್ಕಾಗಿ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ಸಾಮಾನ್ಯವಾಗಿ ವಿವಾಹವು ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ. ತೆರ ಪದ್ಧತಿ ರೂಢಿಯಲ್ಲಿದೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ವಿಧವಾವಿವಾಹ ಹಾಗೂ ವಿವಾಹ ವಿಚ್ಛೇದನ ಇವರಲ್ಲಿ ಪ್ರಚಲಿತವಿದೆ. ಇವರು ಶಿವ ಹಾಗೂ ವಿಷ್ಣು ಆರಾಧಕರಾಗಿದ್ದು, ನಂಜನಗೂಡು, ಧರ್ಮಸ್ಥಳ, ತಿರುಪತಿ ಮೊದಲಾದ ಯಾತ್ರಾ ಸ್ಥಳಗಳಿಗೆ ಹೋಗಿಬರುತ್ತಾರಲ್ಲದೆ ತೊಳಸಮ್ಮ, ಮಾರಮ್ಮ, ಪಟಾಳದಮ್ಮ ಮೊದಲಾದ ದೇವತೆಗಳಿಗೂ ನಡೆದುಕೊಳ್ಳುತ್ತಾರೆ. ಇವರಲ್ಲಿ ಮೃತರನ್ನು ಹೂಳುತ್ತಾರೆ.

**ಬೇಡ:** ಪ್ರಾಚೀನ ಋಷಿ ವಾಲ್ಮೀಕಿಯು ಬೇಡನೆಂಬ ನಂಬಿಕೆಯಿಂದ ಇವರು ತಮ್ಮನ್ನು ವಾಲ್ಮೀಕಿ ಮತಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ.  ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಕಾಲದಲ್ಲಿ ಬೇಡರು ಸೈನಿಕರಾಗಿದ್ದರೆಂದು ಹೇಳಲಾಗಿದೆ. ಬೇಟೆಯಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಇವರು ಕೃಷಿಕ್ಷೇತ್ರವೂ ಸೇರಿದಂತೆ

ಇತರ ಕ್ಷೇತ್ರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮೂಲತಃ ಇವರಲ್ಲಿ ಕೆಲವರ ಮಾತೃಭಾಷೆ ತೆಲುಗು ಆಗಿದ್ದರೂ ಈಗ ಎಲ್ಲರೂ ಕನ್ನಡ ಭಾಷಿಕರಾಗಿದ್ದಾರೆ. ಇವರಲ್ಲಿ ಅನೇಕ ಗೋತ್ರಗಳಿವೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ. ಇವರಲ್ಲಿ ಶೈವ ಮತ್ತು ವೈಷ್ಣವ ಆರಾಧಕರು ಕಂಡುಬರುತ್ತಾರೆ. ಮಾಂಸಾಹಾರಿಗಳಾದ ಇವರು ತಮ್ಮ ಕುಲದೇವತೆಗಳನ್ನೂ, ಗಂಗಮ್ಮ, ದುರ್ಗಮ್ಮ, ಮಾರಿಯಮ್ಮ, ಹನುಮಂತ, ಈಶ್ವರ, ವೆಂಕಟರಮಣ ಮೊದಲಾದ ದೇವರುಗಳನ್ನೂ ಪೂಜಿಸುತ್ತಾರೆ. ಬೆಂಗಳೂರಿನ ಬೇಡರ ಕಣ್ಣಪ್ಪ ಗುಡಿಯ ಆವರಣದಲ್ಲಿ ಹಾಗೂ ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ವಾಲ್ಮೀಕಿ ಮಠಗಳಿವೆ.

**ಮೊದಲಿಯಾರ್:** ಮೊದಲಿಯಾರ್ ಎಂಬ ಪದವು ಮೊದಲ್ ಅಂದರೆ ಜ್ಯೇಷ್ಠ ಅಥವಾ ಮೊದಲು ಎಂಬ ಪದದಿಂದ ಬಂದಿದೆ ಎಂಬ ಅಭಿಪ್ರಾಯವಿದೆ. ಇವರು ವ್ಯಾಪಾರ, ಕಟ್ಟಡಗಳನ್ನು ನಿರ್ಮಿಸುವ ಗುತ್ತಿಗೆದಾರ, ದಳ್ಳಾಳಿ, ಸರ್ಕಾರಿ/ಖಾಸಗಿ ನೌಕರಿ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇವರ ಮಾತೃಭಾಷೆ ತಮಿಳು ಆದರೂ ಕನ್ನಡ ಬಲ್ಲವರಾಗಿರುತ್ತಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತ ನಡೆಸಿಕೊಡುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ಶೈವರು ಹಾಗೂ ವೈಷ್ಣವರು ಕಂಡುಬರುತ್ತಾರೆ. ಇವರಲ್ಲಿ ಮೃತರನ್ನು ಹೂಳುವ ಮತ್ತು ಅಗ್ನಿಸಂಸ್ಕಾರ ಮಾಡುವ ಸಂಪ್ರದಾಯವಿದೆ.

**ಆದಿ ಕರ್ನಾಟಕ :** ಮಾದಿಗರು ಎಂದೂ ಕರಿಯಲ್ಪಡುವ ಇವರು ಚರ್ಮ ಹದ ಮಾಡುವುದು, ಹಲಗೆ, ಪಾದರಕ್ಷೆ ಮೊದಲಾದ ಚರ್ಮದ ಸಾಮಗ್ರಿಗಳನ್ನು ಸಿದ್ಧಪಡಿಸುವುದು, ಇವರ ಸಾಂಪ್ರದಾಯಿಕ ಉದ್ಯೋಗಗಳಾಗಿವೆ. ಈಚೆಗೆ ಕೃಷಿ, ಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ, ನಾಟಕ, ದೊಣ್ಣೆವರಸೆ, ತಮಟೆ ಬಾರಿಸುವುದು, ಸೋಬಾನ ಹೇಳುವುದು ಮೊದಲಾದವು ಇವರ ಕೆಲವು ಸಾಂಪ್ರದಾಯಿಕ ಹವ್ಯಾಸಗಳಾಗಿವೆ. ಕನ್ನಡಿಗರಾದ ಇವರಲ್ಲಿ ಜಾತಿ ಪಂಚಾಯತಿ ವ್ಯವಸ್ಥೆ ಇದ್ದಿತು. ಇವರಲ್ಲಿ ಗಂಗರ ಕುಲ, ಬೆಳ್ಳಿ ಕುಲ, ಕಡಬುರ ಕುಲ, ನಾಗರಕುಲ ಮೊದಲಾದ ಕುಲಗಳಿವೆ. ವಿವಾಹ ಸಂಬಂಧಕ್ಕೆ ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕುವ ಪದ್ಧತಿಯಿದ್ದು, ವಿವಾಹವು ಅನುಕೂಲಕ್ಕೆ ತಕ್ಕಂತೆ ಗಂಡಿನ ಮನೆಯಲ್ಲಾಗಲೀ ಅಥವಾ ಹೆಣ್ಣಿನ ಮನೆಯಲ್ಲಾಗಲೀ ನಡೆಯಬಹುದು. ತೆರ ಪದ್ದತಿ ರೂಢಿಯಲ್ಲಿದೆ. ಇವರಲ್ಲಿ ಕುಲದ ಮುಖ್ಯಸ್ಥನೇ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಡುತ್ತಾನೆ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರಿಗೆ ಯುಗಾದಿ, ಮಹಾಲಯ ಅಮಾವಸ್ಯೆ ಹಾಗೂ ದೀಪಾವಳಿ ವಿಶೇಷವಾದುವು. ಯುಗಾದಿಯಾದ ೧೫ ದಿನಕ್ಕೆ ಇವರು ನೀಲಗಾರರನ್ನು ಕರೆದು ಕಜ್ಜಾಯ ತುಪ್ಪದ ಊಟವನ್ನು ಹಾಕುವರು. ಮಾಂಸಾಹಾರವನ್ನು ಸೇವಿಸುವ ಇವರು ಮೃತರನ್ನು ಹೂಳುತ್ತಾರೆ. ಗ್ರಾಮದೇವತೆ ಹಾಗೂ ತಮ್ಮ ಕುಲದೇವತೆಗಳನ್ನು ಪೂಜಿಸುವ ಇವರು ಧರ್ಮಸ್ಥಳ, ಮಲೆಮಹಾದೇಶ್ವರ, ಕುರುಬನಕಟ್ಟೆ ಹಾಗೂ ಸಿದ್ಧರಬೆಟ್ಟ ಮುಂತಾದ ಯಾತ್ರಾಸ್ಥಳಗಳಿಗೆ ಯಾತ್ರೆ ಕೈಗೊಳ್ಳುತ್ತಾರೆ.

**ಮೇದ:** ಮೊರ, ಬುಟ್ಟಿ, ಬೀಸಣಿಗೆ, ತಡಿಕೆ ಮೊದಲಾದವುಗಳನ್ನು ಬಿದಿರಿನಿಂದ ತಯಾರಿಸುವ ಪಾರಂಪರಿಕ ಕೈಕಸಬನ್ನು ಇವರು ಮಾಡುತ್ತಾರೆ. ಅಲ್ಲದೇ ಕೃಷಿ, ಸಣ್ಣಪುಟ್ಟ ವ್ಯಾಪಾರ, ಕೂಲಿ, ನೌಕರಿ ಮೊದಲಾದವೂ ಇವರ ಇತರೆ ಉದ್ಯೋಗಗಳಾಗಿವೆ. ಇವರಲ್ಲಿ ಗರಿಮೇದರು, ಪಲ್ಲಿ ಮೇದರು, ಬಂಡಿಕಾರ ಮೇದರು ಎಂಬ ಒಳಪಂಗಡಗಳೂ, ಕೆಲವು ಕುಲಗಳೂ ಇವೆ. ಇವರು ಕನ್ನಡ ಹಾಗೂ ತೆಲುಗು ಭಾಷೆಗಳನ್ನಾಡುವರು. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತ ನಡೆಸಿಕೊಡುವುದುಂಟು. ತೆರಪದ್ಧತಿ ರೂಢಿಯಲ್ಲಿದ್ದು, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಪ್ರಚಲಿತದಲ್ಲಿವೆ. ಮಾಂಸಾಹಾರಿಗಳಾದ ಇವರಲ್ಲಿ ಶೈವರು ಮತ್ತು ವೈಷ್ಣವರು ಕಂಡುಬರುತ್ತಾರೆ. ಭೈರವೇಶ್ವರ, ಈಶ್ವರ, ನರಸಿಂಹಸ್ವಾಮಿ, ಮಾರಿಯಮ್ಮ, ದುರ್ಗಮ್ಮ ಮೊದಲಾದ ದೇವತೆಗಳನ್ನು ಆರಾಧಿಸುತ್ತಾರೆ. ಸಂಕ್ರಾಂತಿಯ ದಿನ ವಿಶೇಷವಾಗಿ ಮಲ್ಲಮ್ಮನ ಪೂಜೆ ಮಾಡುತ್ತಾರೆ. ಅಂದು ತಮ್ಮ ಕಸುಬಿಗೆ ಬೇಕಾದ ಹೊಸ ಬಿದಿರನ್ನು ತಂದು ಪೂಜಿಸುತ್ತಾರೆ. ಸಾಂಪ್ರದಾಯಿಕವಾಗಿ ಮೃತರನ್ನು ಹೂಳುತ್ತಾರೆ.

**ಲಿಂಗಾಯತ**: ಇವರನ್ನು ಲಿಂಗವಂತ, ಲಿಂಗಧಾರಿ, ವೀರಶೈವ ಮೊದಲಾದ ಹೆಸರುಗಳಿಂದಲೂ ಕರೆಯುತ್ತಾರೆ. ಕೃಷಿ, ವ್ಯಾಪಾರ, ವಾಣಿಜ್ಯ ಮೊದಲಾದ ಉದ್ಯೋಗಗಳಲ್ಲಿ ತೊಡಗಿರುವ ಇವರಲ್ಲಿ ಜಂಗಮರು (ಪುರೋಹಿತವರ್ಗ), ಪಂಚಮಸಾಲಿಗಳು, ಬಣಜಿಗರು (ಸಾಂಪ್ರದಾಯಿಕ ವ್ಯಾಪಾರಿಗಳು), ಸಾದರು (ಸಾಂಪ್ರದಾಯಿಕ ಕೃಷಿಕರು) ಮುಂತಾದ

ವಿಂಗಡಣೆ ಇದೆ. ಇವರು ಕನ್ನಡ ಭಾಷಿಕರು, ಇವರು ಬಸವಣ್ಣನ ಅನುಯಾಯಿಗಳಾಗಿದ್ದು, ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು, ಬಳ್ಳಾರಿ ಜಿಲ್ಲೆಯ ಉಜ್ಜನಿ, ಉತ್ತರಪ್ರದೇಶದ ಕೇದಾರ ಮತ್ತು ಕಾಶಿ ಹಾಗೂ ಆಂಧ್ರಪ್ರದೇಶದ ಶ್ರೀಶೈಲ ಇವರ ಪಂಚಪೀಠಗಳಾಗಿವೆ. ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳು ಇವರ ಆಚರಣೆಯ ಪ್ರಮುಖ ಧಾರ್ಮಿಕ ಲಕ್ಷಣಗಳಾಗಿದ್ದು, ಅವು ಇವರ ಧಾರ್ಮಿಕತೆಯ ವಿಶೇಷತೆಯನ್ನು ಬಿಂಬಿಸುತ್ತವೆ. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ ಮತ್ತು ಪ್ರಸಾದಗಳನ್ನೊಳಗೊಂಡ ಅಷ್ಟಾವರಣವು ದೈನಂದಿನ ಜೀವನದ ಕ್ರಮವಾಗಿದೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳು ಪಂಚಾಚಾರದ ಮೂಲಭೂತ ನೈತಿಕ ತತ್ವಗಳಾಗಿವೆ. ಷಟ್‌ಸ್ಥಲಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ ಮತ್ತು ಐಕ್ಯಸ್ಥಳಗಳನ್ನು ಲೌಕಿಕದಿಂದ ಪಾರಮಾರ್ಥದತ್ತ ಕೊಂಡೊಯ್ಯುವ ವಿವಿಧ ಆಧ್ಯಾತ್ಮಿಕ ಹಂತಗಳೆಂದು ಪರಿಗಣಿಸಲಾಗಿದೆ. ಲಿಂಗಾಯತರು ಸಸ್ಯಾಹಾರಿಗಳು, ಇವರು ಸಾಮಾನ್ಯವಾಗಿ ಏಕದೇವೋಪಾಸಕರಾಗಿದ್ದು, ಇಷ್ಟಲಿಂಗಧಾರಿಯಾಗಿರುತ್ತಾರೆ. ಜಂಗಮರು ವಿರಕ್ತರು ಸಂಸಾರವನ್ನು ತ್ಯಜಿಸಿ ಸಾಮಾನ್ಯವಾಗಿ ಮಠಗಳಲ್ಲಿ ವಾಸಿಸುತ್ತಾರೆ. ಜಿಲ್ಲೆಯಲ್ಲಿ ಅನೇಕ ವೀರಶೈವ ಮಠಗಳಿವೆ. ಅವುಗಳಲ್ಲಿ ಮುಖ್ಯವಾದುದು ಜಿಲ್ಲೆಯಲ್ಲಿರುವ ಸಿದ್ಧಗಂಗಾ ಮಠ ಹಾಗೂ ಎಡೆಯೂರು ಸಿದ್ಧಲಿಂಗೇಶ್ವರ ಮಠ. ಲಿಂಗಾಯತರಲ್ಲಿ ಸತ್ತವರನ್ನು ಕುಳಿತ ಭಂಗಿಯಲ್ಲಿ ಉತ್ತರಾಭಿಮುಖವಾಗಿ ಹೂಳುವುದು ರೂಢಿಯಲ್ಲಿದೆ. ಸತ್ತ ೧೧ನೇ ದಿನದಂದು ಶಿವಗಣಾರಾಧನೆಯನ್ನು ಮೃತರ ನೆನಪಿನಲ್ಲಿ ಆಚರಿಸುತ್ತಾರೆ. ಎಡೆಯೂರು ಸಿದ್ಧಲಿಂಗೇಶ್ವರ, ಶ್ರೀಶೈಲ ಮಲ್ಲಿಕಾರ್ಜುನ, ರೇವಣಸಿದ್ಧೇಶ್ವರ, ಭ್ರಮರಾಂಬ, ದೇವಮ್ಮ ಮೊದಲಾದ ದೇವರುಗಳಿಗೆ ಇವರು ನಡೆದುಕೊಳ್ಳುತ್ತಾರೆ.

**ವಡ್ಡ:** ವಡ್ಡರನ್ನು ಭೋವಿಗಳೆಂದೂ ಕರೆಯುತ್ತಾರೆ. ಇವರಲ್ಲಿ ಕಲ್ಲುವಡ್ಡರು, ಮಣ್ಣು ವಡ್ಡರು ಹಾಗೂ ಉಪ್ಪು ವಡ್ಡರು ಎಂಬ ಪಂಗಡಗಳಿವೆ. ಕಲ್ಲು ಒಡೆಯುವುದು, ಬಂಡೆಕಲ್ಲು ಅಗೆಯುವುದು, ಪಾಯ ತೋಡುವುದು, ಬಾವಿ ತೋಡುವುದು, ಕಲ್ಲು ಮಾರಾಟ ಮಾಡುವುದು, ಗಣಿಗಾರಿಕೆ ಮೊದಲಾದುವು ಇವರ ಸಾಂಪ್ರದಾಯಿಕ ಉದ್ಯೋಗಗಳಾಗಿದ್ದು, ರಸ್ತೆನಿರ್ಮಾಣ, ಕೃಷಿ ಮೊದಲಾದ ಉದ್ಯೋಗಗಳಲ್ಲೂ ಈಚೆಗೆ ತೊಡಗಿದ್ದಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಇವರು ಮೂಲತ: ತೆಲುಗು ಮಾತನಾಡುವ ಪ್ರದೇಶಕ್ಕೆ ಸೇರಿದವರಾಗಿರಬೇಕೆಂಬ ಅಭಿಪ್ರಾಯವಿದೆ. ಇವರ ಮನೆಮಾತು ತೆಲುಗು. ವ್ಯವಹಾರಿಕವಾಗಿ ಕನ್ನಡ ಮಾತನಾಡುತ್ತಾರೆ. ತೆರಪದ್ಧತಿ ರೂಢಿಯಲ್ಲಿದ್ದು, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಅನುಮತಿಯಿದೆ. ಇವರು ಮಾಂಸಾಹಾರಿಗಳು. ತಿರುಪತಿಯ ವೆಂಕಟರಮಣನನ್ನು ವಿಶೇಷವಾಗಿ ಆರಾಧಿಸುತ್ತಾರೆ. ಮಾರಿಯಮ್ಮ, ಚೌಡಮ್ಮ, ಮೊದಲಾದ ದೇವತೆಗಳನ್ನೂ ಪೂಜಿಸುವುದುಂಟು. ಇವರಲ್ಲಿ ಮೃತರನ್ನು ಹೂಳುವ ಪದ್ಧತಿಯಿದೆ.

**ವಿಶ್ವಕರ್ಮ:** ವಿಶ್ವಕರ್ಮ ಸಮುದಾಯದವರು ವಿಶೇಷವಾಗಿ ಪರಂಪರಾಗತ ಕಲಾ ಕೌಶಲ್ಯಕ್ಕೆ ಪ್ರಸಿದ್ಧರಾಗಿದ್ದಾರೆ. ಇವರನ್ನು ಪಾಂಚಾಳರೆಂದೂ ಕರೆಯುವುದುಂಟು. ಇವರಲ್ಲಿ ಚಿನ್ನ, ಬೆಳ್ಳಿ ಕೆಲಸ ಮಾಡುವ ಅಕ್ಕಸಾಲಿ, ಕಂಚು, ಹಿತ್ತಾಳೆ ಕೆಲಸ ಮಾಡುವ ಕಂಚುಗಾರ, ಕಬ್ಬಿಣದ ಕೆಲಸ ಮಾಡುವ ಕಮ್ಮಾರ (ಲೋಹಕಾರ), ಮರದ ಕೆಲಸ ಮಾಡುವ ಬಡಗಿ (ಬಡಗೇರ) ಮತ್ತು ಶಿಲ್ಪದ ಕೆಲಸ ಮಾಡುವ ಶಿಲ್ಪಿಗಳೂ ಸೇರಿದ್ದಾರೆ. ವಿಶ್ವಬ್ರಹ್ಮನ ಐದು ಮುಖಗಳಿಂದ ಹುಟ್ಟಿದ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಋಷಿಗಳ ಮಕ್ಕಳಾದ ಸಾನಗ, ಸನಾತನ, ಅಹಬೂವನ, ಪ್ರತ್ನಸ ಮತ್ತು ಸುಪರ್ಣರು ಪಾಂಚಾಳರ ಗೋತ್ರಕಾರರೆಂದೂ ಇವರಿಂದ ಮುಂದೆ ೧೨೫ ಗೋತ್ರಗಳು ಹುಟ್ಟಿದವೆಂದೂ ಹೇಳಿಕೆ ಇದೆ. ಇವರಲ್ಲಿ ಕೆಲವರು ವೇದಗಳು, ಯಂತ್ರ-ಮಂತ್ರ-ತಂತ್ರಗಳನ್ನು ಅಭ್ಯಾಸ ಮಾಡಿರುತ್ತಾರೆ. ಕನ್ನಡ ಭಾಷಿಕರಾದ ಇವರಲ್ಲಿ ಜನಿವಾರ ಧರಿಸುವ ಪದ್ಧತಿಯಿದೆ. ಇವರ ಧಾರ್ಮಿಕಾಚರಣೆಗಳನ್ನು ವಿಶ್ವಕರ್ಮ ಪುರೋಹಿತರೇ ನಡೆಸಿಕೊಡುತ್ತಾರೆ. ವಿವಾಹ ಸಂಬಂಧಕ್ಕಾಗಿ ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ಸಾಮಾನ್ಯವಾಗಿ ವಿವಾಹವು ಹೆಣ್ಣಿನ ಮನೆಯಲ್ಲೇ ಜರುಗುತ್ತದೆ. ತೆರಪದ್ಧತಿ ರೂಢಿಯಲ್ಲಿದೆ. ದೀಪಾಂಬೂದಿಕಾಳಿಕಾದೇವಿ ಇವರ ಕುಲದೇವತೆ. ಇವರು ಗ್ರಾಮದೇವತೆಗಳಿಗೆ, ತಿರುಪತಿ ವೆಂಕಟರಮಣ, ನಂಜನಗೂಡು ನಂಜುಂಡೇಶ್ವರ ಮೊದಲಾದ ದೇವತೆಗಳಿಗೂ ಹಾಗೂ ಮಳವಳ್ಳಿ ತಾಲೂಕಿನ ಹಲಗೂರಿನ ಬಳಿ ಇರುವ ಚಿಕ್ಕಲ್ಲೂರಿನ ಸಿದ್ಧಾಪ್ಪಾಜಿ ಮಠಕ್ಕೂ ನಡೆದುಕೊಳ್ಳುತ್ತಾರೆ. ಇವರಲ್ಲಿ ಮೃತರಿಗೆ ಅಗ್ನಿ ಸಂಸ್ಕಾರ ಮಾಡುವ ಪದ್ಧತಿಯಿದೆ. ಇವರು, ವರವಿಯ ಮೌನೇಶ್ವರರು, ಪೋತಲೂರಿನ ವೀರಬ್ರಹ್ಮೇಂದ್ರ ಸ್ವಾಮಿ, ಆನೆಗುಂದಿ ಸರಸ್ವತಿ ಪೀಠ ಮುಂತಾದವುಗಳಿಗೆ ನಡೆದುಕೊಳ್ಳುತ್ತಾರೆ.

**ವೈಶ್ಯ:** ಆರ್ಯ ವೈಶ್ಯ, ಶೆಟ್ಟಿ, ಕೊಮ್ಮಟಿ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಇವರ ವಂಶಪಾರಂಪರ್ಯ ಉದ್ಯೋಗವು ವ್ಯಾಪಾರ ವಾಣಿಜ್ಯಗಳಾಗಿದ್ದು, ಈಚೆಗೆ ಇವರು ನೌಕರಿ ಹಾಗೂ ಇತರ ಉದ್ದಿಮೆಗಳಲ್ಲೂ ತೊಡಗಿದ್ದಾರೆ. ಇವರು ಮನೆಯಲ್ಲಿ ತೆಲುಗು ಮಾತನಾಡುವವರಾಗಿದ್ದರೂ ಕನ್ನಡ ಬಲ್ಲವರಾಗಿದ್ದಾರೆ. ಜನಿವಾರ ಧರಿಸುವ ಇವರಲ್ಲಿ ವಿಧವಾ ವಿವಾಹ ಮತ್ತು ವಿವಾಹ ವಿಚ್ಛೇದನಗಳಿಗೆ ಸಾಂಪ್ರದಾಯಿಕವಾಗಿ ಅನುಮತಿಯಿಲ್ಲ. ಶಾಖಾಹಾರಿಗಳಾದ ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸುತ್ತಾರೆ. ವೈಶ್ಯರ ದೇವರುಗಳಲ್ಲಿ ನಗರೇಶ್ವರ ಹಾಗೂ ಕನ್ನಿಕಾ ಪರಮೇಶ್ವರಿ(ವಾಸವಿ) ಪ್ರಮುಖವಾದವು. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರಿಗೆ ವೈಶಾಖ ಶುದ್ಧ ದಶಮಿಯ ವಾಸವಿ ಜಯಂತಿಯು ಪ್ರಮುಖವಾಗಿದ್ದು, ಅದನ್ನು ಮನೆಗಳಲ್ಲಿ ಅಲ್ಲದೇ ಸಾಮೂಹಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳೊಡನೆ ನಡೆಸುವುದೂ ರೂಢಿಯಲ್ಲಿದೆ. ವೈಧಿಕ ಧರ್ಮದಂತೆ ಇವರಲ್ಲಿ ಮೃತರಿಗೆ ಅಗ್ನಿಸಂಸ್ಕಾರ ಮಾಡುತ್ತಾರೆ.

**ಸಾತಾನಿ:** ಸಾತಾನಿಗಳು ಶ್ರೀವೈಷ್ಣವ ಮತಾವಲಂಬಿಗಳಾಗಿದ್ದು, ತಾವು ರಾಮಾನುಜಾಚಾರ್ಯರ ಅನುಯಾಯಿಗಳೆಂದು ಹೇಳಿಕೊಳ್ಳುತ್ತಾರೆ. ಶ್ರೀವೈಷ್ಣವ ಸಂಪ್ರದಾಯದ ಹನ್ನೆರಡು ಅಳ್ವಾರರ ವೈಭವವನ್ನು ವರ್ಣಿಸುವ ಪವಿತ್ರ 'ದಿವ್ಯ ಪ್ರಬಂಧ' (ಪದ್ಯಗಳು) ಗಳನ್ನು ಪಠಿಸುತ್ತಾರೆ. ಇವರು ವಿಶೇಷವಾಗಿ ಆಂಜನೇಯ ದೇವಾಲಯಗಳಲ್ಲಿ ಅರ್ಚಕರಾಗಿಯೂ, ಕೃಷಿ ಮತ್ತಿತರ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರು ಉಪ್ಪಾರ, ಕಾಡುಗೊಲ್ಲ ಮೊದಲಾದವರ ಮನೆಯ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವುದೂ ಉಂಟು. ಇವರಲ್ಲಿ ವಿಧವಾ ವಿವಾಹ ಮತ್ತು ವಿಚ್ಛೇದನಗಳಿಗೆ ಸಾಂಪ್ರದಾಯಿಕ ಅನುಮತಿ ಇಲ್ಲ. ಇವರು ತಿರುಪತಿ ವೆಂಕಟರಮಣ, ಮೇಲುಕೋಟೆ ಚೆಲುವರಾಯಸ್ವಾಮಿ, ಶ್ರೀರಂಗಂನ ರಂಗನಾಥ ಮೊದಲಾದ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಇವರು ಮೃತರಿಗೆ ಅಗ್ನಿಸಂಸ್ಕಾರ ಮಾಡುತ್ತಾರೆ.

## ಸಾಮಾಜಿಕ ಜೀವನ

ಜಿಲ್ಲೆಯ ಸಾಮಾಜಿಕ ಜೀವನವೂ ದೇಶದ ಇತರೆಡೆಗಳಂತೆ ಸಾಕಷ್ಟು ಬದಲಾವಣೆಗಳನ್ನು ಕಂಡಿದ್ದು ಅದನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲು ಯತ್ನಿಸಲಾಗಿದೆ.

**ಅವಿಭಕ್ತ ಕುಟುಂಬ ಪದ್ಧತಿ:** ಜಿಲ್ಲೆಯಲ್ಲಿರುವ ಎಲ್ಲಾ ಜಾತಿ ಸಮುದಾಯಗಳೂ ಆರ್ಥಿಕ, ಸಾಮಾಜಿಕ ವಿಚಾರಗಳಿಗೆ ಸಂಬಂಧಿಸಿದಂತೆ ಹಿಂದೂ ಕಾನೂನು ನಿಯಮಗಳಿಗೆ ಬದ್ಧವಾಗಿರುತ್ತವೆ. ಭೂ ಹಾಗೂ ಇತರೆ ಸ್ಥಿರಾಸ್ತಿಗಳನ್ನು ಪಡೆಯುವಲ್ಲಿ ಮಾತೃಪ್ರಧಾನ ಕಾನೂನು ಪರಿಪಾಲನೆಯು ಜಿಲ್ಲೆಯಲ್ಲಿ ಚಾಲನೆಯಲ್ಲಿರದೆ, ಕೇವಲ ಪಿತೃಪ್ರಧಾನ ಕೌಟುಂಬಿಕ ನಿಯಮಗಳನ್ನು ಮಾತ್ರ ಅನುಸರಿಸಲಾಗುತ್ತದೆ. ಆದರೆ ಹೆಣ್ಣುಮಕ್ಕಳಿಗೂ ಕಾನೂನುರೀತ್ಯಾ ಆಸ್ತಿಯ ಹಕ್ಕು ಪ್ರಾಪ್ತವಾಗಿದೆ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಅವಿಭಕ್ತ ಕುಟುಂಬಗಳು ಇಂದಿಗೂ ಕಂಡುಬರುತ್ತವೆ. ಆದರೆ, ಆಧುನಿಕ ಸಂಸ್ಕೃತಿಗೆ ಹೊಂದಿಕೊಂಡಂತೆ, ರಾಜ್ಯದ ಇತರೆಡೆಯಂತೆ ಈ ಜಿಲ್ಲೆಯಲ್ಲಿಯೂ ಅವಿಭಕ್ತ ಕುಟುಂಬಗಳು ಬಹಳಷ್ಟು ಮಟ್ಟಿಗೆ ಇಳಿಮುಖವಾಗುತ್ತಿರುವುದು ಗಮನಾರ್ಹವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿ ವಿಭಜನೆಯು ಇದಕ್ಕೆ ಪ್ರಮುಖ ಕಾರಣವಾಗಿದೆ. ಸಂಚಾರ ಮತ್ತು ಸಾರಿಗೆ ಸಂಪರ್ಕಗಳ ಬೆಳವಣಿಗೆ, ಶಿಕ್ಷಣ, ವ್ಯಾಪಾರ, ಕೈಗಾರಿಕೆಗಳ ಅಭಿವೃದ್ಧಿ ಮುಂತಾದವು ವ್ಯಾಪಕ ನಗರೀಕರಣಕ್ಕೆ ಎಡೆಮಾಡಿಕೊಟ್ಟಿದ್ದು, ಗ್ರಾಮೀಣ ಪ್ರದೇಶದ ಜನರು ನಗರಪ್ರದೇಶಗಳಿಗೆ ವಲಸೆ ಬಂದು ನೆಲೆಸುತ್ತಿರುವುದೂ ಸಾಂಪ್ರದಾಯಿಕ ಅವಿಭಕ್ತ ಕುಟುಂಬಗಳು ಶಿಥಿಲವಾಗುತ್ತಿರುವುದಕ್ಕೆ ಪ್ರಮುಖ ಕಾರಣವೆಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಆದರೆ, ಕೃಷಿಯನ್ನು ಅವಲಂಬಿಸಿರುವ ಹಲವು ಸಮುದಾಯಗಳಲ್ಲಿ ಅವಿಭಕ್ತ ಕುಟುಂಬಗಳು ಇಂದಿಗೂ ಮುಂದುವರೆದಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ. ಹಲವು ವೇಳೆ ಕುಟುಂಬದ ಒಡೆಯನು 'ಇಚ್ಛಾ ಪತ್ರ' (WILL) ತಯಾರಿಸುವುದು ರೂಢಿಯಲ್ಲಿರುವುದು ಅವಿಭಕ್ತ ಕುಟುಂಬಗಳ ಶಿಥಿಲತೆಗೆ ಮುಖ್ಯ ಕಾರಣವೆಂದು ಪರಿಗಣಿಸಲಾಗುತ್ತದೆ. ಆದರೆ, ಈ ಅಂಶವು ಎಲ್ಲಾ ಕುಟುಂಬಗಳಲ್ಲಿ ಜಾರಿಯಲ್ಲಿರುವುದು ವಿರಳವಾಗಿ ಕಂಡುಬರುತ್ತದೆ. ಹಿಂದಿನ ದಶಕಗಳಲ್ಲಿ ಜಿಲ್ಲೆಯಲ್ಲಿ ಇಚ್ಛಾ ಪತ್ರಗಳು ಕೇವಲ ಕಡಿಮೆ ಇದ್ದು, ಇತ್ತೀಚಿನ ವರ್ಷಗಳಲ್ಲಿ ಅಧಿಕಗೊಂಡಿರುವುದು ಕಂಡುಬರುತ್ತದೆ.

**ಗರ್ಭಾವಸ್ಥೆ ಮತ್ತು ಜನನ:** ಗರ್ಭಾವಸ್ಥೆಯಲ್ಲಿದ್ದಾಗ ಹಾಗೂ ಮಗು ಜನಿಸಿದಾಗ ಆಚರಿಸುವ ಅನೇಕ ಧಾರ್ಮಿಕ ಆಚರಣೆ, ಸಂಪ್ರದಾಯಗಳು ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿಯೂ ರೂಢಿಯಲ್ಲಿವೆ. ಗ್ರಹಣ ಕಾಲದಲ್ಲಿ ಗರ್ಭಿಣಿಯರು ಹೊರಗೆ ಬರಬಾರದೆಂಬ ದೃಢನಂಬಿಕೆ ಇದ್ದು, ಅವರಿಗೆ ಇರಬಹುದಾದ ತಿಂಡಿತಿನಿಸುಗಳ ಬಯಕೆಗಳನ್ನು ಪೂರೈಸುವುದು ರೂಢಿಯಲ್ಲಿದೆ. ಹಿಂದೂಗಳಲ್ಲಿ ಗರ್ಭಿಣಿಯರಿಗೆ ಮೂರು ತಿಂಗಳಾದಾಗ ಗಂಡನ ಮನೆಯವರು ಮುಚ್ಚೋರೆ (ಚಕ್ಕುಲಿ) ಹಾಗೂ ಪುರಿಉಂಡೆಗಳ ಬಾಗಿನವನ್ನು ನೀಡುವ ಸಂಪ್ರದಾಯವು ಕೆಲವು ಕುಟುಂಬಗಳಲ್ಲಿ ಈಗಲೂ ರೂಢಿಯಲ್ಲಿದೆ. ಏಳು ಅಥವಾ ಒಂಭತ್ತನೇ ತಿಂಗಳಲ್ಲಿ ಬಳೆ ತೊಡಿಸುವ (ಸೀಮಂತ) ಶಾಸ್ತ್ರವನ್ನು ನೆರವೇರಿಸುತ್ತಾರೆ. ಸಾಮಾನ್ಯವಾಗಿ ಮೊದಲನೆ ಹೆರಿಗೆಗೆ ಹೆಣ್ಣು ತವರು ಮನೆಗೆ ಹೋಗುತ್ತಾಳೆ. ಮಗು ಹುಟ್ಟಿದ ತಕ್ಷಣ ಅದರ ಬಾಯಿಗೆ ಜೇನುತುಪ್ಪವನ್ನು ನೆಕ್ಕಿಸುವ ಪದ್ಧತಿಯು ಎಲ್ಲಾ ಹಿಂದೂಗಳಲ್ಲೂ ರೂಢಿಯಲ್ಲಿದೆ. ಮಗು ಹುಟ್ಟಿದ ೧೦ ದಿನಗಳನ್ನು ಪುರುಡು ಅಥವಾ ಮೈಲಿಗೆ ಎಂದು ಆಚರಿಸಿ ೧೧ನೇ ದಿನ ಬಾಣಂತಿ-ಮಗುವಿಗೆ ಮಂಗಳಸ್ನಾನ ಮಾಡಿಸಿ ಪುಣ್ಯಾರ್ವಚನೆ ವಿಧಿಯ ಮೂಲಕ ಶುದ್ಧೀಕರಣಗೊಳಿಸಲಾಗುತ್ತದೆ. ಸಾಮಾನ್ಯವಾಗಿ ಅಂದೇ ನಾಮಕರಣ ಶಾಸ್ತ್ರವನ್ನು ಮಾಡಿ ಮಗುವನ್ನು ತೊಟ್ಟಿಲಿಗೆ ಹಾಕುವ ಪದ್ಧತಿಯೂ ಎಲ್ಲಾ ಸಮುದಾಯಗಳಲ್ಲೂ ರೂಢಿಯಲ್ಲಿದೆ. ಹೊಸದಾಗಿ ಹುಟ್ಟಿದ ಜೀವಕ್ಕೆ ಶೋಡಷ ಸಂಸ್ಕಾರಗಳಲ್ಲಿ ವಿಧಿಸಿರುವ ನಿಯಮದ ಪ್ರಕಾರ ಜನನಕ್ಕೆ ಮುಂಚೆ (ಗರ್ಭಾವಸ್ಥೆಯಲ್ಲಿ) ಸೀಮಂತ ಹಾಗೂ ಜನನದ ಬಳಿಕ ನಾಮಕರಣ ನೆರವೇರಿಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಹೆರಿಗೆಗಳು ಆಸ್ಪತ್ರೆಯಲ್ಲಾಗುವುದರಿಂದ, ಅನೇಕ ಸಾಂಪ್ರದಾಯಿಕ ಪದ್ಧತಿಗಳು ಮಾಯವಾಗುತ್ತಿವೆ. ಮಕ್ಕಳಿಲ್ಲದ ಸಂದರ್ಭಗಳಲ್ಲಿ ದತ್ತು ತೆಗೆದುಕೊಳ್ಳುವ ಪದ್ಧತಿಯು ಸಾಮಾನ್ಯವಾಗಿ ಎಲ್ಲಾ ವರ್ಗಗಳಲ್ಲಿಯೂ ರೂಢಿಯಲ್ಲಿದೆ. ಹೆಣ್ಣುಮಕ್ಕಳು ಋತುಮತಿಯಾದಾಗ ಮೂರು ದಿನಗಳಿಂದ ೧೫ ದಿನಗಳವರೆಗೆ (ಕೆಲವರು ೩೦ ದಿನಗಳವರೆಗೆ) ಆಕೆಯನ್ನು ಪ್ರತ್ಯೇಕವಾಗಿ ಕೂರಿಸಿ ಪ್ರತಿನಿತ್ಯ ಆರತಿಯನ್ನು ಬೆಳಗಿ ಕೊನೆಯ ದಿನ ಮೈಲಿಗೆ (ಪುರುಡು) ಕಳೆದುಕೊಂಡು ತಮ್ಮ ಬಂಧು-ಮಿತ್ರರಿಗೆ ಸಿಹಿ ಊಟ ಹಾಕುವುದು ಸಾಮಾನ್ಯವಾಗಿ ರೂಢಿಯಲ್ಲಿದೆ. ಬ್ರಾಹ್ಮಣರು ಹಾಗೂ ವೈದಿಕ ವಿಧಿಯನ್ನಾಚರಿಸುವ ಇತರೆ ಜಾತಿಗಳಲ್ಲಿ ಗಂಡುಮಕ್ಕಳಿಗೆ (ಬ್ರಹ್ಮೋಪದೇಶ) ಉಪನಯನವನ್ನು ಮಾಡುತ್ತಾರೆ. ಜಂಗಮರಲ್ಲಿ ಅಯ್ಯಾಚಾರ ದೀಕ್ಷೆಯನ್ನು ಕೊಡಲಾಗುತ್ತದೆ. ವೀರಶೈವರಲ್ಲಿ ೧೩ನೇ ದಿನ ಮಗುವಿಗೆ ಲಿಂಗಧಾರಣೆ ಮಾಡಿ ಹೆಸರಿಡುತ್ತಾರೆ.

ಮುಸಲ್ಮಾನರಲ್ಲಿ ಮಗು ಹುಟ್ಟಿದ ಕೂಡಲೇ ಕಿವಿಯಲ್ಲಿ ಆಜಾನ್ ಹೇಳಿ ಹೆಸರಿಡುತ್ತಾರೆ. ಮುಂದೆ ಅವಶ್ಯವಿದ್ದರೆ ಹೆಸರು ಬದಲಾಯಿಸಿಕೊಳ್ಳಲು ಸಾಧ್ಯವಿರುತ್ತದೆ. ಕರ್ಜೂರವನ್ನು ಜೇನುತುಪ್ಪದಲ್ಲಿ ಅದ್ದಿ ಮಗುವಿನ ಬಾಯಿಗೆ ಸವರುವರು. ಮಗು ಹುಟ್ಟಿದ ಐದು ಅಥವಾ ಆರನೇ ದಿನಕ್ಕೆ ಮಗುವಿಗೆ ಹೊಸ ಅರಿವೆಯನ್ನು ತೊಡಿಸಿ, 'ದೃಷ್ಟಿ' ಬೀಳದ ಹಾಗೆ ಅಲಂಕರಿಸುತ್ತಾರೆ. ಇದಕ್ಕೆ 'ಹಖೀಖ' ಎನ್ನುತ್ತಾರೆ. ಕ್ರೈಸ್ತಮತೀಯರಲ್ಲೂ ಸಹ ಮಗು ಹುಟ್ಟಿದ ಒಂದು ತಿಂಗಳೊಳಗೆ ಹೆಸರಿಡುವ ಸಮಾರಂಭವನ್ನು ಚರ್ಚಿನಲ್ಲಿ ನಡೆಸುವುದು ರೂಢಿಯಲ್ಲಿದೆ.

**ಮದುವೆ ಆಚರಣೆ:** ಹಿಂದೂಗಳಲ್ಲಿ ಕನ್ಯಾದಾನದ ಸಂಪ್ರದಾಯವಿದೆ. ಕೆಲವು ಜಾತಿಗಳಲ್ಲಿ ಗಂಡಿನ ಮನೆಯವರೇ ಹೆಣ್ಣನ್ನು ಹುಡುಕಿಕೊಂಡು ಹೋಗುವ ಸಂಪ್ರದಾಯವಿದೆ. ಮದುವೆ ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ಅಥವಾ ಕೆಲವು ಜಾತಿಗಳಲ್ಲಿ ಮೊದಲೇ ನಿಶ್ಚಯಿಸಿದಂತೆ ಗಂಡಿನ ಮನೆಯಲ್ಲಿ ನಡೆಯುತ್ತದೆ. ಇತ್ತೀಚಿನ ದಿನಗಳಲ್ಲಿ ದೇವಸ್ಥಾನ ಮಠ ಇಲ್ಲವೇ ಛತ್ರ (ಕಲ್ಯಾಣ ಮಂಟಪ) ಗಳಲ್ಲಿ ಬಹುತೇಕ ವಿವಾಹಗಳು ನಡೆಯುತ್ತವೆ. ಒಂದೇ ಕುಲ ಅಥವಾ ಗೋತ್ರಗಳಲ್ಲಿ ವಿವಾಹವು ನಿಷಿದ್ಧ. ವಿವಾಹವು ಒಂದೇ ಜಾತಿ ಹಾಗೂ ಉಪಜಾತಿಗಳಲ್ಲಿ ನೆರವೇರುವುದು ಸಂಪ್ರದಾಯವಾಗಿದ್ದರೂ, ಈಚೆಗೆ ವಿವಿಧ ಉಪಜಾತಿಗಳಲ್ಲಿ ವಿವಾಹ ಸಂಬಂಧವಾಗುವುದೂ ಉಂಟು. ವೀಳ್ಯದ ಶಾಸ್ತ್ರ ಅಥವಾ ನಿಶ್ಚಿತಾರ್ಥದಲ್ಲಿ ಮದುವೆಯ ಪ್ರಸ್ತಾಪ ನಿಶ್ಚಿತ ರೂಪ ತಾಳುತ್ತದೆ. ಬ್ರಾಹ್ಮಣರಲ್ಲಿ ಹಾಗೂ ವೈದಿಕ ಸಂಪ್ರದಾಯವನ್ನು ಅನುಸರಿಸುವ ವೈಶ್ಯ. ವಿಶ್ವಕರ್ಮ ಮೊದಲಾದ ಸಮುದಾಯಗಳಲ್ಲಿ ವರಪೂಜೆ (ವರ ಮತ್ತು ವರನ ತಂದೆ ತಾಯಿಗಳನ್ನು ಹಾಗೂ ಬಂಧುಗಳನ್ನು ಗೌರವಾದರದಿಂದ ಬರಮಾಡಿಕೊಂಡು ವಿವಾಹಕ್ಕೆ ಅವಶ್ಯಕವಾದ ಮಂಗಳದ್ರವ್ಯ ಹಾಗೂ ವಿಶೇಷ ತಿಂಡಿತಿನಿಸುಗಳನ್ನು ಬಾಗಿನದ ರೂಪದಲ್ಲಿ ಅಲಂಕಾರಿಕ ವಸ್ತುಗಳೊಂದಿಗೆ ನೀಡುವುದು. ನಾಂದಿ (ವಧೂ-ವರರ ಪಿತೃದೇವತೆಗಳನ್ನು ಆಹ್ವಾನಿಸುವುದು; ಕಾಶೀಯಾತ್ರೆ; ಕಂಕಣಧಾರಣೆ; ಧಾರೆ ಎರೆಯುವುದು; ಹಾಲು-ತುಪ್ಪವನ್ನು ಧಾರೆ ಎರೆದು ಅಕ್ಷತೆ ಹಾಕುವುದು; ಗುರುಹಿರಿಯರ ಸಮ್ಮುಖದಲ್ಲಿ ಮಾಂಗಲ್ಯಧಾರಣೆ ಮಾಡಿಸುವುದು; ಲಾಜಾಹೋಮದ ಭಾಗವಾಗಿ ಬತ್ತದ ಅರಳು (ಲಾಜಾ) ಹಾಕುವುದು ಹಾಗೂ ಸಪ್ತಪದಿಯಲ್ಲಿ ವಧೂ-ವರರು ಅಗ್ನಿಸಾಕ್ಷಿಯಾಗಿ ಸಪ್ತ ಅಥವಾ

ಏಳು ಹೆಜ್ಜೆಗಳನ್ನು ಇಟ್ಟು ವಿವಾಹದ ರೀತಿನೀತಿಗಳನ್ನು ಪಠಿಸುವುದು, ಈ ಮೇಲಿನ ಆಚರಣೆಗಳು ಹಿಂದೂ ವಿವಾಹದ ಕರಾರುಗಳನ್ನು 'ಕನ್ಯಾದಾನ'ದ ಮೂಲಕ ಸಂಸ್ಕಾರಗೊಳಿಸುವ ಪವಿತ್ರತೆಯ ಸಂಕೇತವೆಂದು ಎಲ್ಲಾ ಸಮುದಾಯಗಳಲ್ಲೂ ಪರಿಗಣಿಸಲ್ಪಡುತ್ತದೆ. ಲಗ್ನದ ತರುವಾಯ ವಧೂ-ವರರು, ಒಟ್ಟಿಗೆ ಕುಳಿತು ಭೋಜನ ಸ್ವೀಕರಿಸುವುದಕ್ಕೆ 'ಭೂಮ'ವೆಂದು ಕರೆಯಲಾಗುತ್ತದೆ. ಅಂದು ಸಂಜೆಯ ವೇಳೆ ವಧೂವನ್ನು ಗಂಡಿನ ಮನೆಯವರು ಇರುವ ಬಿಡಾರಕ್ಕೆ ಕರೆದುಕೊಂಡು ಲಕ್ಷ್ಮೀಪೂಜೆಯನ್ನು ಮಾಡುವ ಮೂಲಕ ಮನೆತುಂಬಿಸಿಕೊಳ್ಳುವ ಪದ್ಧತಿಯು ಎಲ್ಲಾ ಸಮುದಾಯಗಳಲ್ಲಿ ಆಚರಣೆಯಲ್ಲಿದೆ. ಮಧ್ಯಾಹ್ನದ ನಾಗೋಲಿ ಹಾಗೂ ಸಂಜೆ ಮನೆ ತುಂಬಿಸಿಕೊಳ್ಳುವ ಆಚರಣೆಯೊಂದಿಗೆ ವಿವಾಹದ ಕಾರ್ಯಕ್ರಮವು ಸಮಾಪ್ತಿಗೊಳ್ಳುತ್ತದೆ.

ಲಿಂಗಾಯತರು 'ಪಂಚಕಲಶ', ಅಂದರೆ ಐದು ಪವಿತ್ರ ಬಿಂದಿಗೆಗಳ ಪ್ರತಿಷ್ಠಾಪನೆ, ಸುರಿಗೆ ಸುತ್ತುವುದು, ಅರಿಶಿನ ಧಾರಣೆ ಅಕ್ಷತೆ ಮುಂತಾದ ವಿಧಿಗಳನ್ನು ಆಚರಿಸುತ್ತಾರೆ. ವೀರಭದ್ರನನ್ನು ಕುಲದೇವರೆಂದು ಆರಾಧಿಸುವ ಕುಟುಂಬಗಳು ಮದುವೆಯ ಮೊದಲು ಗುಗ್ಗುಳ ಸೇವೆಯನ್ನೂ ಕೈಗೊಳ್ಳುವರು. ಕಳಶಗಳಲ್ಲಿ ಹಾಲು, ಲೋಭನಾ ಗುಗ್ಗುಳ ಅಥವಾ ಧೂಪ ಮುಂತಾದ ಪದಾರ್ಥಗಳನ್ನು ತುಂಬಿ ಮೆರವಣಿಗೆಯಲ್ಲಿ ಕೊಂಡೊಯ್ಯುವರು. ಇದು ವೀರಭದ್ರ ಮತ್ತು ಶಿವನಿಗೆ ಸಲ್ಲಿಸುವ ಪೂಜೆಯಾಗಿರುತ್ತದೆ. ಪುರವಂತರು ಈ ಸೇವೆಯನ್ನು ನೆರವೇರಿಸುವರು. ವಧೂವಿಗೆ ಮಂಗಳಸೂತ್ರ ಕಟ್ಟುವುದು, ಮತ್ತಿತರ ಕೆಲ ವಿವಾಹದ ವಿಧಿಗಳು ಬೇರೆ ಹಿಂದೂ ವಿಧಿಗಳನ್ನೇ ಹೋಲುತ್ತವೆ.

ಲಿಂಗಾಯತ, ಒಕ್ಕಲಿಗ ಮತ್ತಿತರ ಬಹುತೇಕ ಜಾತಿಗಳಲ್ಲಿ ಮದುವೆಯ ಮೊದಲು ಹಾಲುಗಂಬವನ್ನು ಕಲ್ಯಾಣಮಂಟಪದಲ್ಲಿ ನಿಲ್ಲಿಸುತ್ತಾರೆ. ಹಾಲುಗಂಬಕ್ಕೆ ಸಂಪ್ರದಾಯದಂತೆ ಕುಂಕುಮ ಕೇಸರಿ ಮತ್ತು ಸುಣ್ಣ ಬಳಿದು, ಹಸಿರೆಲೆಗಳಿಂದ ಅಲಂಕರಿಸಿ, ಚೌಕಾಕಾರವಾಗಿ ಅದರ ಸುತ್ತಲೂ ಕಳಶಗಳನ್ನಿಟ್ಟು, ನೂಲಿನಿಂದ ಆ ಕಳಶಗಳನ್ನು ದಿಗ್ಬಂದಿಸಿ ಪೂಜೆ ಸಲ್ಲಿಸುತ್ತಾರೆ. ನಂತರ, ವಧೂವಿನ ಕೊರಳಿಗೆ ವರನು ಮಾಂಗಲ್ಯವನ್ನು ಕಟ್ಟುತ್ತಾನೆ. ಅನೇಕ ಜಾತಿಗಳಲ್ಲಿ ತೆರ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಕೆಲವು ಜಾತಿಗಳಲ್ಲಿ ಮಾತ್ರ ಪುನರ್ವಿವಾಹ ಹಾಗೂ ವಿವಾಹ ವಿಚ್ಛೇದನೆಗಳಿಗೆ ಅನುಮತಿಯಿದೆ. ವಿಧವೆಯರು ಪುನರ್ವಿವಾಹವಾಗುವುದಕ್ಕೆ ಕೂಡಿಕೆ ಎನ್ನುತ್ತಾರೆ. ಸಾಮಾನ್ಯವಾಗಿ ಇದು ರಾತ್ರಿ ವೇಳೆಯಲ್ಲಿ ನಡೆಯುತ್ತದೆ ಹಾಗೂ ಇಂತಹ ವಿವಾಹಗಳಲ್ಲಿ ಮುತ್ತೈದೆಯರು ಭಾಗವಹಿಸುವುದಿಲ್ಲ. ಹಿಂದೂ ವಿವಾಹ ಕಾಯಿದೆಯನ್ವಯ ನ್ಯಾಯಾಲಯದ ಮೂಲಕ ವಿವಾಹ ವಿಚ್ಛೇದನವನ್ನು ಪಡೆಯಲು ಅವಕಾಶವಿದೆ.

ಕೆಲವು ಜಾತಿಗಳಲ್ಲಿ ವಿವಾಹಗಳ ಮೇಲೆ ನಿರ್ಬಂಧಗಳನ್ನು ಹೇರುವ ಮೂಲಕ ಹತ್ತಿರದ ಬಂಧುಗಳಲ್ಲಿಯೇ ಸಂಬಂಧ ಬೆಳೆಸುವುದು ರೂಢಿಯಲ್ಲಿದೆ. ಅಕ್ಕನ ಮಗಳು, ಸೋದರತ್ತೆಯ ಮಗಳನ್ನು ವಿವಾಹ ಮಾಡಿಕೊಳ್ಳುವ ಪದ್ಧತಿಯು ಜಾರಿಯಲ್ಲಿದೆ. ಕೆಲವು ಜಾತಿಗಳಲ್ಲಿ ಕಳ್ಳಿಗಿಡವನ್ನು ಸೋದರಮಾವನು ಕಡಿಯುವ ಸಂಪ್ರದಾಯವು ರೂಢಿಯಲ್ಲಿದೆ. ಆದಿ ಕರ್ನಾಟಕ ಜಾತಿಯಲ್ಲಿ ತಾಳಿಯನ್ನು ವಧೂವಿನ ಕೊರಳಿಗೆ ಸೋದರಮಾವನು ಕಟ್ಟುವುದು ರೂಢಿಯಲ್ಲಿದೆ. ಈಡಿಗರಲ್ಲಿ ಹಾಗೂ ತೆಲುಗು ಬಣಜಿಗರಲ್ಲಿ ಸೋದರ ಮಾವನೇ ಬಾಸಿಂಗವನ್ನು ವಧೂವಿನ ಹಣೆಯ ಮೇಲೆ ಕಟ್ಟುವುದು ರೂಢಿಯಲಿತ್ತು. ಬಹುತೇಕ ಸಮುದಾಯಗಳಲ್ಲಿ ಸೋದರಮಾವನೇ ವಧೂವನ್ನು ಎತ್ತಿಕೊಂಡು ಅಥವಾ ಕೈಹಿಡಿದು ಹಸೆಮಣೆಗೆ ಕರೆತರುವುದು ಸಂಪ್ರದಾಯವಾಗಿರುತ್ತದೆ. ಮಾದಿಗ ಸಮುದಾಯದಲ್ಲಿ ವಧೂ ಮತ್ತು ವರನನ್ನು ಆಯಾ ಸೋದರ ಮಾವಂದಿರು ಎತ್ತಿಕೊಂಡು ಹೊರಗೆ ಮೂರು ಪ್ರದಕ್ಷಿಣೆ ಹಾಕಿದ ನಂತರ ಎರಡು ಹೂಜಿಗಳಲ್ಲಿರುವ ನೀರನ್ನು ಕಾಲಿನಿಂದ ಒದ್ದು ಬೋರಲು ಹಾಕುವುದು ರೂಢಿಯಲ್ಲಿದೆ. ನಂತರ ಇಬ್ಬರನ್ನೂ ಒಳಗೆ ಕರೆತಂದು ಹಸೆಮಣೆಯ ಮೇಲೆ ಕೂರಿಸುತ್ತಾರೆ. ಇಬ್ಬರೂ ಸೋದರಮಾವಂದಿರಿಗೆ ಒಂದೊಂದು ಪೇಟ, ೧೨ ವೀಳ್ಯದೆಲೆ, ೧೨ ಬಟ್ಟಲು ಅಡಿಕೆ, ಒಂದು ಉಂಡೆಬೆಲ್ಲ ಹಾಗೂ ದಕ್ಷಿಣೆಯನ್ನು ನೀಡುತ್ತಾರೆ. ಈ ಪದ್ಧತಿಗೆ 'ಬಿಣಗ' ಅಥವಾ 'ಸೀರೆ ಬಿಡಿಸುವುದು' (ಬಾಂಧವ್ಯವನ್ನು ಸಾಂಕೇತಿಕವಾಗಿ ಬಿಡಿಸುವ ವಿಧಾನ) ಎಂದು ಕರೆಯಲಾಗುತ್ತದೆ. ವೈಶ್ಯ ಸಮುದಾಯದಲ್ಲಿ ಸೋದರಮಾವನನ್ನೇ ಅಳಿಯನನ್ನಾಗಿ ಕಡ್ಡಾಯವಾಗಿ ಮಾಡಿಕೊಳ್ಳುವ ಪದ್ಧತಿಯು ಇಂದಿಗೂ ಕ್ವಚಿತ್ತಾಗಿ ರೂಢಿಯಲ್ಲಿದೆ. ಆದರೆ ಆಧುನಿಕತೆ ಹಾಗೂ ಶೈಕ್ಷಣಿಕ ಪ್ರಗತಿಯ ಪರಿಣಾಮವಾಗಿ ವಿವಾಹದ ಪದ್ಧತಿಗಳೂ ಸಾಮಾಜಿಕವಾಗಿ ಬಹಳಷ್ಟು ಬದಲಾವಣೆ ಹೊಂದಿರುವುದನ್ನು ಗಮನಿಸಬಹುದಾಗಿದೆ.

ಜಿಲ್ಲೆಯಲ್ಲಿ ಕಂಡುಬರುವ ಕಾಡುಗೊಲ್ಲರಲ್ಲಿ ವಿಶೇಷವಾದ ವೈವಾಹಿಕ ಪದ್ಧತಿಗಳನ್ನು ಕಾಣಬಹುದಾಗಿದೆ. ಇವರಲ್ಲಿ

ವಿವಾಹವು ಊರಿನ ಮನೆಗಳಲ್ಲಿ ನಡೆಯದೇ ಯಾವುದೋ ಏಕಾಂತ ಉಪಗ್ರಾಮದಲ್ಲಿ ನಡೆಸಲಾಗುತ್ತದೆ. ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಸ್ನಾನವನ್ನು ಮಾಡಿಕೊಂಡು ವಿವಾಹದಲ್ಲಿ ಭಾಗವಹಿಸಬೇಕಾದುದು ನಿಯಮವಾಗಿರುತ್ತದೆ. ಬಹುತೇಕ ಜಾತಿಗಳಲ್ಲಿ ವೀಳೇದೆಲೆಯನ್ನು ಪರಸ್ಪರ ಬದಲಾಯಿಸಿಕೊಳ್ಳುವ ಮೂಲಕ ವಿವಾಹದ ಸಂಬಂಧಗಳನ್ನು ನಡೆಸಲಾಗುತ್ತದೆ. ಇತ್ತೀಚೆಗೆ ಸಾಮೂಹಿಕ ವಿವಾಹಗಳು ಜಿಲ್ಲೆಯಲ್ಲಿ ಜನಪ್ರಿಯವಾಗುತ್ತಿವೆ. ವಿವಾಹದ ವೆಚ್ಚಗಳನ್ನು ಮಿತಗೊಳಿಸುವ ಈ ಪದ್ಧತಿಯು ಬಡವರ ಪಾಲಿಗಂತೂ ವರವಾಗಿದೆ. ಅನೇಕ ಸಂಘ ಸಂಸ್ಥೆ ಹಾಗೂ ಧಾರ್ಮಿಕ ಮಠಗಳು ಈ ಧರ್ಮವಿವಾಹಗಳನ್ನು ವ್ಯವಸ್ಥಿತವಾಗಿ ನೆರವೇರಿಸುತ್ತಿದ್ದು, ಆ ಸಂದರ್ಭದಲ್ಲಿ ಮಧುಮಕ್ಕಳಿಗೆ ಹೊಸಬಟ್ಟೆ ಹಾಗೂ ಮಂಗಳಸೂತ್ರವನ್ನು ಉಚಿತವಾಗಿ ನೀಡುತ್ತವೆ.

ಅನ್ಯ ಜಾತಿಗಳ ನಡುವೆ ವೈವಾಹಿಕ ಸಂಬಂಧವಾಗುವುದನ್ನು ಅಂತರ್ಜಾತೀಯ ವಿವಾಹವೆನ್ನುತ್ತಾರೆ. ಕೆಲವೊಮ್ಮೆ ಭಿನ್ನ ಧರ್ಮೀಯರು ಪ್ರೀತಿಸಿ ವಿವಾಹವಾಗುವುದೂ ವಿರಳವಾಗಿ ರೂಢಿಯಲ್ಲಿದೆ, ಪರಿಶಿಷ್ಟ ಜಾತಿಯವರ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಯೋಜನೆಯಡಿ ಕರ್ನಾಟಕ ಸರ್ಕಾರವು ಈ ರೀತಿ ವಿವಾಹವಾದ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ೫೦,೦೦೦/- ರೂ.ಗಳ (೨೫,೦೦೦/- ರೂ.ಗಳ ರಾಷ್ಟ್ರೀಯ ಉಳಿತಾಯ ಪತ್ರ ಹಾಗೂ ರೂ.೨೫,೦೦೦ ನಗದು ರೂಪದಲ್ಲೂ) ಪ್ರೋತ್ಸಾಹ ಧನವನ್ನು ನೀಡುತ್ತದೆ.

ಮುಸಲ್ಮಾನರಲ್ಲಿ ಮದುವೆಯ ದಿನ ವರನಿಗೆ ವಿವಾಹದ ಬಟ್ಟೆಗಳನ್ನು ತೊಡಿಸಿ ರುಮಾಲಿನಿಂದ ಇಳಿಬಿಟ್ಟ 'ಸೇಹರಾ' ಅಥವಾ ಹೂಮಾಲೆಗಳಿಂದ ಮುಖವನ್ನು ಮುಚ್ಚುವಂತೆ ಮಾಡುವರು. ವಿವಾಹ ನೆರವೇರಿಸಲು ಖಾಜಿಯು ಗಂಡು ಮತ್ತು ಹೆಣ್ಣಿನ ಒಪ್ಪಿಗೆ (ಕಬೂಲ್) ಪಡೆಯುವನು. ಈ ಒಪ್ಪಂದವು ಹೆಣ್ಣಿನ ಕಡೆಯ ಒಬ್ಬ ವಕೀಲ ಹಾಗೂ ಗವಾ (ಸಾಕ್ಷಿ) ಮತ್ತು ಗಂಡಿನಕಡೆಯ ಒಬ್ಬ 'ಗವಾ' ರ ಸಮ್ಮುಖದಲ್ಲಿ ನಡೆದು ಅದಕ್ಕಾಗಿ ಇಟ್ಟಿರುವ ಪುಸ್ತಕದ ದಫ್ತರಿನಲ್ಲಿ ದಾಖಲಿಸುತ್ತಾರೆ. ಇದಕ್ಕೆ ಸಾಕ್ಷಿಗಳೂ ಸಹಿ ಮಾಡುತ್ತಾರೆ. ವರನು ವಧೂವಿಗೆ ವಿಶಿಷ್ಟ ಉಡುಗೊರೆ ಅಥವಾ 'ಮೆಹರ್' ಕೊಡುವನು. ಖಾಜಿಯು 'ನಿಖಾ' ಓದುತ್ತಾನೆ (ಪವಿತ್ರ ಕುರಾನ್ ಪಠಿಸುವುದು). ಹಿಂದೂಗಳು ಆಚರಿಸುವ ಸಂಪ್ರದಾಯದ ರೀತಿಯಲ್ಲೇ ಇವರೂ 'ಲಚ್ಚಾ' (ಕರಿಮಣಿ) ಉಪಯೋಗಿಸುತ್ತಾರೆ. ಆದರೆ, ಇದನ್ನು ವರನಿಗೆ ಬದಲಾಗಿ ವಿವಾಹಿತ ಹಿರಿಯ ಮಹಿಳೆಯೊಬ್ಬಳು ವಧೂವಿನ ಕುತ್ತಿಗೆಗೆ ಕಟ್ಟುವಳು. ಮುಸಲ್ಮಾನರ ಮದುವೆಯ ಮೂರು ಮುಖ್ಯ ಅಂಶಗಳೆಂದರೆ - ಗಂಡು-ಹೆಣ್ಣಿನ ಒಪ್ಪಿಗೆ, ಸಾಕ್ಷಿದಾರರ ರುಜುವಾತು ಮತ್ತು ವಿವಾಹದ ಬಗ್ಗೆ ಮಾಡುವ ನಿಶ್ಚಯಗಳು. ಮದುವೆಯಾದ ನಂತರ ಹೆಣ್ಣನ್ನು ಗಂಡಿನ ಮನೆಗೆ ಕರೆದುಕೊಂಡು ಹೋಗಿ 'ವಲೀಮ' (ಬೀಗರ ಔತಣ) ಆಚರಿಸುತ್ತಾರೆ. ಮದುವೆಯಾದ ಬಳಿಕ ಮೊದಲನೇ ಶುಕ್ರವಾರ ವರನು ವಧೂವಿನ ಮನೆಗೆ ಔತಣಕ್ಕೆ ಹೋಗುತ್ತಾನೆ. ಅನಂತರ ಮುಂದಿನ ಮೂರು ಶುಕ್ರವಾರ ಹತ್ತಿರದ ಸಂಬಂಧಿಕರಲ್ಲಿ ಔತಣಕ್ಕೆ ಆಮಂತ್ರಿತನಾಗುತ್ತಾನೆ. ಇದನ್ನು 'ಚಾರ್ ಜುಮ್ಮಾ' ಅಥವಾ 'ಜುಮ್ಮಾಗಿ' ಎನ್ನುತ್ತಾರೆ.

ಕ್ರೈಸ್ತರಲ್ಲಿ ಹೆಣ್ಣುಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಸೇರಿ ಮಾತುಕತೆ ನಡೆಸಿದ ನಂತರ ನಿಶ್ಚಿತಾರ್ಥವನ್ನು ಗಂಡಿನ ಕಡೆಯವರು ತಮ್ಮ ಪ್ಯಾರಿಷ್ ಚರ್ಚಿನಲ್ಲಿ ಏರ್ಪಡಿಸುತ್ತಾರೆ. ನಿಶ್ಚಿತಾರ್ಥದ ಸಂದರ್ಭದಲ್ಲಿ ಹೆಣ್ಣು-ಗಂಡು ಉಂಗುರ ಅಥವಾ ಯಾವುದಾದರೂ ಆಭರಣವನ್ನು ಬದಲಾಯಿಸಿಕೊಳ್ಳುತ್ತಾರೆ. ಮದುವೆಯ ದಿನ ನಿಶ್ಚಯವಾದ ಮೇಲೆ ಮುಂದಿನ ಮೂರು ಭಾನುವಾರಗಳಲ್ಲಿ ಮದುವೆಯ ವಿಷಯದಲ್ಲಿ ಮುಂದೆ ಒದಗಬಹುದಾದ ಸಮಸ್ಯೆಗಳನ್ನು ಬಗೆಹರಿಸಿದ ನಂತರ ಚರ್ಚಿನಲ್ಲಿ ಪ್ರಾರ್ಥನೆ ಬಳಿಕ ಪ್ರಕಟಿಸುತ್ತಾರೆ. ಇದನ್ನು 'ಬಾನ್' ಎನ್ನುತ್ತಾರೆ. ಮದುವೆಯ ದಿನ ಗಂಡಿನ ಕಡೆಯವರ ಪ್ಯಾರಿಷ್ ಚರ್ಚಿನಲ್ಲಿ ಮದುವೆಯನ್ನು ಪಾದ್ರಿಗಳು ವಿಧಿವತ್ತಾಗಿ ನೆರವೇರಿಸುತ್ತಾರೆ. ವಧೂ-ವರರು ಪರಸ್ಪರ ಉಂಗುರಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ತಾಳಿಕಟ್ಟುವ ಸಂಪ್ರದಾಯವೂ ಇವರಲ್ಲಿ ರೂಢಿಯಿದೆ. ಮದುವೆಯ ಪುಸ್ತಕದಲ್ಲಿ ಸಾಕ್ಷಿದಾರರೊಂದಿಗೆ ಸಹಿ ಮಾಡುತ್ತಾರೆ. ಕೊನೆಗೆ ಪುಷ್ಕಳ ಊಟ, ಸಂಗೀತ ಹಾಗೂ ನೃತ್ಯದೊಡನೆ ಸಮಾರಂಭವು ಮುಕ್ತಾಯಗೊಳ್ಳುತ್ತದೆ.

**ಶವಸಂಸ್ಕಾರ ಪದ್ಧತಿ:** ಹಿಂದೂಗಳಲ್ಲಿ ಆಯಾ ಜಾತಿಯ ಸಂಪ್ರದಾಯಕ್ಕೆ ಅನುಗುಣವಾಗಿ ಶವವನ್ನು ದಹನ ಮಾಡುವ ಅಥವಾ ಹೂಳುವ ಪದ್ಧತಿಗಳೆರಡೂ ರೂಢಿಯಲ್ಲಿವೆ. ವೈದಿಕ ಪದ್ಧತಿಯನ್ನಾಚರಿಸುವ ಜಾತಿಗಳಲ್ಲಿ ಸಾವು ಸಂಭವಿಸುವ ಸಮಯಕ್ಕೆ ವ್ಯಕ್ತಿಯ ಬಾಯಿಗೆ ಗಂಗಾಜಲವನ್ನು ಬಿಡುವುದು ರೂಢಿಯಲ್ಲಿದೆ. ಸಾವು ಸಂಭವಿಸಿದ

ಮನೆಯ ಮುಂಭಾಗದಲ್ಲಿ ಬೆಂಕಿ ಹಾಕುತ್ತಾರೆ. ಶವವನ್ನು ದರ್ಬೆ ಹುಲ್ಲಿನ ಮೇಲೆ ಮಲಗಿಸುತ್ತಾರೆ. ನಂತರ ಶವಕ್ಕೆ ಸ್ನಾನ ಮಾಡಿಸಿ, ಬಿಳಿ ಬಟ್ಟೆಯಿಂದ ಸುತ್ತಿ ಸ್ಮಶಾನಕ್ಕೆ ಕೊಂಡೊಯ್ಯುತ್ತಾರೆ. ಸಾಂಪ್ರದಾಯಿಕವಾಗಿ ಹೆಗಲ ಮೇಲೆ ಹೊತ್ತು ಶವವನ್ನು ಸಾಗಿಸುವುದು ರೂಢಿಯಲ್ಲಿದ್ದರೂ ನಗರ ಪ್ರದೇಶಗಳಲ್ಲಿ ಹಾಗೂ ಲಭ್ಯವಿರುವ ಇತರೆ ಸಣ್ಣಪುಟ್ಟ ಪಟ್ಟಣಗಳಲ್ಲಿ ಶವ ಸಾಗಿಸುವ ವಾಹನದಲ್ಲಿ ಸಾಗಿಸುವುದು ಸಾಮಾನ್ಯವಾಗಿ ರೂಢಿಯಲ್ಲಿದೆ. ಮೃತರ ಹಿರಿಯ ಮಗನು (ಕೆಲವರಲ್ಲಿ ತಾಯಿಗೆ ಕಿರಿಯ ಮಗ) ಶವಸಂಸ್ಕಾರ ವಿಧಿಗಳನ್ನು ನೆರವೇರಿಸುತ್ತಿದ್ದು, ಸೋದರರೂ ಭಾಗವಹಿಸುತ್ತಾರೆ. ಶವಸಂಸ್ಕಾರದ ತರುವಾಯ ಸ್ಮಶಾನಕ್ಕೆ ಹೋಗಿದ್ದವರು ಹಿಂದಿರುಗಿ ಬಂದು ಶವವನ್ನು ಮಲಗಿಸಿದ್ದ ಜಾಗದಲ್ಲಿ ಹಚ್ಚಿಡಲಾಗಿರುವ ದೀಪವನ್ನು ನೋಡುತ್ತಾರೆ. ಉಳಿದ ಹನ್ನೆರಡು ದಿನಗಳೂ ಆ ದೀಪ ಉರಿಯುತ್ತಿರುವಂತೆ ನೋಡಿಕೊಳ್ಳುತ್ತಾರೆ. ಮರಣದ ಮೂರನೆಯ ದಿನದಂದು ಶವಸಂಸ್ಕಾರ ಮಾಡಿದ ಅಸ್ಥಿ ಹಾಗೂ ಬೂದಿ ಮಡಕೆಯಲ್ಲಿ ಸಂಗ್ರಹಿಸಿಕೊಂಡು ನದಿಯಲ್ಲಿ (ಕಾವೇರಿಯ ಪಶ್ಚಿಮವಾಹಿನಿಯಲ್ಲಿ) ಸಂಚಯನ ಮಾಡುತ್ತಾರೆ. ಈ ಅಸ್ಥಿ ಸಂಚಯನ ಸಾಮಾನ್ಯವಾಗಿ ಎಲ್ಲಾ ಬ್ರಾಹ್ಮಣರು ಹಾಗೂ ವೈದಿಕ ಸಂಪ್ರದಾಯವನ್ನು ಅನುಸರಿಸುವವರು ನೆರವೇರಿಸುತ್ತಾರೆ. ಮೃತರ ಜ್ಞಾಪಕಾರ್ಥವಾಗಿ ವಿವಿಧ ಸಂಸ್ಕಾರಗಳನ್ನು ಮೂರು, ಐದು, ಏಳು ಅಥವಾ ಒಂಬತ್ತನೇ ದಿನಗಳಂದು ಆರಂಭಿಸುತ್ತಾರೆ. ಹತ್ತನೇ ದಿನ ಧರ್ಮೋದಕ, ೧೧ನೇಯ ದಿನ ಸಪಿಂಡೀಕರಣ ಹಾಗೂ ೧೨ನೇ ದಿನ ಶ್ರಾದ್ಧವನ್ನು ಆಚರಿಸಿ ೧೩ ಅಥವಾ ೧೪ನೇ ದಿನ ವೈಕುಂಠ ಅಥವಾ ಕೈಲಾಸ ಸಮಾರಾಧನೆಯನ್ನು ಬಂಧುಮಿತ್ರರೊಡನೆ ಸೇರಿ ಆಚರಿಸುವುದು ಸಂಪ್ರದಾಯವಾಗಿರುತ್ತದೆ. ಮುಂದೆ ಸತ್ತ ಒಂದು ವರ್ಷಕ್ಕೆ ವರ್ಷಾಬ್ಧಿಕ ಆಚರಿಸಿ ನಂತರ ಪ್ರತೀ ವರ್ಷವೂ ತಿಥಿಯನ್ನು ಆಚರಿಸುವುದು ರೂಢಿಯಲ್ಲಿದೆ. ಸತ್ತ ಮೊದಲ ವರ್ಷ ಪ್ರತೀ ತಿಂಗಳು ಮಿರ್ತಿಥಿ ಅಥವಾ ಮಾಸಿಕವನ್ನು ಆಚರಿಸಬೇಕಾದುದು ಸಂಪ್ರದಾಯವಾಗಿರುತ್ತದೆ. ನಂತರ ಆಶ್ವೀಜ ಮಾಸಕ್ಕೆ ಮೊದಲು ಪಿತೃಪಕ್ಷವನ್ನು ಆಚರಿಸಿ ಮಹಾಲಯ ಅಮಾವಾಸ್ಯೆಯಂದು ಸರ್ವಪಿತೃ ತರ್ಪಣವನ್ನು ನೀಡುತ್ತಾರೆ. ಸಾಮಾನ್ಯವಾಗಿ ಸನ್ಯಾಸಿಗಳ ಹಾಗೂ ಉಪನಯನವಾಗದ ಮಕ್ಕಳ ಶವಗಳನ್ನು ಹೂಳುವುದು ರೂಢಿಯಲ್ಲಿದೆ. ಹೂಳುವ ಪದ್ಧತಿಯಿರುವ ಹಿಂದೂಗಳಲ್ಲಿ ಆಯಾ ಜಾತಿಯ ಸಂಪ್ರದಾಯಕ್ಕನುಗುಣವಾಗಿ ಕೂರಿಸಿ ಅಥವಾ ದಕ್ಷಿಣ ದಿಕ್ಕಿಗೆ ಶವದ ತಲೆಯನ್ನು ಇಟ್ಟು ಮಲಗಿಸಿ ಹೂಳುತ್ತಾರೆ. ಕೆಲವರಲ್ಲಿ ಮೇಲೆ ಗೋರಿಯನ್ನು ಕಟ್ಟೆಯ ರೂಪದಲ್ಲಿ ಕಟ್ಟುವುದು ರೂಢಿಯಲ್ಲಿದೆ. ಮರಣದ ಮೂರನೇ ದಿನ ಹಾಲು ಬೆರೆಸಿ ತಯಾರಿಸಿದ ಆಹಾರವನ್ನು ಶವ ಹೂಳಿದ ಜಾಗದಲ್ಲಿಡುವುದು ರೂಢಿಯಲ್ಲಿದೆ. ಆಯಾ ಜಾತಿಯ ಸಂಪ್ರದಾಯಕ್ಕನುಗುಣವಾಗಿ ಸತ್ತ ಹನ್ನೊಂದು, ಹನ್ನೆರಡು, ಹದಿಮೂರು ಅಥವಾ ಹದಿನಾಲ್ಕನೇ ದಿನ ಬಂಧು-ಮಿತ್ರರನ್ನು ಕರೆದು ಪಾಯಸದ ಊಟ ಅಥವಾ ಸಿಹಿ ಭೋಜನವನ್ನು ನೀಡುತ್ತಾರೆ. ಮರಣ ಹೊಂದಿದ ಪೂರ್ವಜರಿಗೆ ಸರ್ವಪಿತೃ ಅಮಾವಾಸ್ಯೆಯಂದು 'ಎಡೆ' ಇಡುವ ಪದ್ಧತಿ ಎಲ್ಲಾ ಅವೈದಿಕ ಜಾತಿಗಳಲ್ಲಿ ರೂಢಿಯಲ್ಲಿದೆ.

ಲಿಂಗಾಯತರಲ್ಲಿ ಸತ್ತ ವ್ಯಕ್ತಿಯನ್ನು ಬಿಳಿವಸ್ತ್ರದ ಮೇಲೆ ಮಲಗಿಸಿ ಅಭಿಮಂತ್ರಿಸಿದ ಪಾದೋದಕವನ್ನು ಬಾಯಿಗೆ ಹಾಕಿ, ದೇಹಕ್ಕೆ ವಿಭೂತಿ ಸವರುತ್ತಾರೆ. ಶವದ ಕಾಲುಮಡಿಸಿ ಕೂರಿಸಿ, ಅಲಂಕರಿಸಿ ಶಿವನಾಮವನ್ನು ಭಜನೆ ಮಾಡುತ್ತಾ ರುದ್ರಭೂಮಿಗೆ ಕೊಂಡೊಯ್ಯುವರು. ಶವವನ್ನು ಕುಳಿತ ಭಂಗಿಯಲ್ಲಿ ಉತ್ತರಕ್ಕೆ ಮುಖಮಾಡಿ ಹೂಳುವುದು ರೂಢಿಯಲ್ಲಿದೆ. ವೀರಶೈವ ಜಂಗಮರೇ ಅಂತ್ಯಕ್ರಿಯೆಯ ವಿಧಿಗಳನ್ನು ನೆರವೇರಿಸಿಕೊಡುತ್ತಾರೆ. ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ರುದ್ರಭೂಮಿಗೆ ತೆರಳಿದ್ದವರು ಕೈಕಾಲು ತೊಳೆದು (ನೀರು ಮುಟ್ಟಿ), ಮೃತನ ಮನೆಗೆ ಬಂದು ದೀಪವನ್ನು ನೋಡಿ ಹಿಂದಿರುಗುತ್ತಾರೆ. ಹನ್ನೊಂದನೇಯ ದಿನ ಶಿವಗಣಾರಾಧನೆಯನ್ನು ಆಚರಿಸಿ ತಮ್ಮ ಬಂಧುಮಿತ್ರರಿಗೆ ಸಮಾರಾಧನೆ (ಭೋಜನ) ಏರ್ಪಡಿಸುವರು.

ಮುಸಲ್ಮಾನರಲ್ಲಿ ಸಾಯುವಾಗ 'ಕಲೀಮಾ' (ಕುರಾನ್ ಪಠಣ) ಪಠಿಸಿ ಬಾಯಿಗೆ ನೀರು ಹಾಕುತ್ತಾರೆ. ನಂತರ ಶವಕ್ಕೆ ಸ್ನಾನ ಮಾಡಿಸುತ್ತಾರೆ. ಇದಕ್ಕೆ 'ಗುಸುಲ್' ಎನ್ನುತ್ತಾರೆ. ಬಳಿಕ ಮೃತನು ಪುರುಷನಾದರೆ ಬಿಳಿಬಟ್ಟೆ, ಸ್ತ್ರೀಯರಾದರೆ ಕೆಂಪು ಬಟ್ಟೆ ತೊಡಿಸಿ ಬಟ್ಟೆಗೆ ಸುಗಂಧ ಕಣ್ಣಿಗೆ ಸುರಮ (ಕಾಡಿಗೆ) ಹಚ್ಚಿ, ವಧುವಿನಂತೆ ಅಲಂಕರಿಸುತ್ತಾರೆ. ಈ ಸಂದರ್ಭದಲ್ಲಿ ಹೊರಗಾದ ಹೆಂಗಸರು ಭಾಗವಹಿಸುವಂತಿಲ್ಲ. ಶವದ ಸುತ್ತ ಬಂಧುಮಿತ್ರರು ಕುಳಿತು ಕುರಾನ್ ಪಠಣ ಮಾಡುತ್ತಾರೆ. ಶವ ಕೊಂಡೊಯ್ಯುವಾಗ ಎದುರಿಗೆ ಬಂದ ಮುಸಲ್ಮಾನರು ಸಾಮಾನ್ಯವಾಗಿ ಅಂತಸ್ತಿನ ಭೇದವಿಲ್ಲದೆ ಸ್ವಲ್ಪ ದೂರ ಚಟ್ಟಕ್ಕೆ ಹೆಗಲನ್ನು ಕೊಡುತ್ತಾರೆ. ಶವಸಂಸ್ಕಾರಕ್ಕೆ ಮೊದಲು ನಮಾಜ್ ಮಾಡುವರು. ಇದನ್ನು ನಮಾಜ್ ಜನಾಜ ಎನ್ನುತ್ತಾರೆ. ತಲೆಯನ್ನು ಉತ್ತರ ದಿಕ್ಕಿಗೂ ಮುಖವನ್ನು ಮೆಕ್ಕಾ ಕಡೆಗೂ ಮಾಡಿ ಶವವನ್ನು ಹೂಳುತ್ತಾರೆ. ಶವಸಂಸ್ಕಾರದ ಬಳಿಕ ಅಲ್ಲಿದ್ದವರಿಗೆ ಉತ್ತತ್ತಿಯನ್ನು ಹಂಚುತ್ತಾರೆ. ಸ್ಮಶಾನದಿಂದ ೪೦ ಹೆಜ್ಜೆ ಬಂದು, ಗೋರಿಯ ಕಡೆಯ

ಮುಖಮಾಡಿಕೊಂಡು ಪ್ರಾರ್ಥನೆ ಮಾಡಿ ಮೃತರಿಗೆ ಅಂತಿಮ ಗೌರವ ಸಲ್ಲಿಸುತ್ತಾರೆ. ಮೂರನೆಯ ದಿನ ಮುಂಜಾನೆ ಬಂಧುಮಿತ್ರರು ಮಸೀದಿಗೆ ಹೋಗಿ ನಮಾಜ್ ಮಾಡಿ ನಂತರ 'ಫಾತೆಹಾಖಾನಿ' ಪ್ರಾರ್ಥನೆ ಸಲ್ಲಿಸಿ ಅಲ್ಲಿದ್ದವರಿಗೆ ಸಿಹಿ ಹಂಚಿ, ಸ್ಮಶಾನಕ್ಕೆ ಹೋಗಿ ಸತ್ತವರ ಆತ್ಮಕ್ಕೆ ಶಾಂತಿ ಕೋರುತ್ತಾರೆ. ಹಾಗೆಯೇ ಸತ್ತ ೧೦ನೆಯ, ೨೦ನೆಯ ಮತ್ತು ೪೦ನೆಯ ದಿನ ಪ್ರಾರ್ಥನೆ ಮಾಡುತ್ತಾರೆ. ಸತ್ತ ಮೊದಲನೇ ವರ್ಷದ ದಿನ ಬಂಧುಮಿತ್ರರು ಮತ್ತು ಬಡಬಗ್ಗರಿಗೆ ಅನ್ನಸಂತರ್ಪಣೆ ಮಾಡುತ್ತಾರೆ.

ಕ್ರೈಸ್ತರಲ್ಲಿ ವ್ಯಕ್ತಿ ಸಾಯುವ ಸಮಯಕ್ಕೆ ಪ್ಯಾರಿಷ್ ಚರ್ಚಿನ ಪಾದ್ರಿಯನ್ನು ಕರೆಸುತ್ತಾರೆ. ಪ್ರಾಟೆಸ್ಟೆಂಟರಲ್ಲಿ ಸಾಯುತ್ತಿರುವ ವ್ಯಕ್ತಿಗೆ ಚರ್ಚಿನ ಧರ್ಮಗುರುವು ಕರ್ತನ ಪವಿತ್ರ ಕಡೆಯ ಭೋಜನವೆಂಬ ಸಂಸ್ಕಾರವನ್ನು ಮಾಡುವರು. ರೋಮನ್ ಕ್ಯಾಥೋಲಿಕರಲ್ಲಿ ಪಾದ್ರಿಯು ಸಾಯುತ್ತಿರುವವರ ಶರೀರಕ್ಕೆ ಪವಿತ್ರ ಎಣ್ಣೆಯನ್ನು ಸವರುತ್ತಾರೆ. ಸತ್ತ ನಂತರ ದೇಹವನ್ನು ತೊಳೆದು ಅಲಂಕರಿಸಿ ಒಂದು ಎತ್ತರವಾದ ಪವಿತ್ರ ವೇದಿಕೆ (Altar) ಯ ಮೇಲೆ ಇಡುತ್ತಾರೆ. ಪಕ್ಕದಲ್ಲಿ ಮೇಣದ ಬತ್ತಿ ಉರಿಯುತ್ತಿರುತ್ತದೆ. ಮೇಲುಗಡೆ ಶಿಲುಬೆಯಿರುತ್ತದೆ. ಪವಿತ್ರವಾದ ನೀರನ್ನು ಕಾಲ ಬಳಿ ಇಟ್ಟಿರುತ್ತಾರೆ. ಬಂದವರೆಲ್ಲರೂ ಆ ಪವಿತ್ರ ನೀರನ್ನು ಶರೀರದ ಮೇಲೆ ಚಿಮುಕಿಸುತ್ತಾರೆ. ಅನುಕೂಲವಿರುವವರು ಕಪ್ಪು ಬಟ್ಟೆ ತೊಟ್ಟು ಶವ ಹೊರುವವರನ್ನು (ಪಾಲ್ ಬೇರರ್ಸ್) ಕರೆಸಿ ಶವವನ್ನು ಶವದಪೆಟ್ಟಿಗೆಯಲ್ಲಿರಿಸಿ ಹೊತ್ತು ಅಥವಾ ಕುದುರೆಗಾಡಿಯಲ್ಲಿಟ್ಟು ಪ್ಯಾರಿಷ್ ಚರ್ಚಿಗೆ ಕೊಂಡೊಯ್ಯುತ್ತಾರೆ. ಅಲ್ಲಿ ಪಾದ್ರಿಯು ಮೃತದೇಹದ ಮೇಲೆ ಪವಿತ್ರ ನೀರನ್ನು ಚಿಮುಕಿಸಿ ಆಶೀರ್ವದಿಸಿದ ನಂತರ ಶವವನ್ನು ಸ್ಮಶಾನದಲ್ಲಿ ಹೂಳುತ್ತಾರೆ. ರೋಮನ್ ಕ್ಯಾಥೋಲಿಕ್ ಜನಾಂಗದವರಲ್ಲಿ ಸತ್ತದಿನ, ಮೂರನೇ, ಏಳನೇ ಹಾಗೂ ೨೦ನೇ ದಿನ (ಪ್ರಾಟೆಸ್ಟೆಂಟರಲಿ ಹತ್ತನೆಯ ದಿನ) ಸತ್ತವರಿಗೆ ವಿಶೇಷ ಪ್ರಾರ್ಥನೆ ನಡೆಸುತ್ತಾರೆ.

**ಗೃಹಜೀವನ:** ತುಮಕೂರು ಜಿಲ್ಲೆಯಲ್ಲಿ ವಿವಿಧ ಶೈಲಿಯ ಮನೆಗಳು ಕಂಡುಬರುತ್ತವೆ. ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗಳ ಪ್ರಭಾವದಿಂದಾಗಿ ಇತ್ತೀಚೆಗೆ ನಗರಪ್ರದೇಶದ ಮನೆಗಳ ರಚನೆಯಲ್ಲಿ ಹಲವಾರು ಬದಲಾವಣೆಗಳು ಕಂಡುಬಂದಿವೆ. ತುಮಕೂರಿನ ಹಳೆಯ ಊರಿನ ಭಾಗಗಳಲ್ಲಿ ಇಂದಿಗೂ ಸುಮಾರು ೨೦೦ ರಿಂದ ೩೦೦ ವರ್ಷಗಳಷ್ಟು ಹಿಂದಿನ ನಾಡಹೆಂಚಿನ ಹಲವು ಮನೆಗಳನ್ನು ಕಾಣಬಹುದಾಗಿದೆ. ಇದಕ್ಕೆ ಉದಾಹರಣೆಯೆಂದರೇ, ಚಿಕ್ಕಪೇಟೆ ಮತ್ತು ಅಗ್ರಹಾರಗಳಲ್ಲಿರುವ ಹಲವು ಮನೆಗಳೆನ್ನಬಹುದು. ಗ್ರಾಮೀಣ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸುವಾಗ ಯೋಜನೆ ಅಥವಾ ಶುಚಿತ್ವಕ್ಕೆ ಮಹತ್ವ ನೀಡಿರುವುದು ಬಹಳ ವಿರಳವೆನ್ನಬಹುದು. ಹಿಂದಿನ ಕಾಲದಲ್ಲಿ ನಿರ್ಮಿತವಾದ ಮನೆಗಳಿಗೆ ಬಹುತೇಕ ಮಣ್ಣಿನ ಗೋಡೆಗಳು ಹೊಂದಿಸಿರುವುದು ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಅವು ಮುಂಭಾಗದಲ್ಲಿ ತೆರೆದ ಜಗಲಿ ಒಳಗೆ ನಡುಮನೆ, ಅದರ ಪಕ್ಕದಲ್ಲಿ ಅನುಕೂಲಕ್ಕೆ ತಕ್ಕಂತೆ ಒಂದೆರಡು ಕೊಠಡಿಗಳು, ಮನೆಯ ಹಿಂಭಾಗದಲ್ಲಿ ಬಚ್ಚಲು ಮನೆ ಹಾಗೂ ಒಳ ಹಾಗೂ ಹೊರ ಹಿತ್ತಲುಗಳನ್ನು ಮತ್ತು ಹೊರಭಾಗದ ಪಕ್ಕದಲ್ಲಿ ದನಗಳ ವಪ್ಪಾರನ್ನು ಯೋಜಿಸಲಾಗಿರುತ್ತದೆ. ಬ್ರಾಹ್ಮಣರ ಮನೆಯ ಮುಂಭಾಗದ ಇಕ್ಕೆಲಗಳಲ್ಲಿ ಜಗಲಿ ಹಾಗೂ ಒಂದು ಕಡೆ ತುಳಸಿ ಬೃಂದಾವನವನ್ನು ನಿರ್ಮಿಸಿರುತ್ತಾರೆ. ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲಿ ತೆರೆದ ಬಾವಿಗಳು ಇದ್ದೇ ಇರುತ್ತಿದ್ದವು. ಅಗ್ನಿ ಮೂಲೆಯಲ್ಲಿ ಅಡುಗೆ ಮನೆ ಇದ್ದು ಒಂದು ಭಾಗದಲ್ಲಿ ಎತ್ತರವಾದ ಕಟ್ಟೆಯ ಮೇಲೆ ದೇವರ ಪೂಜಾಕಟ್ಟೆ ಇರುತ್ತದೆ. ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ದೇವರ ಮನೆಯನ್ನು ಪ್ರತ್ಯೇಕವಾಗಿ ನಿರ್ಮಿಸುತ್ತಿರಲಿಲ್ಲ. ನಗರಪ್ರದೇಶಗಳಲ್ಲಿ ತೊಟ್ಟಿಮನೆಗಳು ಕಡಿಮೆ, ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಸಾಮಾನ್ಯವಾಗಿ ಮನೆಗಳಲ್ಲಿ ಬತ್ತ ಮೊದಲಾದ ಧಾನ್ಯಗಳನ್ನು ಶೇಖರಿಸಿಡಲು ವಾಡೆ ಅಥವಾ ಕಣಜ ಅಥವಾ ಈಚಲು ಚಾಪೆ ಇಲ್ಲವೇ ಬಿದರಿನ ಪೆಟ್ಟಿಗಳನ್ನು ಮಾಡಿರುತ್ತಾರೆ. ಹಿಂದಿನ ಕಾಲದ ಮನೆಗಳು ಸಾಮಾನ್ಯವಾಗಿ ಸಗಣಿ ಅಥವಾ ಗಾರೆ ನೆಲಗಳನ್ನು ಹೊಂದಿರುತ್ತಿದ್ದವು. ಶ್ರೀಮಂತರ ಮನೆಗಳಲ್ಲಿ ನೆಲಕ್ಕೆ ಕಡಪಾಕಲ್ಲುಗಳನ್ನು ಹಾಸಲಾಗಿರುತ್ತಿತ್ತು. ಗೋಡೆಗಳ ರಚನೆಗೆ ಮಣ್ಣು, ಕಲ್ಲು, ಗಾರೆ ಬಳಸಿ, ಮೇಲೆ ಹೊರಮಣ್ಣು ಅಥವಾ ಮಣ್ಣುಗಾಜು ಬೆರೆಸಿ ಮಾಡಲಾಗುತ್ತಿದ್ದು, ಈಚೆಗೆ ಸುಟ್ಟ ಇಟ್ಟಿಗೆ, ಸಿಮೆಂಟ್ ಬಳಸುವುದು ರೂಢಿಗೆ ಬಂದಿದೆ. ಪ್ರಾಚೀನ ಕಾಲದಲ್ಲಿ ಮನೆಗಳಲ್ಲಿ ಮೇಲ್ಛಾವಣಿಗೆ ಭೂತಾಳೆ ಸೊಪ್ಪು, ಒಣಹುಲ್ಲು ಹಾಗೂ ನಾಡಹೆಂಚುಗಳನ್ನು ಬಳಸುತ್ತಿದ್ದು, ಇತ್ತೀಚೆಗೆ ಮಂಗಳೂರು ಹೆಂಚನ್ನು ಬಳಸುವುದೂ ಸಾಮಾನ್ಯವಾಗಿದೆ. ಮೇಲ್ಛಾವಣಿಗೆ ತಾರಸಿ (ಆರ್.ಸಿ.ಸಿ) ಹಾಕಿದ ಮನೆಗಳನ್ನು ಕಟ್ಟಿರುವುದೇ ಅಲ್ಲದೇ, ನೆಲಕ್ಕೆ ವಿವಿಧ ಬಗೆಯ ಮೊಸಾಯಿಕ್, ಗ್ರಾನೈಟ್ ಹಾಗೂ ಅಮೃತಶಿಲೆಯಬಿಲ್ಲೆಗಳನ್ನು ಉಪಯೋಗಿಸುತ್ತಾರೆ. ಇತ್ತೀಚೆಗೆ ಸೆರಾಮಿಕ್ ಬಿಲ್ಲೆಗಳನ್ನೂ ಅಳವಡಿಸುವುದು ಹೊಸ

ಪದ್ಧತಿಯಾಗಿದ್ದು, ಇದಕ್ಕೆ ಆಧುನಿಕವಾಗಿ 'ವಿಟ್ರಿಫೈಡ್' ನೆಲವೆಂದೂ ಕರೆಯಲಾಗುತ್ತದೆ. ಹೊನ್ನೆ, ತೇಗ, ಹಲಸು, ಮತ್ತೀ ಮರಗಳನ್ನು ಕಿಟಕಿ ಮತ್ತು ಬಾಗಿಲುಗಳಿಗೆ ಉಪಯೋಗಿಸುತ್ತಾರೆ. ಆದರೂ ಜಿಲ್ಲೆಯ ಅನೇಕ ಕಡೆಗಳಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಸುಣ್ಣಕಲ್ಲಿನ ಗೋಡೆಯ ಜೋಪಡಿ ಮನೆಗಳು ಇಂದಿಗೂ ವಿರಳವಾಗಿ ಕಂಡುಬರುತ್ತವೆ.

ಮುಸಲ್ಮಾನರ ಮನೆಯ ಹೊರಗೋಡೆಗಳು ಎತ್ತರವಾಗಿರುತ್ತವೆ. ಇವರ ಮಹಿಳೆಯರು ಆಚರಿಸುವ ಪರದಾ ಪದ್ಧತಿಯೇ ಇದಕ್ಕೆ ಮುಖ್ಯ ಕಾರಣವಾಗಿರಬಹುದು. ಉಳಿದಂತೆ ಮನೆಯಲ್ಲಿ ಹಜಾರ, ಕೊಠಡಿ ಹಾಗೂ ಹೊರ ವರಾಂಡಗಳು ಇರುತ್ತವೆ. ಕ್ರೈಸ್ತರ ಗೃಹಗಳಲ್ಲಿ ಮರದ ಬಾಗಿಲುವಾಡಗಳು, ಬಾಗಿಲು ಹಾಗೂ ಕಿಟಕಿಗಳ ಹೊರಭಾಗದಲ್ಲಿ ಮರದ ಕಮಾನುಗಳ ರಚನೆಯನ್ನು ಹೊಂದಿರುತ್ತವೆ. ಮನೆಯಲ್ಲಿ ಮರ ಅಥವಾ ಸಿಮೆಂಟಿನಿಂದ ಕೃತಕ ಜಗಲಿ ನಿರ್ಮಿಸಿ ಅದರ ಮೇಲೆ ಮೇರಿ ಮತ್ತು ಏಸುವಿನ ಮೂರ್ತಿ ಅಥವಾ ಶಿಲುಬೆಯನ್ನು ಇಡಲಾಗುತ್ತದೆ. ಇವರು ಪ್ರಾರ್ಥನೆಯನ್ನು ಅದೇ ಜಾಗದಲ್ಲಿ ಮಾಡುತ್ತಾರೆ.

ವಿದ್ಯುಚ್ಛಕ್ತಿ ಹಾಗೂ ಶೌಚಾಲಯ ಸೌಲಭ್ಯಗಳು ಮನೆಗಳಲ್ಲಿ ದಿನೇದಿನೇ ಹೆಚ್ಚುತ್ತಾ ಬಂದಿದ್ದು, ಗ್ರಾಮಾಂತರ ಪ್ರದೇಶಗಳಲ್ಲೂ ಹೆಚ್ಚಾಗುತ್ತಿದ್ದು, ಗಣನೀಯ ಸುಧಾರಣೆಯಾಗಿದೆ.

**ಆಹಾರ ಅಭ್ಯಾಸ :** ಜಿಲ್ಲೆಯ ಜನರ ಆಹಾರಾಭ್ಯಾಸಗಳನ್ನು ಪ್ರಮುಖವಾಗಿ ಶಾಖಾಹಾರಿ ಹಾಗೂ ಮಾಂಸಾಹಾರಿ ಎಂದು ವಿಂಗಡಿಸಬಹುದು. ಬ್ರಾಹ್ಮಣ, ಲಿಂಗಾಯತ, ವೈಶ್ಯ, ಬೌದ್ಧ, ಜೈನ ಮುಂತಾದ ಮತೀಯರು ಸಸ್ಯಾಹಾ-ರಿಗಳಾದರೆ, ಇತರೆ ಜಾತಿಯವರು ಮಾಂಸಾಹಾರಿಗಳು. ಮಾಂಸಾಹಾರಿಗಳಲ್ಲಿ ಕೆಲವರು ಸೋಮವಾರ ಮತ್ತು ಶನಿವಾರದ ದಿನಗಳಲ್ಲಿ ಹಾಗೂ ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ಮಾಂಸಾಹಾರವನ್ನು ಸೇವಿಸುವುದಿಲ್ಲ. ಈ ಜಿಲ್ಲೆಯಲ್ಲಿ ರಾಗಿ ಮತ್ತು ಅಕ್ಕಿ ಪ್ರಧಾನ ಆಹಾರ ಧಾನ್ಯಗಳಾಗಿದ್ದು, ಈಚೆಗೆ ಗೋಧಿ ಹಾಗೂ ಕೆಂಪು ಜೋಳದ ಬಳಕೆಯನ್ನೂ ಕಾಣಬಹುದಾಗಿದೆ. ಮೊದಲಲ್ಲಿ ರೈತಾಪಿ ಮನೆಗಳಲ್ಲಿ ಬೆಳಗಿನ ವೇಳೆ ತಂಗಳೇ ಉಪಹಾರವಾಗಿತು. ಹಲವರು ಉಪ್ಪಿಟ್ಟು, ಅಕ್ಕಿ ಇಡ್ಲಿ, ದೋಸೆ, ರೊಟ್ಟಿ, ರಾಗಿಹುರಿಟ್ಟು, ಮೊದಲಾದ ತಿಂಡಿಗಳನ್ನು ಬಳಸುವುದು ರೂಢಿಯಲ್ಲಿದ್ದು, ಈಚೆಗೆ ಚಪಾತಿ, ಪೂರಿಗಳನ್ನು ಮಾಡುವುದೂ ಉಂಟು. ಮಧ್ಯಾಹ್ನ ಹಾಗೂ ರಾತ್ರಿಯ ವೇಳೆಯಲ್ಲಿ ಊಟಕ್ಕೆ ಸಾಮಾನ್ಯವಾಗಿ ರಾಗಿ ಮುದ್ದೆ, ಅನ್ನದ ಜೊತೆಗೆ ಹುರುಳಿಕಟ್ಟು, ಬೇಳೆಸಾರು ಅಥವಾ ಸಾಂಬಾರು (ತರಕಾರಿ ಹಾಕಿದ ಹುಳಿ), ಕೂಟು, ಮೇಲೋಗರ, ಮೆಣಸಿನಸಾರು, ಮೊಸರಿನ ಹುಳಿ (ಮಜ್ಜಿಗೆ ಹುಳಿ), ಗೊಜ್ಜು, ಪಲ್ಯ, ಮೊಸರು, ಮಜ್ಜಿಗೆ ಮುಂತಾದವನ್ನು ಬಳಸುತ್ತಾರೆ. ಊಟದ ಜೊತೆಗೆ ಹಪ್ಪಳ, ಸಂಡಿಗೆ, ವಿವಿಧ ಬಗೆಯ ಉಪ್ಪಿನಕಾಯಿ ಮುಂತಾದವುಗಳನ್ನೂ ಸಾಂದರ್ಭಿಕವಾಗಿ ಬಳಸುತ್ತಾರೆ. ಮೊದಲಿಗೆ ಅವರೆ, ಅಲಸಂದೆ, ಹುರುಳಿ, ಹೆಸರು, ತೊಗರಿಬೇಳೆ, ಕಡಲೆ, ಉದ್ದಿನಬೇಳೆ ಹಾಗೂ ಇತರೆ ಕಾಳುಗಳನ್ನು ಉಪಯೋಗಿಸಲಾಗುತ್ತಿತ್ತು. ತರಕಾರಿಗಳ ಪೈಕಿ ಬದನೆಕಾಯಿ, ಕುಂಬಳಕಾಯಿ, ಹಲಸಿನಕಾಯಿ, ಅವರೆಕಾಯಿ, ಗೋ-ರಿಕಾಯಿ, ಹುರುಳಿಕಾಯಿ, ಬೆಂಡೆಕಾಯಿ, ಹಾಗಲಕಾಯಿ, ಪಡವಲಕಾಯಿ, ಸೌತೇಕಾಯಿ, ಮೂಲಂಗಿ ಮೊದಲಾದವುಗಳು ಹಾಗೂ ಮೆಂತ್ಯ ಸಬ್ಬಸಿಗೆ ಮುಂತಾದ ಸೊಪ್ಪುಗಳು ಬಳಕೆಯಲ್ಲಿವೆ. ಇತ್ತೀಚೆಗೆ ಟಮೋಟೋ, ಕ್ಯಾರೆಟ್, ಬೀಟ್‌ರೂಟ್, ಆಲೂಗಡ್ಡೆ, ದಪ್ಪ ಮೆಣಸಿನಕಾಯಿ, ವಿವಿಧ ಬಗೆಯ ಕೋಸು, ತೊಂಡೆಕಾಯಿ, ನುಗ್ಗೆಕಾಯಿ, ಹಾಗಲಕಾಯಿ ಮೊದಲಾದ ತರಕಾರಿಗಳನ್ನು ಬಳಸುತ್ತಾರೆ. ಸಾಮಾನ್ಯವಾಗಿ ಕೆಲವು ಬ್ರಾಹ್ಮಣ ಸಂಪ್ರದಾಯಸ್ಥರನ್ನು ಬಿಟ್ಟು ಉಳಿದವರೆಲ್ಲಾ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಬಳಸುತ್ತಾರೆ.

ಹಿಂದೆ ವೈದಿಕ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುವವರು ಊಟಕ್ಕೆ ಬಾಳೆಎಲೆ ಅಥವಾ ಮುತ್ತುಗದ ಎಲೆ ಬಳಸುತ್ತಿದ್ದರು. ಇತರರು ಮೊದಲಿಗೆ ಕಂಚು ಅಥವಾ ಹಿತ್ತಾಳೆ, ಅಲ್ಯುಮಿನಿಯಂ ತಟ್ಟೆಗಳನ್ನು ಬಳಸುತ್ತಿದ್ದು, ಈಚೆಗೆ ಎಲ್ಲಾ ಮನೆಗಳಲ್ಲೂ ಸ್ಟೀಲ್ ತಟ್ಟೆಗಳನ್ನು ಬಳಸುವುದು ಸಾಮಾನ್ಯವಾಗಿದೆ. ಇತ್ತೀಚೆಗೆ ಹೋಟೆಲ್, ಬೇಕರಿ ಮತ್ತು ತಂಪು ಪಾನೀಯದ ಅಂಗಡಿಗಳು ನಗರ ಹಾಗೂ ಪಟ್ಟಣಗಳಲ್ಲದೆ ದೊಡ್ಡ ಗ್ರಾಮಗಳಲ್ಲೂ ಆರಂಭವಾಗಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಳೇ ಮೈಸೂರಿನ ಭಾಗಗಳಲ್ಲಿ ಮಾತ್ರ ಪೂರ್ಣಯ್ಯನ ಛತ್ರ, ತೋಟದಪ್ಪನ ಛತ್ರಗಳು ಕಂಡುಬರುತ್ತಿದ್ದು, ಯಾತ್ರಿಕರಿಗೆ, ಬಡಬಗ್ಗರಿಗೆ ಹಾಗೂ ಮಧ್ಯಮ ವರ್ಗದವರಿಗೆ ಊಟದ ಕೇಂದ್ರಗಳಾಗಿದ್ದವು. ತುಮಕೂರಿನ ಚಿಕ್ಕಪೇಟೆಯಲ್ಲಿ ಪೂರ್ಣಯ್ಯನ ಛತ್ರವು ಸ್ವಾತಂತ್ರ್ಯ ನಂತರವು ಕ್ರಿಯಾಶೀಲವಾಗಿದ್ದ ವಿಷಯವು ಉಲ್ಲೇಖನೀಯ.

ಮುಸಲ್ಮಾನರು ಮಾಂಸಾಹಾರಿಗಳಾಗಿದ್ದು, ಸಂಪ್ರದಾಯದಂತೆ ಕಡಿದ (ಹಲಾಲ್) ಮಾಂಸವನ್ನು ಮಾತ್ರ ಬಳಸುತ್ತಾರೆ. ಆದರೆ, ಇದು ಮೀನಿಗೆ ಅನ್ವಯಿಸುವುದಿಲ್ಲ. ಹಬ್ಬ, ಮದುವೆ, ಮುಂತಾದ ಸಂದರ್ಭಗಳಲ್ಲಿ ಇವರು ಬಿರಿಯಾನಿ, ಪಲಾವ್, ಕೋಳಿ ಖೈಮಾ, ಶಾವಿಗೆ ಪಾಯಸ, ಚೊಂಗ್ಯಾ (ಒಂದು ರೀತಿಯ ಕರಿಕಡುಬು) ಮತ್ತಿತರ ಸಿಹಿ ಪದಾರ್ಥಗಳನ್ನು ತಯಾರಿಸುತ್ತಾರೆ.

ಕ್ರೈಸ್ತರು ಮಾಂಸಾಹಾರಿಗಳು. ಇವರು ತಮ್ಮ ಹಬ್ಬ, ಮದುವೆ ಮುಂತಾದ ಸಂದರ್ಭಗಳಲ್ಲಿ ಬಿರಿಯಾನಿ, ಪಲಾವ್, ಕೇಕ್ ವಿವಿಧ ಬಗೆಯ ಸಿಹಿತಿಂಡಿ ಮೊದಲಾದವನ್ನು ತಯಾರಿಸುತ್ತಾರೆ.

**ಉಡುಪು:**ಉಡುಪುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ. ಸಿ. ಹಯವದನರಾವ್ ತಮ್ಮ ಮೈಸೂರು ಗ್ಯಾಸೆಟಿಯರ್ ಸಂಪುಟದಲ್ಲಿ ದಾಖಲಿಸಿರುವಂತೆ 'ಉಡುಪುಗಳು ಆಯಾ ಜಾತಿಗನುಗುಣವಾಗಿ ರೂಢಿಯಲ್ಲಿರುತ್ತವೆ'. ಆದರೆ, ಇದು ಕೇವಲ ೪೦ ವರ್ಷದ ಹಿಂದೆ ಅನ್ವಯಿಸುತ್ತಿದ್ದು, ಈಗೀಗ ಪಾಶ್ಚಿಮಾತ್ಯ ಪ್ರಭಾವದಿಂದ ಉಡುಪುಗಳು ಸಾಕಷ್ಟು ತೀವ್ರ ಬದಲಾವಣೆಗೆ ಒಳಗಾಗಿವೆ. ಈ ಜಿಲ್ಲೆಯ ಸಾಂಪ್ರದಾಯಿಕ ಹಿಂದೂ ಗಂಡಸರಲ್ಲಿ ರೂಢಿಯಲ್ಲಿರುವ ಉಡುಪುಗಳೆಂದರೆ ಧೋತರ ಅಥವಾ ಪಂಚೆಯನ್ನು ಕಚ್ಚೆ ಹಾಕಿ ಇಲ್ಲವೇ ಸುತ್ತು ಹಾಕಿ ಉಡುವುದು; ತುಂಬು ತೋಳಿನ ಅಂಗಿ ಹಾಗೂ ಹೆಗಲ ಮೇಲೆ ಒಂದು ಚೌಕ. ವೈದಿಕ ಧರ್ಮವನ್ನು ಶಿಸ್ತಾಗಿ ಪರಿಪಾಲಿಸುವವರು ಕಚ್ಚೆ ಪಂಚೆಯನ್ನುಟ್ಟು, ಶಲ್ಯ ಅಥವಾ ಶಾಲನ್ನು ಹೊದೆಯುತ್ತಾರೆ. ಈ ಮೊದಲು ಕಚೇರಿಗಳಲ್ಲಿ ಕೆಲಸ ಮಾಡುವವರು ಹಾಗೂ ಮನೆಯ ಹಿರಿಯರು (ಯಜಮಾನರು) ಕೋಟು, ಟೋಪಿ ಅಥವಾ ಮೈಸೂರಿನ ಸಂಪ್ರದಾಯ ಪೇಟ ಅಥವಾ ರುಮಾಲನ್ನು ಧರಿಸುತ್ತಿದ್ದರು. ಇತ್ತೀಚೆಗೆ ಆಧುನಿಕತೆಯ ಪ್ರಭಾವದಿಂದಾಗಿ ಈ ರೀತಿಯ ಉಡುಪುಗಳು ವಿರಳವಾಗಿ ಕಂಡುಬರುತ್ತವೆ. ಹೊಲ-ಗದ್ದೆಗಳಲ್ಲಿ ಕೆಲಸ ಮಾಡುವವರು ಪಟಾಪಟ್ಟಿ ಚಡ್ಡಿ ಮತ್ತು ಮಂದವಾದ ಬಟ್ಟೆಯಿಂದ ಹೊಲಿಸಿದ ಅರ್ಧ ತೋಳಿನ ಅಂಗಿಯನ್ನು ಧರಿಸುತ್ತಾರೆ. ಗಂಡುಮಕ್ಕಳು ಸಾಮಾನ್ಯವಾಗಿ ನಿಕ್ಕರ್ (ಚಡ್ಡಿ) ಅಥವಾ ಪೈಜಾಮ ಇಲ್ಲವೇ ಲುಂಗಿ ಮತ್ತು ಬುಷ್ ಷರ್ಟ್ ಧರಿಸುವುದು ಕಾಣಸಿಗುತ್ತದೆ. ಮಹಿಳೆಯರ ಪ್ರಧಾನ ಉಡುಪೆಂದರೆ ಸೀರೆ, ರವಿಕೆ ಅಥವಾ ಕುಪ್ಪಸ. ಮೊದಲಿಗೆ ಒಂಬತ್ತು ಗಜ ಉದ್ದದ ಹತ್ತಿ ನೂಲಿನ ಸೀರೆಯನ್ನು ಕೆಲವರು ಒಳ ಕಚ್ಚೆ ಹಾಕಿ ಹಾಗೂ ಕೆಲವರು ಮೇಲ್ಕಚ್ಚೆ ಹಾಕಿ ಉಡುವುದು ಸಾಮಾನ್ಯ ಶೈಲಿಯಾಗಿತ್ತು. ಈಚೆಗೆ ಬಹುತೇಕ ಮಹಿಳೆಯರು ಆರು ಗಜ ಉದ್ದದ ನೂಲಿನ ಸೀರೆಯನ್ನು ಒಳಲಂಗದ (ಪೆಟಿಕೋಟ್) ಮೇಲೆ ಸುತ್ತು ಹಾಕಿ ಉಡುವುದು ರೂಢಿಯಲ್ಲಿದೆ. ಗ್ರಾಮೀಣ ಹೆಂಗಸರು ಐದು ಅಥವಾ ಆರು ಗಜದ ವಿವಿಧ ಬಗೆಯ ಹಸಿರು, ಕಂಚಿಸೀರೆ, ಕೆಂಪಂಚಿನ ಸೀರೆ, ಕಪ್ಪಂಚಿನ ಸೀರೆ ಉಡುವುದು ಇತ್ತೀಚಿನವರೆಗೂ ರೂಢಿಯಲ್ಲಿತ್ತು. ಹೆಣ್ಣುಮಕ್ಕಳ ಸಾಮಾನ್ಯ ಉಡುಪೆಂದರೆ ಲಂಗದೊಂದಿಗೆ ದಾವಣಿ ಅಥವಾ ಕುಪ್ಪಸ, ಈಚೆಗೆ ಸ್ಕರ್ಟ್, ಚೂಡಿದಾರ್, ಸಲ್ವಾರ್-ಕಮೀಜ್ ಮೊದಲಾದವುಗಳನ್ನು ಧರಿಸುತ್ತಾರೆ. ಮದುವೆ ಮುಂಜಿ ಮೊದಲಾದ ಶುಭ ಸಮಾರಂಭಗಳಲ್ಲಿ ರೇಷ್ಮೆ ಸೀರೆಯನ್ನುಡುತ್ತಾರೆ. ನಾಗರೀಕತೆಯ ಪ್ರಭಾವದಿಂದ ಹೆಂಗಸರಲ್ಲಿ, ವಾಯಿಲ್, ನೈಲಾನ್, ಪಾಲಿಸ್ಟರ್ ಜಾರ್ಜೆಟ್, ಟೆರಿಲೀನ್ ಹಾಗೂ ಶಿಫಾನ್, ಗಂಡಸರಲ್ಲಿ ಟೆರಿಕಾಟ್, ಟೆರಿಉಲ್ ಮೊದಲಾದ ನೂಲುಗಳಿಂದ ತಯಾರಿಸಿದ ಉಡುಪುಗಳನ್ನು ಧರಿಸುವುದು ಕಂಡುಬರುವುದಲ್ಲದೆ ಶೈಲಿಯಲ್ಲಿಯೂ ಬಹಳಷ್ಟು ಬದಲಾವಣೆಗಳನ್ನು ಕಾಣಬಹುದಾಗಿದೆ.

ಮುಸಲ್ಮಾನರಲ್ಲಿ ಗಂಡಸರು ಪೈಜಾಮ, ಷರ್ಟ್ ಅಥವಾ ಉದ್ದನೆಯ ನಿಲುವಂಗಿ (ಜುಬ್ಬ ಅಥವಾ ಶೇರವಾನಿ) ಹಾಗೂ ಟೋಪಿಯನ್ನು ಧರಿಸುವುದು ಸಾಂಪ್ರದಾಯಿಕ ಉಡುಪಾಗಿದೆ. ಸ್ತ್ರೀಯರು ಉದ್ದವಾದ ಹಾಗೂ ಸಡಿಲವಾದ ಪೈಜಾಮ ಅಥವಾ ಸೀರೆ ಮತ್ತು ಕುಪ್ಪಸಗಳನ್ನು ಧರಿಸಿ ಹೊರಗೆ ಹೋಗುವಾಗ ತಲೆಯಿಂದ ಪಾದದವರೆಗೆ ಕಪ್ಪುಬಣ್ಣದ ಬುರ್ಖಾ ಧರಿಸುತ್ತಾರೆ. ಆದರೆ, ಇತರರಂತೆ ಇವರ ಉಡುಗೆ-ತೊಡುಗೆಗಳಲ್ಲೂ ಸಾಕಷ್ಟು ಬದಲಾವಣೆಗಳಾಗಿರುವುದು ಗಮನಾರ್ಹ.

ಕ್ರೈಸ್ತರಲ್ಲಿ ವಿಶೇಷ ಸಂದರ್ಭಗಳಿಗೆ ಹೊಂದುವ ವಿನ್ಯಾಸದ ಉಡುಪುಗಳನ್ನು ಧರಿಸುವುದು ಕಂಡುಬರುತ್ತದೆ. ವಿವಾಹ ಸಂದರ್ಭದಲ್ಲಿ ಕನ್ಯೆಯನ್ನು ಬಿಳಿಯ ಉದ್ದನೆಯ ಸ್ಕರ್ಟ್ ಅಥವಾ ಸೀರೆಯಿಂದ ಶೃಂಗರಿಸುವುದು ಅವರ ಸಂಪ್ರದಾಯವಾಗಿದೆ. ಚರ್ಚಿನಲ್ಲಿ ಪ್ರಾರ್ಥನೆ ಮಾಡುವಾಗ ಸೆರಗನ್ನು ತಲೆಯ ಮೇಲೆ ಹೊದ್ದುಕೊಳ್ಳುವುದು ಕ್ರೈಸ್ತ ಮಹಿಳೆಯರಲ್ಲಿ ರೂಢಿಯಲ್ಲಿದೆ. ಆದರೆ, ಇತರರಂತೆ ಇವರ ಉಡುಗೆ-ತೊಡುಗೆಗಳಲ್ಲೂ ಸಾಕಷ್ಟು ಬದಲಾವಣೆಗಳಾಗಿರುವುದು ಗಮನಾರ್ಹ.

**ಗೃಹೋಪಕರಣಗಳು:** ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಕುಳಿತುಕೊಳ್ಳುವುದಕ್ಕೆ ಕಡ್ಡಿಚಾಪೆ, ಈಚಲುಚಾಪೆ, ಜಮಖಾನೆ, ಕಂಬಳಿ ಮೊದಲಾದವುಗಳನ್ನು ಬಳಸುತ್ತಿದ್ದು ಇಂದಿಗೂ ಅವು ಹಲವಾರು ಕಡೆಗಳಲ್ಲಿ ಕಂಡುಬರುತ್ತವೆ. ಮೊದಲಿಗೆ ಹೆಚ್ಚಾಗಿ ಪಟ್ಟಣ ಪ್ರದೇಶಗಳಲ್ಲಿ ಅದರಲ್ಲೂ ಮಧ್ಯಮವರ್ಗದ ಹಾಗೂ ಶ್ರೀಮಂತರ ಮನೆಗಳಲ್ಲಿ ಮರದಿಂದ ತಯಾರಿಸಿದ ಮಣೆ, ಕುರ್ಚಿ, ಬೆಂಚು, ಮೇಜು ಮೂರು ಕಾಲಿನ ಸ್ಟೂಲ್ ಮೊದಲಾದ ಪೀಠೋಪಕರಣಗಳು ಬಳಕೆಯಲ್ಲಿದ್ದು, ಅಲ್ಮೇರಾ ಮೊದಲಾದವು ತೀರಾ ವಿರಳವಾಗಿದ್ದವು. ಆದರೆ ನಾಗರೀಕತೆಯ ಪ್ರಭಾವದಿಂದ ಅದರಲ್ಲೂ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಜನರ ಆರ್ಥಿಕ ಪರಿಸ್ಥಿತಿ ಮತ್ತು ಅಭಿರುಚಿಗಳಿಗೆ ತಕ್ಕಂತೆ ಕಬ್ಬಿಣ, ಬೆತ್ತ ಅಥವಾ ಮರದ ವಿವಿಧ ವಿನ್ಯಾಸಗಳ ಪೀಠೋಪಕರಣಗಳ ಬಳಕೆಯು ಕಂಡುಬರುವುದಲ್ಲದೆ, ಆಧುನಿಕ ಸೋಫಾಸೆಟ್, ಊಟದ ಮೇಜು ಮತ್ತು ಕುರ್ಚಿಗಳು, ಮಂಚ ಮೊದಲಾದ ಮರದ ವಸ್ತುಗಳು ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತವೆ. ಶ್ರೀಮಂತರ ಮನೆಗಳಲ್ಲಿ ಅಭಿರುಚಿಗೆ ತಕ್ಕಂತೆ ಕೆಲವು ಪೀಠೋಪಕರಣಗಳು ಕರಿಮರದವಾಗಿದ್ದು, ಕೆತ್ತನೆಯ ಕುಸರಿ ಅಲಂಕಾರವನ್ನು ಹೊಂದಿರುವುದು ಕಂಡುಬರುತ್ತದೆ.

ನಾಗರೀಕತೆಯ ಪ್ರಭಾವದಿಂದ ನೀರು ತುಂಬಿಡಲು ಹಾಗೂ ಅಡುಗೆ ಮಾಡಲು ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು ಮನೆಗಳಲ್ಲಿ ಬಳಕೆಗೆ ಬಂದಿದ್ದರೂ ಅಲ್ಯುಮಿನಿಯಂ, ಹಿತ್ತಾಳೆ ಹಾಗೂ ತಾಮ್ರದ ಪಾತ್ರೆಗಳು ಇನ್ನೂ ಬಳಕೆಯಲ್ಲಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಡವರ ಮನೆಗಳಲ್ಲಿ (ಮಣ್ಣಿನ) ಮಡಕೆ ಮತ್ತು ಅಲ್ಯುಮಿನಿಯಂ ಪಾತ್ರೆಗಳೇ ಹೆಚ್ಚಾಗಿ ಕಂಡುಬರುತ್ತವೆ. ನೀರಿನ ಸಂಗ್ರಹಕ್ಕಾಗಿ ಪ್ಲಾಸ್ಟಿಕ್ ಕೊಡ, ಬಕೀಟ್, ಡಬ್ಬಗಳು, ಬಳಕೆಯಲ್ಲಿವೆ. ಅಡುಗೆ ತಯಾರಿಸಲು ಮೊದಲಿಗೆ ಸೌದೆ ಅಥವಾ ಇದ್ದಿಲನ್ನೇ ಹೆಚ್ಚಾಗಿ ಬಳಸುತ್ತಿದ್ದು, ಈಚೆಗೆ ಸೀಮೆಎಣ್ಣೆ, ವಿದ್ಯುತ್, ಅಡುಗೆ ಅನಿಲ ಮೊದಲಾದುವುಗಳನ್ನು ಬಳಸುವುದು ರೂಢಿಯಲ್ಲಿದೆ. ಸೌರಶಕ್ತಿ ಹಾಗೂ ಜೈವಿಕ ಅನಿಲಗಳ ಬಳಕೆಯೂ ಕೆಲವೆಡೆ ಕಾಣಬಹುದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಮಟ್ಟಿಗೆ ಸೌದೆ ಒಲೆ ಹಾಗೂ ಸೀಮೆಎಣ್ಣೆ ಸ್ಟವ್ ಹೆಚ್ಚಾಗಿ ಇನ್ನೂ ಬಳಕೆಯಲ್ಲಿವೆ.

**ಆಭರಣಗಳು:** ಬಹಳ ಪ್ರಾಚೀನ ಕಾಲದಿಂದಲೂ ಮಹಿಳೆಯರಿಗೆ ಆಭರಣಗಳ ಮೇಲಿನ ಮೋಹವು ಸಾರ್ವತ್ರಿಕವಾಗಿದೆ. ಆಭರಣಗಳ ಬಳಕೆಯು ಬಹಳಮಟ್ಟಿಗೆ ಜನರ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ನಾಗರೀಕತೆಯ ಪ್ರಭಾವದಿಂದ ಆಭರಣಗಳ ಶೈಲಿಯಲ್ಲಿಯೂ ಕೆಲವು ಪರಿವರ್ತನೆಗಳನ್ನು ಕಾಣಬಹುದಾಗಿದೆ. ಆಭರಣಗಳನ್ನು ಕೇವಲ ಅಲಂಕಾರಕ್ಕಲ್ಲದೆ, ನಂಬಿಕೆ ಹಾಗೂ ಸಂಪ್ರದಾಯಗಳ ಸಂಬಂಧವಾಗಿಯೂ ಧರಿಸುವುದುಂಟು. ಮಕ್ಕಳಿಗೆ ಕಿವಿ ಚುಚ್ಚುವುದು (ಕರ್ಣವೇಧ) ಶೋಡಷ ಸಂಸ್ಕಾರಗಳಲ್ಲಿ ಒಂದಾಗಿದ್ದು, ಒಂದು ಹರಳಿನ ಬೊಟ್ಟು, ಸ್ಟಾರ್ ಮುರವು ಅಥವಾ ಲೋಲಾಕು ಮಕ್ಕಳ ಕಿವಿಯನ್ನು ಅಲಂಕರಿಸುವುದು ಸಂಪ್ರದಾಯವಾಗಿದೆ. ಸರ, ಕಂಠೀಹಾರ, ಉಂಗುರ, ಕೈಕಡಗ, ಕಾಲುಕಡಗ, ಬೆಳ್ಳಿ ಉಡುದಾರ, ಬೆಳ್ಳಿಯ ಕಾಲಂದಿಗೆ, ಕಾಲುಗೆಜ್ಜೆ, ಮುಂತಾದವುಗಳು ಮಕ್ಕಳ ಆಭರಣಗಳಾಗಿವೆ. ಸ್ತ್ರೀಯರು ತಮ್ಮ ಸೌಭಾಗ್ಯದ ಸಂಕೇತವಾಗಿ ಗಾಜಿನ ಹಾಗೂ ಬಂಗಾರದ ಬಳೆಗಳನ್ನು ತೊಡುತ್ತಾರೆ. ಇದಕ್ಕಾಗಿಯೇ ಮದುವೆ ಶಾಸ್ತ್ರದಲ್ಲಿ ವಧೂವಿಗೆ ಬಳೆ ತೊಡಿಸಿ ಮುತ್ತೈದೆಯರಿಗೆ ಬಳೆ ಕೊಡುವ ಸಂಪ್ರದಾಯವಿದೆ. ಕೈಗೆ ಮುರಿ, ಸಣ್ಣ ಕಪ್ಪ ಹಾಗೂ ಕಡಗ, ತೋಳುಬಂಧಿ ಮತ್ತು ವಂಕಿ, ಬೆರಳಿಗೆ ಹಸ್ತಾಳಪಟ್ಟಿ ಮತ್ತು ಉಂಗುರ, ಕೊರಳಿಗೆ ಕಾಸು, ಗುಂಡಿನ ಸರ, ಕತ್ತಿಗೆ ಅಡ್ಡಿಕೆ, ಚಿಂತಾಕು, ಜೋಮಸರ, ಅವಲಕ್ಕಿಸರ ಹಾಗೂ ಕಂಠೀಸರ, ಕಿವಿಗೆ ಮುರುವು, ಹರಳಿನ ಓಲೆ, ಬುಗಡಿ, ಕೆನ್ನೆಸರ, ಮೂಗುಬೊಟ್ಟು, ಕಿವಿಗೆ ಮಾಟಿ, ಝುಮಕಿ, ಮೂಗಿಗೆ ನತ್ತು, ಕೆಂಪು ಹರಳಿನ ಬೊಟ್ಟು, ವಜ್ರದ ಬೊಟ್ಟು ಮತ್ತು ಬುಲಾಕು, ತಲೆಗೆ ನಾಗರ ಮತ್ತು ಬಂಗಾರದ ತಿರುಪಿನ ಹೂವು, ಸೊಂಟಕ್ಕೆ ಗೆಜ್ಜೆ, ಡಾಬು ಅಥವಾ ವಂಕಿಡಾಬು, ಕಾಲಿಗೆ ಕಾಲ್ಮುರಿ, ಕಾಲಂದಿಗೆ ಹಾಗೂ ಚೈನು ಮತ್ತು ವಿವಾಹಿತ ಸ್ತ್ರೀಯರಾದರೆ ಕೊರಳಿಗೆ ಮಾಂಗಲ್ಯ ಸರ ಮತ್ತು ಬೆಳ್ಳಿಯ ಕಾಲುಂಗುರಗಳು ಕೆಲವು ಸಾಂಪ್ರದಾಯಿಕ ಆಭರಣಗಳಾಗಿವೆ. ಚಿನ್ನದ ಸರವನ್ನು ಧರಿಸುವುದೂ ಉಂಟು. ಪುರುಷರಲ್ಲಿ ಆಭರಣಗಳ ಬಳಕೆ ವಿರಳವೆಂದೇ ಹೇಳಬಹುದು. ಉಂಗುರ, ಕೈಗೆ ಚಿನ್ನದ (ಬ್ರೇಸ್ಲೈಟ್) ಅಥವಾ ಬೆಳ್ಳಿಯ ಕಪ್ಪ, ಕೊರಳಿಗೆ ಚಿನ್ನದ ಸರ, ಸೊಂಟಕ್ಕೆ ಬೆಳ್ಳಿಯ ಉಡುದಾರ ಮತ್ತೆ ಕೆಲವರು ಕಿವಿಗೆ ಮುರುವು ಅಥವಾ ಕೆಂಪುಕಲ್ಲಿನ ಒಂಟಿ (ಆತಕಡಕು) ಹಾಕುತ್ತಿದ್ದು ಇವು ಪುರುಷರ ಕೆಲವು ಸಾಂಪ್ರದಾಯಿಕ ಆಭರಣಗಳಾಗಿವೆ. ಈಚೆಗೆ ನಾನಾ ಬಗೆಯ ವಿವಿಧ ವಿನ್ಯಾಸದ ಆಭರಣಗಳು ಹಾಗೂ ಚಿನ್ನದ ಲೇಪನ ಮಾಡಿದ ಅಲಂಕಾರಿಕ ಒಡವೆಗಳೂ ಬಳಕೆಯಲ್ಲಿವೆ.

**ಹಬ್ಬಗಳು:** ಹಿಂದೂಗಳಲ್ಲಿ ವರ್ಷದುದ್ದಕ್ಕೂ ಹಬ್ಬಗಳನ್ನಾಚರಿಸುವ ಹಾಗೂ ವ್ರತ-ಉಪವಾಸ ಕೈಗೊಳ್ಳುವ ಅನೇಕ ಪರ್ವದಿನಗಳಿವೆ. ಹಿಂದೂಗಳಲ್ಲಿ ವಿವಿಧ ಪಂಥಗಳಿಗೆ ಬೇರೆಬೇರೆ ಹಬ್ಬಗಳೂ ಇದ್ದು ಬ್ರಾಹ್ಮಣರಿಗೆ ಬೇರೆಯವರಿಗಿಂತ ಅಧಿಕ ಹಬ್ಬಗಳೂ ಇವೆ. ಇಡೀ ವರ್ಷವನ್ನು ಉತ್ತರಾಯಣ ಮತ್ತು ದಕ್ಷಿಣಾಯಣ ಎಂಬ ಎರಡು ಸಮಭಾಗಗಳನ್ನಾಗಿ ವಿಭಾಗ ಮಾಡಲಾಗಿದೆ. ಜಿಲ್ಲೆಯಲ್ಲಿ ಆಚರಿಸುವ ಕೆಲವು ಪ್ರಮುಖ ಹಬ್ಬಗಳನ್ನು ಇಲ್ಲಿ ಹಿಂದೂ ಪಂಚಾಂಗದ ತಿಥಿಗಳ ಅನುಕ್ರಮದಂತೆ ನಿರೂಪಿಸಿದೆ. ಚಂದ್ರಮಾನ ಯುಗಾದಿ ಶಾಲಿವಾಹನ ಶಕದ ಎಣಿಕೆ ಆರಂಭವಾಗುವ ಚೈತ್ರಮಾಸದ ಪ್ರಥಮ ದಿನ ಅಂದು ಅಭಿಜಿನ್ ಮುಹೂರ್ತದಲ್ಲಿ ಎಲ್ಲರೂ ಅಭ್ಯಂಜನ ಮಾಡುವರು. ಮನೆಯ ಬಾಗಿಲುಗಳಿಗೆ ಮಾವು-ಬೇವಿನ ತಳಿರು-ತೋರಣಗಳನ್ನು ಕಟ್ಟಿ ಮುಂಭಾಗವನ್ನು ರಂಗವಲ್ಲಿಯಿಂದ ಅಲಂಕರಿಸುತ್ತಾರೆ. ದಿನವನ್ನು ಹೊಸ ಸಂವತ್ಸರದ ಆರಂಭದ ದಿನವೆಂದು ಪರಿಗಣಿಸಿ ಭಕ್ತಿಪೂರ್ವಕವಾಗಿ ಮನೆಯಲ್ಲಿ ದೇವರಿಗೆ ಪೂಜೆ ಸಲ್ಲಿಸುವುದು, ಅಲ್ಲದೆ ದೇವಸ್ಥಾನಗಳಿಗೆ ಹೋಗಿ ಬರುವ ಸಂಪ್ರದಾಯವೂ ಇದೆ. ಆ ದಿನ ಬೇವು-ಬೆಲ್ಲವನ್ನು ಮನೆಯವರೆಲ್ಲಾ ಸೇವಿಸುತ್ತಾರೆ. ಹೂರಣದ ಹೋಳಿಗೆಯಂತಹ ವಿಶೇಷ ಭಕ್ಷ್ಯ ಭೋಜನಗಳನ್ನು ಮಾಡುತ್ತಾರೆ. ಹೊಸ ಉಡುಪುಗಳನ್ನು ಕಡ್ಡಾಯವಾಗಿ ಧರಿಸುವುದು ಹಾಗೂ ಹೊಸ ಸಂವತ್ಸರದ ಪಂಚಾಂಗವನ್ನು ಶ್ರವಣ ಮಾಡುವುದು ರೂಢಿಯಲ್ಲಿದೆ. ಯುಗಾದಿಯ ಮಾರನೆಯ ದಿನವನ್ನು ವರ್ಷತೊಡಕು ಹಬ್ಬವೆಂದು ಆಚರಿಸುತ್ತಾರೆ. ಅಂದು ಮಾಂಸಾಹಾರಿಗಳು ಅದನ್ನು ಸೇವಿಸುತ್ತಾರೆ. ಚೈತ್ರಮಾಸದ ಶುಕ್ಲ ಪಕ್ಷದ ನವಮಿಯಂದು ವಿಷ್ಣುವಿನ ಏಳನೆಯ ಅವತಾರವಾದ ಶ್ರೀರಾಮನ ಹುಟ್ಟುಹಬ್ಬವಾಗಿ ರಾಮನವಮಿಯನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಸಂಗೀತೋತ್ಸವ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಂದು ವಾರ ಅಥವಾ ತಿಂಗಳು ಮಟ್ಟಿಗೆ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿರುವ ರಾಮಮಂದಿರಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ವೈಶಾಖ ಶುದ್ಧ ತೃತೀಯವನ್ನು ಅಕ್ಷಯ ತೃತೀಯ ಎಂದು ಕರೆಯುತ್ತಾರೆ. ಈ ಶುಭದಿನವನ್ನು ಸಂವತ್ಸರದ ಸಮಸ್ತ ದಿನಗಳಲ್ಲಿ ಅತೀವ ಭಾಗ್ಯದಾಯಕ ದಿನವೆಂದು ಪರಿಗಣಿಸುತ್ತಾರೆ. ಇದೊಂದು ಪರ್ವದಿನವಾಗಿದ್ದು, ಯತಿವರ್ಯರ ಸಂನ್ಯಾಸ ಸ್ವೀಕಾರಕ್ಕೆ ಹಾಗೂ ಬೃಂದಾವನಗಳ ಪ್ರತಿಷ್ಠಾಪನೆಗೂ ಶುಭದಿನವೆಂದು ಆಚರಿಸುವ ಪದ್ಧತಿಯೂ ಇದೆ. ಅನೇಕರು ತಮ್ಮ ನೂತನ ಕೆಲಸ ಕಾರ್ಯಗಳನ್ನು ಈ ದಿನ ಆರಂಭಿಸುತ್ತಾರೆ. ಈ ದಿನವು ವೀರಶೈವರಿಗೂ ಪವಿತ್ರವಾಗಿದ್ದು, ಬಸವ ಜಯಂತಿಯನ್ನು ಆಚರಿಸುತ್ತಾರೆ. ಆ ಸಂದರ್ಭದಲ್ಲಿ ಅನೇಕ ಸಂಘ ಸಂಸ್ಥೆಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತವೆ. ವೈಶಾಖಮಾಸದ ಶುದ್ಧಪಂಚಮಿಯನ್ನು ಶಂಕರಾಚಾರ್ಯರ ಅನುಯಾಯಿಗಳು 'ಶಂಕರ ಜಯಂತಿ' ಎಂದು ಆಚರಿಸುತ್ತಾರೆ. ಆದಿಶಂಕರಾಚಾರ್ಯರ ತತ್ವ ಬೋಧನೆಗಳ ಮೇಲೆ ಉಪನ್ಯಾಸಗಳನ್ನು ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹಲವಾರು ಸಂಘ ಸಂಸ್ಥೆಗಳು ಏರ್ಪಡಿಸುತ್ತವೆ. ಇದೇ ಮಾಸದ ಶುದ್ಧ ತ್ರಯೋದಶಿಯಂದು ಕೆಲವು ಬ್ರಾಹ್ಮಣ ಪಂಗಡದವರು ವಿಷ್ಣುವಿನ ನಾಲ್ಕನೇ ಅವತಾರವಾದ ನರಸಿಂಹದೇವರ ಜಯಂತಿಯನ್ನೂ ಆಚರಿಸುತ್ತಾರೆ. ಜಿಲ್ಲೆಯ ಸೀಬಿಯಲ್ಲಿ ನರಸಿಂಹದೇವರ ಜಯಂತಿಯನ್ನು ವಿಜೃಂಭಣೆಯಿಂದ ಪ್ರತೀವರ್ಷ ಆಚರಿಸುತ್ತಾರೆ. ಆಷಾಢ ಶುಕ್ಲಪಕ್ಷದ ಹನ್ನೊಂದನೆಯ ದಿನ ಆಷಾಢ ಏಕಾದಶಿ ವ್ರತವನ್ನು ಕೆಲವರು (ಪ್ರಥಮ ಏಕಾದಶಿ) ಹರಿದಿನವೆಂದು ಉಪವಾಸ ವ್ರತವನ್ನು ಆಚರಿಸುತ್ತಾರೆ.

ಶ್ರಾವಣಮಾಸದಲ್ಲಿ ಪ್ರತೀ ಮಂಗಳವಾರ ಹೊಸದಾಗಿ ಲಗ್ನವಾದ ಹೆಣ್ಣುಮಕ್ಕಳು ತಮ್ಮ ಪಾತಿವ್ರತ್ಯ ಹಾಗೂ ಸುಮಂಗಲಿ ಸೌಭಾಗ್ಯಕ್ಕಾಗಿ ಮಂಗಳಗೌರಿ ವ್ರತವನ್ನು ಐದು ವರ್ಷಗಳವರೆಗೆ ಆಚರಿಸುವ ಸಂಪ್ರದಾಯ ಇದೆ. ಶ್ರಾವಣಮಾಸದ ಶುದ್ಧ ಚೌತಿ ಹಾಗೂ ಪಂಚಮಿಯನ್ನು ನಾಗರಚೌತಿ ಮತ್ತು ನಾಗರಪಂಚಮಿಯಂದು ಭಕ್ತಿಭಾವದಿಂದ ಆಚರಿಸಿ ಪಂಚಮಿಯಂದು ನಾಗದೇವನಿಗೆ ತನಿಯರೆಯುತ್ತಾರೆ. ಶ್ರಾವಣ ಮಾಸದ ಶನಿವಾರವೂ ಆಂಜನೇಯ ಹಾಗೂ ಶ್ರೀನಿವಾಸನ ಭಕ್ತರಿಗೆ ವಿಶೇಷ ದಿನವಾಗಿದೆ. ಶ್ರಾವಣ ಪೌರ್ಣಮಿಗೆ ಉಪಕರ್ಮವನ್ನು (ಜನಿವಾರ ಬದಲಾಯಿಸುವ ಹಬ್ಬ) ಆಚರಿಸುತ್ತಾರೆ. ಅಣ್ಣ-ತಂಗಿ, ಅಕ್ಕ-ತಮ್ಮಂದಿರು ಪ್ರೀತಿವಿಶ್ವಾಸದಿಂದ ಸೇರಿ ಒಟ್ಟಾಗಿ ಆಚರಿಸುವ ಈ ಹಬ್ಬದ ಸಂದರ್ಭದಲ್ಲಿ ತಂಬಿಟ್ಟನ್ನು ಪರಸ್ಪರ ವಿತರಣೆ ಮಾಡುವುದು ರೂಢಿಯಲ್ಲಿದೆ. ಶ್ರಾವಣ ಬಹುಳ ಅಷ್ಟಮಿಯನ್ನು 'ಗೋಕುಲಾಷ್ಟಮಿ' ಅಥವಾ 'ಕೃಷ್ಣಜನ್ಮಾಷ್ಟಮಿ' ಎಂದು ಆಚರಿಸುತ್ತಾರೆ. ಶ್ರೀಕೃಷ್ಣನು ಹುಟ್ಟಿದ ಮಧ್ಯರಾತ್ರಿ ಸಮಯದಲ್ಲಿ ಉಪವಾಸವಿದ್ದು, ಅರ್ಘ್ಯ ಪ್ರಧಾನ ಮಾಡುವುದು ಎಲ್ಲಾ ಬ್ರಾಹ್ಮಣರಲ್ಲೂ ರೂಢಿಯಲ್ಲಿದೆ. ಮಾರನೆಯ ದಿನ ಪಾರಣೆಯನ್ನು ಆಚರಿಸುತ್ತಾರೆ. ಕೃಷ್ಣ ಪೂಜೆಯ ಸಂದರ್ಭದಲ್ಲಿ ಭಜನೆ ಹಾಗೂ ಸಂಗೀತ ಹಾಡುವುದೂ ರೂಢಿಯಲ್ಲಿದೆ.

ಭಾದ್ರಪದ ಮಾಸದ ಶುಕ್ಲಪಕ್ಷದ ತದಿಗೆಯಂದು ಆಚರಿಸುವ ಗೌರಿಹಬ್ಬ, ಚೌತಿಯಂದು ಆಚರಿಸುವ ಗಣೇಶ ಚತುರ್ಥಿ ಜನಪ್ರಿಯ ಹಬ್ಬಗಳಾಗಿವೆ. ಮಣ್ಣಿನಿಂದ ಮಾಡಿದ ಗೌರಿ ಹಾಗೂ ಗಣಪತಿಯರನ್ನು ಪ್ರತಿಷ್ಠಾಪಿಸಿ, ವಿವಿಧ ಪತ್ರೆ ಹಾಗೂ ಪುಷ್ಪಗಳಿಂದ ಅಲಂಕರಿಸಿ ಭಕ್ತಿಪೂರಕವಾಗಿ ಪೂಜಿಸಿ ಕಡಬು ನೈವೇದ್ಯ ಮಾಡಿ ಧೂಪ-ದೀಪಗಳನ್ನು ಬೆಳಗಿ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಗಣೇಶನ ಪೂಜೆಯನ್ನು ಸಾಮೂಹಿಕವಾಗಿ ಒಂದು ದಿನ, ವಾರ ಅಥವಾ ಹದಿನೈದು ದಿನಗಳು ಆಚರಿಸುವ ಪದ್ಧತಿಯೂ ಇದೆ. ಈ ಸಂದರ್ಭದಲ್ಲಿ ಪ್ರತೀದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಂಗೀತ ಕಚೇರಿಗಳನ್ನೂ ಏರ್ಪಡಿಸುವುದೂ ಹಲವಾರು ವರ್ಷಗಳಿಂದ ಜಿಲ್ಲೆಯಲ್ಲಿ ಆಚರಣೆಯಿದೆ. ಜಿಲ್ಲೆಯ ಗೂಳೂರು ಗಣೇಶನ ದೇವಾಲಯದಲ್ಲಿ ಈ ಹಬ್ಬವನ್ನು ಭಾದ್ರಪದ ಮಾಸದಲ್ಲಿ ವಿಜೃಂಭಣೆಯಿಂದ ಒಂದು ವಾರದವರೆಗೂ ಆಚರಿಸುತ್ತಾರೆ.

ಮಹಾಲಯ ಅಮಾವಾಸ್ಯೆಯನ್ನು ಹಿರಿಯರ ನೆನಪಿನಲ್ಲಿ 'ಸರ್ವ ಪಿತೃ' ಅಮಾವಾಸ್ಯೆಯೆಂದು ಆಚರಿಸುತ್ತಾರೆ. ವೈದಿಕ ಧರ್ಮವನ್ನಾಚರಿಸುವವರು ತಮ್ಮ ಪೂರ್ವಜರಿಗೆ ತಿಲತರ್ಪಣವನ್ನು ನೀಡುತ್ತಾರೆ. ಈ ಹಬ್ಬಕ್ಕೆ ರೈತ ವರ್ಗದ ಜನಗಳು ಅಮಾವಾಸ್ಯೆ ಹಬ್ಬವೆಂದು ಕರೆದು ಹೊಸ ಬಟ್ಟೆಗಳನ್ನು ಧರಿಸಿ ತಮ್ಮ ಪೂರ್ವಜರಿಗೆ ಎಡೆ ಇಡುತ್ತಾರೆ. ಹಬ್ಬದಂದು ಮಾಮೂಲಿನಂತೆ ನೆಲ-ಮನೆ ಸಾರಿಸಿ ಮಡಿ ಮಾಡುತ್ತಾರೆ. ಅಂದು ನೀರು ತುಂಬಿ ಅದರ ಮೇಲೆ ಹೊಸ ಸೀರೆ, ರವಿಕೆ ಇಡುತ್ತಾರೆ. ಅದರ ಮುಂದೆ ಬಾಳೆಎಲೆಯ ಮೇಲೆ ಅನ್ನ, ಸಾರು ರಾಗಿಮುದ್ದೆ ಇತ್ಯಾದಿ ವಿಶೇಷವಾಗಿ ಮಾಡಿದ ಎಲ್ಲಾ ಅಡುಗೆಗಳನ್ನು ಬಡಿಸಿ ಎಡೆ ಇಡುತ್ತಾರೆ. ಮನೆಯ ಪಡಸಾಲೆಯಲ್ಲಿ ಗತಿಸಿದ ಹಿರಿಯರ ಪ್ರಿತ್ಯರ್ಥ ಹೊಸ ಪಂಚೆಯ ಮೇಲೆ ಅಕ್ಕಿ ಸುರಿದು ಅದರ ಮೇಲೆ ಕಳಸ ಇಟ್ಟು, ಅದರ ಮುಂದೆ ನಾಲ್ಕಾರು ಎಲೆಗಳ ಮೇಲೆ ಮಾಡಿದ ಅಡುಗೆಯ ಎಡೆ ಇಡುತ್ತಾರೆ. ಹಿರಿಯರಿಗೆ ಪ್ರಿಯವಾದ ಎಲ್ಲಾ ಬಗೆಯ ಅಡುಗೆ, ಹಣ್ಣು-ಹಂಪಲುಗಳನ್ನು ಎಡೆ ಇಟ್ಟು ಪೂಜೆ ಮಾಡುತ್ತಾರೆ.

ಆಶ್ವಯುಜ ಮಾಸದಲ್ಲಿ ಆಚರಿಸಲಾಗುವ ನವರಾತ್ರಿ ಅಥವಾ ದಸರಾ ಹಬ್ಬವನ್ನೂ ಈ ಜಿಲ್ಲೆಯಲ್ಲಿ ಸಂಭ್ರಮದಿಂದ ಎಲ್ಲರೂ ಆಚರಿಸುತ್ತಾರೆ. ಈಚೆಗೆ ಇದನ್ನು ನಾಡಹಬ್ಬವೆಂದು ಆಚರಿಸುವುದೂ ಉಂಟು. ಆಶ್ವಯುಜ ಶುದ್ಧ ಪಾಡ್ಯವನ್ನು ನವರಾತ್ರಿ ಪಾಡ್ಯವೆಂದು ಆಚರಿಸಿ ಗೊಂಬೆಗಳನ್ನು ಕೂಡಿಸಿ ಮುಂಭಾಗದಲ್ಲಿ ಕಳಶವನ್ನು ಸ್ಥಾಪಿಸುತ್ತಾರೆ. ನವರಾತ್ರಿಯ ಒಂಬತ್ತು ದಿನಗಳೂ ಪೂಜೆ ಸಲ್ಲಿಸಿ ಕೊನೆಗೆ ದಶಮಿಯಂದು ವಿಜಯದಶಮಿಯನ್ನು ಆಚರಿಸುತ್ತಾರೆ. ಏಳನೇ ದಿನ (ಸಪ್ತಮಿ) ಸರಸ್ವತಿಯ ಪೂಜೆಯನ್ನು, ಎಂಟನೇ (ದುರ್ಗಾಷ್ಟಮಿ) ದಿನ ಶಕ್ತಿದೇವತೆಯಾದ ದುರ್ಗಾದೇವಿಯನ್ನು ಆಚರಿಸುತ್ತಾರೆ. ಒಂಬತ್ತನೇ ದಿನ (ನವಮಿ) ಮಹಾನವಮಿಯಂದು ಪರಿಗಣಿಸಿ ವಾಹನಗಳನ್ನು ಹಾಗೂ ಆಯುಧ ಯಂತ್ರೋಪಕರಣಗಳನ್ನು 'ಆಯುಧಪೂಜೆ' ಎಂದು ವಿಜೃಂಭಣೆಯಿಂದ ಆಚರಿಸುತ್ತಾರೆ. ಹತ್ತನೆಯ ಹಾಗೂ ದಸರಾ ಹಬ್ಬದ ಕೊನೆಯ ದಿನ (ದಶಮಿ) ವಿಜಯದಶಮಿ ಎಂದು ಆಚರಿಸಿ ಶಮಿ ಅಥವಾ ಬನ್ನಿಸೊಪ್ಪನ್ನು ಶಾಂತಿಯ ಪ್ರತಿರೂಪವೆಂದು ಪರಿಗಣಿಸಿ ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ.

ಕಾರ್ತೀಕ ಮಾಸದಲ್ಲಿ ಆಚರಿಸಲಾಗುವ ದೀಪಾವಳಿಯನ್ನು ಬೆಳಕಿನ ಹಬ್ಬವೆಂದು ಕರೆಯಲಾಗುತ್ತದೆ. ಈ ಹಬ್ಬವು ಆಶ್ವಯುಜ ಬಹುಳ ಹದಿಮೂರನೆಯ ದಿನ (ತ್ರಯೋದಶಿ) ಆರಂಭವಾಗಿ ಮೂರು ದಿನಗಳ ಕಾಲ ನಡೆಯುತ್ತದೆ. ತ್ರಯೋದಶಿಯಂದು ನೀರು ತುಂಬುವ ಹಬ್ಬವೆಂದು ಆಚರಿಸುತ್ತಾರೆ. ಚತುರ್ದಶಿಯ ದಿನ (ನರಕ ಚತುರ್ದಶಿ) ಎಲ್ಲರೂ ಅಭ್ಯಂಜನ ಮಾಡಿ, ದೇವರನ್ನು ಪೂಜಿಸಿ ಸಿಹಿ ಊಟವನ್ನು ಮಾಡುತ್ತಾರೆ. ಈ ದಿನವನ್ನು ನರಕಾಸುರನ ವಧೆಯ ದಿನವೆಂದು ಪರಿಗಣಿಸಿ ಸಿಡಿಮದ್ದಿನ ಪಟಾಕಿಗಳನ್ನು ಸಿಡಿಸಿ ಸಂಭ್ರಮದಿಂದ ಆಚರಿಸುತ್ತಾರೆ. ಅಮಾವಾಸ್ಯೆಯ ದಿನ ಸಂಜೆಯಲ್ಲಿ ನಗದು ಹಾಗೂ ಒಡವೆ ವಸ್ತುಗಳ ಸಮೇತ ಲಕ್ಷ್ಮೀಯನ್ನು ಪೂಜಿಸುತ್ತಾರೆ. ಕೆಲವರು ಕೇದಾರೇಶ್ವರ ವ್ರತವನ್ನು ಅಂದು ಆಚರಿಸುವುದೂ ಉಂಟು. ಆ ದಿನದಂದು ಬಲಿಚಕ್ರವರ್ತಿಯನ್ನು 'ಬಲೀಂದ್ರ' ಎಂದು ರಂಗೋಲೆಯಲ್ಲಿ ರಚಿಸಿ ಪೂಜಿಸುವ ಪದ್ಧತಿಯು ಎಲ್ಲಾ ವೈದಿಕ ಅನುಯಾಯಿಗಳಲ್ಲಿದೆ. ವಿವಾಹವಾದ ಮೊದಲನೇ ವರ್ಷದಲ್ಲಿ ಹೆಣ್ಣುಮಕ್ಕಳು ತಮ್ಮ ಪತಿಗಳ ಜೊತೆಗೆ ತವರಿಗೆ ಬರುವ ಸಂಪ್ರದಾಯವಿದೆ. ಆ ದಿನ ವಿಶೇಷವಾದ ಉಡುಗೊರೆಗಳನ್ನೂ ನೂತನ ದಂಪತಿಗಳಿಗೆ ನೀಡಲಾಗುತ್ತದೆ. ಮನೆಯನ್ನು ಸ್ವಚ್ಛಗೊಳಿಸಿ ತಳಿರುತೋರಣಗಳಿಂದ ಮತ್ತು ರಂಗೋಲಿಯ ಚಿತ್ತಾರದಿಂದ ಅಲಂಕರಿಸಿರುತ್ತಾರೆ. ಈ ಸಮಯದಲ್ಲಿ ಮಕ್ಕಳು ಪಟಾಕಿ ಸಿಡಿಸುವುದೂ ಒಂದು ಹಬ್ಬದ ಸಂಭ್ರಮದ ಭಾಗವಾಗಿದೆ.

ದೀಪಾವಳಿಯಲ್ಲಿ ಕೃಷಿಕರು ಲಕ್ಷ್ಮಿಗೆ ಸಮಾನವೆಂದು ಭಾವಿಸಲಾದ ತಿಪ್ಪೆಗುಂಡಿಯನ್ನು ಒಪ್ಪಮಾಡಿ ಕಸದ ಗುಪ್ಪೆಯ ಬಳಿ ಹಣತೆ ಹಚ್ಚಿಟ್ಟು ಪೂಜೆ ಮಾಡುತ್ತಾರೆ. ಕಾರ್ತೀಕ ಮಾಸದಲ್ಲಿ ಮನೆ ಹಾಗೂ ತುಳಸಿ ಬೃಂದಾವನದ ಮುಂದೆ ಹಣತೆಗಳಲ್ಲಿ ದೀಪ ಬೆಳಗುತ್ತಾರೆ. ಪ್ರತೀ ಸೋಮವಾರ ಈಶ್ವರನ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ಸಲ್ಲುವುದಲ್ಲದೆ ಕೆಲವರು ಒಪ್ಪೊತ್ತಿನ ಉಪವಾಸವನ್ನು ಆಚರಿಸುವ ಸಂಪ್ರದಾಯವೂ ಇದೆ. ಕಾರ್ತೀಕ ಶುದ್ಧ ದ್ವಾದಶಿಯಂದು ತುಳಸಿಯ ಲಗ್ನವೆಂದು ತುಳಸಿಹಬ್ಬವನ್ನು ಆಚರಿಸುತ್ತಾರೆ. ಈ ದಿನವನ್ನು ಉತ್ಥಾನ ದ್ವಾದಶಿ ಎಂದೂ ವೈದಿಕರು ಕರೆಯುತ್ತಾರೆ. ಕಾರ್ತೀಕ ಶುದ್ಧ ಚತುರ್ದಶಿಯ ದಿನವನ್ನು 'ವೈಕುಂಠ ಚತುರ್ದಶಿ' ಎಂದೂ ಆಚರಿಸುವುದು ಕೆಲವರಲ್ಲಿ ರೂಢಿಯಲ್ಲಿದೆ. ಮಾರ್ಗಶಿರ ಶುದ್ಧ ತ್ರಯೋದಶಿಯಂದು ಹನುಮಜಯಂತಿಯನ್ನು ಆಚರಿಸುವರು. ಮಾರ್ಗಶಿರ ಶುದ್ಧ ಏಕಾದಶಿಯನ್ನು 'ವೈಕುಂಠ ಏಕಾದಶಿ'ಯಂದು ವೈಷ್ಣವರು ವಿಶೇಷವಾಗಿ ಆಚರಿಸುತ್ತಾರೆ. ಅಂದು ಶ್ರೀ ವೆಂಕಟೇಶ್ವರನ ದೇವಾಲಯಗಳಲ್ಲಿ ವೈಕುಂಠದ್ವಾರವನ್ನು (ಉತ್ತರ ಸ್ವರ್ಗದ ಬಾಗಿಲು) ತೆಗೆದು ಎಲ್ಲಾ ಭಕ್ತಾದಿಗಳು ಅದರ ಮೂಲಕ ಹೊರಗೆ ನುಸುಳುವುದು ಬಹಳ ಪುಣ್ಯದಾಯಕವೆಂಬ ನಂಬಿಕೆಯಿದೆ.

ಪ್ರತೀ ಜನವರಿ ಹದಿನಾಲ್ಕು ಅಥವಾ ಹದಿನೈದನೆಯ ದಿನಾಂಕಕ್ಕೆ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸುತ್ತಾರೆ. ಅದನ್ನು ಉತ್ತರಾಯಣ ಪುಣ್ಯಕಾಲವೆಂದು ಪರಿಗಣಿಸಿ ಪರ್ವದಿನವನ್ನಾಗಿ ಆಚರಿಸುತ್ತಾರೆ. ಈ ಹಬ್ಬವನ್ನು ಸುಗ್ಗಿಹಬ್ಬವೆಂದು ಪರಿಗಣಿಸಿ ಆಚರಿಸುವುದು ಎಲ್ಲಾ ಹಿಂದೂಗಳಲ್ಲೂ ರೂಢಿಯಲ್ಲಿದೆ. ಅಂದು ಕಟಾವು ಮಾಡಿದ ಹೊಸ ಬತ್ತದ ಅಕ್ಕಿಯನ್ನು ಹೆಸರುಬೇಳೆಯ ಜೊತೆಗೆ ತುಪ್ಪ ಹಾಗೂ ಬೆಲ್ಲ ಹಾಕಿ ಬೇಯಿಸಿ ಹುಗ್ಗಿ ಅಥವಾ ಪೊಂಗಲ್ ಮಾಡುವುದು ರೂಢಿಯಲ್ಲಿದೆ. ಈ ಹಬ್ಬದ ದಿನ ಬಂಧು-ಮಿತ್ರರು ಎಳ್ಳು-ಬೆಲ್ಲವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಸಂಪ್ರದಾಯವೂ ಜಿಲ್ಲೆಯಲ್ಲಿ ಆಚರಣೆಯಲ್ಲಿದ್ದು 'ಎಳ್ಳು-ಬೆಲ್ಲ ತಿಂದು ಒಳ್ಳೇ ಮಾತನಾಡಿ' ಎಂಬ ನಾಣ್ನುಡಿ ಚಾಲ್ತಿಯಲ್ಲಿದೆ. ಸ್ನೇಹಭಾವದಿಂದ ಕೃಷಿಕರು ಅಂದು ತಮ್ಮ ದನಕರುಗಳನ್ನು ಆಕರ್ಷಕವಾಗಿ ಅಲಂಕರಿಸಿ ಸಂಜೆ ಬೆಂಕಿಯನ್ನು ಹಾಕಿ ದನಕರುಗಳಿಂದ ಕಿಚ್ಚು ಹಾಯಿಸುತ್ತಾರೆ. ಗ್ರಾಮೀಣಪ್ರದೇಶಗಳಲ್ಲಿ ಸಂಕ್ರಾಂತಮ್ಮನನ್ನು ಪೂಜಿಸುವುದು ವಿಶೇಷ ಆಚರಣೆಯಾಗಿದೆ. ಅಂದು ರಾಗಿಮೆದೆ ಮುಂದೆ ಕಣ ಮಾಡಿ ಸಾರಿಸಿ ವಿಭೂತಿ (ಬೂದಿ) ಬಿಟ್ಟು, ಪೂಜೆ ಮಾಡಿ ಮೆದೆಗೆ ಪತ್ರೆ (ಮಾವಿನ ಎಲೆ) ಇಡುತ್ತಾರೆ. ತಮ್ಮ ದನಗಳನ್ನು ಕಿಚ್ಚು ಹಾಯಿಸಿದ ಬಳಿಕ ಮನೆ ಬಾಗಿಲಲ್ಲಿ ನಿಲ್ಲಿಸಿ, ಪೂಜೆ ಮಾಡಿ, ಅವುಗಳ ಪಾದಕ್ಕೆ ಚಿನ್ನ ಮುಟ್ಟಿಸಿ, ಬಲಗಾಲು ಮುಂದಾಗಿ ಹೊಸ್ತಿಲು ದಾಟಿಸುವ ಪದ್ಧತಿಯು ಆಚರಣೆಯಲ್ಲಿದೆ. ಅವರೇಕಾಯಿ ಹಾಗೂ ಗೆಣಸನ್ನು ಬೇಯಿಸಿ ಸಾಂಬಾರ್ ತಯಾರಿಸಿ ಊಟ ಮಾಡುವುದು ಈ ಹಬ್ಬದ ವೈಶಿಷ್ಟ್ಯವಾಗಿದೆ. ಆ ಸಮಯಕ್ಕೆ ಸೂರ್ಯನು ಹೊಸ ರಥ ಏರಿ ಉತ್ತರಾಯಣಕ್ಕೆ ಪಥ ಬದಲಿಸುತ್ತಾನೆ ಎಂಬ ಸಾಂಪ್ರದಾಯಿಕ ನಂಬಿಕೆಯಿದ್ದು ಈ ಪರ್ವದಿನವನ್ನು ಉತ್ತರಾಯಣ ಪುಣ್ಯಕಾಲವೆಂದೂ ಆಚರಿಸಲಾಗುತ್ತದೆ.

ಮಾಘ ಮಾಸದ ಅಮಾವಾಸ್ಯೆಯ ಹಿಂದಿನ ದಿನ (ಚತುರ್ದಶಿ) ಮಹಾಶಿವರಾತ್ರಿ ಹಬ್ಬವನ್ನು ಆಚರಿಸಲಾಗುತ್ತದೆ. ಅಂದು ಇಡೀ ದಿನ ಉಪವಾಸವಿದ್ದು, ನೇಮದಿಂದ ಶಿವನ ಪೂಜೆಯನ್ನು ಕೈಗೊಳ್ಳುತ್ತಾರೆ. ಅಲ್ಲದೇ ಅಂದು ಶಿವಾಲಯಕ್ಕೆ ಹೋಗಿ ಶಿವನ ದರ್ಶನವನ್ನು ಮಾಡುವುದು ಪವಿತ್ರ ಕರ್ತವ್ಯವೆಂದು ಪಾಲಿಸುತ್ತಾರೆ. ಇಡೀ ರಾತ್ರಿ ಸೂರ್ಯೋದಯದವರೆಗೂ ಜಾಗರಣೆ ಮಾಡಿ ಮಾರನೆಯ ಬೆಳಿಗ್ಗೆ ಪಾರಣೆ ಮಾಡುತ್ತಾರೆ. ಫಾಲ್ಗುಣ ಮಾಸದ ಹುಣ್ಣಿಮೆಯಂದು ಆಚರಿಸುವ ಹೋಳಿ ಅಥವಾ ಕಾಮನ ಹಬ್ಬದಂದು ಕೆಲವೆಡೆ ವಿವಿಧ ರಂಗುಗಳನ್ನು ಪರಸ್ಪರ ಹಚ್ಚಿಕೊಳ್ಳುತ್ತಾರೆ. ನಂತರ ಸಂಜೆ ಕಾಮನನ್ನು ಸುಟ್ಟುಹಾಕುವ ಸಂಪ್ರದಾಯವೂ ಆಚರಣೆಯಲ್ಲಿದೆ.

**ಜೈನರ ಹಬ್ಬಗಳು:** ಜೈನರು ಅನೇಕ ಹಿಂದೂ ಹಬ್ಬಗಳನ್ನು ತಮ್ಮ ಸಂಪ್ರದಾಯಕ್ಕೆ ಅನುಗುಣವಾಗಿ ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಚೈತ್ರ ಪ್ರತಿಪದ (ಪಾಡ್ಯ) ದಂದು ಯುಗಾದಿಯನ್ನು ಆದಿತೀರ್ಥಂಕರ ವೃಷಭದೇವ ಅಥವಾ ಆದಿನಾಥನ ಮಗನಾದ ಭರತನ ವಿಜಯದ ದಿನವೆಂದು ಆಚರಿಸುತ್ತಾರೆ. ಚೈತ್ರ ಶುದ್ದ ತ್ರಯೋದಶಿಯಂದು ಮಹಾವೀರ ಜಯಂತಿಯನ್ನು ಇತರೆಡೆಯಂತೆ ಇಲ್ಲಿಯೂ ಶ್ರದ್ಧಾಭಕ್ತಿಗಳಿಂದ ಆಚರಿಸುತ್ತಾರೆ. ವೈಶಾಖ ಶುದ್ಧ ಅಕ್ಷಯ ತೃತೀಯ ದಿನ ಶ್ರೇಯಸ್ ಅರಸನು ಆದಿನಾಥ ತೀರ್ಥಂಕರನಿಗೆ ದೀರ್ಘ ಉಪವಾಸದ ಪಾರಣೆಗೆ ಆಹಾರ ದಾನ ಮಾಡಿದ್ದರ ನೆನಪಿಗಾಗಿ ದಾನಗಳನ್ನು ಮಾಡುತ್ತಾರೆ. ಭಾದ್ರಪದದಲ್ಲಿ ಬರುವ ಗೌರಿ ಹಬ್ಬವನ್ನು ಹಿಂದೂಗಳಂತೆಯೇ ಇವರೂ ಆಚರಿಸುತ್ತಾರೆ. ಗೌರಿಯು ಹನ್ನೊಂದನೆಯ ತೀರ್ಥಂಕರನ ಯಕ್ಷಿಯೆಂದು ನಂಬಿರುವ ಜೈನರಿಗೆ ಪೂಜ್ಯಳು. ಜೈನಧರ್ಮೀಯರು ಭಾದ್ರಪದ

ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗಿನ ಅವಧಿಯನ್ನು (೧೦ ದಿವಸಗಳು) ದಶಲಕ್ಷಣ ಪರ್ವಕಾಲವೆಂದೂ ಆಚರಿಸುತ್ತಾರೆ. ಆ ಅವಧಿಯು ಇವರಿಗೆ ಧಾರ್ಮಿಕ ಆಚರಣೆಯ ಮಹತ್ವದ ದಿವಸಗಳಾಗಿದ್ದು, ಇವರ ಮನೆಗಳಲ್ಲೂ, ಜಿನಮಂದಿರಗಳಲ್ಲೂ ವಿಶೇಷ ಪೂಜೆ, ಉಪನ್ಯಾಸಗಳು ನಡೆಯುತ್ತವೆ. ನವರಾತ್ರಿಯ ಅಷ್ಟಮಿಯನ್ನು ಜೀವದಯಾಷ್ಟಮಿ ಎಂದು ಕರೆದು ಉಪವಾಸ ಕೈಗೊಂಡು ಪ್ರಾಣಿಗಳಲ್ಲಿ ದಯೆ ಹಾಗೂ ಅಹಿಂಸೆಯ ಆಚರಣೆಯ ಪುರಾಣ ಕಥೆಗಳನ್ನು ಹೇಳುವರು. ಮಹಾನವಮಿಯು ಯಕ್ಷಿ ಪದ್ಮಾವತಿ ದೇವಿಗೆ ಮೀಸಲಾದ ಪೂಜಾದಿನ. ವಿಜಯದಶಮಿಯಂದು ಭರತನು ಸೀಮೋಲ್ಲಂಘನ ಮಾಡಿದ ನೆನಪಿಗಾಗಿ ಹಬ್ಬವನ್ನು ಆಚರಿಸಿ ಬಡವರಿಗೆ ದಾನಧರ್ಮ ಮಾಡುವರು. ದೀಪಾವಳಿಯನ್ನು ಮಹಾವೀರನ ಮಹಾನಿರ್ವಾಣದ ದಿನವೆಂದು ಪರಿಗಣಿಸಿ ಆಚರಿಸಿ ಲಕ್ಷ್ಮೀದೇವಿಯನ್ನು ಪೂಜಿಸುತ್ತಾರೆ. ವ್ಯಾಪಾರಸ್ಥರು ಹಾಗೂ ದೊಡ್ಡ ವರ್ತಕರೆನಿಸಿದ ರಾಜಸ್ತಾನ ಮೂಲದ ಜೈನರು ತಮ್ಮ ಲೆಕ್ಕಪತ್ರಗಳನ್ನು ಈ ದಿನದಂದು ಸಮಾಪ್ತಿಗೊಳಿಸಿ ಹೊಸ ಖಾತೆಯನ್ನು ಆರಂಭಿಸುವುದು ಪವಿತ್ರವೆಂದು ಪರಿಗಣಿಸಿದ್ದಾರೆ. ಶಿವರಾತ್ರಿಯನ್ನು ಜಿನರಾತ್ರಿಯೆಂದು ಕರೆದು ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬಗಳಲ್ಲದೇ ಇನ್ನೂ ಅನೇಕ ಉಪವಾಸ ವ್ರತಗಳನ್ನು ಜೈನರು ಆಚರಿಸುತ್ತಾರೆ. ಜೈನ ಸನ್ಯಾಸಿಗಳು ಸಲ್ಲೇಖನಾ ವ್ರತವನ್ನು (ಉಪವಾಸದಿಂದ ಮರಣ ಹೊಂದುವುದು) ಸ್ವಇಚ್ಛೆಯಿಂದ ಕೈಗೊಳ್ಳುತ್ತಾರೆ. ಇವರು ತಮ್ಮ ಹಬ್ಬಗಳಂದು ಉಪವಾಸ ಮತ್ತು ದಾನಧರ್ಮಗಳಿಗೆ ವಿಶೇಷ ಮಹತ್ವ ನೀಡುತ್ತಾರೆ.

**ಮುಸಲ್ಮಾನರ ಹಬ್ಬಗಳು:** ಮುಸಲ್ಮಾನರ ಪ್ರಮುಖ ಹಬ್ಬಗಳೆಂದರೇ ಈದ್-ಉಲ್-ಫಿತರ್ ಅಥವಾ ರಂಜಾನ್ ತಿಂಗಳ ಕೊನೇ ದಿನ ಮತ್ತು ಜಿಲ್ ಹಜ್ ತಿಂಗಳ ಹತ್ತನೇಯ ದಿನ ಬರುವ ಈದ್-ಉಲ್-ಜುಹಾ ಅಥವಾ ಬಕ್ರೀದ್. ರಂಜಾನ್ ತಿಂಗಳಲ್ಲಿ ಮುಸಲ್ಮಾನರು ಚಂದ್ರಾಸ್ತಕ್ಕೆ (ಬೆಳಗಿನ ಜಾವ) ಉಪವಾಸ ಆರಂಭಿಸಿ ಸಂಜೆಯ ವೇಳೆ ಚಂದ್ರೋದಯದ ನಂತರ ಊಟ ಮಾಡುತ್ತಾರೆ. ಈ ರೀತಿಯ ಉಪವಾಸಕ್ಕೆ ರೋಝಾ ಎಂದು ಕರೆಯುತ್ತಾರೆ. ಈ ಹಬ್ಬದ ದಿನ ಈದ್ಗಾ ಮೈದಾನಕ್ಕೆ ಹೋಗಿ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ರಂಜಾನ್ ಹಬ್ಬದಲ್ಲಿ ಇವರು ಬಡಬಗ್ಗರಿಗೆ ದಾನಧರ್ಮಗಳನ್ನು ಮಾಡುವುದು ಮಹತ್ವದ್ದಾಗಿದೆ. ಶಾಬಾನ್ ತಿಂಗಳ ಹದಿನೈದನೆಯ ದಿವಸದಲ್ಲಿ ಬರುವ ಶಬ್-ಎ-ಬರಾತ್(ಶಬ್ಬೇರಾತ್) ಹಬ್ಬವನ್ನು ಸಂಜೆಗೆ ಸಮಾಪ್ತಿಗೊಳಿಸುವರು. ಆ ಪುಣ್ಯದಿನದಂದು ಮುಸಲ್ಮಾನರು ಮಸೀದಿಗಳಲ್ಲಿ ಇಡೀ ರಾತ್ರಿ ಪ್ರಾರ್ಥನೆ ಸಲ್ಲಿಸುತ್ತಾರೆ. ಮೊಹಮ್ಮದ್ ಪೈಗಂಬರರು ಜನಿಸಿದ ದಿನವನ್ನು ಈದ್ಮಿಲಾದುನ್ನಬಿ (ಈದ್ಮಿಲಾದ್) ಹಾಗೂ ಮೊಹರಂ ಮುಸಲ್ಮಾನರು ಆಚರಿಸುವ ಇತರ ಪ್ರಮುಖ ಹಬ್ಬಗಳಾಗಿವೆ. ಮೊಹರಂನಲ್ಲಿ ಹಿಂದೂಗಳೂ ಪಾಲ್ಗೊಳ್ಳುವುದು ಧಾರ್ಮಿಕ ಸೌಹಾರ್ದತೆಗೆ ಸಂಕೇತವಾಗಿದೆ. ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಮೊಹರಂ ಆಚರಣೆಗೆ 'ಬಾಬಯ್ಯನ ಜುಲ್ದೀ' ಎಂದು ಕರೆಯುತ್ತಾರೆ.

**ಕ್ರೈಸ್ತರ ಹಬ್ಬಗಳು:** ಕ್ರೈಸ್ತರು ಜನವರಿ ಒಂದನೇ ದಿನಾಂಕವನ್ನು ಹೊಸ ವರ್ಷದ ಆರಂಭದ ದಿನವಾಗಿ ಸಂಭ್ರಮದಿಂದ ಆಚರಿಸುತ್ತಾರೆ. ಇವರ ಇತರೆ ಪ್ರಮುಖ ಹಬ್ಬಗಳೆಂದರೆ ಗುಡ್ ಫ್ರೈಡೆ (ಪವಿತ್ರ ಶುಕ್ರವಾರ), ಈಸ್ಟರ್ ಸಂಡೇ (ಏಸುವಿನ ಪುನರುತ್ಥಾನ) ಸೆಪ್ಟೆಂಬರ್ ಎಂಟು (ಸೈಂಟ್ ಮೇರಿಯ ಹುಟ್ಟಿದ ಹಬ್ಬ) ಹಾಗೂ ಕ್ರಿಸ್ಮಸ್ (ಡಿಸೆಂಬರ್ ೨೫) ಈ ಹಬ್ಬಗಳನ್ನು ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟೆಂಟ್ ಇಗರ್ಜಿಗಳಲ್ಲಿ ಆಚರಿಸುತ್ತಾರೆ. ಸಾಮೂಹಿಕ ಪ್ರಾರ್ಥನೆ ಮಾಡುತ್ತಾರೆ. ಬಣ್ಣದ ನಕ್ಷತ್ರ ದೀಪಗಳನ್ನು ಮನೆಯ ಹೊರಗೆ ಆಕಾಶಬುಟ್ಟಿಯ ರೂಪದಲ್ಲಿ ತೂಗಿಬಿಡುತ್ತಾರೆ. ಮನೆಯಲ್ಲಿ ಕ್ರಿಸ್ಮಸ್ ಸಸ್ಯವನ್ನು ಇಟ್ಟು ಅಲಂಕರಿಸಿ ತಮ್ಮ ಬಂಧುಮಿತ್ರರಿಗೆ ಕೇಕ್ ಹಂಚಿ ಸಂಭ್ರಮಿಸುವುದು ಕಂಡುಬರುತ್ತದೆ.

### ಜಾತ್ರೆಗಳು

ಒಂದು ಪ್ರದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಜಾತ್ರೆಗಳು ಇಂದಿಗೂ ನಡೆದುಕೊಂಡು ಬರುತ್ತಿವೆ. ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳ ಪರಿಣಾಮವಾಗಿ ಜಾತ್ರೆಗಳ ಆಚರಣೆಯಲ್ಲಿಯೂ ಅನೇಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಹಿಂದೆ ಆಚರಿಸುತ್ತಿದ್ದ ಪಶುಬಲಿ, ಸಿಡಿ ಆಡುವುದು, ಬೆತ್ತಲೆಸೇವೆ, ದೇವದಾಸಿ, ಬಸವಿ ಬಿಡುವುದು ಮೊದಲಾದವುಗಳನ್ನು ಇಂದು ಬಹುಮಟ್ಟಿಗೆ ಕಾನೂನು ರೀತ್ಯಾ ನಿರ್ಬಂಧಿಸಲಾಗಿದೆ. ಪ್ರತೀವರ್ಷ ಸಾಮಾನ್ಯವಾಗಿ ಸುಗ್ಗಿಯ ತರುವಾಯ ನಡೆಯುವ ಪರಿಷೆ ಹಾಗೂ ಜಾತ್ರೆಗಳು ಗ್ರಾಮೀಣರ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಬದುಕಿನ ಹಲವು ಅಗತ್ಯಗಳಿಗೆ ಸೂಕ್ತ ವೇದಿಕೆಯಾಗಿರುತ್ತವೆ. ಇದು ದೇವಾಲಯ, ಜೈನರ ಬಸದಿ, ಮುಸಲ್ಮಾನರ ದರ್ಗಾ ಮತ್ತಿತರ ಧಾರ್ಮಿಕ ಕೇಂದ್ರಗಳಿಗೂ ಅನ್ವಯವಾಗುತ್ತದೆ. ಜಾತ್ರೆಯ ಸಮಯದಲ್ಲಿ ಉತ್ಸವಮೂರ್ತಿಯನ್ನು

ರಥದಲ್ಲಿರಿಸಿ ರಥೋತ್ಸವ ನಡೆಸುವರು ಅಥವಾ ಪಲ್ಲಕ್ಕಿಯಲ್ಲಿಟ್ಟು ವಾದ್ಯಗಳ ಸಹಿತ ಮೆರವಣಿಗೆ ಮಾಡುವರು. ಹಳ್ಳಿ ಪಟ್ಟಣಗಳೆಂಬ, ಜಾತಿ–ಮತಗಳೆಂಬ ಭೇದಭಾವವಿಲ್ಲದೆ ಸ್ತ್ರೀ–ಪುರುಷರು ಜಾತ್ರೆಗಳಲ್ಲಿ ಭಾಗವಹಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಹಿಂದೂ ವಿವಿಧ ಸಮುದಾಯಗಳ ಸಾಮಾಜಿಕ ಜೀವನದ ಸೌಹಾರ್ದತೆ ಹಾಗೂ ಒಗ್ಗಟ್ಟಿನ ಮುಖ್ಯ ಸಂದರ್ಭ ಎಂದರೇ ಜಾತ್ರೆ ಮತ್ತು ರಥೋತ್ಸವಗಳೆಂದು ದಾಖಲಿಸಬಹುದಾಗಿದೆ. ಜಾತ್ರೆಗಳು ಗ್ರಾಮೀಣ ಜನರಿಗೆ ತಾವು ಉತ್ಪಾದಿಸುವ ಸರಕುಗಳನ್ನು ಮಾರಾಟ ಮಾಡಲು ಹಾಗೂ ತಮಗೆ ಅಗತ್ಯವಿರುವ ಪಾತ್ರೆ–ಪರಡಿ, ಬಟ್ಟೆ–ಬರೆ ಮುಂತಾದ ಸರಕುಗಳನ್ನು ಕೊಳ್ಳಲು ಒಳ್ಳೆಯ ಅವಕಾಶ ಕಲ್ಪಿಸುತ್ತವೆ. ಜಿಲ್ಲೆಯ ಕೆಲವೆಡೆ ಮುಸಲ್ಮಾನ್ (ಸೂಫಿ ಸಂತರ) ಸಂತರ ಸ್ಮರಣಾರ್ಥ ಉರುಸುಗಳು ಇಸ್ಲಾಂ ಪಂಚಾಂಗದ ಮಾಸ (ತಿಂಗಳು) ಗಳಲ್ಲಿ ನಡೆಯುತ್ತವೆ. ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಸೆಪ್ಟೆಂಬರ್ ಎಂಟಕ್ಕೆ ಸೈಂಟ್ ಮೇರಿ ಉತ್ಸವವನ್ನು ಆಚರಿಸುತ್ತಾರೆ.

ತುಮಕೂರಿನಲ್ಲಿ ಜನವರಿ (ಮಾಘಮಾಸ) ಮಾಹೆಯಲ್ಲಿ ಒಂದು ದಿನದ ಮಟ್ಟಿಗೆ ಲಕ್ಷ್ಮೀಕಾಂತಸ್ವಾಮಿಯ ರಥೋತ್ಸವವು ಜರುಗುತ್ತದೆ. ಇತರೆ ರಥೋತ್ಸವಗಳೆಂದರೆ, ತುಮಕೂರಿನ ಗಂಗಾಧರಸ್ವಾಮಿ ರಥೋತ್ಸವ ಫೆಬ್ರವರಿ ಮಾಹೆಯಲ್ಲಿ ಒಂದು ದಿನ ಮಟ್ಟಿಗೆ ನಡೆಯುತ್ತದೆ. ಕ್ಯಾತ್ಸಂದ್ರದ ಸಿದ್ಧಗಂಗೆಯ ಸಿದ್ಧಲಿಂಗೇಶ್ವರ ಸ್ವಾಮಿಯ ಜಾತ್ರೆಯು ಒಂದು ತಿಂಗಳು ಪರ್ಯಂತ ಜರುಗುತ್ತದೆ. ಮಾರ್ಚ್ (ಫಾಲ್ಗುಣ ಮಾಸ) ಮಾಹೆಯಲ್ಲಿ ದೇವರಾಯನ ದುರ್ಗದಲ್ಲಿ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವವು ಪುಬ್ಬಾ ನಕ್ಷತ್ರದಂದು ಜರುಗುತ್ತದೆ. ಚೈತ್ರ ಶುದ್ಧ ದಶಮಿಯಂದು ಅಜ್ಜಪ್ಪನಹಳ್ಳಿಯ (ಸ್ವಾಂದೇನಹಳ್ಳಿ) ಅರೆ ಆಂಜನೇಯ ಸ್ವಾಮಿಯ ರಥೋತ್ಸವ ಮತ್ತು ಜಾತ್ರೆ, ಶೆಟ್ಟಿಹಳ್ಳಿಯ ಆಂಜನೇಯಸ್ವಾಮಿ ರಥೋತ್ಸವ ಮತ್ತು ಜಾತ್ರೆ ಮೂರು ದಿನಗಳ ಮಟ್ಟಿಗೆ ನಡೆಯುತ್ತದೆ. ಸೀಬಿ ನರಸಿಂಹಸ್ವಾಮಿಯ ರಥೋತ್ಸವ ಮತ್ತು ಜಾತ್ರೆಯು ಫೆಬ್ರವರಿ (ಮಾಘಮಾಸ) ತಿಂಗಳಲ್ಲಿ ೧೫ ದಿನಗಳ ಮಟ್ಟಿಗೆ ನಡೆಯುತ್ತದೆ. ಬೆಳ್ಳಾವೆಯ ಸೋಮೇಶ್ವರ ರಥೋತ್ಸವ ಮತ್ತು ಜಾತ್ರೆಯು ಮಾರ್ಚ್ (ಫಾಲ್ಗುಣ ಮಾಸ) ತಿಂಗಳಲ್ಲಿ ಜರುಗುತ್ತದೆ. ಜಿಲ್ಲೆಯಲ್ಲಿ ಜರುಗುವ ಪ್ರಮುಖ ಜಾತ್ರೆ, ರಥೋತ್ಸವ ಹಾಗೂ ಉರುಸುಗಳ ವಿವರವನ್ನು ಕೋಷ್ಟಕ. ೩.೨೪ ರಲ್ಲಿ ನೀಡಲಾಗಿದೆ.

**ಕೋಷ್ಟಕ.೩.೨೪: ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಜರುಗುವ ಪ್ರಮುಖ ಜಾತ್ರೆ , ರಥೋತ್ಸವ ಹಾಗೂ ಉರುಸುಗಳು**

| ಕ್ರಮಸಂಖ್ಯೆ | ಜಾತ್ರೆಯ ಹೆಸರು | ಜಾತ್ರೆ ಸ್ಥಳ | ತಾಲೂಕು | ಜಾತ್ರೆ ಸಂದರ್ಭ | ಜಾತ್ರೆ ಅವಧಿ | ಜಾತ್ರೆಯಲ್ಲಿ ಸೇರುವ ಭಕ್ತಾದಿಗಳ ಸಂಖ್ಯೆ |
|---|---|---|---|---|---|---|
| ೧ | ಸಿದ್ಧಲಿಂಗೇಶ್ವರ ಸ್ವಾಮಿ ಜಾತ್ರೆ | ಸಿದ್ಧಗಂಗಾ ಕ್ಷೇತ್ರ | ತುಮಕೂರು | ಮಹಾಶಿವರಾತ್ರಿ | ೧೦ | ೨,೦೦,೦೦೦ |
| ೨ | ನರಸಿಂಹಸ್ವಾಮಿ ಜಾತ್ರೆ | ದೇವರಾಯನದುರ್ಗ | ತುಮಕೂರು | ಪಾಲ್ಗುಣ ಶುದ್ಧ ಹುಣ್ಣಿಮೆ | ೩ | ೧,೦೦,೦೦೦ |
| ೩ | ಆಂಜನೇಯ ಸ್ವಾಮಿ ಜಾತ್ರೆ | ಕ್ಯಾಮೇನಹಳ್ಳಿ | ಕೊರಟಗೆರೆ | ಮಾಘಶುದ್ಧ ಸಪ್ತಮಿ | ೧೨ | ೧,೦೦,೦೦೦ |
| ೪ | ದಂಡಿನಮಾರಮ್ಮ ಜಾತ್ರೆ | ಮಧುಗಿರಿ ಪಟ್ಟಣ | ಮಧುಗಿರಿ | ಪಾಲ್ಗುಣ ಶುದ್ಧ ೨ನೇ ಮಂಗಳವಾರ | ೧೦ | ೧,೦೦,೦೦೦ |
| ೫ | ಪಟ್ಟನಾಯಕನಹಳ್ಳಿ ದನಗಳ ಜಾತ್ರೆ | ಪಟ್ಟ ನಾಯಕನಹಳ್ಳಿ | ಶಿರಾ | ಪುಷ್ಯ, ಶುದ್ಧ ಪೌರ್ಣಿಮೆ | ೧೦ | ೫೦,೦೦೦ |
| ೬ | ತಾವರೆಕೆರೆ ಜಾತ್ರೆ | ತಾವರೆಕರೆ | ಶಿರಾ | ಮಾಘಶುದ್ಧ ಸಪ್ತಮಿ | ೧೦ | ೫೦,೦೦೦ |
| ೭ | ನರಸಿಂಹಸ್ವಾಮಿ ಜಾತ್ರೆ | ಸೀಬಿ | ಶಿರಾ | ಮಾಘ ಬಹುಳ ಬಿದಿಗೆ | ೧೦ | ೫೦,೦೦೦ |
| ೮ | ಸುಬ್ರಮಣ್ಯಸ್ವಾಮಿ ಜಾತ್ರೆ | ನಾಗಲಮಡಿಕೆ | ಪಾವಗಡ | ಪುಷ್ಯ ಶುದ್ಧ ಷಷ್ಠಿ | ೮ | ೫೦,೦೦೦ |
| ೯ | ಸಿದ್ದೇಶ್ವರ ಸ್ವಾಮಿ ಜಾತ್ರೆ | ಹರಿಹರಪುರ | ಪಾವಗಡ | ಮಾಘ ಬಹುಳ ಚತುರ್ದಶಿ | ೮ | ೫೦,೦೦೦ |
| ೧೦ | ಆಂಜನೇಯಸ್ವಾಮಿ ಜಾತ್ರೆ | ದಸೂಡಿ | ಚಿಕ್ಕನಾಯಕನಹಳ್ಳಿ | ಚೈತ್ರ ಶುದ್ಧ ಸಪ್ತಮಿ | ೫ | ೫೦,೦೦೦ |

| | | | | | | |
|---|---|---|---|---|---|---|
| ೧೧ | ಬಗಲ ಬಸವೇಶ್ವರ ಜಾತ್ರೆ | ಮುದ್ದೇನಹಳ್ಳಿ | ಚಿಕ್ಕನಾಯಕನಹಳ್ಳಿ | ಜೇಷ್ಠ ಬಹುಳ ಪಂಚಮಿ | ೭ | ೫೦,೦೦೦ |
| ೧೨ | ರಂಗಸ್ವಾಮಿ ಜಾತ್ರೆ, | ಕೆರೆಹಳ್ಳಿ | ಚಿಕ್ಕನಾಯಕನಹಳ್ಳಿ | ಪಾಲ್ಗುಣ ಶುದ್ಧ ದಶಮಿ | ೩ | ೫೦,೦೦೦ |
| ೧೩ | ಪ್ರಸನ್ನೇಶ್ವರ ಸ್ವಾಮಿ ಜಾತ್ರೆ | ಚಿಕ್ಕನಾಯಕನಹಳ್ಳಿ | ಚಿಕ್ಕನಾಯಕನಹಳ್ಳಿ | ಪಾಲ್ಗುಣ ಶುದ್ಧ ದಶಮಿ | ೪ | ೬೦,೦೦೦ |
| ೧೪ | ಪಾರ್ವತಮ್ಮ ಜಾತ್ರೆ | ಮತಿಘಟ್ಟ | ಚಿಕ್ಕನಾಯಕನಹಳ್ಳಿ | ಚೈತ್ರ ಶುದ್ಧ ದ್ವಾದಶಿ | ೪ | ೬೦,೦೦೦ |
| ೧೫ | ರಂಗನಾಥಸ್ವಾಮಿ ಜಾತ್ರೆ | ಹೊಸಕೆರೆ | ಗುಬ್ಬಿ | ಚೈತ್ರ ಶುದ್ಧ ಪ್ರತಿಪದ್ | ೧೧ | ೧,೦೦,೦೦೦ |
| ೧೬ | ಆಂಜನೇಯಸ್ವಾಮಿ ಜಾತ್ರೆ | ಕಲ್ಲೂರು | ಗುಬ್ಬಿ | ಪಾಲ್ಗುಣ ಶುದ್ಧ ತದಿಗೆ | ೯ | ೧೦,೦೦೦ |
| ೧೭ | ಗುಬ್ಬಿ ಚನ್ನಬಸವೇಶ್ವರಸ್ವಾಮಿ ಜಾತ್ರೆ | ಗುಬ್ಬಿ | ಗುಬ್ಬಿ | ಪಾಲ್ಗುಣ ಶುದ್ಧ ದಶಮಿ | ೧೦ | ೨,೦೦,೦೦೦ |
| ೧೮ | ಗುಂಗುರುಮಲೆ ದನಗಳ ಜಾತ್ರೆ | ಗುಂಗುರುಮಲೆ | ತಿಪಟೂರು | ಚೈತ್ರ ಶುದ್ಧ ಷಷ್ಟಿ | ೧೦ | ೧,೦೦,೦೦೦ |
| ೧೯ | ಕಿಬ್ಬನಹಳ್ಳಿ ದನಗಳ ಜಾತ್ರೆ | ಕಿಬ್ಬನಹಳ್ಳಿ | ತಿಪಟೂರು | ಚೈತ್ರ ಬಹುಳ ಚೌತಿ | ೩ | ೧,೦೦,೦೦೦ |
| ೨೦ | ಉಡಸಲಮ್ಮ ಜಾತ್ರೆ | ತುರುವೇಕೆರೆ | ತುರುವೇಕೆರೆ | ಚೈತ್ರ ಶುದ್ಧ ದಶಮಿ | ೭ | ೧,೦೦,೦೦೦ |
| ೨೧ | ಶಂಭುಲಿಂಗೇಶ್ವರ ಜಾತ್ರೆ | ಪುರ | ತುರುವೇಕೆರೆ | ಪುಷ್ಯ ಶುದ್ಧ ಸಪ್ತಮಿ | ೭ | ೫೦,೦೦೦ |
| ೨೨ | ಮಹಾಲಿಂಗೇಶ್ವರ ಸ್ವಾಮಿ ಜಾತ್ರೆ | ಲೋಕಮ್ಮನಹಳ್ಳಿ | ತುರುವೇಕೆರೆ | ಪುಷ್ಯ ಬಹುಳ ಪ್ರತಿಪದ್ | ೭ | ೫೦,೦೦೦ |
| ೨೩ | ಗಂಗಾಧರೇಶ್ವರ ಸಾಮಿ ಜಾತ್ರೆ | ಅಮಾನಿಕೆರೆ | ತುರುವೇಕೆರೆ | ಮಾಘಬಹುಳ ದಶಮಿ | ೭ | ೫೦,೦೦೦ |
| ೨೪ | ಹೊನ್ನಮ್ಮದೇವಿ ಜಾತ್ರೆ | ದಂಡಿನಶಿವರ | ತುರುವೇಕೆರೆ | ಚೈತ್ರ ಬಹುಳ ಶುದ್ಧ ದಶಮಿ | ೭ | ೫೦,೦೦೦ |
| ೨೫ | ಮಹದೇಶ್ವರ ಸ್ವಾಮಿ ಜಾತ್ರೆ | ದನ್ನಾಯಕನಪುರ | | ಕಾರ್ತಿಕ ಶುದ್ಧ ಪೌರ್ಣಮಿ | ೭ | ೫೦,೦೦೦ |
| ೨೬ | ಸಿದ್ಧಲಿಂಗೇಶ್ವರ ಸ್ವಾಮಿ ಜಾತ್ರೆ | ಯಡಿಯೂರು | ಕುಣಿಗಲ್ | ಚೈತ್ರ ಶುದ್ಧ ಪಂಚಮಿ | ೭ | ೨,೦೦,೦೦೦ |

**ಆಧಾರ : ಮುಜರಾಯಿ ಇಲಾಖೆ, ಜಿಲ್ಲಾಧಿಕಾರಿಗಳ ಕಚೇರಿ, ತುಮಕೂರು.**

# ಜಿಲ್ಲೆಯ ಬುಡಕಟ್ಟು ಜನಾಂಗಗಳು ಮತ್ತು ಸಂಸ್ಕೃತಿ

**–ಲೇಖಕರು: ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**

ತುಮಕೂರು ಜಿಲ್ಲೆ ಬುಡಕಟ್ಟು ಸಂಸ್ಕೃತಿಯ, ಜನಾಂಗದ ಪ್ರಭಾವಿ ಪ್ರದೇಶಗಳಲ್ಲಿ ಒಂದಾಗಿದೆ. ಭೌಗೋಳಿಕವಾಗಿ ಮೂರು ಭಾಗವಾಗಿ, ಇಲ್ಲಿನ ಜನಾಂಗಿಕ ಮೇಲ್ಮೈ ನಿರ್ಮಾಣಗೊಂಡಿದ್ದು ಶಿರಾ, ಪಾವಗಡ ಹಾಗೂ ಮಧುಗಿರಿ ತಾಲೂಕುಗಳು ಪ್ರಧಾನವಾಗಿ ಬುಡಕಟ್ಟು ಜನಾಂಗಗಳ ಪ್ರಭಾವಿ ನೆಲೆ. ಕಾಡುಗೊಲ್ಲರು, ವಡ್ಡರು, ಮ್ಯಾಸಬೇಡರು, ಬೆಸ್ತರು, ಲಂಬಾಣಿಗಳು, ಬುಡಬುಡಿಕೆ – ಈ ಬಗೆಯ ಅಪ್ಪಟ ಬುಡಕಟ್ಟು ಲಕ್ಷಣಗಳೊಂದಿಗೆ ಇಲ್ಲಿನ ನೆಲಮೂಲ, ಕುಲಮೂಲ, ದೈವಮೂಲವನ್ನು ಸ್ವೀಕರಿಸುತ್ತಾ ಸಾರ್ವತ್ರಿಕವಾಗಿ ಭಾವನಾತ್ಮಕತೆಯನ್ನು ಹೊರಮಟ್ಟದಲ್ಲಿ ಪ್ರಕಟಪಡಿಸುತ್ತಾ ಬಂದರೂ ತಮ್ಮ ಜಾತಿ, ಸಂಸ್ಕೃತಿಯ ಸೂಕ್ಷ್ಮಾತಿಸೂಕ್ಷ್ಮ ಗುಣ, ಸ್ವಭಾವಗಳನ್ನು ಎಂದಿಗೂ ಬಿಟ್ಟುಕೊಟ್ಟಿಲ್ಲ. ಅಂತೆಯೇ ತುಮಕೂರಿನಿಂದ ಪಶ್ಚಿಮಕ್ಕೆ ಗುಬ್ಬಿ, ತಿಪಟೂರು, ತುರುವೇಕೆರೆ ತಾಲೂಕುಗಳು ಒಂದು ಬಗೆಯಲ್ಲಿ ಮಿಶ್ರ ಜನಾಂಗದ, ಸಮಗ್ರ ಸಂಸ್ಕೃತಿಯ ರೂಪವಾಗಿ ಪ್ರಕಟವಾದರೆ, ಜಿಲ್ಲೆಯ ಕುಣಿಗಲ್ ಹಾಗೂ ಚಿಕ್ಕನಾಯಕನಹಳ್ಳಿ ತಾಲೂಕುಗಳು ಕೊಂಚ ಭಿನ್ನವಾಗಿ, ಬುಡಕಟ್ಟು ನೆಲೆಯ ಗುಣಸ್ವಭಾವ ಹೊಂದಿದ್ದರೂ, ಭೂಹಿಡುವಳಿಗಾರಿಕೆ ಜೀವನ ವಿಧಾನ ಇಲ್ಲಿದೆ. ಗಂಗಡಿಕಾರ ಒಕ್ಕಲಿಗರ ಪ್ರಭಾವಿ ನೆಲೆಯಾದ ಕುಣಿಗಲ್ ತಾಲೂಕಿನಲ್ಲಿ ಹೆಚ್ಚಾಗಿ ಬುಡಕಟ್ಟು ಜನಾಂಗದ ಪ್ರಭಾವ ಕಂಡುಬರುವುದಿಲ್ಲ. ಆದರೂ ಕುಣಿಗಲ್ ತಾಲೂಕಿನ ಹುಲಿಯೂರುದುರ್ಗ, ಹುತ್ರಿದುರ್ಗ, ಬಿಗಿನಗೆರೆ, ಬುಕ್ಕಸಾಗರ, ಕತ್ರಿಘಟ್ಟ ಮೊದಲಾದ ಬೆಟ್ಟಸಾಲು ಪರಿಸರ ಹಾಗೂ ಮಾಗಡಿ ತಾಲೂಕಿನ ಗಡಿಗೆ ಅಂಟಿಕೊಂಡಂತೆ ಬೆಸ್ತರು, ಇರುಳಿಗರು, ಬುಡಬುಡಿಕೆಯವರು ಕಂಡುಬರುತ್ತಾರೆ. ಚಿಕ್ಕನಾಯಕನಹಳ್ಳಿ ತಾಲೂಕು ಸಮ್ಮಿಶ್ರ ಸಂಸ್ಕೃತಿಯ ನೆಲೆ. ಇಲ್ಲಿ ಮೇಲ್ಮಟ್ಟಕ್ಕೆ ಕುರುಬರು, ವೀರಶೈವರು ಪ್ರಧಾನವಾಗಿದ್ದು ಶೈವ ಸಂಸ್ಕೃತಿಯ ದಟ್ಟಣೆಯನ್ನು ನಿಚ್ಚಳವಾಗಿ ಗುರುತಿಸಬಹುದಾಗಿದೆ. ಬೇಡರು, ಕಾಡುಗೊಲ್ಲರು ಇಲ್ಲಿನ ಮೂಲನಿವಾಸಿಗಳಾಗಿ ಸಾಕಷ್ಟು ಸಂಖ್ಯೆಯಲ್ಲಿದ್ದರೂ ತಮ್ಮ ತಮ್ಮ ಕುಲಮೂಲ, ದೈವಮೂಲವನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬರುತ್ತಿದ್ದಾರೆ.

ಭಾರತದಲ್ಲೂ ಬುಡಕಟ್ಟು ಸಂಸ್ಕೃತಿ, ಜನಾಂಗಗಳ ಸ್ಥಿತಿ ಸ್ಥಿತ್ಯಂತರವಾಗಿದೆ. ಸ್ವಾತಂತ್ರ್ಯದ ಬಳಿಕವಂತೂ ಇಲ್ಲಿ ಬುಡಕಟ್ಟು ವರ್ಗ ಆ ತನವನ್ನೇ ಕಳೆದುಕೊಳ್ಳುತ್ತಿದೆ. ಕಾಡು–ಗುಡ್ಡಗಳು, ಮರ–ತೋಪುಗಳು ಕೈಗಾರಿಕೆ, ವ್ಯವಸಾಯ, ಭೂಮಿ ಮತ್ತಿತರ ಕಾರಣಗಳಿಂದ ನಾಶವಾದಂತೆ ಮರ–ಗಿಡಗಳು, ವನ್ಯಪರಿಸರ ಸಂಬಂಧಿ ಉತ್ಪನ್ನಗಳು ಕಣ್ಮರೆಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಬುಡಕಟ್ಟುಗಳನ್ನಿಲ್ಲಿ ಪರಿಚಯಿಸಲಾಗಿದೆ.

## ಕಾಡುಗೊಲ್ಲರು

'ಕಾಡುಗೊಲ್ಲರು', ಬುಡಕಟ್ಟು ಸಂಸ್ಕೃತಿಯ ಅಪ್ಪಟರೂಪ. ಮಾನವಶಾಸ್ತ್ರಜ್ಞ ಎಂ.ಡಿ. ಲೂಯಿಸ್ ತನ್ನ 'ಟ್ರ್ಯಾಬ್ಸ್ ಆಫ್ ಮೈಸೂರು ಕೃತಿಯಲ್ಲಿ ೨೩ ಬುಡಕಟ್ಟು ವರ್ಗಗಳನ್ನು ಗುರುತಿಸಿದ್ದು, ಅವುಗಳಲ್ಲಿ ಕಾಡುಗೊಲ್ಲರದೂ ಒಂದಾಗಿದೆ. ಇವರು ಪಶು ಅಥವಾ ಕುರಿ ಪೋಷಕರಾಗಿ, ಊರುಗಳ ವಾಸಕ್ಕಿಂತ ಹೆಚ್ಚಾಗಿ ಕಾಡು, ಗುಡ್ಡ, ಕಣಿವೆಗಳಲ್ಲಿ ವಾಸ ಮಾಡುತ್ತಿದ್ದುದರಿಂದ ಕಾಡುಗೊಲ್ಲರು ಎಂದು ಕರೆಯಲ್ಪಡುತ್ತಿದ್ದರು. ಕಾಡುಗೊಲ್ಲರ ಸಮಾಜ ಮತ್ತು ಅವರ ಆಚಾರ–ವಿಚಾರಗಳ ಒಟ್ಟು ಸಂಸ್ಕೃತಿ ಕಾಡುಗಳಿಂದಲೇ ರೂಪಿತವಾಗಿದ್ದ ಕಾರಣ ಇವರನ್ನು ಕಾಡುಗೊಲ್ಲರು ಎಂದು ಕರೆಯಲಾಗಿದೆ.

ಬೆಳಗೂ ಬೈಗೂ ಹಕ್ಕಿಗಳ ಇಂಚರಕ್ಕೆ ಕುರಿ, ಮೇಕೆ, ದನಗಳ ಜೊತೆಜೊತೆಗೆ ತಮ್ಮ ಮೈಮನಸ್ಸನ್ನು ಒಗ್ಗಿಸುತ್ತಾ ಬದುಕನ್ನು ರೂಪಿಸಿಕೊಂಡವರು ಗೊಲ್ಲಜನಾಂಗ. ದೇಶಿ ಸಂಸ್ಕೃತಿಯ ಗೊಲ್ಲರ ಹಿರೀಕರು ತಮ್ಮನ್ನು ಗೊಲ್ಲರು, ಗೊಲ್ಲಗೌಡರು ಎಂದೇ ಕರೆದುಕೊಳ್ಳುತ್ತಾರೆ. ಪ್ರಕೃತಿಯಲ್ಲಿ ಪ್ರಕೃತಿಯಾಗಿ ಬಾಳುವ ಕಾಡುಗೊಲ್ಲರು ಹಿಂದೆ, ನಗರ ಪ್ರದೇಶಗಳಿಂದ ದೂರದ ಗುಡ್ಡ, ಕಾಡು, ಹಸಿರು, ಮರ, ವನ, ಮರ–ಗಿಡಗಳ ಪಕ್ಕ, ಬಾದೆಹುಲ್ಲು, ಮರದ ಎಲೆ ಅಥವಾ ಹಂಚಿಕಡ್ಡಿ ಹುಲ್ಲಿನಿಂದ ಜೋಪಡಿಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಇವರು ತಮ್ಮ ವಾಸಸ್ಥಳಕ್ಕೆ ಹಟ್ಟಿ, ಗುಡಿಸಲು ಎಂದು ಕರೆದುಕೊಳ್ಳುತ್ತಾರೆ. ಹಲವಾರು ಹಟ್ಟಿಗಳು ಸೇರಿದರೆ ಒಂದು ಕಣವೆ. ಅನೇಕ ಕಣವೆಗಳು ಸೇರಿದರೆ ಒಂದು ಅಂಬು. ಹಲವು ಅಂಬುಗಳು ಸೇರಿದರೆ ಒಂದು ಗುಡಿಕಟ್ಟು. ಕೆಲವು ಗುಡಿಕಟ್ಟುಗಳು ಸೇರಿದರೆ ಒಂದು ಕಟ್ಟೆಮನೆ. ಈ ಕಟ್ಟೆಮನೆಯೇ ಕುಲಸಂಬಂಧಿ ಆಚಾರ–ವಿಚಾರ, ನ್ಯಾಯ–ನೀತಿ, ಮದುವೆ ಮುಂತಾದವನ್ನು

ನಿರ್ಣಯಿಸುವುದು. ಇದರಿಂದಾಗಿ ಗೊಲ್ಲರಲ್ಲಿ ಕಟ್ಟೆಮನೆಗೆ ಬಹಳ ಗೌರವ. ಕಟ್ಟೆಮನೆಯ ಮುಖಂಡನನ್ನು ಯಜಮಾನ ಎಂದು ಕರೆಯಲಾಗುವುದು. ಇವರಲ್ಲಿ ಇಬ್ಬರು ಪೂಜಾರಿಗಳನ್ನು ಆ ಯಜಮಾನಪ್ಪನೇ ನೇಮಿಸುತ್ತಾನೆ. ಅವರಲ್ಲಿ ಒಬ್ಬ ಕಾಡುಗೊಲ್ಲರ ಸಾಂಪ್ರದಾಯಿಕ ದೇವರುಗಳನ್ನು ಪೂಜಿಸುವ ಪೂಜಾರಿಯಾದರೆ, ಇನ್ನೊಬ್ಬ ಆ ಜನಾಂಗ ಮತ್ತು ಕಟ್ಟೆಮನೆಗೆ ಸೇರಿದ, ಸತ್ತವರ ವಿಧಿ–ವಿಧಾನ, ಶವಸಂಸ್ಕಾರಗಳ ಉಸ್ತುವಾರಿ ನೋಡಿಕೊಳ್ಳುವ ಪೂಜಾರಿ. ಕಾಡುಗೊಲ್ಲರು ಆಧುನಿಕ ಸಂದರ್ಭದಲ್ಲೂ ಬುಡಕಟ್ಟು ಲಕ್ಷಣಗಳನ್ನು ಮೀರುವುದಿಲ್ಲ. ಮಡಿ–ಮೈಲಿಗೆ, ರಜತಾದಿ ಸೂತಕಗಳಲ್ಲಿ ಅತ್ಯಂತ ಕಟ್ಟುನಿಟ್ಟು. ಎದೆಗೆ ಕುಪ್ಪಸ ತೊಡದ ಗೊಲ್ಲ ಮಹಿಳೆಯರು ಮುಂಗೈಗೆ ಗೊಲ್ಲಕಡಗವನ್ನು ಹಾಕಿಕೊಳ್ಳುತ್ತಾರೆ. ಗಂಡನ ಪ್ರತಿರೂಪ ಎಂದೇ ಮುಂಗೈ ಕಡಗವನ್ನು ಭಾವಿಸುವ ಗೊಲ್ಲ ಮಹಿಳೆಯರಿಗೆ, ಸಂಪ್ರದಾಯದ ಕಠಿಣ ಆಚರಣೆ ತಪ್ಪಿಲ್ಲ. ಮಾಸಿಕ ಮುಟ್ಟಾದಾಗ ಊರಿಂದ ಹೊರಗೆ ನೀರು ಇರುವ ಸ್ಥಳದಲ್ಲಿ ಆಕೆಯೇ ಸ್ನಾನ ಮಾಡಿಕೊಂಡು, ನಂತರ ತನ್ನ ಹಟ್ಟಿಯಿಂದ ಇನ್ನೂರು ಗಜದ ದೂರ ಮರದ ನೆರಳು ಅಥವಾ ಇನ್ಯಾವುದರ ಆಶ್ರಯವನ್ನು ಪಡೆಯಬೇಕು. ಹೀಗೆ ಮೂರು ಅಥವಾ ಐದು ದಿನ ಕಳೆದು ಹಟ್ಟಿಯ ಒಳಗೆ ಬರಬೇಕಾಗುತ್ತದೆ. ಕಾಡುಗೊಲ್ಲರಲ್ಲಿ ಹೆಣ್ಣು ಗರ್ಭವತಿಯಾಗಿ ಹೆರಿಗೆ ಸಮೀಪಿಸುವ ವೇಳೆಗೆ ಊರಿಂದ ಅರ್ಧ ಕಿ.ಮೀ. ದೂರದಲ್ಲಿ 'ಪಾಕಿ' ಎಂಬ ಗುಡಿಸಲನ್ನು 'ಬಾಧೆ' ಎಂಬ ಹುಲ್ಲಿನಿಂದ ಅಂದವಾಗಿ ಬಿದಿರು, ಗಳ, ಎಲೆಗಳಿಂದ ಮಳೆಯ ನೀರು, ಚಳಿ–ಗಾಳಿ ಒಳಗೆ ಬಾರದ ಹಾಗೆ ನಿರ್ಮಿಸಿ ಗರ್ಭಿಣಿ ಹೆಂಗಸನ್ನು ಆ ಪಾಕಿಯ ಒಳಗೆ ಸೇರಿಸುತ್ತಾರೆ. ಆಕೆ ಆ ಗುಡಿಸಲಲ್ಲಿಯೇ ಹೆರಬೇಕು. ಈಕೆಗೆ ಸಹಾಯಕ್ಕೆ ಯಾರೂ ಬರುವಂತಿಲ್ಲ. ಆಕೆಯ ಗಂಡ ಆ ಪಾಕಿಯಿಂದ ಇಪ್ಪತ್ತು ಗಜಗಳ ದೂರದಲ್ಲಿ ಮತ್ತೊಂದು ಗುಬ್ಬವನ್ನು ನಿರ್ಮಿಸಿಕೊಂಡು ತಂಗಬೇಕು. ಹೀಗೆ ಒಂಬತ್ತು ದಿನಗಳ ಕಾಲ ಆಕೆಯ ಸನಿಹಕ್ಕೆ ಬೇರೆ ಯಾರೂ ಬರುವಂತಿಲ್ಲ. ಆಕೆಗೆ ಅನ್ನ, ಆಹಾರವನ್ನು ಆಕೆಯ ಗಂಡ ತಂದು ಗುಡಿಸಲು ಮುಂದೆ ಸ್ವಲ್ಪ ದೂರದಲ್ಲಿ ಇಟ್ಟುದನ್ನು ಆಕೆ ಸೇವಿಸಬೇಕು. ಮೊದಲ ಐದು ಅಥವಾ ಒಂಬತ್ತು ದಿನಕ್ಕೆ ಬಾಣಂತಿಗೆ ಬಿಸಿನೀರು ಹಾಕಲು ಊರ ನೆರೆಯವರು ತಮ್ಮ ತಮ್ಮ ಮನೆಯಿಂದ ಬಿಸಿನೀರನ್ನು ತಂದು ಗುಡಿಸಲಿನಿಂದ ಸ್ವಲ್ಪದೂರದಲ್ಲಿ ಒಂದು ದೊಡ್ಡ ಕೊಡಕ್ಕೆ ಹಾಕುತ್ತಾರೆ. ಆಕೆ ಆ ನೀರಿನಿಂದ ಸ್ನಾನಮಾಡಿ ಮಗುವಿಗೂ ಸ್ನಾನ ಮಾಡಿಸಬೇಕು. ಈ ಸಂದರ್ಭದಲ್ಲಿ ಆಕೆಯನ್ನು ಆ ಹಟ್ಟಿಯ ಯಾವುದೇ ಹೆಣ್ಣಾಗಲಿ, ಗಂಡಾಗಲಿ ಮುಟ್ಟಿದರೆ ಅವರೂ ಮೈಲಿಗೆಯಾಗಿ ಮೂರು ತಿಂಗಳು ಕಾಲ ಊರಿಂದ ಹೊರಗೆ ಇರಬೇಕು. ಮೂರು ತಿಂಗಳುಗಳ ನಂತರ ಮಡಿವಾಳ ತರುವ ಮಡಿಬಟ್ಟೆ ತೊಟ್ಟ ನಂತರ ಪೂಜಾರಿ ಬಂದು ಬಗೆಬಗೆಯ ಶಾಸ್ತ್ರಗಳನ್ನು ಮಾಡಿ, ಜನ್ನಿಗೆ ಹಾಕಿದ ನಂತರ, ಬಾಣಂತಿ ಮಗುವನ್ನು ಎತ್ತಿಕೊಂಡು ಪಾಕಿಯಿಂದ ಹೊರಗೆ ಬರುವಳು. ಅಲ್ಲಿ ಮಗುವಿಗೆ ಮೀಸಲು ಹಾಲಿನ ಜನ್ನಿಗೆ ಹಾಕಿ, ನಾಲಿಗೆ ಸುಟ್ಟು, ಮೂರು ಕಡೆ ನಿಲ್ಲಿಸಿ, ಕೂಡಿಸಿ ಶಾಸ್ತ್ರ ಕಳೆದು, ಕಳ್ಳೆ ಬೇಲಿ ಒಳಗೆ ಕರೆದುಕೊಂಡು ಬಂದು, ವೀಳ್ಯದೆಲೆ ನೀವಳಿಸಿ, ನಂತರ ಊರ ಮಧ್ಯಭಾಗದಲ್ಲಿರುವ ಜುಂಜಪ್ಪ, ಚಿತ್ರದೇವರು, ಕಾಟಂಲಿಂಗ, ಮೂಡಲಗಿರಿಯಪ್ಪ, ಹನುಮಂತದೇವರ ಗುಡಿಗೆ ಕರೆದೊಯ್ದು ಪೂಜೆ ನೆರವೇರಿಸಿ, ಫಲಹಾರ, ಅಡಕೆ ಎಲೆ ತಿದ್ದಿ, ನಂತರ ಮಗು ಮತ್ತು ಬಾಣಂತಿಯನ್ನು ಮನೆಯ ಒಳಗೆ ಕರೆದುಕೊಳ್ಳಲಾಗುವುದು. ಹೆಣ್ಣು ಮೈನೆರೆದಾಗಲೂ ಹೀಗೆಯೇ ಕಠಿಣ ವ್ರತಗಳನ್ನು ಮಾಡಬೇಕಾಗುತ್ತದೆ. ಆದುದರಿಂದ ಗೊಲ್ಲರಿಗೆ 'ಹೆತ್ತ ಸೂತಕ ಸತ್ತ ಸೂತಕಕ್ಕಿಂತ ಕಷ್ಟ ಎಂಬ ಗಾದೆ ಕಟ್ಟಲಾಗಿದೆ. ಆದರೆ ಇಂದು ಸರ್ಕಾರ ಹೆರಿಗೆಗೆ ಬೇಕಾದ ಆಧುನಿಕ ಸೌಕರ್ಯಗಳನ್ನು ಒದಗಿಸುವ ಮೂಲಕ ಕಾದುಗೊಲ್ಲ ಮಹಿಳೆಯರ ಸ್ಥಿತಿಯನ್ನು ಸುಧಾರಿಸುವಲ್ಲಿ ಯಶಸ್ವಿಯಾಗಿದೆ.

ಕಾಡುಗೊಲ್ಲರ ವೇಷಭೂಷಣ ಸರಳ. ಸಂಪ್ರದಾಯಸ್ಥ ಗೊಲ್ಲರ ಗಂಡಸರು ನಡುವಿಗೆ ಒಂದು ಲಂಗೋಟಿ ಸುತ್ತಿಕೊಂಡು, ಹೆಗಲ ಮೇಲೊಂದು ಕಂಬಳಿ ಪಟ್ಟೆಯನ್ನು ಹಾಕುತ್ತಾರೆ. ಕೆಲವರು ಅಂಗಿಯನ್ನು ತೊಟ್ಟು ತಲೆಗೆ ಸಣ್ಣಚೌಕುಳಿಯ ಕೆಂಪು ಮುಂಡಾಸನ್ನು ಕಟ್ಟಿಕೊಳ್ಳುವುದುಂಟು. ಕಾಲಿಗೆ 'ಗೊಲ್ಲ ಮೆಟ್ಟು' ಎಂಬ ಗಟ್ಟಿಬಾರಿನ, ಎತ್ತರದ ಒರಟು ಚರ್ಮದ ಮೆಟ್ಟನ್ನು ಹಾಕುತ್ತಾರೆ. ಹೆಂಗಸರು ರವಿಕೆ ತೊಡುವುದಿಲ್ಲ. ಮಹಿಳೆಯರು ಕೆಂಪು ಅಂಚಿನ ಬಿಳಿಯ ಸೀರೆ ಉಡುತ್ತಾರೆ. ಮುಂಗೈಗೆ ಗೊಲ್ಲ ಕಡಗ, ಕಿವಿಗೆ ತಾಳೆಗರಿಯ ಬಿಚ್ಚೋಲೆಯನ್ನು ಧರಿಸುತ್ತಾರೆ. ಮದುವೆ ಸಂದರ್ಭಗಳಲ್ಲಿ ಮಾತ್ರ ಗಂಡಿಗೆ ಮುಂಗೈಬದ್ದು, ಕಿವಿಗಳಿಗೆ ಪಾಟಲಾಕು, ಕೈಬೆರಳಿಗೆ ಉಂಗುರ.

ಕೊರಳಿಗೆ ಸರ, ಹೆಗಲಿಗೆ ಕರಿಕಂಬಳಿ, ಸೊಂಟಕ್ಕೆ ಕಂಚಿದಟ್ಟಿ, ತಲೆಗೆ ರುಮಾಲು, ಕಾಲಿಗೆ ಮೆಟ್ಟು, ಅಡಿಕೆ ಚೀಲಗಳಿಂದ ಅಲಂಕರಿಸುತ್ತಾರೆ. ಹೆಣ್ಣಿಗೆ ಕಾಲಿಗೆ ಕಾಲಂದುಗೆ, ಗೆಜ್ಜೆಪಟ್ಟೆ, ಸುತ್ತುಮಿಂಚು, ಪಿಲ್ಲಿ, ಮೂಗಿಗೆ ಬೇಸರಿ, ಕೈಗೆ ಬಿಳಿಯ ಕಡಗ, ಕೊರಳಿಗೆ ದಪ್ಪನೆಯ ಅಗಲದ ಅಡಿಕೆ ಮತ್ತು ಸಿಂತಾಕ ಎಂಬ ಚಿನ್ನದ ಡಾಬಿನಾಕೃತಿಯ ಒಡವೆಗಳನ್ನು ಹಾಕುತ್ತಾರೆ. ಮದುವೆಯ ನಂತರ ಎಡಗೈಗೆ 'ಗೊಲ್ಲ ಕಡಗ' ಧರಿಸಬೇಕೆಂಬ ನಿಯಮವಿದೆ.

ಕಾಡುಗೊಲ್ಲರ ದೇವಾಲಯಗಳಿಗೆ 'ಗುಬ್ಬ' ಎಂದು ಕರೆಯುತ್ತಾರೆ. ಇದನ್ನು ಬಸರಿ, ಬಾದೆ, ಹಂಚಿಹುಲ್ಲು, ಮುತ್ತುಗದ ಎಲೆ ಹಾಗೂ ಸುಧಾರಿಸಿದಂತೆ ಅಡಿಕೆ ಪಟ್ಟೆಗಳಿಂದ ಅಂದವಾಗಿ ಮೇಲಿಂದ ಕೆಳಗೆ ಸೋಪಾನವಾಗಿ ಜೋಡಿಸಿ, ಬಿದ್ದ ಮಳೆ ನೀರು ಸಲೀಸಾಗಿ ಹರಿದು ಹೋಗುವಂತೆ ನಿರ್ಮಿಸಿರುತ್ತಾರೆ. ಗುಬ್ಬ ಎತ್ತರದ ಕಲ್ಲುಕಟ್ಟೆ, ಜಗಲಿಯ ಮೇಲಿದ್ದು ಒಬ್ಬರು ಹೋಗಿ ಒಳಗೆ ಕುಳಿತುಕೊಳ್ಳುವಷ್ಟು ಮಾತ್ರ ಜಾಗವಿರುತ್ತದೆ. ಭಕ್ತರು ಹೊರಗೆ ನಿಂತೇ ಪೂಜೆಯ ಪ್ರಕ್ರಿಯೆಯನ್ನು ನೆರವೇರಿಸಬೇಕು. ಪಟ್ಟದ ಪೂಜಾರಿ ಹೊರತು ಅಪ್ಪಿತಪ್ಪಿಯೂ ಇತರರು ಈ ಗುಬ್ಬದೊಳಗೆ ಪ್ರವೇಶಿಸುವಂತಿಲ್ಲ. ಒಂದು ವೇಳೆ ಪ್ರವೇಶಿಸಿದರೆ, ಮತ್ತೆ ದೇವರನ್ನು ಹೊಳೆಗೆ ಕರೆದುಕೊಂಡು ಹೋಗಿ, ಪುಣ್ಯಸ್ನಾನ ಮಾಡಿಸಿ, ನಂತರ ವಿಧಿಬದ್ಧವಾಗಿ ಉತ್ಸವ ನಡೆದು ಪುನರ್ ಪ್ರತಿಷ್ಠಾಪಿಸಬೇಕಾಗುತ್ತದೆ.

ಜಿಲ್ಲೆಯಲ್ಲಿ ಕಾಡುಗೊಲ್ಲರ ದೇವರುಗಳೆಲ್ಲವೂ ಗಂಗಾಸ್ನಾನಕ್ಕೆಂದು ಸಿರಾ ಪಟ್ಟಣಕ್ಕೆ ೨೨ ಕಿ.ಮೀ. ದೂರದ ಶಿರಾ–ಬುಕ್ಕಾಪಟ್ಟಣ ರಸ್ತೆಯಲ್ಲಿರುವ ಮರಡಿಗುಡ್ಡದ ರಂಗನಾಥಪುರದ 'ಪರಸವ್ವನ ಕೆರೆಗೆ' ಬರುವುದು ವಾಡಿಕೆಯಾಗಿದೆ. ಮಾತ್ರವಲ್ಲ ಹೆರಿಗೆ, ಸಾವು, ಸೂತಕ ತಕ್ಕೊಳ್ಳುವ, ಜೆನಿಗೆ ಹಾಕುವ ಪವಿತ್ರ ಕಾರ್ಯಕ್ಕೂ ಪುಣ್ಯಜಲವಾಗಿ ಈ ಕೆರೆಯ ನೀರು ತರುವುದು ನಿಯಮವಾಗಿದೆ. ಹಿರಿಯೂರು, ಹೊರರಾಜ್ಯದ ಕಲ್ಯಾಣದುರ್ಗ ಹಾಗೂ ಮಡಕಶಿರಾ ಭಾಗದ ಗೊಲ್ಲರು ಪುಣ್ಯಜಲಕ್ಕೆ ಈ ಕೆರೆಗೆ ಬರುವುದು ಇಂದಿಗೂ ರೂಢಿಯಲ್ಲಿದೆ.

ಗೊಲ್ಲರು ಸಣ್ಣಪುಟ್ಟ ಜಗಳ, ನ್ಯಾಯ ತೀರ್ಮಾನಗಳನ್ನು ದೇವರ ಗುಬ್ಬದ ಬಳಿ ತೀರ್ಮಾನಿಸಿಕೊಳ್ಳುತ್ತಾರೆ. ಪೂಜಾರಿ ನ್ಯಾಯಾಧಿಕರಣದ ಮುಖ್ಯಸ್ಥ. ಹಾಲು–ಅನ್ನ, ನೀರು, ಅಡಿಕೆ ಎಲೆ, ಗಣೆ, ಕಂಬಳಿ ಗದ್ದಿಗೆಯ ಮೇಲೆ ಆಣೆ–ಭಾಷೆ, ಪ್ರಮಾಣ ಮಾಡಿ ನ್ಯಾಯ ತೀರ್ಮಾನ ಆರಂಭವಾಗುತ್ತವೆ. ಇಲ್ಲಿ ತೀರ್ಮಾನವಾಗದೇ ಇರುವ ವ್ಯಾಜ್ಯಗಳು ಅಂತಿಮವಾಗಿ ಕಟ್ಟೆಮನೆಯಲ್ಲಿ ಇತ್ಯರ್ಥವಾಗಲೇಬೇಕು. ಆ ವೇಳೆಗೆ ವರ್ಷಗಟ್ಟಲೆ ಕಾಲ ಸರಿದಿರುತ್ತದೆ. ಹಾಗಾಗಿಯೇ 'ಗೊಲ್ಲರ ನ್ಯಾಯ ಮುಗಿಯೋಲ್ಲ, ಕುರುಬರ ಮದುವೆ ಮುಗಿಯಲ್ಲ', 'ಗೊಲ್ಲರ ನ್ಯಾಯ ಮಕ್ಕಳೆಲ್ಲಾ ಉಪಾಸ ಸಾಯ' ಎಂಬ ಮಾತುಗಳೂ ಗಾದೆಯ ಸ್ವರೂಪ ಪಡೆದುಕೊಂಡಿವೆ.

ಕಾಡುಗೊಲ್ಲರು ದೈವನಿಷ್ಠರು. ಇವರು, ಒಂದು ಬೆಣಚುಕಲ್ಲಿಗೆ ಮೂರು ಬೊಟ್ಟು ಇಟ್ಟು ಅದರಲ್ಲೇ ದೈವತ್ವವನ್ನು ಕಾಣುತ್ತಾರೆ. ಚಿತ್ರದೇವರು, ಕಾಟಂದೇವರು, ಕ್ಯಾತೇದೇವರು, ಪಾತೇದೇವರು, ಈರಣ್ಣ, ಈರಮುದ್ದಪ್ಪ, ರಾಮದೇವರು, ತಿಮ್ಮಪ್ಪ, ರಂಗನಾಥ ದೇವರುಗಳನ್ನೇ ಇವರು ಹೆಚ್ಚಾಗಿ ಪೂಜಿಸುತ್ತಾರೆ. ಭೂತಪ್ಪ ಇವರ ಮತ್ತೊಬ್ಬ ಸಾಂಸ್ಕೃತಿಕ ವೀರ, ಆತನನ್ನೂ ಪೂಜಿಸುತ್ತಾರೆ. ಆದರೆ ಚಿತ್ರದೇವರು ಮತ್ತು ಕಾಟಂಲಿಂಗ ಕಾಡುಗೊಲ್ಲರ ಪುರಾಣರೂಪದ ಆದಿದೈವಗಳು. ಹಾಗಾಗಿಯೇ ಗೊಲ್ಲರು ವಾಸಿಸುವ ಊರುಗಳಿಗೆ ಚಿತ್ತಪ್ಪನಹಟ್ಟಿ, ಕಾಟನಹಳ್ಳಿ ಎಂದೇ ಕರೆಯುತ್ತಾರೆ. ಜೊತೆಗೆ ಗೊಲ್ಲರ ಬಹುತೇಕ ಹೆಸರುಗಳು ಚಿತ್ತಯ್ಯ, ಕಾಟಯ್ಯ, ಸಣ್ಣಚಿತ್ರಮ್ಮ, ಚಿತ್ರಮ್ಮ, ಕಾಟಕ್ಕ ಮುಂತಾಗಿಯೇ ಇರುತ್ತವೆ. ಅಲ್ಲದೆ ಭೂತಣ್ಣ, ಚಿಕ್ಕಣ್ಣ, ದೊಡ್ಡಣ್ಣ, ಕರಿಯಣ್ಣ, ಮೋಟಣ್ಣ ಈ ಬಗೆಯ ಪ್ರಾಕೃತಿಕ ಹೆಸರುಗಳನ್ನು ಇಡುವುದು ವಾಡಿಕೆ. ಆದರೂ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪ ಮನುಜನಾಗಿ ಬಾಳಿ ಮಡಿದವನು. ಕಾಡುಗೊಲ್ಲರ ಸಮಗ್ರ ಸಂಸ್ಕೃತಿಯನ್ನು ಜುಂಜಪ್ಪನ ಕಾವ್ಯದಲ್ಲಿ ಕಟ್ಟಿಕೊಡಲಾಗಿದೆ. ಮೌಖಿಕ ಪರಂಪರೆಯಲ್ಲಿ ಹಾಡುವ 'ಜುಂಜಪ್ಪನ ಕಾವ್ಯ' ಜನಪದ ಮಹಾಕಾವ್ಯಗಳಲ್ಲೆಲ್ಲಾ ದೀರ್ಘವೂ, ವಿಸ್ತಾರವೂ ಆಗಿದೆ. ಇಂಥ ಕಾವ್ಯವನ್ನು 'ಜುಂಜಪ್ಪನ ಕಥೆ' ಎಂತಲೇ ಕಾಡುಗೊಲ್ಲರು ಭಯಭಕ್ತಿಯಿಂದ ಕೇಳುತ್ತಾರೆ. ಹಾವು, ಚೇಳು ಮುಂತಾದ ವಿಷಜಂತುಗಳಿಗೆ ಒಡೆಯನಾದ ಜುಂಜಪ್ಪನನ್ನು ಆರಾಧಿಸುವುದರಿಂದ ಅವುಗಳ ಕಾಟ ಇರಲಾರದೆಂದು, ಇತರೆ ವರ್ಗದವರೂ ಜುಂಜಪ್ಪನನ್ನು ಆರಾಧಿಸುತ್ತಾರೆ. ಪ್ರತಿವರ್ಷ ದೀಪಾವಳಿಯ ಆರಂಭದಿಂದ ಏಳು ದಿನಗಳ ಕಾಲ ಜುಂಜಪ್ಪನ ದೀಪ ಏರುವುದು, ಆ ದೀಪ ಇಳಿಸುವ ತನಕ ಹಬ್ಬ, ಸಾಂಸ್ಕೃತಿಕ ಕಾರ್ಯಕ್ರಮ ತುಂಬಾ ವಿಜೃಂಭಣೆಯಿಂದ ನಡೆಯುತ್ತವೆ.

ಜುಂಜಪ್ಪನ ವಾದನ 'ಗಣೆ' ಒಂದು ಮಾರು ಉದ್ದದ ಬಿದಿರು. ಇದರ ಕೆಳಗಿನ ತಿರುಳನ್ನು ಕೊರೆದು, ಕಾಯಿಸಿದ ಮೊಳೆಯಿಂದ ಎಂಟು ರಂಧ್ರ ಮಾಡಿಕೊಂಡು, ತುದಿ ಹಾಗೂ ಬುಡಕ್ಕೆ ಬೆಳ್ಳಿಯ ಅಣಸು (ಕಟ್ಟು) ಹಾಕಿಸಿ, ಅದನ್ನು ವಾದನವನ್ನಾಗಿ ಮಾಡಿಕೊಂಡಿದ್ದಾರೆ. ಗಣೆಯನ್ನು ಊದಿ, ಶಾಸ್ತ್ರ ಹೇಳುವ, ಭವಿಷ್ಯ ನುಡಿಯುವ ಸಂಪ್ರದಾಯವೂ ಇದೆ. ಜುಂಜಪ್ಪ, ಚಿತ್ರದೇವರು, ಎತ್ತಪ್ಪ ಮೊದಲಾದ ಸಾಂಸ್ಕೃತಿಕ ವೀರರ ಕಥೆ ಹೇಳಲು ಗಣೆ ವಾದ್ಯವನ್ನು ಸ್ವರವನ್ನಾಗಿ ಮಾಡಿಕೊಳ್ಳುವ ಪರಂಪರೆ ಇದೆ. ಹಾಗಾಗಿಯೇ ಕಾಡುಗೊಲ್ಲರ ಹಾಡುಗಾರಿಕೆಗೆ 'ಗಣೆ ಪರಂಪರೆ' ಎಂದೂ ಕರೆಯುತ್ತಾರೆ.

ಚಿತ್ರದೇವರು, ಕಾಡುಗೊಲ್ಲರ ಪುರಾಣ ಪುರುಷ. ಈತನ ಬಗೆಗೂ ಆರೇಳು ರಾತ್ರಿಗಳ ಕಾಲ ಕಥೆ ಹೇಳಲಾಗುತ್ತದೆ. ಶಿರಾ ತಾಲೂಕಿನ ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿಯ ಪೂಜಾರಿ ನಿಂಗಣ್ಣ, ಚಿತ್ರದೇವರ ಕಥೆ ಹೇಳುವ ಪೂರ್ಣ ಪ್ರಮಾಣದ ಕಲಾವಿದ. ಇವರು ಹಾಡಿರುವ ಕಾವ್ಯವನ್ನು ಮೊದಲಿಗೆ ಸಂಗ್ರಹಿಸಿ ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ (೧೯೯೮) ಸಂಶೋಧನೆಗೆ ಒಳಗುಮಾಡಿದ್ದಾರೆ. 'ಎತ್ತಪ್ಪ', ಕಾಡುಗೊಲ್ಲರ ಮತ್ತೊಬ್ಬ ಸಾಂಸ್ಕೃತಿಕ ವೀರ. ಈತನನ್ನು ಕಾಡುಗೊಲ್ಲರ ಬುಡಕಟ್ಟಿನ ಮೊದಲ ಸಾಂಸ್ಕೃತಿಕ ವೀರನೆಂದು ಕರೆಯಲಾಗುವುದು. ಜಿಲ್ಲೆಯ ಗುಬ್ಬಿ, ಶಿರಾ ಹಾಗೂ ಮಧುಗಿರಿ ತಾಲೂಕು ಭಾಗಗಳಲ್ಲಿ ಎತ್ತಪ್ಪಹಟ್ಟಿ, ಎತ್ತಪ್ಪನ ದಿಬ್ಬ, ಎತ್ತಪ್ಪನ ಕಾವಲು ಎಂದೆಲ್ಲಾ ಕರೆಯುವ ಐತಿಹ್ಯಗಳಿವೆ. ಪ್ರತಿಯೊಂದು ಕಾಡುಗೊಲ್ಲರ ಹಟ್ಟಿಯಲ್ಲೂ ಎತ್ತಪ್ಪನ ದೇವರನ್ನು ಪೂಜಿಸಿಕೊಂಡಿದ್ದಾರೆ. ಉಳಿದಂತೆ ಹಾಗಲವಾಡಿ, ಚೇಳೂರು, ಸಣಬನಹಳ್ಳಿ, ಬಿದರೆ, ಗೌರಿಪುರ, ಶಿರಾ ತಾಲೂಕಿನ ಕಳುವರಹಳ್ಳಿ, ಬಿಜ್ಜನಬೆಳ್ಳ, ಪರಸವ್ವನ ಕೆರೆ ಇಲ್ಲೆಲ್ಲಾ ಜುಂಜಪ್ಪನ ಪುಟ್ಟ ಗುಡಿಗಳು ಇವೆ. ಗುಬ್ಬಿ ತಾಲೂಕಿನ ಚೇಳೂರು ಸಮೀಪದ ದಿಬ್ಬದಹಳ್ಳಿ ಹಟ್ಟಿಯ ಸಮೀಪದಲ್ಲಿ 'ಕಾಟಂಲಿಂಗನ ಪ್ರಾಚೀನ ಕಾಲದ ದೇವಾಲಯವಿದ್ದು ಅದನ್ನು ಪ್ರಸ್ತುತ ಲಿಂಗಾಪುರ ಎಂದು ಕರೆದು ವೀರಶೈವ ಜನಾಂಗದವರು ಪೂಜಿಸುವ, ಗೊಲ್ಲರು ಭಕ್ತರಾಗಿ ನಡೆದುಕೊಳ್ಳುವ ಸಂಪ್ರದಾಯವಿದೆ.

ಕಾಡುಗೊಲ್ಲರು ಪಶುಪಾಲನೆ ಜೊತೆಗೆ ಕುರಿ ಪೋಷಣೆಯನ್ನೂ ಹಿಡಿದಿದ್ದಾರೆ. ಕಾಡುನಾಶ, ಕಾಡು ಜಮೀನು, ಹೊಲಮಾಳವಾಗಿ ಪರಿವರ್ತನೆಗೊಂಡು ಕುರಿಗಳ ಪೋಷಣೆಯೂ ಕಷ್ಟಕರವಾಗಿದೆ. ಗೊಲ್ಲರಲ್ಲಿ ಜೀತಪದ್ಧತಿ ಹಿಂದೆ ಇದ್ದು, ಕುರಿಗಾಹಿತನಕ್ಕೆ ಮಾತ್ರ ಮೀಸಲಾಗಿತ್ತು. ಒಬ್ಬ ವ್ಯಕ್ತಿ ವರ್ಷದ ಕರಾರಿನಂತೆ ಒಬ್ಬರ ಮನೆಯಲ್ಲಿ ಸಂಬಳಕ್ಕೆ ಹೋದರೆ ಅವನಿಗೆ ವರ್ಷಕ್ಕೆ ಮೂರು ಫಲಮರಿಗಳು. ಅವು ವರ್ಷದ ಒಳಗೆ ಈಯ್ಯುವಂತಿರಬೇಕು. ಕಂಬಳಿ, ಕಾಲಿಗೆ ಮೆಟ್ಟು, ಎರಡು ಜೊತೆ ಬಟ್ಟೆ ಇವುಗಳ ಜೊತೆಗೆ ಎರಡರಿಂದ ಮೂರು ಸಾವಿರ ರೂ.ಗಳ ತನಕ ಸಂಬಳ ಕೊಡಬೇಕು. ಹೀಗೇ ಮುಂದುವರಿದರೆ ಈತನ ಪಾಲಿನ ಕುರಿಗಳು ಹೆಚ್ಚಾಗಿ ಐವತ್ತೂ ದಾಟಬಹುದು. ಬರಿಗೈಲಿ ಬಂದವನು ಮೂರು ನಾಲ್ಕು ಸೂಲಿಗೆ ಕುರಿಯ ಒಡೆಯನಾಗುತ್ತಾನೆ. ಗೊಲ್ಲರು ಹೆಚ್ಚಾಗಿ ಸಂಬಳಕ್ಕೆ ಕುರುಬರ ಮನೆಗಳಲ್ಲಿ ಕೆಲಸಕ್ಕೆ ಸೇರುತ್ತಿದ್ದರು.

ವ್ಯವಸಾಯ ಇವರ ಮತ್ತೊಂದು ಕಸುಬು. ಜಿಲ್ಲೆಯ ಸಿರಾ, ಮಧುಗಿರಿ ಹಾಗೂ ಪಾವಗಡ ಭಾಗದ ಗೊಲ್ಲರು ಜಮೀನುದಾರರಾಗಿದ್ದು ಅವರಲ್ಲಿ ೧೫೦-೪೦೦ ಎಕರೆ ಭೂಮಿಯನ್ನು ಹೊಂದಿರುವವರೂ ಇದ್ದಾರೆ. ಈ ಭಾಗದಲ್ಲಿ ನೇಗಿಲು ಹೂಡುವುದನ್ನು 'ಮಡಕೆ ಕಟ್ಟುವುದು' ಎಂದು ಕರೆಯುತ್ತಾರೆ. ಕೂರಿಗೆ, ಮೇಣಿ, ನೊಗ, ಈಸು, ಕುಂಟೆ, ಹಲುಬೆ, ಗ್ಯಾರೆ, ಅಂಡುಮರ, ಬಾರುಕೋಲು, ಕುಳ, ಗುದ್ದಲಿ, ಬಾಚಿ, ಸಲಿಕೆ, ಪಿಕಾಸಿ, ಹಾರೆ, ಕೊಡಲಿ, ಉಳಿ, ಭರ್ಜಿ, ಗರಗಸ, ಕುಡ್ಲು ಈ ಮೊದಲಾದ ಕೃಷಿ ಉಪಕರಣಗಳನ್ನು ಬಳಸುತ್ತಾರೆ. ಗೂಡೆ, ಮೊರ, ಜರಡಿ, ಮಂಕರಿ ಮೊದಲಾದ ಮನೆಬಳಕೆ, ಕೃಷಿ ಕೆಲಸದ ಸಾಧನಗಳನ್ನು ಗೊಲ್ಲರಂತೆ ಇತರೆ ವರ್ಗದವರೂ ತುಮಕೂರು ಜಿಲ್ಲೆಯಲ್ಲಿ ಬಳಸುತ್ತಾರೆ. ಹೊಲ ಉಳುವ ಮೊದಲ ಸಲ ಎತ್ತುಗಳನ್ನು ಮೈ ತೊಳೆದು, ನೇಗಿಲು ನೊಗ ತೊಳೆದು, ಗಂಧ ಅಕ್ಷತೆ ಹಚ್ಚಿ, ಹಣ್ಣು-ಕಾಯಿ ಒಡೆದು ಆರಂಭ ಶುರು ಮಾಡುತ್ತಾರೆ. ಆ ವರ್ಷ ಯಾರ ಹೆಸರಿಗೆ ಬಲಾಬಲ ಇದೆ ಅಂತ ಪೂಜಾರಿ ಹೇಳುತ್ತಾನೆ. ಆತನೇ ಮೊದಲು ಮಡಿಕೆ ಕಟ್ಟಬೇಕು. ಊರ ಸುತ್ತ ಒಂದು ಸುತ್ತು ಬಂದು, ಪೂಜಿಸಿ, ಪ್ರಸಾದ ಹಂಚಿದ ನಂತರವೇ, ಹಟ್ಟಿಯ ಇತರರು 'ಆರು' ಕಟ್ಟುವುದು. 'ಬೆಳೆ ಬೀಜ' ಎಂದು ಮೊದಲೇ ತೆಗೆದಿರಿಸಿದ್ದ ಬಿತ್ತನೆ ಬೀಜವನ್ನು ಊರದೇವರ ಗುಡಿ ಮುಂದೆ ಪೂಜಿಸಿ, ಹೊಲಕ್ಕೆ ಬಂದು ಚಿತ್ರದೇವರು, ಜುಂಜಪ್ಪ ಮುಂತಾದ ದೇವರ ಹೆಸರು ಹಿಡಿದು ಬಿತ್ತುವ ಸಂಪ್ರದಾಯವಿದೆ. ಬೆಳೆ ಕಟಾವಿಗೆ ಬಂದಾಗಲೂ ಮೊದಲು ಮಾಡುವ ಶಾಸ್ತ್ರ ಮಾಡಿಯೇ ಕಟಾವು ಮಾಡಿ ಕಣದ ಜಾಗಕ್ಕೆ ತಂದು, ಮೆದೆ ಹಾಕಿ ನಂತರ ಹೊಕ್ಕುವ ಅಥವಾ ಬಡಿಯುವ, ಇನ್ನೂ ಹೆಚ್ಚಿದ್ದರೆ ರೋಣುಗಲ್ಲು ಅರೆಸುವ, ದನಗಳನ್ನು ಸಾಲಾಗಿ ಕಟ್ಟಿ ವಕ್ಕಲಿ ಹಾಕುವ ಮೂಲಕ ಕಾಳನ್ನು ಬೇರ್ಪಡಿಸುವುದು ಇವರ ಸಂಪ್ರದಾಯವಾಗಿದೆ.

ಕುರಿಗಳೊಂದಿಗೆ ಪ್ರತಿವರ್ಷ ಫೆಬ್ರವರಿಯಿಂದ ಜೂನ್ ವರೆಗೆ ಹುಲ್ಲು ನೀರಿನ ಸಲುವಾಗಿ 'ಪರಸ್ಥಳ'ಕ್ಕೆ ಹೋಗುವುದು ಇವರ ವಾಡಿಕೆ. ಕುರಿಯ ಪಿಚಿಕೆ, ಮೂತ್ರ ಹೊಲ-ತೋಟಕ್ಕೆ ಒಳ್ಳೆಯ ಗೊಬ್ಬರ. ಕುರಿಯನ್ನು ರಾತ್ರಿ ಕಾಲದಲ್ಲಿ ಭೂಮಾಲೀಕರ ಹೊಲ, ಗದ್ದೆ, ತೋಟದಲ್ಲಿ ತಡೆಯುತ್ತಾರೆ. ಇದಕ್ಕೆ ಕುರಿಮಂದೆ ತಡೆಯುವುದು ಎಂದು ಕರೆಯಲಾಗುವುದು. ಮಂದೆ ತಡೆಸಿಕೊಂಡ ಹೊಲದ ಮಾಲೀಕ ನೂರು ಕುರಿಗೆ ೧೦೦ ರೂ, ೧೦ ಸೇರು ರಾಗಿ, ಕಾಳು, ಮೆಣಸಿನಕಾಯಿ ಮೊದಲಾದ ಪದಾರ್ಥಗಳನ್ನು ಕುರಿಗಳನ್ನು ತರುಬಿದ ಒಂದೊಂದು ರಾತ್ರಿಗೆ ಕೊಡಬೇಕು. ಕುರಿ ಹೆಚ್ಚಿದಂತೆಲ್ಲಾ ಇವರ ಸಂಭಾವನೆ

ಹೆಚ್ಚುತ್ತಾ ಹೋಗುತ್ತದೆ. ಕುರಿಮಂದೆ ತಡೆದ ಕಡೆಯಲ್ಲಿಯೇ ಮೂರು ಕಲ್ಲು ಗುಂಡು ಹೂಡಿ ಅಡಿಗೆ ಮಾಡಿಕೊಳ್ಳುವುದು ಇವರ ಕೆಲಸ. ಇದಕ್ಕಾಗಿ ಗೊಲ್ಲ ಮಹಿಳೆಯರು ಜೊತೆಯಲ್ಲಿ ಇರುತ್ತಾರೆ. ಮುದ್ದೆ, ಕಾಳಿನ ಸಾರು ಒಮ್ಮೊಮ್ಮೆ ಅನ್ನ ಇವರ ಸಾಮಾನ್ಯ ಆಹಾರ. ದಿನಕ್ಕೆ ಎರಡು ಹೊತ್ತು ಮಾತ್ರ ಊಟ. ತಿಂಡಿ ವ್ಯವಸ್ಥೆ ಇರುವುದಿಲ್ಲ. ಕುರಿಗಳಿಂದ ಕರೆದ ಹಾಲಿನಿಂದ ಮೊಸರು, ಮಜ್ಜಿಗೆ, ಬೆಣ್ಣೆ ತಯಾರಿಸುತ್ತಾರೆ. ಕರಿಯಮ್ಮ, ಬೇವಿನಳ್ಳಮ್ಮ, ಮಾರಮ್ಮ, ಮಣ್ಣೆಮ್ಮ, ಚಿಕ್ಕಮ್ಮ, ದೊಡ್ಡಮ್ಮ ಮೊದಲಾದ ಶಕ್ತಿದೇವತೆಗಳ ಆರಾಧನೆ ಇವರಲ್ಲಿದೆ. ಕುರಿ ಹುಲ್ಲು ನೀರಿಗೆ ಹೋಗಿ ಹಿಂದಿರುಗುವಾಗ ತಮ್ಮ ಊರಿನ ಸಮೀಪದಲ್ಲಿ ಈ ದೇವರುಗಳನ್ನು ಮಾಡಿ, ಮರಿ ಕಡಿದು, ಆಪ್ತರಿಗೆ ಊಟ ಹಾಕಿ ಊರಿನ ದೇವತೆಗೆ ಪೂಜೆ, ತೀರ್ಥ ಹಾಕಿಸಿಕೊಂಡು ಮನೆಗಳಿಗೆ ಬರುವುದು ವಾಡಿಕೆ. ಗೊಲ್ಲರು ಕುರಿಯನ್ನು ತಡೆಯುವ ಜಾಗಕ್ಕೆ 'ರೊಪ್ಪ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಈ ರೊಪ್ಪಗಳು ಅವರವರ ವಾಸಸ್ಥಳಕ್ಕೆ ಸಮೀಪದಲ್ಲಿ ಸಾಲುಸಾಲಾಗಿ ಇರುತ್ತವೆ, ರೊಪ್ಪದೊಳಗೆ ಮಲಗುವುದಕ್ಕೆ 'ಮಂಚಿಕೆ' ಎಂಬ ಅಟ್ಟವನ್ನು ಮಾಡಿಕೊಂಡಿರುತ್ತಾರೆ. ಬಾಣಂತಿ, ಮುಟ್ಟಾದ ಹೆಂಗಸು ಕಡ್ಡಾಯವಾಗಿ ಕುರಿರೊಪ್ಪದ ಬಳಿಗೆ ಸುಳಿಯುವಂತಿಲ್ಲ. ಬಂದರೆ ತಪ್ಪುದಂಡ, ಪುಣ್ಯವದನೆ ಮೊದಲಾದ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ. ಗೊಲ್ಲರು ಕುರಿಗಳ ಜೊತೆಗೆ ದನಕರು, ಎಮ್ಮೆ, ಮೇಕೆ, ಕೋಳಿ, ನಾಯಿ, ಕತ್ತೆಗಳನ್ನೂ ಸಾಕುತ್ತಾರೆ. ಕತ್ತೆ ಇವರಿಗೆ ಪ್ರಿಯವಾದ ಪ್ರಾಣಿ. ಪರಸ್ಥಳಕ್ಕೆ ಹೋಗುವಾಗ ಕತ್ತೆಯ ಮೇಲೆ ಊಟದ ಪದಾರ್ಥ, ಹೊದಿಕೆ, ಪಾತ್ರೆ ಮೊದಲಾದ ಸಾಮಾನುಗಳಲ್ಲದೇ ಕುರಿಯ ಎಳೆಮರಿಗಳನ್ನೂ ಕತ್ತೆಯ ಮೇಲೆ ಗೂಡೆಯಲ್ಲಿ ಸಾಗಿಸುವುದುಂಟು.

ಗೊಲ್ಲರಿಗೆ ನಾಯಿ ಪ್ರಿಯವಾದ ಪ್ರಾಣಿ. 'ಹತ್ತು ಆಳಿಗೆ ಒಂದು ನಾಯಿ ಸಮ' ಎಂಬುದು ಇವರ ನಂಬಿಕೆ. ಕುರಿಯ ಮಂದೆಯ ಬಳಿ ನಾಯಿಗಳು ಇರಲೇಬೇಕು. ನಾಯಿಗಳೂ ಅಷ್ಟೇ, ತಮ್ಮ ಒಡೆಯನನ್ನೂ, ಮಂದೆಯನ್ನೂ ಬಿಟ್ಟು ಕದಲುವುದಿಲ್ಲ. ಕಾಡುಗೊಲ್ಲರು ಹಾವುಗಳನ್ನು ಹೊಡೆಯುವುದಿಲ್ಲ. ಹಾವು ಹತ್ತಿರದಲ್ಲಿ ಕಾಣಿಸಿಕೊಂಡರೆ ಜುಂಜಪ್ಪನ ಹೆಸರು ಹೇಳಿ ಕೈಮುಗಿದರೆ ಅವು ದೂರ ಹೋಗುತ್ತವೆ, ಏನೂ ತೊಂದರೆ ಮಾಡುವುದಿಲ್ಲ ಎಂಬ ಬಲವಾದ ನಂಬಿಕೆಯನ್ನು ಹೊಂದಿದ್ದಾರೆ.

ಜಿಲ್ಲೆಯಲ್ಲಿ ಕಾಡುಗೊಲ್ಲರು, ಊರುಗೊಲ್ಲರು ಎಂಬ ಎರಡು ಪಂಗಡಗಳಿವೆ. ಆದರೂ ಸೌಲಭ್ಯ ಮತ್ತಿತರ ಕಾರಣಗಳಿಂದ ಇಂದು ಎಲ್ಲರೂ ತಮ್ಮ ತಮ್ಮ ದಾಖಲೆಗಳಲ್ಲಿ ಕಾಡುಗೊಲ್ಲರು ಎಂದೇ ನಮೂದಿಸುತ್ತಾರೆ. ಆರಂಭದಲ್ಲಿ ಕುರಿ ಮತ್ತು ದನಗಳ ಪಾಲಕರಾಗಿ ಅಡವಿ ವಾಸಿಗಳಾಗಿದ್ದ ಗೊಲ್ಲರು ಇಂದು ನಗರಮುಖಿಯಾಗುತ್ತಿದ್ದಾರೆ. ಮಕ್ಕಳು ಶಾಲಾ–ಕಾಲೇಜು, ಸರ್ಕಾರಿ, ಅರೆಸರ್ಕಾರಿ ಕಚೇರಿಗಳಲ್ಲಿ ಉದ್ಯೋಗಸ್ಥರಾಗುತ್ತಿದ್ದಾರೆ. ಸರ್ಕಾರ ಈ ವರ್ಗಕ್ಕೆ ಪರಿಶಿಷ್ಟ ಪಂಗಡಗಳ ಸೌಲಭ್ಯವನ್ನು ಶೈಕ್ಷಣಿಕವಾಗಿ ನೀಡುತ್ತಿರುವುದರಿಂದ ಹರಿಜನರ ಕೇರಿಗೆ ಕಾಲಿಡದ ಅಥವಾ ಅವರನ್ನು ಕಳ್ಳೆಬೇಲಿ ಹಾಕಿಕೊಂಡು ತಮ್ಮ ಹಟ್ಟಿಯಿಂದ ಹೊರನುಸುಳಿದ್ದ ಪರಿಸ್ಥಿತಿ ಈಗ ದೂರವಾಗುತ್ತಿದೆ. ಎಲ್ಲರೊಂದಿಗೆ ಬೆರೆಯುತ್ತಿದ್ದಾರೆ. ನಗರದಲ್ಲಿರುವ ಗೊಲ್ಲ ಹೆಂಗಸರು ಮುಟ್ಟಾದಾಗ ಹೊರಗೆ ಹೋಗುವುದಿಲ್ಲ. ಕಠಿಣ ಆಚರಣೆಗಳೂ ಇರುವುದಿಲ್ಲ. ಆದರೆ ಹಳ್ಳಿಗಳಲ್ಲಿ ಹೆಂಗಸರ ವಿಚಾರದಲ್ಲಿ ಬಿಗಿ ನಿಲುವು ಇನ್ನೂ ಹಾಗೆಯೇ ಇದೆ. ಸರ್ಕಾರ ಈ ಸಮಸ್ಯೆಗೆ ಸೂತಕ ಗೃಹ, ಕೃಷ್ಣ ಕುಟೀರಗಳನ್ನು ಊರಿಂದ ಹೊರಗೆ ನಿರ್ಮಿಸಿದೆ. ಈ ಜನಾಂಗಕ್ಕೆ ಸೇರಿದ ಮಾಡಗಾನಹಳ್ಳಿ ದಾಸಣ್ಣ (ಮಧುಗಿರಿ), ಲಕ್ಕವ್ವನಹಟ್ಟಿ ನಿಂಗಜ್ಜ, ಬಾಣಗೆರೆ ಮಾರಕ್ಕ (ಶಿರಾ), ಕದಿರೇಹಳ್ಳಿ ಸಿರಿಯಪ್ಪ (ಪಾವಗಡ) ತಮ್ಮ ಜನಪದ ಹಾಡುಗಾರಿಕೆಗಾಗಿ ಕರ್ನಾಟಕ ಜಾನಪದ ಕಲಾವಿದ ಪ್ರಶಸ್ತಿಗೆ ಪಾತ್ರರಾದ ಹಿರಿಯ ಕಲಾವಿದರು.

ಶವಸಂಸ್ಕಾರ ಮತ್ತಿತರ ವಿಧಿ ಕ್ರಿಯೆಗಳು ಹಿಂದೂ ಮಾದರಿಯಲ್ಲಿಯೇ ಇವೆ. ಆರಂಭದಲ್ಲಿ ಶವವನ್ನು ಕಲ್ಲುಗಳಿಂದ ಮುಚ್ಚುತ್ತಿದ್ದರೆ, ಇಂದು ಹೂಳುವುದು ಬಳಕೆಯಲ್ಲಿದೆ. ಇವರ ಮದುವೆಯೂ ತೀರಾ ಸರಳವಾಗಿದೆ. ವಧೂವಿಗೆ ತಾಳಿ ಕಟ್ಟುವ ಹಾಗೂ ತಾಳಿ ಕಟ್ಟದೆ ತುಂಬೆ ಗಿಡಕ್ಕೆ ತಾಳಿ ಕಟ್ಟುವ ಸಂಪ್ರದಾಯ ಬಳಕೆಯಲ್ಲಿದೆ. ಕಾರಣ ಶ್ರೀಕೃಷ್ಣ ನಮಗೆ ಮೊದಲೇ ತಾಳಿ ಕಟ್ಟಿದ್ದಾರೆ, ಎರಡನೇ ತಾಳಿ ಸಲ್ಲದು ಎಂಬುದು ಇವರ ನಂಬಿಕೆಯಾಗಿದೆ. ಕಾಲ ಬದಲಾದ ಪರಿಸ್ಥಿತಿಯಲ್ಲಿ ಬುಡಕಟ್ಟು ಸಂಸ್ಕೃತಿಯೂ ಸ್ಥಿತ್ಯಂತರವಾಗುತ್ತಿದ್ದು ಬದಲಾವಣೆಗೆ ಕಾಡುಗೊಲ್ಲರೂ ಒಗ್ಗಿಕೊಳ್ಳುತ್ತಿದ್ದಾರೆ.

**ಕುರುಬರು**

ಜಿಲ್ಲೆಯ ದೊಡ್ಡ ಸಮುದಾಯವಾದ ಕುರುಬರು, ಬುಡಕಟ್ಟು ವರ್ಗದ ಎಲ್ಲಾ ಲಕ್ಷಣಗಳನ್ನು ಮೀರಿ ನಿಂತ ವ್ಯವಸ್ಥೆ. ಹಾವನೂರು ವರದಿ ಇವರನ್ನು ಬುಡಕಟ್ಟು ಹಾಗೂ ಹಿಂದುಳಿದ ವರ್ಗ ಎಂತಲೇ ಗುರುತಿಸಿದೆ. ಕುರಿ ಪೋಷಣೆ,

ಅದರ ಉತ್ಪತ್ತಿಗಳಾದ ಉಣ್ಣೆ ನೇಯ್ಗೆ, ಕಂಬಳಿ ವ್ಯಾಪಾರ ಕುರುಬರ ಪ್ರಧಾನ ಕಸುಬಾಗಿತ್ತು. ಕುರಿಯ ಹುಲ್ಲು-ನೀರಿಗಾಗಿ ಊರಿಂದ ಊರಿಗೆ ವಲಸೆ ಹೋಗುವ, ಅಲೆಮಾರಿತನ ಈ ವರ್ಗದ್ದಾಗಿತ್ತು. ೧೮೦೦ ರಲ್ಲಿ ಕರ್ನಾಟಕಕ್ಕೆ ಆಗಮಿಸಿದ್ದ ಫ್ರಾನ್ಸಿಸ್ ಬುಕಾನನ್ ಎಂಬ ವಿದೇಶಿಗ ಹಾಗಲವಾಡಿ, ಚೇಳೂರು, ಹುಳಿಯಾರು, ಚಿಕ್ಕನಾಯಕನಹಳ್ಳಿ ಭಾಗಗಳಲ್ಲಿ ಪ್ರವಾಸ ಮಾಡಿ ಆ ಕಾಲದ ಜನಜೀವನ, ಸಂಸ್ಕೃತಿಯನ್ನು 'ಎ ಜರ್ನಿ ಟು ಮದ್ರಾಸ್' ಎಂಬ ಗ್ರಂಥದಲ್ಲಿ ದಾಖಲಿಸಿದ್ದಾನೆ. ಆತನ ಮಾನವಶಾಸ್ತ್ರೀಯ ಅಧ್ಯಯನ, ಕುರುಬ ಜನಾಂಗದ ಸಂಸ್ಕೃತಿ, ಅಲೆಮಾರಿ, ಬುಡಕಟ್ಟು ಪರಿಸ್ಥಿತಿಯನ್ನು ಅಚ್ಚುಕಟ್ಟಾಗಿ ಕಟ್ಟಿಕೊಡುತ್ತದೆ. ಅಲ್ಲದೆ ಎಪಿಗ್ರಾಫಿಯಾ ಕರ್ನಾಟಕದ ಗುಬ್ಬಿ ಶಾಸನ ಸಂಖ್ಯೆ ೭೩ ಮತ್ತು ೭೪ ಕುರುಬರ ಬಗ್ಗೆ ಉಲ್ಲೇಖಿಸುತ್ತವೆ. ಇದರ ಪ್ರಕಾರ ಕುರುಬರು ಕುರಿಗಳನ್ನು ಸಾಕುವವರು. ಇವರು ವಾಸಿಸುವ ಸ್ಥಳವನ್ನು ಕುರುಬರಹಟ್ಟಿ, ಕುರುಬರ ದೊಡ್ಡಿ ಎಂತಲೇ ಕರೆಯುತ್ತಾರೆ. ಇವರು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುತ್ತಾರೆ. ಇವರ ಧರ್ಮ ಕಾರ್ಯಗಳಿಗೆ ಒಡೆಯರು ಎಂಬ ಕುಲಗುರುಗಳನ್ನು ಅಥವಾ ವೀರಶೈವ ಜಾತಿಯ ಜಂಗಮರನ್ನು ಕರೆಯುವುದು ವಾಡಿಕೆ. ಹೆಣ್ಣಿಗೆ ತೆರ ಕೊಡುವ ಸಂಪ್ರದಾಯವಿದೆ, ಗುಬ್ಬಿ ತಾಲೂಕಿನ ಹಾಗಲವಾಡಿ, ಚೇಳೂರು, ಹುಳಿಯಾರು ಈ ಭಾಗಗಳಲ್ಲಿ ದಟ್ಟವಾಗಿ ನೆಲೆಸಿದ್ದರು ಎಂದು ಬುಕಾನನ್ ವ್ಯಾಖ್ಯಾನಿಸುತ್ತಾನೆ. ಆದರೂ ಕಳೆದ ೨೦೦ ವರ್ಷಗಳಿಗೆ ಹೋಲಿಸಿದರೆ ಅವರ ಆಚಾರ, ಬದುಕು, ಸಂಪ್ರದಾಯ ಒಡನಾಟಗಳಲ್ಲಿ ಸಾಕಷ್ಟು ಸುಧಾರಿಸಿದ್ದಾರೆ.

'ಕುರುಬ' ಎಂಬ ಈ ಶಬ್ಧ ಕುರಿ ಪೋಷಣೆಯಿಂದ ಬಂದದ್ದು ಎಂದು ಕರೆಯುತ್ತಾರಾದರೂ ಕುರು, ಗುಡ್ಡ, ಬೆಟ್ಟ, ಗುರುತು ಎಂತಲೂ ಕರೆಯಲಾಗಿದೆ. ಗುಡ್ಡಗಾಡುಗಳಲ್ಲಿ ಕುರಿ ಮೇಯಿಸುವ ಕಾರಣದಿಂದಲೇ ವೃತ್ತಿಸೂಚಕವಾಗಿ ಕುರುಬ ಪದ ಪ್ರಯೋಗವಾಗಿದೆ. 'ಶೆಫರ್ಡ್' ಎಂಬ ವಿಶಾಲ ಅರ್ಥದಲ್ಲಿ ಜಗತ್ತಿನಾದ್ಯಂತ ಕರೆಯುವುದು ಈ ಹಿನ್ನೆಲೆಯಲ್ಲಿಯೇ. ಹಾಲುಮತ, ಹಾಲು ಕುರುಬರು, ಹಾಲುಮತ ಗೌಡರು ಎಂತಲೂ ಕುರುಬರನ್ನು ಕರೆಯಲಾಗುವುದು. ಮಂಡ್ಯ, ಮೈಸೂರು, ಹಾಸನ ಈ ಜಿಲ್ಲೆಗಳಲ್ಲಿ ಗಂಗಡಿಕಾರ ಗೌಡರ ಪ್ರಭಾವದ ಕಾರಣದಿಂದ ಕುರುಬರನ್ನು ಕುರುಬಗೌಡ, ಹಾಲುಮತ ಗೌಡ ಎಂತಲೂ ಕರೆಯಲಾಗುತ್ತದೆ. ಫಾಲ್, ಧನಗರ್, ಜರ್ಖ್, ಕುರುಬ, ಗಡಾರಿಯ, ನಿಖರ್ ಎಂಬ ಹೆಸರುಗಳಲ್ಲೂ ಕರೆಯುವುದುಂಟು. ಕುರುಬರು ದೇಶದಾದ್ಯಂತ ಇದ್ದು, ಅಲ್ಲೆಲ್ಲಾ ಪಶುಪಾಲನೆ, ಉಣ್ಣೆ ನೇಯ್ಗೆ, ವ್ಯವಸಾಯಗಳಿಂದ ಜೀವಿಸುತ್ತಾರೆ. ಕುರುಬರು ತಮ್ಮನ್ನು ಶಿವನ ಮಕ್ಕಳೆಂದು ಕರೆದುಕೊಳ್ಳುತ್ತಾರೆ. ಕುರುಬರಲ್ಲಿ ಉಣ್ಣೆ ಕಂಕಣದ ಕುರುಬರು, ಹತ್ತಿ ಕಂಕಣದ ಕುರುಬರು ಎಂದು ಎರಡು ಪಂಗಡ ನಿರ್ಮಾಣವಾಯಿತೆಂದು ಕುರುಬರ ಪುರಾಣ, ಜನಪದ ಕತೆಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಮೈಲಾರಲಿಂಗ ಮತ್ತು ಬೀರದೇವರ ಕಾವ್ಯ ಹಾಡುಗಾರ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ಎಣ್ಣೆಕಟ್ಟೆ ಹನುಮಕ್ಕ.

ಕುರುಬರಲ್ಲಿ ಬಹಳಷ್ಟು ಪಂಗಡ ಗುಂಪುಗಳಿವೆ. ಇವುಗಳನ್ನು ಬೆಡಗು ಎಂದು ಕರೆಯುತ್ತಾರೆ. ಪ್ರತಿಯೊಂದು ಪಂಗಡಕ್ಕೂ ಒಂದೊಂದು ಕಟ್ಟೆಮನೆ, ಮನೆಗೌಡ ಇರುತ್ತಾನೆ. ಇವೇ ಗೋತ್ರಗಳಾಗಿವೆ. ಸತ್ಯನ್ ಕುರುಬ, ಆನೆ ಕುರುಬ, ಬಳ್ಳಾರಿ ಕುರುಬ, ಗೌಡನ ಕುರುಬ, ಹಾಲಿನ ಕುರುಬ, ಮಲ್ಲಿಗೆ, ಸಾಮೆ, ಬಟ್ಲು, ಬೆಂಡೆ, ಬಸಳೆ, ಅರಿಶಿನ, ಅಗ್ನಿ, ಹುಲಿಯನ್, ಸಾವಂತಿಕೆ, ಸಂಕಿಕಲ್ ಮುಂತಾದ ಪಂಗಡಗಳಿವೆ. ಕುರುಬರು ಪ್ರಧಾನವಾಗಿ ಶೈವ ಪರಂಪರೆಯವರು. ಮೈಲಾರಲಿಂಗ, ಬೀರೇಶ್ವರ ಇವರ ಕುಲದೈವ. ರೇವಣ ಸಿದ್ದೇಶ್ವರ ಕುಲಗುರು. ಹಾಗಾಗಿ ಕರ್ನಾಟಕದ ತುಂಬಾ ರೇವಣಸಿದ್ದೇಶ್ವರರ ಮಠಗಳಿವೆ. ಜಿಲ್ಲೆಯ ಶಿರಾ, ಮೂಗನಹಳ್ಳಿ, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಹಾಗೂ ತುಮಕೂ-ರಿನ ದಾಸಮುದ್ದಯ್ಯನಪಾಳ್ಯ, ಹಾಗಲವಾಡಿ, ಬೆಳ್ಳಾವಿ. ಕುಣಿಗಲ್ ತಾಲೂಕಿನ ಆದಿಶೆಟ್ಟಿಹಳ್ಳಿ, ಕೊರಟಗೆರೆ ತಾಲೂಕು ಅಕ್ಕಿರಾಂಪುರ, ತುಮಕೂರು ನಗರ ಇಲ್ಲೆಲ್ಲಾ ರೇವಣಸಿದ್ದೇಶ್ವರ ಮಠಗಳಿವೆ. ಕುಲಮೂಲದ ಕಟ್ಟುಪಾಡು, ವಿಧಿ ಕ್ರಮಗಳನ್ನು ಈ ಮಠ ಬೋಧಿಸುತ್ತದೆ. ಈ ಮಠಕ್ಕೆ ಒಡೆಯರುಗಳಿದ್ದು ಇವರನ್ನು ಕುಲಗುರುಗಳೆಂದು ಸ್ವೀಕರಿಸುತ್ತಾರೆ. ಮದುವೆ, ಧಾರ್ಮಿಕ ಕಾರ್ಯಾಚರಣೆ ಮುಂತಾದ ಕಟ್ಟುಪಾಡುಗಳ ಸಂದರ್ಭದಲ್ಲಿ ಗುರುಮಠದ ಒಪ್ಪಿಗೆ, ಕಾಣಿಕೆ ಅರ್ಪಿಸುವ ಪದ್ಧತಿಯಿದೆ. ಕಟ್ಟೆಮನೆಯಲ್ಲಿ ಸೇರಿದ ನ್ಯಾಯ ತೀರ್ಮಾನವಾಗದಿದ್ದಾಗ ಅದನ್ನು ಗುರುಮಠಕ್ಕೆ ಹಾಕಿ ಬಗೆಹರಿಸಿಕೊಳ್ಳುವುದು ಕುರುಬರ ನ್ಯಾಯಾಧಿಕರಣದ ಒಂದು ನಂಬಿಕೆಯಾಗಿದೆ.

ಜಿಲ್ಲೆಯ ಹತ್ತು ತಾಲೂಕಿನಲ್ಲೂ ಇವರಿದ್ದಾರೆ. ರೈತಾಪಿ ಬದುಕು ಪ್ರಧಾನವಾದರೂ ಶಿರಾ, ಪಾವಗಡ, ಚಿಕ್ಕನಾಯಕನಹಳ್ಳಿ, ಮಧುಗಿರಿ ಈ ತಾಲೂಕುಗಳಲ್ಲಿ ಪಾರಂಪರಿಕ ಕಸುಬು ಕುರಿ ಪೋಷಣೆ ಹಾಗೂ ಅದರ ಉತ್ಪತ್ತಿಯಾದ

ಕಂಬಳಿ ತುಪ್ಪಟ (ಬಂಡ) ಕತ್ತರಿಸುವುದು, ಕಂಬಳಿ ನೇಯ್ಗೆ ಹಾಗೂ ಕಂಬಳಿ ಮಾರಾಟದ ಬದುಕು ಸವೆಸುತ್ತಿದ್ದಾರೆ. ಕುರುಬರು ವ್ಯವಸಾಯ ಮಾಡುತ್ತಿದ್ದಾರೆ. ಜೊತೆಗೆ ಕೆಲವರು ಆಧುನಿಕ ಶೈಲಿಯ ಸಣ್ಣಪುಟ್ಟ ಕೈಗಾರಿಕೆಯಾಗಿ ಇಟ್ಟಿಗೆ ಫ್ಯಾಕ್ಟರಿ ನಡೆಸುವವರೂ ಇದ್ದಾರೆ. ಕುರುಬರ ಮೈಲಾರಲಿಂಗ, ಬೀರೇಶ್ವರನ ಜೊತೆಗೆ ಮಧುಗಿರಿ, ಶಿರಾ ಭಾಗದಲ್ಲಿ ದಾಸ ಕುಲದವರು ಇದ್ದು ಅವರು ತಿರುಪತಿಯ ತಿಮ್ಮಪ್ಪನ ಒಕ್ಕಲಾಗಿದ್ದು ದಾಸಯ್ಯ ಪರಂಪರೆ, ದಾಸದೀಕ್ಷೆ ಇದೆ. ಆದರೂ ಕುರುಬರಲ್ಲಿ ಹೆಚ್ಚಾಗಿ ಕಂಡುಬರುವುದು ಶೈವ ಪರಂಪರೆ. ಗೊರವಯ್ಯನ ಆರಾಧಕರು. ಭಕ್ತರ ಮನೆಯ ಸೂತಕ, ಗೃಹಪ್ರವೇಶ ಮೊದಲಾದ ಧಾರ್ಮಿಕ ವಿಧಿ ಕ್ರಿಯೆಯಲ್ಲಿ ಗೊರವಯ್ಯಗಳ ಪಾತ್ರ ಪ್ರಮುಖವಾದುದು. ಜೊತೆಗೆ ಗೊರವರ ಕಲೆ ಕುಣಿತ, ಹಾಡುಗಾರಿಕೆಯೂ ಇದ್ದು ಇರಕಸಂದ್ರದ ಗೊರವರ ಬೆಟ್ಟಲಿಂಗಯ್ಯ, ಯಣ್ಣೆಕಟ್ಟೆ ಗೊರವರ ಸಿದ್ದಗೊರವಯ್ಯ ಇವರು ಗೊರವರ ಕಲೆ ಹಾಡುಗಾರಿಕೆ,ನಿಂಗಜ್ಜನಪಾಳ್ಯದ ಸಿಂಗಮ್ಮಜ್ಜಿ ಇವರು ವಿಶೇಷವಾಗಿ ಮೈಲಾರಲಿಂಗನ ಕಥನ, ಬೀರಲಿಂಗನ ಕಾವ್ಯ ಹಾಗೂ ಹುಳಿಯಾರು ಕೆಂಚಮ್ಮನ ಕಥನ ಹಾಡುಗಾರಿಕೆಗಾಗಿ ಕರ್ನಾಟಕ ಜಾನಪದ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಜೊತೆಗೆ ಇವರ ಹಾಡುಗಳನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ 'ಬಂಡಿ ಬಂದಾವು ಬಾಳೆವನದಾಗೆ ಸಂಪುಟದಲ್ಲಿ ಪ್ರಕಟಿಸಲಾಗಿದೆ. ದಂಡಿನಶಿವರ ಹೊಸಹಳ್ಳಿಯ (ತುರುವೇಕೆರೆ ತಾ॥) ಮೀಸೆ ಲಕ್ಕಣ್ಣ, ಸೋಮನ ಕುಣಿತದ ಹೆಸರಾಂತ ಕಲಾವಿದ. ಜೀಶಂಪ ನೇತೃತ್ವದಲ್ಲಿ ದಂಡಿನಶಿವರದ ಗಂಗಾಧರ ಗೌಡರ ತಂಡದಲ್ಲಿ ಸಿಂಗಪುರ, ಜಪಾನ್, ಜರ್ಮನಿ ಹಾಗೂ ಯೂರೋಪ್ ದೇಶಗಳಿಗೆ ಹೋಗಿಬಂದ, ಜಾನಪದ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಕಲಾವಿದ. ಗುಡ್ಡರ ಕುಣಿತ ಕಲೆಗಾಗಿ ಜಾನಪದ ಅಕಾಡೆಮಿ ಪುರಸ್ಕೃತರಾದ ಕುರುಬರ ಹೊಸೂರು, ಅಂದಾನೇಗೌಡ ಕುಣಿಗಲ್ ತಾಲೂಕು, ಎಡೆಯೂರು ಹೋಬಳಿಯವರು. ಜನಾಂಗದ ಈ ಜಿಲ್ಲೆಯ ಮೊದಲ ಸರ್ಕಾರದ ಗೌರವಕ್ಕೆ ಪಾತ್ರರಾದವರು. ತುಮಕೂರು ತಾಲೂಕು ಅಣ್ಣೇನಹಳ್ಳಿಯ ಲಕ್ಕಣ್ಣ, ದೊಡ್ಡಯ್ಯ, ವೀರ ಮಕ್ಕಳ ಕುಣಿತಕ್ಕೆ ಹೆಸರಾದರೆ, ಹೆಬ್ಬಾಕದ ಕೆಂಪಯ್ಯ ಲಾವಣಿ ಹಾಡುಗಾರಿಕೆಗೆ ಪ್ರಸಿದ್ಧ. ಯಕ್ಷಗಾನ ಕಲೆಯ ರೂವಾರಿಗಳಾದ ಇರಕಸಂದ್ರದ ಶಂಭಣ್ಣ, ಬೇಡನಕಟ್ಟೆ ಕೆಂಪಯ್ಯನವರ ಬುಕ್ಕಯ್ಯ, ಯಣ್ಣೆಕಟ್ಟೆ ನಿಂಗಮ್ಮನವರ ನಿಂಗಯ್ಯ, ನಿಂಬೇಕಟ್ಟೆ ಎನ್.ಸಿ. ಹುಚ್ಚಪ್ಪ, ಮೆಂಬರ್ ದೊಡ್ಡಯ್ಯ, ಬಿದರೆಯ ವೀರಭದ್ರಯ್ಯ, ಕೊರಟಗೆರೆ ಮೈಲಾರಪ್ಪ, ಅರಳೀಮರದಪಾಳ್ಯದ ಲಿಂಗರಾಜು, ವೈ.ಎನ್.ಹೊಸಕೋಟೆಯ ರಂಗಮ್ಮ ಇವರೆಲ್ಲ ಹಾಲುಮತ ಸಂಸ್ಕೃತಿಯ ಹಾಡು, ಕುಣಿತ ಹಾಗೂ ಇತರ ಪ್ರಕಾರಗಳ ಹೆಸರಾಂತ ಕಲಾವಿದರು. ಸೃಜನ ಲೇಖಕರಾಗಿ ವಿ.ಚಿಕ್ಕವೀರಯ್ಯ, ನಟರಾಜು ಹುಳಿಯಾರು, ಎಸ್.ಜಿ. ಸಿದ್ದರಾಮಯ್ಯ, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಸಾಹಿತ್ಯ-ಜಾನಪದ ಅಕಾಡೆಮಿಗಳಿಂದ ಪ್ರಶಸ್ತಿ, ಪುರಸ್ಕಾರಕ್ಕೆ ಒಳಗಾದವರು. ಸಿ.ಯತಿರಾಜ್, ಜಿ.ಇಂದ್ರಕುಮಾರ್, ತುಮಕೂರು ಮಹದೇವ್, ಹಂದನಕೆರೆ ಪುಟ್ಟಯ್ಯ, ಮಧುಗಿರಿ ವಿಜಯ ಮೋಹನ್, ಬರಗೂರು ತಿಪ್ಪೇಸ್ವಾಮಿ, ದ್ವಾರನಕುಂಟೆ ಪಾತಣ್ಣ ಈ ಮೊದಲಾದವರು ಗಮನಾರ್ಹ ಕೃತಿಗಳನ್ನು ಪ್ರಕಟಿಸಿದ್ದಾರೆ. ಪತ್ರಕರ್ತರಾಗಿ ಎಸ್.ನಾಗಣ್ಣ, ಮಲ್ಲೇಶ್, ಚಿ.ನಾ.ಏಕೇಶ್, ಪುರುಷೋತ್ತಮ ಉತ್ತಮ ಸಾಧನೆ ಮಾಡಿದ್ದಾರೆ.

ಕುರುಬರು ಪಂಚೆ-ಅಂಗಿ, ಅಂಗಿ-ಚಡ್ಡಿ, ಹೆಗಲ ಮೇಲೆ ವಲ್ಲಿಬಟ್ಟೆ ಇವರ ಸಾಮಾನ್ಯ ಉಡುಗೆ. ಹೆಂಗಸರು ಹದಿನಾರು ಮೊಳದ ಸೀರೆ, ತುಂಬು ಮೈಯ ರವಿಕೆ ಹಾಕಿಕೊಳ್ಳುತ್ತಾರೆ. ಕೈಗೆ ಕೈಬಳೆ, ಕೊರಳಲ್ಲಿ ಕರಿಮಣಿಯ ಸರ, ಕಿವಿಯಲ್ಲಿ ಬಿಳಿ ಅಥವಾ ಕೆಂಪು ಕಲ್ಲಿನ ಹರಳಿನ ಓಲೆ, ಸೊಂಟದಲ್ಲಿ ಡಾಬು, ಕಾಲಲ್ಲಿ ಚೈನು, ಕಾಲಂದಿಗೆ, ಬೆಳ್ಳಿಯ ಕಾಲುಂಗುರ ಇವರ ಸಾಮಾನ್ಯ ಆಭರಣ. ಸ್ವಗೋತ್ರ ವಿವಾಹ ಇವರಲ್ಲಿದ್ದು ಕುಲಗುರುಗಳಾದ ಒಡೆಯರಯ್ಯ ಮದುವೆಯ ಪೌರೋಹಿತ್ಯ ವಹಿಸುತ್ತಾರೆ. ಮದುವೆ ನಿಶ್ಚಯವಾದಾಗಿನಿಂದ ಮದುವೆ ಮುಗಿದು ಮೂರು ದಿನದ ತನಕ ಇವರಲ್ಲಿ ಮಾಂಸಾಹಾರ ನಿಷಿದ್ಧ. ಶುಭ ಕಾರ್ಯಗಳಲ್ಲಿ ಸಿಹಿ ಊಟ ಸಾಮಾನ್ಯ. ಸತ್ತ ಶವವನ್ನು ಶೈವ ಪರಂಪರೆಯಂತೆ ಹೂಳುವ ಸಂಪ್ರದಾಯವಿದೆ. ಗೊರವ ದೀಕ್ಷೆಯವರನ್ನು ದೇವರಂತೆ ಕಂಡು ಸಹ ಗೊರವರೇ ಶವ ಹೂಳುವ, ಅಲಂಕಾರ ನಡೆಸುವ ಜವಾಬ್ದಾರಿ. ತಿಥಿಗೆ ಮಾಂಸಾಹಾರದ ಭೋಜನವಿರುತ್ತದೆ. ಕುರಿ, ಮೇಕೆ, ಕೋಳಿ, ಮೀನು ಇವರ ವಿಶೇಷ ಮಾಂಸಾಹಾರ ಭೋಜನ. ಪಾಯಸ, ಹೋಳಿಗೆ, ಶ್ಯಾವಿಗೆ, ಕಿಚಡಿ, ಕಡುಬು, ರೊಟ್ಟಿ, ಮುದ್ದೆ, ಅವರೆಕಾಳು, ತೊಗರಿ, ಕಡಲೆ, ಹುರುಳಿ, ಹೆಸರು ಸಾಮಾನ್ಯವಾಗಿ ಬಳಸುವ ಸಸ್ಯಾಹಾರ ಕ್ರಮಗಳು. ಮದುವೆಯ ಹೆಣ್ಣಿನ ತಂದೆ ತೆರ ಕೊಡುವ ಸಂಪ್ರದಾಯ ಇಂದಿಗೂ ಇದ್ದು ಇದೊಂದು ಸಾಂಕೇತಿಕ. ಇತ್ತೀಚೆಗೆ ವರದಕ್ಷಿಣೆಯೂ ಇವರಲ್ಲಿ ಆರಂಭವಾಗಿದೆ. ಮೈಲಾರಲಿಂಗ, ಬೀರದೇವರು, ಸಿದ್ಧರಾಮೇಶ್ವರ ಇವರು ಸಾಮಾನ್ಯವಾಗಿ ನಡೆದುಕೊಳ್ಳುವ ಗಂಡುದೇವರು. ಬನಶಂಕರಮ್ಮ, ಏಕನಾಥೇಶ್ವರಿ, ಮಾರಮ್ಮ, ಲಕ್ಷ್ಮಮ್ಮದೇವರು, ಚಿಕ್ಕಮ್ಮ, ದೊಡ್ಡಮ್ಮ ನಡೆದುಕೊಳ್ಳುವ ಶಕ್ತಿದೇವತೆಗಳು. ಆದರೂ ಅನುಕರಣೆಯಿಂದಾಗಿ

ಧರ್ಮಸ್ಥಳದ ಮಂಜುನಾಥ, ತಿರುಪತಿ ವೆಂಕಟೇಶ್ವರ, ರಾಘವೇಂದ್ರಸ್ವಾಮಿ, ಶನಿದೇವರು ಇತರೆ ಧಾರ್ಮಿಕ ಕ್ಷೇತ್ರಗಳಿಗೆ ನಡೆದುಕೊಳ್ಳುವ ಸಂಪ್ರದಾಯವೂ ಇದೆ. ಕಾಗಿನೆಲೆಯ ಕನಕ ಗುರುಪೀಠದ ನಾಲ್ಕು ಶಾಖಾ ಮಠಗಳಲ್ಲಿ ತುಮಕೂರು ಜಿಲ್ಲೆ ಹೊಸದುರ್ಗದ ಕನಕ ಗುರುಪೀಠದ ವ್ಯಾಪ್ತಿಗೆ ಒಳಪಟ್ಟು, ಧಾರ್ಮಿಕ ವಿಚಾರಗಳು ಆ ಪೀಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆಯುತ್ತದೆ.

**ಬೆಸ್ತರು**

ಬೆಸ್ತರಲ್ಲಿಂದು ಬುಡಕಟ್ಟು ಸಂಸ್ಕೃತಿಯ ಬದುಕು ಇಲ್ಲವಾದರೂ ಅತ್ಯಂತ ಕಡಿಮೆ ಜನಸಂಖ್ಯೆಯ ಜನಾಂಗ ಇದು. ಇವರು ತುಮಕೂರು ಜಿಲ್ಲೆಯ ಸಂಸ್ಕೃತಿಯ ಒಂದು ಭಾಗವಾಗಿದ್ದಾರೆ. ಬೆಸ್ತರನ್ನು 'ಗಂಗಾಮತಸ್ಥ', 'ಗಂಗೆ ಮಕ್ಕಳು' ಎಂದೆಲ್ಲಾ ಕರೆಯುತ್ತಾರೆ. ಎಲ್ಲಿ ಕೆರೆ-ಕಟ್ಟೆಗಳಿರುತ್ತವೆಯೋ ಅಲ್ಲೆಲ್ಲಾ ಗಂಗಾಮತಸ್ಥರು ಇರಲೇಬೇಕೆಂಬುದು ಹಿರಿಯರ ಅಭಿಪ್ರಾಯ. 'ನೀರುಗಂಟಿ' ಎಂಬ ಅನ್ವರ್ಥ ಹೆಸರೂ ಈ ಜನಾಂಗಕ್ಕಿದೆ. ಬೆಸ್ತರಲ್ಲಿ ಸಣ್ಣಕ್ಕಿಯರು, ಗಂಟೆಲರು, ಬಂಡಾರದವರು, ಪಬರದವರು, ಮಲ್ನಾರುವರು, ಮಳ್ಳೆಲರು, ಹಗ್ಗದವರು, ಬೂದಲವರು ಮೊದಲಾದ ಬೆಡಗುಗಳಿದ್ದು ಇವರುಗಳ ನಡುವೆ ವೈವಾಹಿಕ ಸಂಬಂಧ ನಡೆಯುತ್ತವೆ. ಜಿಲ್ಲೆಯ ಚೇಳೂರು, ಗುಬ್ಬಿ, ಕಡಬ, ಹಾಗಲವಾಡಿ, ಚಿಕ್ಕನಾಯಕನಹಳ್ಳಿ, ಹುಳಿಯಾರು, ಶಿರಾ ತಾಲೂಕು ಕೇಂದ್ರದ ಸುಣಕಲ್ಲಿಗರಹಟ್ಟಿ, ತಾವರೇಕೆರೆ, ಕುಣಿಗಲ್, ಕುಂದೂರು ಇಲ್ಲೆಲ್ಲಾ ಬೆಸ್ತರು ಕಂಡುಬರುತ್ತಾರೆ. ಕೆರೆಯ ನೀರನ್ನು ಗದ್ದೆಗಳಿಗೆ ಹಾಣಯಿಸಿ, ಬೆಳೆ ಬಂದಾಗ ಹಡದಿ ಹೆಸರಲ್ಲಿ ಬತ್ತವನ್ನು ಪಡೆದು ಜೀವಿಸುತ್ತಿದ್ದರು. ಕೆಲವರದು ಸುಣ್ಣ ಸುಡುವ ಕಾಯಕ. ಆದುದರಿಂದಲೇ ಇವರನ್ನು ಸುಣ್ಣಕಲ್ಲಿನವರು ಎಂತಲೂ ಕರೆಯುತ್ತಾರೆ. ಬೆಸ್ತರು ಇಂದು ಬೇರೆ ಬೇರೆ ಉದ್ಯೋಗದಲ್ಲಿ ನಿರತರಾಗಿದ್ದಾರೆ.

ಸಿರಾ ಪರಿಸರದಲ್ಲಿ ಬೆಸ್ತರು 'ಜೋಕುಮಾರ' ಎಂಬ ಆಚರಣೆಯನ್ನು ಇಂದಿಗೂ ಆಚರಿಸುತ್ತಾರೆ. ಒಂದು ಬೆತ್ತದ ಗೂಡೆಯಲ್ಲಿ ಜೇಡಿ ಮಣ್ಣಿನ ಮೂರ್ತಿ ಮಾಡಿ, ಹೂ-ಪತ್ರೆಗಳಿಂದ ಅಲಂಕರಿಸಿ, ಐದರಿಂದ ಒಂಬತ್ತು ದಿನಗಳ ಕಾಲ ಊರಾಡುತ್ತಾರೆ. ನಂತರ ಜೋಕುಮಾರನ ಹರಿಸೇವೆ ಮಾಡಿ ಕುಲಸ್ಥರಿಗೆ ಊಟ ಹಾಕುವ ಪದ್ಧತಿ, ನಂತರ ಜೋಕುಮಾರನ ವಿಸರ್ಜನೆಯ ಕಾರ್ಯ ನಡೆಯುತ್ತದೆ. ಜೋಕುಮಾರನಿಗೆ ಸಂಬಂಧಿಸಿದ ಜನಪದ ಕಾವ್ಯವನ್ನು ಸಿರಾದ ಸುಣಕಲ್ಲು ಹಟ್ಟಿಯ ಸಿದ್ದಮ್ಮ ಹಾಡುತ್ತಾರೆ. ಶಿವನ ಆರಾಧಕರು. ಸ್ವಗೋತ್ರ ವಿವಾಹ ಬಳಕೆಯಲ್ಲಿದೆ. ಆರಂಭದಲ್ಲಿ ಬಾಲ್ಯವಿವಾಹ, ಬಸವಿ ಬಿಡುವ ಪದ್ಧತಿಯಿದ್ದು ಈಗ ಸಂಪೂರ್ಣವಾಗಿ ನಿಂತಿದೆ. ನಾಗರಿಕತೆ ಆವರಿಸಿ, ಬೆಸ್ತರು ಬಗೆಬಗೆಯ ವೃತ್ತಿ ಹಿಡಿದಿದ್ದಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ ಕಡಿಮೆ. ಪ್ರಸ್ತುತ ೧೪,೯೦೦ ಜನಸಂಖ್ಯೆ ಹೊಂದಿದ್ದಾರೆ.

**ಬೇಡರು**

ಜಿಲ್ಲೆಯ ಬುಡಕಟ್ಟು ಸಂಸ್ಕೃತಿಯನ್ನು ಅಪ್ಪಟವಾಗಿ ಹೋಲುವ ಬೇಡರು ತಮ್ಮನ್ನು ವಾಲ್ಮೀಕಿಗಳು, ನಾಯ್ಕಮಕ್ಕಳು, ತಳವಾರ, ಪಾಳೆಯಗಾರರು ಎಂಬ ಹೆಸರುಗಳಲ್ಲಿ ಕರೆದುಕೊಳ್ಳುತ್ತಾರೆ. ಗ್ರಾಮ ರಕ್ಷಣೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಕಾರಣದಿಂದ ತಳವಾರ ಎಂದೂ ವಾಲ್ಮೀಕಿಯು ಈ ವರ್ಗಕ್ಕೆ ಸೇರಿದವನಾದ್ದರಿಂದ ವಾಲ್ಮೀಕಿ ಮಕ್ಕಳು ಎಂದೆಲ್ಲಾ ಕರೆದುಕೊಳ್ಳುತ್ತಾರೆ. ಆರಂಭದಲ್ಲಿ ಬೇಟೆ, ಜೀತ ಹಾಗೂ ಗ್ರಾಮರಕ್ಷಣೆ ಇವರ ಕಾಯಕವಾಗಿದ್ದು ಇದೀಗ ಇವರ ಚಿತ್ರಣ ಸಂಪೂರ್ಣ ಬದಲಾಗಿದೆ. ಸಂಘಟನಾತ್ಮಕ ಬದುಕು ಇವರದಾಗಿದೆ. ತುಮಕೂರು ಜಿಲ್ಲಾ ಕೇಂದ್ರವೂ ಸೇರಿದಂತೆ, ತಾಲೂಕುಗಳಲ್ಲೂ ವಾಲ್ಮೀಕಿ ಸಂಘ, ವಿದ್ಯಾರ್ಥಿ ನಿಲಯ ಆರಂಭವಾಗಿದೆ. ಜಿಲ್ಲೆಯಲ್ಲಿ ಕಂಬದರಂಗ, ರಂಗಧಾಮ, ನರಸಿಂಹ, ಗುಡ್ಡದರಂಗಸ್ವಾಮಿ, ಓಬಳದೇವರುಗಳನ್ನು, ಕರಿಯಮ್ಮ, ಮಾರಮ್ಮ, ದುರ್ಗಿ ಮೊದಲಾದ ಶಕ್ತಿದೇವತೆಗಳನ್ನು ಆರಾಧಿಸುತ್ತಾರೆ. ಗ್ರಾಮದೇವತೆಯ ಜಾತ್ರೆ ಕಾಲದಲ್ಲಿ ಪಟ್ಟದ ಕೋಣವನ್ನು ಕಡಿಯುವುದು ಇವರ ಹಕ್ಕು. ಅದೇ ಸಂಪ್ರದಾಯ ತುಮಕೂರು ಜಿಲ್ಲೆಯಾದ್ಯಂತ ಬಳಕೆಯಲ್ಲಿತ್ತು .ಇಂದು ಕಾನೂನುರೀತ್ಯಾ ನಿರ್ಬಂಧಿಸಲಾಗಿದೆ. ಪಾವಗಡ ತಾಲೂಕಿನಲ್ಲಿ ಮಾತ್ರ ಮ್ಯಾಸಬೇಡರು ಇದ್ದು ಗಾದರಿ ಪಾಲನಾಯಕ ಇವರ ಮನೆದೇವರು. ಗಾದರಿ ಪಾಲನಾಯಕನ ಭಕ್ತರು ಕೋಳಿ ತಿನ್ನುವುದಿಲ್ಲ. ಆದರೂ ಕಾಡುಹಂದಿ, ಮೊಲ, ಜಿಂಕೆ, ಮುಂಗುಸಿ, ಉಡ, ಆಮೆ ಮೊದಲಾದ ಕಾಡುಪ್ರಾಣಿಗಳ ಬೇಟೆ ಇವರಿಗೆ ಇಷ್ಟವಾದ ಕೆಲಸ. ಮ್ಯಾಸ ಬೇಡರು ಪಾವಗಡ ತಾಲೂಕಿನ ಉತ್ತರಕ್ಕೆ ಕೋಟಗುಡ್ಡ, ಮೂಗಾಳು ಬೆಟ್ಟ, ನಿಡುಗಲ್ಲು, ರಂಗಸಮುದ್ರ, ಕೊಂಡೆ ತಿಮ್ಮನಹಳ್ಳಿ ಈ ಭಾಗದಲ್ಲಿ ವ್ಯಾಪಕವಾಗಿ ನೆಲೆಸಿದ್ದಾರೆ. ಉಳಿದಂತೆ ಜಿಲ್ಲೆಯಾದ್ಯಂತ ಇವರನ್ನು ಊರಬೇಡರು ಎಂದು ಕರೆದುಕೊಳ್ಳುತ್ತಾರೆ. ಉರಿಮೆ ಬೇಡರು, ಮೊಂಡಬೇಡರು ಎಂಬ ಒಳಪ್ರಬೇಧಗಳಿವೆ.

ಇವರಲ್ಲಿ ಮಲ್ಲಿಗೆಯವರು, ಮುಚ್ಚಳದವರು ಮೊದಲಾದ ಒಳಕುಲಗಳಿದ್ದು (ಬೆಡಗು) ಸ್ವಜಾತಿ ವಿವಾಹ ಬಳಕೆಯಲ್ಲಿದೆ. ವಿಧವಾ ವಿವಾಹ, ಬಾಲ್ಯವಿವಾಹ, ಕನ್ಯಾ ತೆರ ಬಳಕೆಯಲ್ಲಿದ್ದು, ಇದೀಗ ನಿಂತಿದೆ. ೬೩ ಸಕಲ ಪುರಾತನ ಶರಣ–ರಲ್ಲಿ ಒಬ್ಬನಾದ ಬೇಡರ ಕಣ್ಣಪ್ಪ ನಮ್ಮವನೆಂದೂ, ನಾವು ಶಿವಭಕ್ತರೆಂದು ಕರೆದುಕೊಳ್ಳುತ್ತಾರೆ. ಬೇಡರು ವಾಸಿಸುವ ಗ್ರಾಮಗಳಲ್ಲಿ ಇಂದು ಬೇಡರ ಕಣ್ಣಪ್ಪ ದೇವಾಲಯ ನಿರ್ಮಾಣವಾಗಿವೆ. ಇದಲ್ಲದೆ ಚಾರಿತ್ರಿಕ ಪುರುಷ ಕುಮಾರರಾಮ ತಮ್ಮ ಒಕ್ಕಲೆಂದು ಭಾವುಕವಾಗಿ ಹೇಳಿಕೊಳ್ಳುತ್ತಾರೆ. ಮಡಕಶಿರಾ ಸಮೀಪದ ಆನೆಕೆರೆ ಗ್ರಾಮದಲ್ಲಿ 'ವೀರಗಾಟರಾಯ'ನ ದೇವಾಲಯವಿದ್ದು ಅದೊಂದು ಕುದುರೆಯ ಮೇಲೆ ಕುಳಿತ ವೀರನ ಭಂಗಿಯಲ್ಲಿದೆ. ಅದನ್ನೇ ಕುಮಾರರಾಮ ಎಂದೂ ಹಿರಿಯರು ಹೇಳುತ್ತಾರೆ. ಬೇಡರಲ್ಲಿ ಮಲ್ಲಿಗೆ ಕುಲದವರೆಲ್ಲ ವೀರಗಾಟರಾಯನ ಒಕ್ಕಲು. ಪರಿಶಿಷ್ಟ ವರ್ಗದ ಸೌಲಭ್ಯ ಈ ವರ್ಗದ ಶಿಕ್ಷಣ, ಸಾಮಾಜಿಕ ಪ್ರಗತಿಗೆ ಅನುಕೂಲವಾಗಿದೆ. ಪ್ರಸಿದ್ಧ ಸಾಹಿತಿ ಪ್ರೊ॥ ಬರಗೂರು ರಾಮಚಂದ್ರಪ್ಪ, ಕೆ.ಆರ್. ನಾಯಕ್ ಮೊದಲಾದ ಲೇಖಕರಿದ್ದಾರೆ. ಸ್ವಾತಂತ್ರ ಹೋರಾಟಗಾರರು ಇದ್ದಾರೆ. ಇತ್ತೀಚೆಗೆ ಬೇಡರ ವಾಸಸ್ಥಳಗಳಲ್ಲಿ ಬೇಡರ ಕಣ್ಣಪ್ಪ, ವಾಲ್ಮೀಕಿ ಮಂದಿರಗಳನ್ನು ನಿರ್ಮಿಸಿಕೊಂಡಿದ್ದಾರೆ. ಪಾವಗಡದ ಕೋಟಗುಡ್ಡ, ನಿಡಗಲ್, ಅರಸೀಕೆರೆ, ವೈ.ಎನ್.ಹೊಸಕೋಟೆ ಈ ಮೊದಲಾದ ಕಡೆಗಳಲ್ಲಿ ಕೋಲು ಬೇಟೆ ಎಂಬ ಜನಪದ ಬೇಟೆಯ ಆಚರಣೆ ಬಳಕೆಯಲ್ಲಿದೆ. ಯುಗಾದಿಯ ದಿನ ಏರ್ಪಡುವ ಕೋಲುಬೇಟೆ ಊರ ಹಬ್ಬದಂತೆ ಶೌರ್ಯ, ಪರಾಕ್ರಮ, ಶಕ್ತಿಯ ರೂಪವಾಗಿ ಬೇಟೆಗೆ ಹೋಗುವುದು ರೂಢಿ. ಮಾಂಸಾಹಾರಕ್ಕಾಗಿ ಬೇಟೆಯಾಡುವುದು ರೂಢಿ. ಆದರೆ ಕೋಲು ಬೇಟೆ, ವಾದ್ಯ ಸಂಗೀತ, ಬಗೆಬಗೆಯ ಕುಣಿತ ಈ ಎಲ್ಲವೂ ಸೇರಿ, ಕಲಾತ್ಮಕ ಸ್ವರೂಪ ಪಡೆಯುತ್ತದೆ. ಅದೊಂದು ವಿಜಯದ ಸಂಕೇತವಾಗಿಯೂ ಬಳಕೆಯಲ್ಲಿದೆ. ಪಾವಗಡ ಕಡೆಯ ಪಾಲನಾಯಕನ ಒಕ್ಕಲುಗಳಲ್ಲಿ ಕೋಳಿ ಸೇವನೆ ನಿಷಿದ್ಧ. ಮೂಗಾಳು ಕರಿಯಮ್ಮನ ಒಕ್ಕಲು ಇದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

'ಸೋಮನ ಕುಣಿತ' ಈ ವರ್ಗದ ಪ್ರಧಾನ ಕಲೆ. ಮಣ್ಣಮ್ಮ, ಮಾರಮ್ಮ ದಂಡಿನಶಿವರದ ಹೊನ್ನಾದೇವಿ, ಗೌರಸಂದ್ರದ ಕೆಂಪಮ್ಮ ಈ ದೇವತೆಗಳ ಸೋಮನ ಕುಣಿತವನ್ನು ಈ ವರ್ಗದವರು ವಿಶೇಷವಾಗಿ ಹಾಕುತ್ತಾರೆ. ತುರುವೇಕೆರೆ ತಾಲೂಕು ದೊಡ್ಡೇನಹಳ್ಳಿ ಪಟೇಲ್ ಕೆಂಪೇಗೌಡ, ಅವರ ಮಗ ಕೆಂಪರಾಜು, ಸೋಮನಕುಣಿತದ ಅಂತಾರಾಷ್ಟ್ರೀಯ ಕಲಾವಿದರು. ದಂಡಿನಶಿವರದ ಡಿ.ಎಸ್. ಗಂಗಾಧರ ಗೌಡರ ನೇತೃತ್ವದಲ್ಲಿ ಈ ತಂಡ ಜಪಾನ್, ಜರ್ಮನಿ, ಯೂರೋಪ್ ರಾಷ್ಟ್ರಗಳಿಗೆ ಹೋಗಿಬಂದಿದೆ. ಮೀಸೆ ಲಕ್ಕಣ್ಣ (ಕುರುಬರು) ಇವರ ತಂಡ ಕೆಂಪರಾಜು ತಂಡ ದೆಹಲಿ, ಅಂಡಮಾನ್, ಸಿಲೋನ್ ಮುಂತಾದ ಕರ್ನಾಟಕ ಸಾಂಸ್ಕೃತಿಕ ಮುಖಾಮುಖಿ ಕಾರ್ಯಕ್ರಮದಲ್ಲಿ ಪಾಲುಗೊಂಡಿವೆ. ಸಾಕಸಂದ್ರದ ಕರಡಿ ಚಿಕ್ಕಣ್ಣ, ಮಾದಾಪುರ (ಗುಬ್ಬಿ), ದೊಡ್ಡಯ್ಯ, ಚಿಕ್ಕಣ್ಣ ಮೊದಲಾದವರು ಸೋಮನ ಕುಣಿತಕ್ಕೆ ಹೆಸರುವಾಸಿಯಾದವರು. ತುಮಕೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಪಾವಗಡ, ಮಧುಗಿರಿ ಈ ಕೇಂದ್ರಗಳಲ್ಲಿ ವಾಲ್ಮೀಕಿ ಸಹಕಾರ ಬ್ಯಾಂಕುಗಳನ್ನು ಇತ್ತೀಚೆಗೆ ತೆರೆದಿದ್ದು, ಆರ್ಥಿಕ ಸಂಘಟನೆಗೂ ತೊಡಗಿಸಿಕೊಂಡಿದ್ದಾರೆ. ಪಾಳ್ಯಗಾರರ ಕುಣಿತ, ಕಾಸಾ ಬೇಡರ ಕುಣಿತ ಈ ವರ್ಗವನ್ನು ಪ್ರತಿನಿಧಿಸುವ ಜನಪದ ಕಲಾ ಪ್ರಕಾರಗಳು. ಶಿರಾ ತಾಲೂಕಿನ ಸಾಕ್ಷಿಹಳ್ಳಿ, ಸೋರೆಕುಂಟೆ, ಗಾಣದಹುಣಸೆ, ಶಾಗದಡು ಇಲ್ಲೆಲ್ಲಾ ಬೇಡರು ಹೆಚ್ಚಿನ ಸಂಖ್ಯೆಯಲ್ಲಿದ್ದು ಸೋರೆಕುಂಟೆ ಕರಿಯಮ್ಮ, ಸಾಕ್ಷಿಹಳ್ಳಿ ಮಣ್ಣೆಮ್ಮ, ಗಾಣದಹುಣಸೆ ಕರಿಯಮ್ಮ ದೇವರುಗಳಿಗೆ ಸೋಮನ ಕುಣಿಸುವ ಸಂಪ್ರದಾಯವಿದ್ದು ಈ ಕಲೆಯನ್ನು ಬೇಡರು ರೂಢಿಸಿ, ಬೆಳೆಸಿಕೊಂಡು ಬಂದವರು. ಶ್ಯಾಗದಡು ಲಕ್ಷ್ಮಮ್ಮ, ರಾಮೇಗೌಡ, ನಿಂಬೇಗೌಡ, ತುರುವೇಕೆರೆ ತಾಲೂಕು ಹೆಗ್ಗೆರೆ ಕೆಂಪಮ್ಮದೇವಿಯ ಪೂಜಾರಿ ಚಿಕ್ಕಣ್ಣ, ಬೇಡ ಜನಾಂಗದ ಪ್ರಮುಖ ಸೋಮನಕುಣಿತದ ಕಲಾವಿದರು.

### ಲಂಬಾಣಿಗರು

ಲಂಬಾಣಿಗರು, ಬಂಜಾರರು, ಸುಕಾಲಿಗರು ಎಂಬ ಹೆಸರುಗಳಿಂದ ಕರೆಯುವ ಜನಾಂಗವಾದ ಇವರು ಬುಡಕಟ್ಟು ಸಂಸ್ಕೃತಿಯನ್ನು ಅಪ್ಪಟವಾಗಿ ರೂಪಿಸಿಕೊಂಡವರು. ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ದೊಡ್ಡ ಎಣ್ಣೆಗೆರೆ, ಆಲದಕಟ್ಟೆ, ಸಾಲಕಟ್ಟೆ, ಅಂಕನಬಾವಿ, ದೊಡ್ಡಬಿದರೆ, ಶಿರಾ ತಾಲೂಕಿನ ಮಾನಂಗಿ ತಾಂಡ, ಕಿಲಾರದಹಳ್ಳಿ, ಹುಯಿಲ್ದೊರೆ ತಾಂಡ, ಚಿಕ್ಕಸಂದ್ರದ ಕಾವಲು, ಕೆ.ರಂಗನಹಳ್ಳಿ, ಪಾವಗಡ, ಗುಬ್ಬಿ, ಕೊರಟಗೆರೆ ತಾಲೂಕುಗಳಲ್ಲಿ ಲಂಬಾಣಿಗರು ನೆಲೆಸಿದ್ದಾರೆ. ಬನ ಮತ್ತು ಜಾರು ಈ ಎರಡೂ ಬುಡಕಟ್ಟು ಶಬ್ದಗಳು. ಬನ ಎಂದರೆ ಕಾಡು, ಜಾರು ಎಂದರೆ ಅಲೆಮಾರಿ. ಹಾಗಾಗಿ ಬಂಜಾರರು ಎಂಬುದು ಈ ಜನಾಂಗಕ್ಕೆ ಅರ್ಥಪೂರ್ಣ ಹೊಂದಾಣಿಕೆ. ಬಂಜಾರರು ಪ್ರಸ್ತುತ ಪರಿಶಿಷ್ಟ ಜಾತಿಗೆ ಸೇ–

ರಿದ್ದಾರೆ. ಆದರೂ ಅಸ್ಪೃಶ್ಯರಲ್ಲ. ಇವರು ವಾಸಿಸುವ ಸ್ಥಳಕ್ಕೆ ತಾಂಡ ಎಂದು ಕರೆಯಲಾಗುವುದು. ಕಾಡಿನ ಸೌದೆ ಕಡಿದು, ತಲೆಯ ಮೇಲೆ ಹೊತ್ತು ಮಾರಿ ಜೀವನ ಮಾಡುತ್ತಿದ್ದವರು. ಆರಂಭದಲ್ಲಿ ಕತ್ತೆಗಳ ಮೇಲೆ ಉಪ್ಪಿನ ಮೂಟೆಯನ್ನು ಹೇರು ಹಾಕಿಕೊಂಡು ಮಾರಾಟ ಮಾಡುತ್ತಿದ್ದರು. ಚಿಕ್ಕನಾಯಕನಹಳ್ಳಿಯ ಕೆಲವು ತಾಂಡಗಳಲ್ಲಿ ಮುತ್ತುಗದ ಎಲೆ ಸಂಗ್ರಹಿಸಿ, ಒಣಗಿಸಿ ನಂತರ ಊಟದ ಎಲೆಯಾಗಿ ಕಟ್ಟಿ ಮಾರಾಟ ಮಾಡುವುದು, ವ್ಯವಸಾಯ ಮಾಡುವುದು ರೂಢಿಯಲ್ಲಿದೆ. ಶಿರಾ, ಪಾವಗಡ ಈ ಭಾಗದಲ್ಲಿ ವ್ಯವಸಾಯದ ಜೊತೆಗೆ ಭಟ್ಟಿ ಶರಾಬು ಕಾಯಿಸುವುದು, ಮಾರಾಟ ಮಾಡುವ ಮೂಲಕ ಆರ್ಥಿಕವಾಗಿ ದೃಢವಾಗುವ ಪದ್ಧತಿ ಇದೆ. ಪಿತೃಪ್ರಧಾನ ವ್ಯವಸ್ಥೆ, ವಧುದಕ್ಷಿಣೆ, ಕನ್ಯಾದಾನ ಪದ್ಧತಿ ಬಳಕೆಯಲ್ಲಿದೆ. ಲಂಬಾಣಿಗರು ದೈಹಿಕವಾಗಿ ಸುಂದರ ಕಾಯರು. ಕವಡೆ ಹಾಗೂ ಕನ್ನಡಿ, ಪುಟ್ಟ ಪುಟ್ಟ ಮಣಿಗಳಿಂದ ಫ್ರಾಕು ತಯಾರಿಸಿ, ಅದರ ಮೇಲು ಮುಸುಕು ವಿನ್ಯಾಸದಿಂದ ಕೂಡಿರುತ್ತದೆ. ಹಿರಿಯ ಲಂಬಾಣಿ ಸ್ತ್ರೀಯರು ಕುಪ್ಪಸ ಧರಿಸುವುದಿಲ್ಲ. ಆದರೂ ಕರಕುಶಲ ಕಲೆಯ ಮೇಲು ಹೊದಿಕೆಯನ್ನು ಹೊದ್ದಿರುವುದು ಇವರ ವಿಶೇಷ. ಲಂಬಾಣಿ ಹೆಂಗಸರು ತಮ್ಮ ಕೈಗಳಿಗೆ ಪ್ಲಾಸ್ಟಿಕ್‌ನ ಬಳೆಗಳನ್ನು ಮೊಣಕೈವರೆಗೂ, ತೋಳಿಗೆ ಬಿಲ್ಲೆಯನ್ನೂ ತಲೆಗೆ ಜಡೆಬಿಲ್ಲೆ, ಮುಂಗಾಡೆ ಬಿಲ್ಲೆಗಳನ್ನು ಧರಿಸುತ್ತಾರೆ. ಆರಂಭದಲ್ಲಿ ಬಾಲ್ಯವಿವಾಹ ಇದ್ದು ಈಗ ಇಲ್ಲವಾಗಿದೆ. ಹೆಚ್ಚು ವಿದ್ಯಾವಂತರು, ನಾಗರಿಕರು ಆಗಿದ್ದಾರೆ. ಸ್ವಗೋತ್ರ ವಿವಾಹ ಪದ್ಧತಿ ಇವರಲ್ಲಿದ್ದು ಹೆಣ್ಣಿನ ಅಥವಾ ಗಂಡು ಎರಡು ಮನೆಗಳಲ್ಲೂ ಮದುವೆಯ ಕಾರ್ಯದ ವ್ಯವಸ್ಥೆ ಮಾಡಬಹುದು. ಆದರೂ ಅವರವರ ಮನೆಯಲ್ಲಿ ಹೆಣ್ಣು-ಗಂಡುಗಳ ಶಾಸ್ತ್ರಸಂಬಂಧಿ ಆಚರಣೆ, ಕುಲದ ಊಟ, ಸಹ ಮದ್ಯಪಾನ ಕೂಟ ನಡೆದುಹೋಗುತ್ತವೆ. ಹಾಗಾಗಿ ಮದುವೆ ಕಾರ್ಯ ಕಡಿಮೆ. ಆದರೂ ಮದುವೆಯಲ್ಲಿ ವಿಪರೀತ ದುಃಖ ಪ್ರದರ್ಶಿಸುವುದು ಮಾತ್ರ ವಿಶಿಷ್ಟ. ಹೆಣ್ಣು ಹೊರಡುವ ಹಂತದಿಂದ ಆರಂಭವಾಗಿ ಧಾರೆ ಎರೆದು ಹೆಣ್ಣನ್ನು ಕಳಿಸಿಕೊಡುವವರೆಗೆ ಒಂದೇ ಸಮನೆ ಎದೆ ಎದೆ ಬಡಿದುಕೊಂಡು ಅಳುವುದು ಸಾಮಾನ್ಯವಾಗಿದೆ.

ಹೆಂಡದ ಸಮಾರಾಧನೆ, ಹಂಚಿಕೆಯ ವಿಧಾನವೂ ಮದುವೆಯ ಸಂಪ್ರದಾಯ ಎಂಬಂತೆ ನಡೆಯುತ್ತದೆ. ಮದುವೆಯನ್ನು ಶುಭ ಕಾರ್ಯ ಎಂದು ಕರೆದು ಒಂಬತ್ತು ದಿನಗಳ ಕಾಲ ಮಾಂಸಾಹಾರ ಭೋಜನ ನಿಷೇಧ. ಲಂಬಾಣಿಗಳಲ್ಲಿ ಶವಸಂಸ್ಕಾರವಾಗಿ ಹೂಳುವ ಪದ್ಧತಿ ಇದೆ. ಇವರು ಬ್ರಾಹ್ಮಣ ಪುರೋಹಿತರನ್ನು ಮದುವೆ ಮತ್ತಿತರ ಮಂಗಲ ಕಾರ್ಯಕ್ಕೆ ಕರೆಯುವುದಿಲ್ಲ. ಈ ಜನಾಂಗದವರೇ ಆದ ಗೋಸಾಯಿ ಎಂಬ ಮುಖಂಡ ಮದುವೆ ಮೊದಲಾದ ಶುಭಕಾರ್ಯದ ಪೂಜಾ ವಿಧಾನಗಳನ್ನು ನಡೆಸಿಕೊಡುತ್ತಾನೆ. ದೀಪಾವಳಿ ಇವರಿಗೆ ಪವಿತ್ರ ಹಬ್ಬ. ಇದನ್ನು 'ಬಧುಕಾರ್ದೇರು ಅಂದರೆ ಹಿರಿಯರನ್ನು ಕರೆಯುವುದು ಎಂದೇ ಕರೆದು ಆಚರಿಸುತ್ತಾರೆ. ಲಂಬಾಣಿ ಪರಂಪರೆಯಲ್ಲಿ ಸತ್ತವರು ವರ್ಷಕ್ಕೊಮ್ಮೆ ತಮ್ಮ ತಮ್ಮ ಮನೆಗಳಿಗೆ ಬಂದು ಊಟ ಮಾಡಿ ಕಿರಿಯರನ್ನು ಹರಸಿ ಹೋಗುತ್ತಾರೆಂದು ನಂಬುತ್ತಾರೆ. ಹಾಗಾಗಿಯೇ ಈ ಹಿಂದೆ ತೀರಿ ಹೋಗಿದ್ದವರೆಲ್ಲರ ಹೆಸರ್ಹಿಡಿದು ಕರೆದು, ಅಕ್ಕಿಹಿಟ್ಟು ಮತ್ತು ತುಪ್ಪದಿಂದ ತಯಾರಿಸಿದ ತಂಬಿಟ್ಟಿನ ಪುಟ್ಟ ಕೈತುತ್ತನ್ನು ಹಿರಿಯರ ಹೆಸರ್ಹೇಳಿ ಮನೆಯಲ್ಲಿ ಸಿದ್ದಪಡಿಸಿದ ಅಗ್ನಿಗೆ ಅರ್ಪಿಸುವ ಸಂಪ್ರದಾಯವಿದೆ. ನಂತರ ಹೆಣ್ಣು ಮಕ್ಕಳು ದೀಪ ಹಿಡಿದು, ತಮ್ಮ ತಾಂಡದ ಪ್ರತಿಯೊಂದು ಮನೆಗೂ ಹೋಗಿ ಹಿರಿಯ ಗಂಡಸರೂ ಸೇರಿದಂತೆ ಯುವಕರಿಗೂ ಆರತಿ ಬೆಳಗಿ ಪದ ಹಾಡುತ್ತಾರೆ. ಅದಕ್ಕೂ ಮೊದಲು ಹಿರಿಯರ ಆಚರಣೆ ಮುಗಿದ ಕೂಡಲೆ, ಮನೆಯ ಮುಂದೆ ಬಾಕು ಅಥವಾ ಚೂರಿಯನ್ನು ನೆಲಕ್ಕೆ ಸಿಕ್ಕಿಸಿ, ಮನೆಯ ಎಲ್ಲಾ ಸದಸ್ಯರು ಪರಸ್ಪರ ಒಬ್ಬರ ಕೈ ಹಿಡಿದು ಅಥವಾ ಭುಜದ ಮೇಲೆ ಕೈಯಿಟ್ಟುಕೊಂಡು ವರ್ತುಲಾಕಾರದಲ್ಲಿ ನಿಂತು, ಬಾಗುತ್ತ ಎದ್ದು ಆಕಾಶ ನೋಡುತ್ತಾ ನರ್ತನ ಮಾಡುವುದು, ಮಧ್ಯೆ ಮಧ್ಯೆ ಮಡಿದ ಹಿರಿಯರ ಹೆಸರು ಹಿಡಿದು ಅಳುವುದು ದೀಪಾವಳಿಯ ವಿಶೇಷವಾಗಿದೆ. ಇದಲ್ಲದೆ ದಸರಾ, ಗಣಪತಿ, ಶಿವರಾತ್ರಿ ಹಬ್ಬಗಳನ್ನೂ ಆಚರಿಸುತ್ತಾರೆ. ಭೂಮಿಸತಿ ಜಿಲ್ಲೆಯ ಲಂಬಾಣಿಗರ ಬಹುದೊಡ್ಡ ಶಕ್ತಿದೇವತೆ.

ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರು ಹೋಬಳಿಯ ದೊಡ್ಡ ಎಣ್ಣೆಗೆರೆಯಲ್ಲಿ ಪುರಾತನ ಕಾಲದ ಭೂಮಿಸತಿ ದೇವಾಲಯವಿದೆ. ಮಕ್ಕಳ ತಲೆಕೂದಲು ತೆಗೆಯುವುದು, ಮದುವೆ, ನಾಮಕರಣ ಎಲ್ಲವೂ ಇಲ್ಲಿ ನಡೆಯುತ್ತವೆ. ಚಿತ್ರದುರ್ಗ, ರಾಯಚೂರು, ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳಿಂದ ಹೆಚ್ಚು ಭಕ್ತರು ಈ ದೇವಸ್ಥಾನಕ್ಕೆ ಬರುತ್ತಾರೆ. ಶಕ್ತಿದೇವತೆಯಾದ ಭೂಮಿಸತಿಯನ್ನು ಲಂಬಾಣಿಗರು ತಾಯಿ ಎಂದೇ ಕರೆಯುತ್ತಾರೆ. ಉಳಿದಂತೆ 'ಸೇವಾಲಾಲ್' ಇವರ ಕುಲದೈವ. ಲಂಬಾಣಿ ತಾಂಡವಿರುವ ಎಲ್ಲಾ ಕಡೆಯೂ ಸೇವಾಲಾಲ್ ಪುಟ್ಟ ಗುಡಿಯಿರುತ್ತದೆ. ಲಚ್ಚನಾಯ್ಕ,

ಹಿರಿಲಾಲ್, ಸೇವಾಲಾಲ್, ಹನುಮಂತನಾಯ್ಕ, ಕೃಷ್ಣಾನಾಯ್ಕ ಇವರ ಪರಂಪರಾಗತ ಹೆಸರುಗಳು. ಹೆಂಗಸರು ಲಕ್ಷ್ಮಿ ರಮಾಬಾಯಿ, ಪಾರ್ವತಿಬಾಯಿ, ಭೀಮಾಬಾಯಿ, ಶಂಕರಾಬಾಯಿ ಮೊದಲಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಲಂಬಾಣಿಗರು ತಮ್ಮನ್ನು ಉತ್ತರಭಾರತದ ಗುಜರಾತ್ ಮೂಲದವರು, ಮಾರ್ವಾಡಿಗಳು ನಮ್ಮ ಸೋದರರು, ಅವರು ವ್ಯಾಪಾರ ಮಾಡುತ್ತಾ ನಗರವಾಸಿಗಳಾದರೆ ನಾವು ಸೌದೆ, ಕಾಡು, ಉಪ್ಪಿನ ವ್ಯಾಪಾರಗಳಿಂದ ಕಾಡುಮನುಷ್ಯರಾಗಿ ಬಂಜಾರಿಗಳೆಂದು ಕರೆಸಿಕೊಂಡೆವು ಎಂದು ಹೇಳುತ್ತಾರೆ. ಇವರ ಮನೆಯ ಮಾತು ಲಂಬಾಣಿ ಎಂದು ಅಲಿಖಿತ ಭಾಷೆಯನ್ನು ಮೌಖಿಕವಾಗಿ ಮಾತ್ರ ಬಳಸುತ್ತಾರೆ. ಬರವಣಿಗೆಗೆ ಕನ್ನಡ, ಹಿಂದಿ, ಇಂಗ್ಲೀಷ್ ಅನ್ನು ವ್ಯವಹಾರಿಕವಾಗಿ ಬಳಸುತ್ತಾರೆ. ಲಂಬಾಣಿಗರು ಇತ್ತೀಚೆಗೆ ಭೂಮಾಲೀಕರಾಗಿ ಆಸ್ತಿವಂತರೂ, ಉತ್ತಮ ಕೃಷಿಕರೂ ಆಗಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯ್ತಿ ಸದಸ್ಯರು, ಅಧ್ಯಕ್ಷರು ಆಗಿರುತ್ತಾರೆ. ತುಮಕೂರು ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾಗಿ ಹಂದನಕೆರೆ ರಘುನಾಥ್, ಉಪಾಧ್ಯಕ್ಷರಾಗಿ ಶಿರಾ ಮುದಿಗೆರೆಯ ಚಂಪಕಮಾಲಾ ಕಾರ್ಯ ನಿರ್ವಹಿಸಿದ್ದಾರೆ. ಇಬ್ಬರು ಜಿ.ಪಂ. ಸದಸ್ಯರೂ ಇದ್ದಾರೆ. ಪ್ರಸ್ತುತ ಸುಧಾಕರ ಲಾಲ್ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿದ್ದಾರೆ. ೨೦೧೩ರಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಕೊರಟಗೆರೆ ವಿಧಾನ ಸಭಾ ಕ್ಷೇತ್ರದಿಂದ ವಿಧಾನ ಸಭೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

**ತಿಗಳರು**

ತಿಗಳ, ಅಗ್ನಿವಂಶ ಕ್ಷತ್ರಿಯರು ಈ ಎರಡೂ ಹೆಸರುಗಳಿಂದ ಕರೆಯಲ್ಪಡುವ ಇವರು ತೋಟಗಾರಿಕೆ ಮತ್ತದರ ಉತ್ಪತ್ತಿಗಳಾದ ಹೂಹಣ್ಣು, ತರಕಾರಿಗಳ ಕೃಷಿ ಹಾಗೂ ಮಾರಾಟಕ್ಕೆ ಹೆಸರುವಾಸಿ. ದ್ರಾವಿಡ ಮೂಲದ ಈ ಜನಾಂಗ ತಮ್ಮ ದೈಹಿಕ ಚಹರೆ, ಕರಿಯ ಬಣ್ಣ, ಮಟ್ಟಸ್ಥ ಆಕೃತಿಯವರು. ಪೆರುಮಾಳಯ್ಯ, ಕೋಡಯ್ಯ, ಮಲ್ಲಯ್ಯ, ಮುನಿಯಪ್ಪ, ಮುನಿಮಲ್ಲಯ್ಯ, ಉತ್ತಿನಯ್ಯ, ಕುರಿಯಯ್ಯ, ಕಪಿನಯ್ಯ, ತೋಟಪ್ಪ ಈ ಹೆಸರುಗಳು ತಮಿಳು ಮೂಲಕ್ಕೆ ಹೆಚ್ಚು ಹೊಂದಿಕೊಳ್ಳುತ್ತವೆ. ಲಕ್ಷ್ಮಿ ರಾಮದೇವರು, ಲಕ್ಕಮ್ಮ, ದುರ್ಗಮ್ಮ, ಮಾರಮ್ಮ ಇವರ ದೈವನೆಲೆಗಳು. ತುಮಕೂರು ಹನುಮಂತಪುರದ ಲಕ್ಷ್ಮಿ ರಾಮದೇವರು, ಗುಬ್ಬಿ ಹೊಸಹಳ್ಳಿ ಲಕ್ಷ್ಮಿ ರಾಮದೇವರು, ತಿಮ್ಮಪ್ಪ, ಕೃಷ್ಣನ ಆರಾಧಕರು. ಗುಬ್ಬಿ ಪಟ್ಟಣ, ಚಿಕ್ಕೋನಹಳ್ಳಿ, ಕೋಡಿಪಾಳ್ಯ, ಗೌರಿಪುರ, ಸಿಂಗಿಪುರ, ತ್ಯಾಗಟೂರು, ತುಮಕೂರು ನಗರದ ಹೊರಪೇಟೆ, ಹನುಮಂತಪುರ, ಭೀಮಸಂದ್ರ, ಬುಗುಡನಹಳ್ಳಿ, ಚಿಕ್ಕಪೇಟೆ, ಬೆಳ್ಳಾವಿ, ಗೊಲ್ಲಹಳ್ಳಿ, ಮುದಿಗೆರೆ, ವಕ್ಕೋಡಿ ಶಿರಾ ತಾಲೂಕಿನ ಯಲೆಯೂರು, ಗೂಳೂರು, ರತ್ನಸಂದ್ರ, ಚಿಕ್ಕನಹಳ್ಳಿ ಇಲ್ಲೆಲ್ಲಾ ವ್ಯಾಪಕವಾಗಿ ನೆಲೆಸಿದ್ದಾರೆ. ತೋಟಗಾರಿಕೆ, ವೀಳ್ಯದೆಲೆ ತೋಟ ನಿರ್ಮಾಣ, ಬಳ್ಳಿ ಕಟ್ಟುವುದು, ಎಲೆ ಕಾವಳಿಗೆ ಮಾಡುವುದು ಇವರ ವಿಶೇಷ. ಅಡಿಕೆ ತೋಟ ಪಚ್ಚುಮಾರು, ಅಡಿಕೆ ಸುಲಿಯುವುದು, ಬೇಯಿಸಿ ಪಾಕ ತೆಗೆಯುವುದು ತಿಗಳರ ವಿಶೇಷ. ತಗ್ಗಿನ ನೀರಾವರಿ, ಕೆರೆಕಟ್ಟೆಗಳ ಬದಿಯಲ್ಲಿ ವಾಸಿಸುವುದು ಇವರ ವಿಶೇಷ. ತರಾವರಿ ಬೇಸಾಯ, ತೋಟಗಾರಿಕೆಗಳಲ್ಲಿ ಪರಿಣಿತರಾದ ತಿಗಳರು ಗಿಡಮೂಲಿಕೆಯನ್ನು ಬಲ್ಲವರು.

ತಿಗಳರು ತಮ್ಮದೇ ಆದ ಬುಡಕಟ್ಟು ಸಂಸ್ಕೃತಿಯ ಆಚರಣೆ, ಮಡಿ–ಮೈಲಿಗೆ, ಕಟ್ಟೆ ಮನೆ, ಗೌಡ, ಯಜಮಾನ, ಗುಡಿಗೌಡ ಮುಂತಾದ ಸ್ಥಳೀಯ ನ್ಯಾಯಾಂಗ ವ್ಯವಸ್ಥೆ ಹೊಂದಿರುತ್ತಾರೆ. ಕುಲಾಚಾರಗಳಲ್ಲಿ ಅತ್ಯಂತ ಕಟ್ಟುನಿಟ್ಟಾದ ನಿಯಮಗಳನ್ನು ಇಂದಿಗೂ ಪಾಲಿಸುತ್ತಾ ಬಂದಿದ್ದಾರೆ. ಇವರಲ್ಲಿ ಸಂಪ್ರದಾಯಸ್ಥ ಹೆಂಗಸರು ಕುಪ್ಪಸ ತೊಡುವುದಿಲ್ಲ. ಮೂಗು ಚುಚ್ಚಿಸಿಕೊಂಡು ಮೂಗುತಿ ಇಡುವುದಿಲ್ಲ. ದೇವರು, ಮದುವೆ ಸಂದರ್ಭಗಳಲ್ಲಿ ಈ ನ್ಯಾಯ, ಧರ್ಮಾಚಾರ ಕಟ್ಟುನಿಟ್ಟಾಗಿ ನಿರ್ಣಯವಾಗುತ್ತದೆ. ತಿಗಳರ ಮದುವೆ ತುಂಬಾ ವಿಶಿಷ್ಟವಾದದ್ದು. ಆಧುನಿಕ ಸಂದರ್ಭದಲ್ಲಿ, ನಾಗರೀಕತೆಯ ಪಲ್ಲಟಗಳ ನಡುವೆಯೂ ಒಂದು ಚೂರೂ ಬದಲಾವಣೆಯಾಗದಂತೆ ನಡೆದುಕೊಂಡು ಬರುತ್ತಿರುವುದು ವಿಶೇಷವಾಗಿದೆ. ಈ ಜನಾಂಗದ ಮದುವೆಯ ಕಾರ್ಯವನ್ನು ಕುಲದ ಪುರೋಹಿತನೇ ಮೂರು ದಿನಗಳ ಕಾಲ ನಡೆಸಿಕೊಡುತ್ತಾನೆ. ಮದುವೆ ನಿರ್ಣಯವಾಗಿ ಹಸಿರು ವೀಳ್ಯ ಎತ್ತುವ ಮೊದಲ ಶಾಸ್ತ್ರದಿಂದ ಮೊದಲುಗೊಂಡು ಕುಲದೂಟ, ದೇವರ ಊಟ, ಸೋಬಾನದ ಊಟದವರೆಗೆ ಎಲ್ಲವನ್ನೂ ಈ ಕಟ್ಟೆಮನೆಯ ಗುಡಿಗೌಡನೇ ನೋಡಿಕೊಳ್ಳುತ್ತಾನೆ. ಇವರ ಮದುವೆ ಮೂರು

ದಿನಗಳ ಕಾಲ ನಡೆಯುತ್ತದೆ. ಮನೆವಾಳತನವೂ ಅನಿವಾರ್ಯ ಸಂದರ್ಭದಲ್ಲಿರುತ್ತದೆ. ಹೆಣ್ಣಿಗೆ ತೆರ ಕಟ್ಟು, ಕಟ್ಟೆಮನೆಗೆ ಒಂದು ತೆರ, ಕುಲದೇವತೆಗೆ ಒಂದು ತೆರ ಹೀಗೆ ಮೂರು ತೆರದ ತೆರೆಪದ್ಧತಿ ಬಳಕೆಯಲ್ಲಿದೆ. ಅರುಣೆ ಪೂಜೆ, ಚಪ್ಪರದ ಪೂಜೆ, ಧಾರೆ ಕಂಬದ ಪೂಜೆ, ಮಲೆನೀರು, ಧಾರೆ,ನಾಗಾವಳಿ, ನಾಗೋಲಿ, ಎಳೆಶಾಸ್ತ್ರ ಮೊದಲಾದ ಶಾಸ್ತ್ರಗಳನ್ನು ಕುಲದ ಪುರೋಹಿತ ಶಾಸ್ತ್ರಬದ್ಧವಾಗಿ ನೆರವೇರಿಸುತ್ತಾನೆ. ಚಪ್ಪರದ ಅಡಿಯಲ್ಲಿ ಕಟ್ಟೆಮನೆ, ಅಣೆಕಾರ, ಗಂಡುಹೆಣ್ಣುಗಳ ತಂದೆ-ತಾಯಿಗಳು, ಹಿರಿಯರು, ಮುತ್ತೈದೆಯರು ಮೊದಲಾಗಿ ಹಾಲು ಧಾರೆ, ಅಕ್ಕಿಧಾರೆ ಎರೆಯುತ್ತಾರೆ. ಚಿನ್ನದ ತಾಳಿಯನ್ನು ಅರಿಶಿನದ ದಾರದೊಂದಿಗೆ ಹೆಣ್ಣಿನ ಕೊರಳಿಗೆ ಕಟ್ಟಲಾಗುವುದು. ಮಲ್ಲಿಗೆ, ಹೂಹಿನ್ನಿ ಇತ್ಯಾದಿ ಹದಿನೈದು ಕುಲಗಳನ್ನು ತಿಗಳರು ಹೆಸರಿಸುತ್ತಾರೆ. ಶಂಭುಕುಲ, ಹೊನ್ನಿಕುಲ, ಅಗ್ನಿಕುಲ ಈ ಮೊದಲಾದ ಬೆಡಗುಗಳಿದ್ದು ತಮ್ಮನ್ನು ಧರ್ಮರಾಯ ಕುಲದವರೆಂದೂ, ಅಗ್ನಿಮೂಲದವರೆಂದೂ ತಿಗಳರ ಆಗಮನ ಕರ್ನಾಟಕದಲ್ಲಿ ಕರಗ ಆರಾಧನೆಗೆ ಪ್ರೇರಣೆ ಎಂದೂ ಹೇಳಲಾಗುತ್ತಿದೆ. ದ್ರೌಪದಿಯನ್ನು ತಮ್ಮ ಕುಲದೇವತೆ ಎಂದೂ ಭಾವಿಸಲಾಗುತ್ತಿದೆ. ತಿಗಳರು ಕಲಾರಾಧಕರು. ಕೋಲಾಟ, ಯಕ್ಷಗಾನ ಇವರ ಜೀವಚೇತನ ಕಲೆ.. ದೆಹಲಿಯಲ್ಲಿ ೨೦೦೮ ರಲ್ಲಿ ಜರುಗಿದ ಅಂತರರಾಜ್ಯ ಸಾಂಸ್ಕೃತಿಕ ಮುಖಾಮುಖಿ ಕಾರ್ಯಕ್ರಮದಲ್ಲಿ ಗುಬ್ಬಿ ತಾಲೂಕಿನ ಚೇಳೂರು ಹೋಬಳಿ ಕೋಡಿಪಾಳ್ಯದ ದೊಡ್ಡಮಲ್ಲಯ್ಯ, ಕೋಡಯ್ಯ, ಬಸವಯ್ಯ ಮೊದಲಾದ ಹದಿಮೂರು ಜನ ಕಲಾವಿದರು ಕೋಲಾಟ ಪ್ರಕಾರದಲ್ಲಿ ಭಾಗವಹಿಸಿ ದೆಹಲಿ, ಆಗ್ರಾ, ಮಥುರಾ ಮೊದಲಾದ ಕಡೆ ಆಕರ್ಷಕ ಕಲಾಪ್ರದರ್ಶನ ನೀಡಿದ್ದಾರೆ. ಮೈಸೂರು ದಸರಾ, ಹಂಪಿ ಉತ್ಸವ ಮೊದಲಾದ ಕಡೆಯೂ ಕಲಾಪ್ರದರ್ಶನ ನೀಡಿರುವ ಹಿರಿಮೆಗೆ ಪಾತ್ರರಾಗಿದ್ದಾರೆ. ತುಮಕೂರಿನ ಶ್ರೀರಾಮಪುರದಲ್ಲಿ ತಿಗಳರ ನ್ಯಾಯಕಟ್ಟೆ ಇಂದಿಗೂ ಇದ್ದು ಅದನ್ನು ತಿಗಳರ ಗದ್ದಿಗೆ ಮರ ಎಂದೂ ಕರೆಯುತ್ತಿದ್ದರೆಂದು ಕೋಡಿಪಾಳ್ಯದ ಮುನಿಮಲ್ಲಯ್ಯ ತಿಳಿಸುತ್ತಾರೆ. ಇದನ್ನೇ ತಿಗಳರ ಹಿರಿಯರ ಕಟ್ಟೆ ಎಂತಲೂ ಕರೆಯುತ್ತಿದ್ದು ಹರಿಕಾರರು, ಪಣೆಗಾರ, ಆಣಿಕಾರ ಎಂದೂ ಕರೆಯುತ್ತಿದ್ದರು.

**ಬುಡಬುಡಿಕೆಯವರು**

ಬುಡಬುಡಿಕೆಯವರು, ಸಿಳ್ಳೇಕ್ಯಾತರು ಎಂದೂ ಕರೆಯುವ ಈ ಜನಾಂಗ ಮಹಾರಾಷ್ಟ್ರ ಮೂಲದವರು. ತೆಲುಗು ಹಾಗೂ ಮರಾಠಿ ಭಾಷೆ ಇವರ ಮನೆಮಾತು. ಮರಾಠಿ ಮಿಶ್ರಿತ ಕನ್ನಡದಲ್ಲಿ ಮಾತನಾಡುತ್ತಾರೆ. ಇವರು ಸಾಹಸಪ್ರಿಯರು, ಮಿತಭಾಷಿಗರು, ಆಕರ್ಷಕ ಶಾರೀರ ಹೊಂದಿದವರೂ ಆಗಿದ್ದಾರೆ. ಜ್ಯೋತಿಷ್ಯ, ಯಂತ್ರ-ಮಂತ್ರ ಮಾಡುವುದು ಇವರಿಗೆ ಸಿದ್ಧಿಸಿದೆ. ಹಕ್ಕಿ ಶಕುನ ಹೇಳುವವರು ಕರ್ನಾಟಕದಲ್ಲಿ ಇವರೊಬ್ಬರೇ. ಜಿಲ್ಲೆಯ ಶಿರಾ, ಮಧುಗಿರಿ, ಪಾವಗಡ, ತಿಮ್ಮರಾಜನಹಳ್ಳಿ ಮುಂತಾದೆಡೆ ವ್ಯಾಪಕವಾಗಿ ನೆಲೆಸಿದ್ದಾರೆ. ಉಳಿದಂತೆ ಗುಬ್ಬಿ ತಾಲೂಕಿನ ಬಿಟಕಗೊಂಡನಹಳ್ಳಿ, ಕಡಬ, ಪೆಂಡಾರನಹಳ್ಳಿ, ಕುಣಿಗಲ್ ತಾಲೂಕಿನ ಕಗ್ಗೆರೆ, ಬಿಳಿ ದೇವಾಲಯ, ತಾತಯ್ಯನ ಗುಡ್ಡೆಗಳಲ್ಲಿ ವಿರಳವಾಗಿ ನೆಲೆಸಿದ್ದಾರೆ. ಬುಡಬುಡಿಕೆಯವರನ್ನು ಅಲೆಮಾರಿ ಜನಾಂಗ ಎಂದೂ ಕರೆಯಬಹುದು. ಏಕೆಂದರೆ ಭಿಕ್ಷಾಟನೆ, ತೊಗಲುಗೊಂಬೆ, ಸೂತ್ರದ ಗೊಂಬೆ ಆಟಗಳ ಪ್ರದರ್ಶನ, ಸಂಗೀತದ ಹಿನ್ನೆಲೆಯಲ್ಲಿ ಇವರು ಊರಿಂದ ಊರಿಗೆ ತಿರುಗಾಡುತ್ತಾರೆ. ಕೆಲವರು ಹೊಲ, ಮನೆ ಮಾಡಿಕೊಂಡು ಖಾಯಂ ಆಗಿ ನೆಲೆಸಿದ್ದಾರೆ. ಉದ್ಯೋಗಸ್ಥರಾಗಿಯೂ ಇದ್ದಾರೆ. ಕಳುವರಹಳ್ಳಿಯ ಕೃಷ್ಣಪ್ಪ ಕುಟುಂಬ ತೊಗಲು ಗೊಂಬೆ ಪ್ರದರ್ಶನ ಮಾಡುತ್ತಿದ್ದ ಕುಟುಂಬವಾಗಿದ್ದು ಕಲಾವಿದರ ವಿಘಟನೆಯಿಂದಾಗಿ ಆಟ ಮಾಡುವುದಕ್ಕೆ ಜನ ಸಿಗುವುದಿಲ್ಲ ಎನ್ನುತ್ತಾರೆ. ಹಾಗಾಗಿ ವ್ಯವಸಾಯ ಜೀವನ ನಡೆಸುತ್ತಿದ್ದಾರೆ. ಸ್ವಗೋತ್ರ ವಿವಾಹ ಇವರಲ್ಲಿ ಬಳಕೆಯಲ್ಲಿದೆ. ಆದರೂ ಅಂತರ್ಜಾತಿ ವಿವಾಹ, ವಿಧವಾ ವಿವಾಹ ಇವರಲ್ಲಿ ಬಳಕೆಯಲ್ಲಿದೆ. ವಿವಾಹದ ಬಗೆಗೆ ಕಠಿಣ ನಿಲುವುಗಳಿರುವುದಿಲ್ಲ. ಶವಸಂಸ್ಕಾರ ವಿಶಿಷ್ಟವಾಗಿದ್ದು ಹೂಳುವ ಹಾಗೂ ಸುಡುವ ಎರಡೂ ಪದ್ಧತಿ ರೂಢಿಯಲ್ಲಿದೆ. ಸತ್ತ ವ್ಯಕ್ತಿಯ ಶವವನ್ನು ಕೂರಿಸಿ, ಅಲಂಕಾರ ಮಾಡಿ ನಂತರ ಮರ ಅಥವಾ ಗುಡ್ಡ-ಬೆಟ್ಟದ ಬುಡದಲ್ಲಿ ಇಟ್ಟು ಅದರ ಸನಿಹದಲ್ಲಿ ಹೊಸ ಮಡಕೆ ಇಟ್ಟು ನೀರು ತುಂಬಿಸಿ ಬರುವುದು ಒಂದು ಕಾಲದ ನಿಯಮವಾಗಿದ್ದು ಈಗ ಹೂಳುವ ಪದ್ಧತಿ ಜಾರಿಯಲ್ಲಿದೆ. ಬಾಲ್ಯ ವಿವಾಹವೂ ಜಾರಿಯಲ್ಲಿದೆ. ಹಾಲಕ್ಕಿ ನುಡಿದ ಸೂಚನೆಯನ್ನು ಆಧರಿಸಿ ಮುಂದಿನ ಆಗುಹೋಗುಗಳನ್ನು ನಿರ್ಧರಿಸುವುದು, ಅದನ್ನು ಬೆಳಗಿನ ಜಾವ ಬುಡಬುಡಿಕೆ ನುಡಿಸಿಕೊಂಡು ಜನರ ಕಣ್ಣಿಗೆ ಬೀಳದಂತೆ ಸಾರಿ ಬರುವುದು ರೂಢಿ. ಇದನ್ನು 'ಹಾಲಕ್ಕಿ ಶಕುನ' ಎಂದು ಕರೆಯಲಾಗುವುದು. ತಿರುಪತಿ ತಿಮ್ಮಪ್ಪ, ಶ್ರೀರಾಮನಿಗೆ ಇವರ ಆರಾಧನೆ. ಮಧುಗಿರಿ ದಂಡಿನ ಮಾರಮ್ಮ, ಕೊಲ್ಲಾಪುರದಮ್ಮ ಶಕ್ತಿದೇವತೆಗಳು. ಕರ್ನಾಟಕ ಸರ್ಕಾರ ಇವರನ್ನು ಎಸ್.ಸಿ ವರ್ಗಕ್ಕೆ ಸೇರಿಸಿರುವ ಕಾರಣ ಈ ವರ್ಗದ ಮಕ್ಕಳು ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾವಂತರಾಗುತ್ತಿದ್ದಾರೆ.

## ದೊಂಬಿ ದಾಸರು

ದೊಂಬಿದಾಸರು ಮೂಲತಃ ಆಂಧ್ರದ ಕಡೆಯವರು. ಭಿಕ್ಷಾಟನೆ, ,ಕೂದಲು, ಪಿನ್ನು, ಟೇಪ್, ಪೀಪಿ ಇತ್ಯಾದಿ ಸಣ್ಣಪುಟ್ಟ ವ್ಯಾಪಾರದ ಸಲುವಾಗಿ ಕರ್ನಾಟಕಕ್ಕೆ ವಿಶೇಷವಾಗಿ ತುಮಕೂರು ಜಿಲ್ಲೆಗೆ ಬಂದವರು. ಬುರ್ಹಾಕಥಾ ಮಾಡುವಲ್ಲಿ ಖ್ಯಾತನಾಮರು. ಇವರು ಗುಬ್ಬಿ ತಾಲೂಕಿನ ದಿಬ್ಬದಹಳ್ಳಿ ಹಟ್ಟಿ, ಗೌರಿಪುರ, ಗೌಡನಹಳ್ಳಿ, ಶಿರಾ ತಾಲೂಕಿನ ಮುಷ್ಟಿಗರಹಳ್ಳಿ, ಕಳುವರಹಳ್ಳಿ, ಓಜಗುಂಟೆ, ಗೋಪಾಲದೇವರ ಹಳ್ಳಿ, ಕುಣಿಗಲ್ ತಾಲೂಕಿನ ಭಕ್ತರಹಳ್ಳಿ, ಕುರುಡಿಹಳ್ಳಿ ಮುಂತಾದೆಡೆ ನೆಲೆಸಿದ್ದಾರೆ. ಕೆಲವರು ಹೊಲ-ಮನೆ ಮಾಡಿಕೊಂಡು ಅನುಕೂಲವಾಗಿದ್ದರೆ, ಕೆಲವರು ಭಿಕ್ಷಾಟನೆ, ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ದೊಂಬಿದಾಸರ ಮನೆಮಾತು ತೆಲುಗು. ಪಾವಗಡ, ಮಡಕಶಿರಾ, ಕರಿದಾಸರಹಳ್ಳಿ ಇಲ್ಲಿನ ದೊಂಬಿದಾಸರು ಬುರ್ಹಾಕಥಾ ಅಂದರೆ ಕರ್ನಾಟಕದ ಕರಪಾಲ ಕಲೆಯ ಮಾದರಿಯ ಕಥೆಯನ್ನು ಮಾಡಿಕೊಂಡು ಭಿಕ್ಷಾಟನೆ ಮಾಡುತ್ತಿದ್ದಾರೆ. ಗುಬ್ಬಿ ತಾಲೂಕಿನ ನಾರಸಂದ್ರ, ಗಂಗಸಂದ್ರ, ಕಡಬಾ ಈ ಕಡೆಯ ದಾಸರು ಗಂಗೆಗೌರಿ, ಬಾಲನಾಗಮ್ಮ ಈ ತರಹ ಪ್ರಸಂಗಗಳನ್ನು ಸಣ್ಣ ಸ್ಟೇಜ್ ಕಟ್ಟಿಕೊಂಡು ಮಧುರವಾದ ಹಾಡು, ಕುಣಿತ, ಪಾತ್ರಗಳ ಸಂಭಾಷಣೆಯ ಮೂಲಕ ರಂಗಚಟುವಟಿಕೆಯ ಮೂಲಕ ದವಸ-ಧಾನ್ಯ, ಹಣ ಸಂಗ್ರಹಿಸಿಕೊಂಡು ಜೀವನ ಮಾಡುತ್ತಾರೆ. ಪಾವಗಡ, ಐ.ಡಿ. ಹಳ್ಳಿ, ಮಧುಗಿರಿ ಭಾಗಗಳಲ್ಲಿ ಹಗಲುವೇಷದ ಮೂಲಕ ಪೌರಾಣಿಕ ರಂಗ ದೃಶ್ಯಾವಳಿ, ಹನುಮಂತ, ಶ್ರೀರಾಮ, ಕೌರವ-ಪಾಂಡವರ ದೃಶ್ಯಾವಳಿಗಳ ಮೂಲಕ ಹಾರ್ಮೋನಿಯಂ, ತಬಲಾ ಮೊದಲಾದ ಸಂಗೀತ ಪರಿಕರಗಳೊಂದಿಗೆ ಪ್ರದರ್ಶನ ನೀಡುತ್ತಾರೆ. ಕೆಲವರು ಬಸವನ ಆಡಿಸುವ ಕಾಯಕದಿಂದ ಭಿಕ್ಷಾಟನೆ ಮಾಡಿಕೊಂಡು ಜೀವನ ನಡೆಸುತ್ತಾರೆ. ಇವರಲ್ಲೂ ಬಾಲ್ಯವಿವಾಹ, ವಿಧವಾ ವಿವಾಹ ಬಳಕೆಯಲ್ಲಿದೆ. ಸ್ವಗೋತ್ರ ವಿವಾಹ ರೂಢಿಯಲ್ಲಿದೆ. ಹೆಣ್ಣನ್ನು ಅಪಹರಣದ ಮೂಲಕ ವಿವಾಹವಾಗುವ ಪದ್ಧತಿ ಇದೆ.

ಕರ್ನಾಟಕ ಸರ್ಕಾರ ಈ ವರ್ಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವುದರಿಂದ ಸರ್ಕಾರದ ಸೌಲಭ್ಯ, ಮಕ್ಕಳ ವಿದ್ಯಾಭ್ಯಾಸ, ಉದ್ಯೋಗಕ್ಕೆ ಅನುಕೂಲವಾಗಿ ಇಂದು ಭಿಕ್ಷಾಟನೆ ನಿಂತಿದೆ. ಕಲಾಜೀವನ ಇನ್ನೂ ಇದೆ. ಬೇಸಾಯ ಮಾಡಿಕೊಂಡು ಜೀವನ ನಿರ್ವಹಣೆ ಮಾಡಲಾಗುತ್ತಿದೆ. ಒಂದು ದಿನದಲ್ಲಿ ಮದುವೆ ನಡೆಯುತ್ತದೆ. ಸಾಮಾನ್ಯವಾಗಿ ಗಂಡಿನ ಮನೆ ಅಥವಾ ಅವರು ವಾಸಿಸುವ ಸ್ಥಳದಲ್ಲಿ ಮದುವೆಯ ಕಾರ್ಯ ನಡೆಯುತ್ತದೆ. ಮದುವೆಗೆ ಮುನ್ನ ಭಿಕ್ಷಾಟನೆ ಮೂಲಕವೂ ಹಣವನ್ನು ಸಂಗ್ರಹಿಸಲಾಗುವುದು. ಶವಸಂಸ್ಕಾರ ಹೂಳುವ ಅಥವಾ ಕಾಡಿನ ಮರ-ಪೊದೆಗಳ ಬದಿಗೆ ಇಟ್ಟು ಮಡಕೆಯಲ್ಲಿ ನೀರು ತುಂಬಿಸುವ ಪರಿಪಾಠವಿದೆ. ಅಳಿಲು, ಮೊಲ, ಮುಂಗುಸಿ, ಕಾಡುಬೆಕ್ಕು, ಇಲಿ ಬೇಟೆಯಾಡಿ ಮಾಂಸ ಸೇವನೆ ಮಾಡುತ್ತಾರೆ.

## ವಡ್ಡರು

ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ನೆಲೆಸಿರುವ ಇವರು ಬೋವಿ ಎಂದೂ ಪರಿಚಿತರು. ಬುಡಕಟ್ಟುತನದ ಲಕ್ಷಣ ಉಳಿಸಿಕೊಂಡಿದ್ದರೂ ನಗರ ಸಂಸ್ಕೃತಿಯಲ್ಲಿ ಬೆರೆತಿರುವುದು ಇವರ ವಿಶೇಷ. ವಡ್ಡರಲ್ಲಿ ಮಣ್ಣು ವಡ್ಡರು, ಕಲ್ಲು ವಡ್ಡರು ಎಂದು ಎರಡು ಪಂಗಡಗಳಿವೆ. ಮದುವೆ ಈ ಬಗೆಯ ರಕ್ತಸಂಬಂಧಿ ವ್ಯವಹಾರ ಸ್ವಗೋತ್ರಗಳಲ್ಲಿಯೇ ನಡೆಯುತ್ತದೆ. ಬಂಡೆ ಸೀಳುವುದು, ಚಪ್ಪಡಿ ತೆಗೆಯುವುದು, ಸೈಜುಗಲ್ಲು-ಜಲ್ಲಿ ಕೆಲಸ ಮಾಡುವುದು ಕಲ್ಲು ವಡ್ಡರ ಕೆಲಸವಾದರೆ ಕೆರೆ, ರಸ್ತೆ, ಮನೆಗೆಲಸ, ನಿರ್ಮಾಣದ ಕೆಲಸ ಮಣ್ಣು ವಡ್ಡರದು. ಕರ್ನಾಟಕದಲ್ಲಿ ದೊರೆತಿರುವ ಹಲವು ಶಾಸನಗಳಲ್ಲಿ ವಡ್ಡರ ಅಥವಾ ಬೋವಿಗಳ ಉಲ್ಲೇಖ ಲಭ್ಯವಿದೆ. ಕೆರೆ ಕಟ್ಟಡದ ಕಾಮಗಾರಿ ಕೆಲಸದಲ್ಲಿ ಇವರ ಉಲ್ಲೇಖ ಬರುತ್ತದೆ. ಶಿರಾ, ಮದ್ದಕ್ಕನಹಳ್ಳಿ, ವಡ್ಡರಹಳ್ಳಿ, ಬುಕ್ಕಾಪಟ್ಟಣ, ಪಾವಗಡ, ಐ.ಡಿ. ಹಳ್ಳಿ, ಚೇಳೂರು, ಕೊರಟಗೆರೆ, ತೊಟ್ಲುಕೆರೆ, ಕುಣಿಗಲ್, ಹಾಲಪ್ಪನಗುಡ್ಡೆ, ಬಿಳಿದೇವಾಲಯ, ಕಡಬ, ವೈ.ಎನ್. ಹೊಸಕೋಟೆ ಭಾಗಗಳಲ್ಲಿ ವ್ಯಾಪಕವಾಗಿ ನೆಲೆಸಿದ್ದಾರೆ. ತೆಲುಗು ಇವರ ಮನೆಯ ಮಾತು. ಪರಿಶಿಷ್ಟ ಜಾತಿ ಗುಂಪಿಗೆ ಸೇರಿರುವುದರಿಂದ ವಿದ್ಯಾವಂತರು, ಉದ್ಯೋಗ (ಸರ್ಕಾರಿ) ಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವಡ್ಡರು ತಿರುಪತಿ ತಿಮ್ಮಪ್ಪನನ್ನು ಹೆಚ್ಚಾಗಿ ಪೂಜಿಸುತ್ತಾರೆ. ದುರ್ಗಮ್ಮ, ಮಾರಮ್ಮ ಈ ಬಗೆಯ ಸ್ಥಳೀಯ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಬೋವಿಗಳ ಕುಲದೇವತೆ ಉಡಸಲಮ್ಮ, ಸುಂಕಲಮ್ಮ, ಕೆಂದಾಲಮ್ಮ, ಯಲ್ಲಮ್ಮ ಇವರ ಕುಲದೈವಗಳು. ಇವುಗಳ ಪುಟ್ಟ ಪುಟ್ಟ ಗುಡಿ ಪ್ರತಿ ವಡ್ಡರಹಟ್ಟಿಗಳಲ್ಲಿ ಇವೆ. ವಡ್ಡರಲ್ಲಿ ಸುಮಾರು

ಅರವತ್ತು ಬೆಡಗುಗಳು ಇವೆ. ಮುಂಚಲೋರು, ಹೇಮಲೋರು, ಹಾಲುಕುಂತದವರು, ದರಡಿಗಲ್ಲೋರು, ಕುಂಚಲೋರು ಇತ್ಯಾದಿ.

ವಡ್ಡರು ಸಾಮಾನ್ಯವಾಗಿ ಕಪ್ಪುವರ್ಣದ ಎತ್ತರದ ಆಕೃತಿಯ ದೇಹರಚನೆಯುಳ್ಳವರು. ವೆಂಕಟರಮಣಪ್ಪ, ತಿಮ್ಮಾಬೋವಿ, ವೆಂಕಟಾಬೋವಿ, ನಾರಾಯಣ, ನರಸಿಂಹಪ್ಪ ಈ ಹೆಸರುಗಳನ್ನು ಇಟ್ಟುಕೊಂಡರೆ ಹೆಂಗಸರು ಬಂದೆಮ್ಮ, ಪೆದ್ದಮ್ಮ, ಪದ್ಮಾವತಿ, ತಿಮ್ಮಮ್ಮ, ಮದ್ದಮ್ಮ, ಕಾಮಕ್ಕ ಮೊದಲಾದ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಮಧುಗಿರಿ ಭಾಗದಲ್ಲಿ ಬಂಜೆ ಹೊನ್ನಮ್ಮ ಎಂಬ ಜನಪದ ಕಥನ ಗೀತೆ ಚಾಲ್ತಿಯಲ್ಲಿದ್ದು ಅದು ಕೆರೆಗೆಹಾರದ ಭಾಗೀರಥಿಯನ್ನು ಹೋಲುತ್ತದೆ. ಆದರೂ ಬಂಜೆ ಹೊನ್ನಮ್ಮ ಗಂಡನ ಚಮತ್ಕಾರದಿಂದ ಬದುಕುಳಿದ ರೀತಿ ಕುತೂಹಲವಾಗಿದೆ. ವಿವಾಹ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಆ ಜನಾಂಗ ಪ್ರತಿನಿಧಿಸುವ ಹಾಡುಗಳನ್ನು ತೆಲುಗಿನಲ್ಲಿ ಹೇಳುತ್ತಾರೆ. ಶವಸಂಸ್ಕಾರದಲ್ಲಿ ಹೂಳುವುದು ಸಾಮಾನ್ಯ. ಸ್ವಗೋತ್ರ ವಿವಾಹ ಬಳಕೆಯಲ್ಲಿದೆ. ಬಾಲ್ಯವಿವಾಹ, ವಿಧವಾ ವಿವಾಹ ಇತ್ತೀಚೆಗೆ ಕಡಿಮೆ. ಹೆಣ್ಣಿಗೆ ತೆರ ಕೊಡುವ ಪದ್ಧತಿ ಇಂದಿಗೂ ಇದೆ. ಹೆಂಡ ಹುಯ್ಯಿಸುವ ಆಚರಣೆಯ ಮೂಲಕ ಮದುವೆಯ ಪ್ರಸ್ತಾಪ ನಡೆದು ಮುಹೂರ್ತ ನಿರ್ಧಾರವಾಗುತ್ತದೆ.

### ಉಪ್ಪಾರರು

ಭಗೀರಥನ ಮೂಲದವರು ಎಂದು ಕರೆದುಕೊಳ್ಳುವ ಉಪ್ಪಾರರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಂಡುಬರುತ್ತಾರೆ. ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರು ಹೋಬಳಿ, ಗುಬ್ಬಿ ತಾಲೂಕಿನ ಗುಬ್ಬಿ, ವದಲೂರು, ಚೇಳೂರು, ಶಿರಾ ತಾಲೂಕಿನ ಬಿದಿರುಕೆರೆ, ಎಂಜಲಗೆರೆ, ಕೊಟ್ಟಿ, ರಾಮನಹಳ್ಳಿ, ಉಪ್ಪಾರಹಟ್ಟಿ, ಮಧುಗಿರಿ ತಾಲೂಕಿನ ಮಿಡಿಗೇಶಿ, ಐ.ಡಿ.ಹಳ್ಳಿ, ಪಾವಗಡ ತಾಲೂಕಿನ ಅರಸೀಕೆರೆ ಹೋಬಳಿ, ತಿಪಟೂರು ತಾಲೂಕಿನ ಬಿದರೆಗುಡಿ, ಹೊನ್ನವಳ್ಳಿ, ಬಳುವನೇರಲು ಈ ಭಾಗಗಳಲ್ಲಿ ನೆಲೆಸಿದ್ದಾರೆ. ಸರ್ಕಾರದ ಪ್ರವರ್ಗ–೧ ರ ಅಡಿಯಲ್ಲಿ ಬರುವುದರಿಂದ ಸರ್ಕಾರದ ಸೌಲಭ್ಯ ಇವರ ಮಕ್ಕಳಿಗೆ ಲಭ್ಯವಾದರೂ ಉಪ್ಪಾರರು ಇಂದಿಗೂ ಮುಖ್ಯವಾಹಿನಿಗೆ ಬಂದಿರುವುದು ಕಡಿಮೆ. ಆರಂಭದಲ್ಲಿ ಉಪ್ಪು ತಯಾರಿಸುತ್ತಿದ್ದ ಇವರನ್ನು ಮೇಲು ಸಕ್ಕರೆಯವರು ಎಂದೂ ಕರೆದುಕೊಳ್ಳುತ್ತಾರೆ. ಉಪ್ಪಾರರಲ್ಲಿ ದಳವಾಯಿ, ಬಂಡೆಗಾರ, ಸಂತರಾಶಿ, ಗುಡ್ಡದವರು, ಗೊಲ್ಲಮನೆ, ಗೌಡಮನೆ, ಪಲ್ಲವಲ್ಲೆರು, ಪಾಜಲ್ಲೆರು ಮುಂತಾದ ಬೆಡಗುಗಳಿವೆ. ಇವುಗಳ ಒಳಗೆ ವೈವಾಹಿಕ ಸಂಬಂಧಗಳು ನಡೆಯುತ್ತವೆ. ಶಿರಾ ಭಾಗದಲ್ಲಿ ರಂಗೋಲಿ ಮಣ್ಣನ್ನು ಕತ್ತೆಗಳ ಮೇಲೆ ಹೇರಿಕೊಂಡು ಒಂದು ಸೇರಿಗೆ ೨ ರೂ. ನಂತೆ ಮಾರಾಟ ಮಾಡುತ್ತಾರೆ. ಕೆಲವರು ಪುಡಿ ಸುಣ್ಣದ ವ್ಯಾಪಾರವನ್ನು ಮಾಡುತ್ತಾರೆ. ಹೆಚ್ಚಾಗಿ ಕೃಷಿ ಕಾಯಕದವರು ರಂಗನಾಥ, ಶಿವ ಎರಡೂ ದೇವರ ಆರಾಧಕರು. ಶಿರಾ ತಾಲೂಕಿನ ಬಾಣಗೆರೆ ಸಮೀಪ ಹಳ್ಳದ ರಂಗನಾಥಸ್ವಾಮಿ ಕ್ಷೇತ್ರ ಉಪ್ಪಾರರ ಪ್ರಮುಖ ಧಾರ್ಮಿಕ ನೆಲೆ. ಇತ್ತೀಚೆಗೆ ಜನಾಂಗದ ಸಂಘಟನೆಯಿಂದಾಗಿ ದೇವಾಲಯ ಅಭಿವೃದ್ಧಿಪಡಿಸಲಾಗಿದೆ. ತುಮಕೂರು ಜಿಲ್ಲೆಯ ಉಪ್ಪಾರರು ಹೊಸದುರ್ಗದ ಭಗೀರಥ ಗುರುಪೀಠಕ್ಕೆ ನಡೆದುಕೊಳ್ಳುತ್ತಾರೆ. ಸರಳ ವಿವಾಹ ಇವರಲ್ಲಿ ಚಾಲ್ತಿಯಲ್ಲಿದೆ. ಅಕ್ಕನ, ಮಾವನ ಮಗಳನ್ನು ವಿವಾಹ ಮಾಡಿಕೊಳ್ಳುತ್ತಾರೆ. ಲಕ್ಷ್ಮಿ, ರಾಮದೇವರು, ದೊಡ್ಡಮ್ಮ, ಚಿಕ್ಕಮ್ಮ, ಮಾರಮ್ಮ ದೇವರುಗಳ ಭಕ್ತರು. ಸೌಮ್ಯ ಜನಾಂಗ. ಹೊಂದಾಣಿಕೆ ಇವರ ಮುಖ್ಯಗುಣ. ಕಪ್ಪು ವರ್ಣ, ಮಧ್ಯಸ್ಥ ಮೈಕಟ್ಟು, ದೇಹಾಕೃತಿ. ತುಮಕೂರು ಕೆರೆಯ ಮುಂಭಾಗದಲ್ಲಿ ಭಗೀರಥ ದೇವಾಲಯ, ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿಕೊಂಡಿದ್ದಾರೆ.

### ಇರುಳಿಗರು

ಜಿಲ್ಲೆಯಲ್ಲಿ ಅತಿ ವಿರಳವಾಗಿ ಕಂಡುಬರುವ ಇರುಳಿಗರು ಒಂದು ಬುಡಕಟ್ಟು ವರ್ಗ. ದಟ್ಟವಾದ ಕಾಡಿನ, ಕತ್ತಲು ಪ್ರದೇಶದಲ್ಲಿ ವಾಸಿಸುವ ಕಾರಣ ಮತ್ತು ಕಪ್ಪಾಗಿರುವ ಕಾರಣವೂ ಸೇರಿ ಇವರನ್ನು ಇರುಳಿಗರು ಎಂದು ಕರೆಯಲಾಗಿದೆ ಎಂದು ಎಲ್.ಕೆ. ಅನಂತಕೃಷ್ಣ ಅಯ್ಯರ್ ಹೇಳುತ್ತಾರೆ. ಇಲಿ, ತೋಡಗಳನ್ನು ಹಿಡಿದು ತಿಂದು ಜೀವಿಸುತ್ತಿದ್ದ ಕಾರಣದಿಂದ ಇವರನ್ನು ಇರುಳಿಗರು ಎಂದು ಕರೆಯಲಾಗುತ್ತದೆ ಎಂಬ ಅಭಿಪ್ರಾಯವೂ ಇದೆ. ಜಿಲ್ಲೆಯ ಕುಣಿಗಲ್ ತಾಲೂಕಿನ ಹುಲಿಯೂರುದುರ್ಗ, ಹುತ್ತರಿ, ಸಂಕಿಘಟ್ಟ, ಬುಕ್ಕಸಾಗರ, ಬಗಿನಗೆರೆ ಈ ಭಾಗಗಳಲ್ಲಿ ಕಾಡುಪ್ರದೇಶಕ್ಕೆ ತುಸು ಹತ್ತಿರದಲ್ಲಿ ವಾಸಿಸುತ್ತಾರೆ. ಆರಂಭದಲ್ಲಿ ಜೇನು ಸಂಗ್ರಹ ಕಾಡಿನ ಉತ್ಪತ್ತಿಗಳನ್ನು ಸಂಗ್ರಹಿಸಿ ಜೀವನೋಪಾಯ ಮಾಡುತ್ತಿದ್ದ ಇರುಳಿಗರು

ಇಂದು ನಗರಮುಖಿಯಾಗಿ ವ್ಯವಸಾಯ, ಮನೆ ಕಟ್ಟುವ ಕಾಯಕ, ವ್ಯಾಪಾರಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಕಪ್ಪುವರ್ಣದ, ಕೋಲುಮುಖದ, ಮಟ್ಟಸ್ಥ ಶರೀರದ ಇವರು ಗುಂಗುರು ಕೂದಲು, ದಪ್ಪ ತುಟಿ, ಉಬ್ಬಿದ ಹಲ್ಲು, ಅಗಲವಾದ ಹಣೆ, ಮೂಗಿನ ಹೊಳ್ಳೆಗಳಿಂದ ಕೂಡಿರುತ್ತಾರೆ. ಮೊದಲು ಸೊಂಟಕ್ಕೊಂದು ಪುಟಗೋಸಿ, ತಲೆಯ ಮೇಲೊಂದು ತುಂಡು ಬಟ್ಟೆ ಸುತ್ತಿಕೊಳ್ಳುತ್ತಿದ್ದ ಇವರು ಇಂದು ಪಂಚೆ ಉಡುತ್ತಾರೆ. ಯುವಕರು ಪ್ಯಾಂಟ್ ಧರಿಸುತ್ತಾರೆ. ತಮಿಳಿಗರ ಭೌತಿಕ ಆಕೃತಿಯನ್ನು ಹೋಲುವ ಇರುಳಿಗ ಹೆಂಗಸರು ಸೊಂಟದಿಂದ ಕೆಳಗೊಂದು ತುಂಡುಬಟ್ಟೆ, ಮೇಲೊಂದು ಹೊದಿಕೆ ಆರಂಭಿಕ ಉಡುಗೆಯಾದರೆ ಇಂದು ಸೀರೆ ಉಡುತ್ತಾರೆ, ರವಿಕೆ ತೊಡುತ್ತಾರೆ. ಯುವತಿಯರು ಚೂಡಿದಾರ್, ನೈಟಿ ಧರಿಸುವುದು ವಾಡಿಕೆಯಾಗಿದೆ. ಆರಂಭದಲ್ಲಿ ಸೊಪ್ಪು, ಗೆಡ್ಡೆ ಗೆಣಸು, ಜೇನುತುಪ್ಪಗಳನ್ನು ತಿಂದು ಬದುಕುತ್ತಾ ದೊರೆತರೆ ಇಲಿ, ಹೆಗ್ಗಣ, ತೋಡ ಮೊದಲಾದವುಗಳನ್ನು ತಿನ್ನುತ್ತಿದ್ದರು. ರೇವಣಸಿದ್ದೇಶ್ವರನ ಒಕ್ಕಲಾದ ಇವರು ಸೋಮವಾರ ಮಾಂಸಾಹಾರವನ್ನು ಸೇವಿಸುವುದಿಲ್ಲ. ಕಾಡಿನ ಸೊಪ್ಪು ಗೆಡ್ಡೆ ಇರುಳಿಗ ಹೆಂಗಸರಿಗೆ ಪ್ರಿಯವಾದ ಆಹಾರ. ಆದರೆ ಆ ಬಗೆಯ ಸೊಪ್ಪು ದೊರೆಯುತ್ತಿಲ್ಲ ಎನ್ನುತ್ತಾರೆ. ಅಣಬೆಯನ್ನು ಎಲ್ಲಿದ್ದರೂ ಹುಡುಕಿ ತರುತ್ತಾರೆ. ಇರುಳಿಗರು ತಮ್ಮನ್ನು ತಮಿಳುನಾಡಿನಿಂದ ಬಂದವರೆಂದು ಹೇಳುತ್ತಾರೆ. ಇಂದಿಗೂ ಇವರ ಮನೆಯ ಮಾತು ತಮಿಳು. ಪೂರ್ವಿಕರು ತಮಿಳು ಮಿಶ್ರಿತ ಕನ್ನಡದಲ್ಲಿ ಮಾತನಾಡಿದರೆ ಯುವಕರು ಅರಳು ಹುರಿದಂತೆ ಕನ್ನಡ ಮಾತನಾಡುತ್ತಾರೆ. ಇವರು ಬೇಟೆ ಪ್ರಿಯರು. ಜಿಂಕೆ, ಕಾಡುಹಂದಿ, ನರಿ, ಕಾಡುಬೆಕ್ಕು, ಮೊಲ, ಇಲಿ, ಮುಂಗುಸಿ ಇವುಗಳ ಬೇಟೆ ಇವರಿಗೆ ಸುಲಭ. ಉರುಳು ಹಾಕುವುದು, ಸೋವುದು, ಸಿಡಿ, ಬೋನು, ಬಲೆ ಮುಂತಾದ ಬೇಟೆಯ ಉಪಕರಣವನ್ನು ಬಳಸುತ್ತಾರೆ. ಉಡ ಹಾಗೂ ಆಮೆಯನ್ನು ಹಿಡಿಯುತ್ತಾರೆ. ಮಾಂಸ, ಮದ್ಯ ಸೇವನೆ ಈ ಜನಾಂಗದ ಸಹಜ ಆಹಾರ. ಇವರಲ್ಲೂ ಒಂದು ಒಳಾಡಳಿತ ಪದ್ಧತಿ ಇದ್ದು ಕಟ್ಟು ಕಟ್ಟಳೆ ಮೀರಿದರೆ ಸೂಕ್ತ ನ್ಯಾಯ ತೀರ್ಮಾನವನ್ನು ಈ ಜನಾಂಗದ ಮುಖಂಡರು ತೀರ್ಮಾನಿಸುತ್ತಾರೆ. ಸಾಮಾಜಿಕ ನ್ಯಾಯ ವಿವೇಚನೆ, ಸಾಂಸಾರಿಕ ನಿರ್ವಹಣೆ ಇಲ್ಲಿ ಮುಖ್ಯ. ಕಾಡಿನ ಉತ್ಪನ್ನಗಳ ಸಂಗ್ರಹ, ಸೌದೆ ಕಡಿದು ಪಟ್ಟಣಗಳಿಗೆ ಮಾರುವುದು, ಕೆಲವರು ಬಿದಿರಿನಿಂದ ಬುಟ್ಟಿ ಹೆಣೆಯುವುದು, ಮಾರಾಟ, ಇದ್ದಿಲು ಸುಡುವುದು ಸಾಮಾನ್ಯ ಕೆಲಸ. ಆದರೂ ಕೆಲವರು ಕೃಷಿ ಕೆಲಸ ಮಾಡುತ್ತಾ ಆ ಸಂಬಂಧಿ ಕೂಲಿಗೆ ಹೋಗುತ್ತಾರೆ. ಸ್ವಗೋತ್ರ ವಿವಾಹ, ಪಿತೃ ಪ್ರಧಾನತೆ, ಸೋದರಮಾವನ ಮಗನನ್ನು ಮದುವೆಯಾಗುವುದು ರೂಢಿ. ತಾವು ವಾಸಿಸುವ ಭಾಗಕ್ಕೆ ದೊಡ್ಡಿ ಎಂದು ಕರೆದುಕೊಳ್ಳುತ್ತಾರೆ. ಆದರೂ ಹತ್ತಿಪ್ಪತ್ತು ಮನೆಗಳು ಊರಂಚಿನ ಕಾಡಿನ ಭಾಗದಲ್ಲಿ ಇರುವುದರಿಂದ ಇರುಳಿಗರ ಕಾಲೋನಿ ಎಂತಲೇ ಕರೆಯುತ್ತಾರೆ. ಇವರ ವೈವಾಹಿಕ ಸಂಬಂಧವು ಮಾಗಡಿ ತಾಲೂಕಿನ ಈರೇಗೌಡನ ದೊಡ್ಡಿ, ಚನ್ನಪಟ್ಟಣ ತಾಲೂಕಿನ ಹಲಸಿನಮರದ ದೊಡ್ಡಿ, ಕೋಡಂಬಳ್ಳಿ ದೊಡ್ಡಿ ಇಲ್ಲಿಗೆ ಸಂಬಂಧ ಬೆಳೆಸುತ್ತಾರೆ. ಕುನ್ನಯ್ಯ, ಮೋಟಯ್ಯ, ಈರಭದ್ರ, ಶಿವ್ವ, ಬೋಳ, ಕಂಚಿ ಶಿವ ಮೊದಲಾದ ಹೆಸರಿಂದ ಕರೆದುಕೊಳ್ಳುವ ವ್ಯಕ್ತಿಸೂಚಕ ಹೆಸರುಗಳು. ಹೆಂಗಸರು ದುರ್ಗಿ, ಕಾಳಿ, ಪಾರಮ್ಮ, ಸಣ್ಣಮ್ಮ, ಕುಳ್ಳಮ್ಮ, ಚಿಕ್ಕೋಳಮ್ಮ, ಕೆಂಪಮ್ಮ, ಶಿವಮ್ಮ ಎಂದೆಲ್ಲಾ ಹೆಸರಿಟ್ಟುಕೊಳ್ಳುತ್ತಾರೆ.

ಇರುಳಿಗರು ಸಾಮಾನ್ಯವಾಗಿ ಜಿಲ್ಲೆಯ ಒಕ್ಕಲಿಗ ಅಥವಾ ಕುರುಬರ ರೀತಿ ನೀತಿಗಳಂತೆಯೇ ಹೆರಿಗೆ, ನಾಮಕರಣ, ತೊಟ್ಟಿಲ ಶಾಸ್ತ್ರ ಮಾಡುತ್ತಾರೆ. ಮದುವೆ ತೀರಾ ಸರಳ. ಒಂದು ಸಂಜೆ ಅಥವಾ ಬೆಳಗೊಪ್ಪತ್ತಿನಲ್ಲಿ ನಡೆದುಹೋಗುತ್ತದೆ. ಮದುವೆ ಕಾಲದಲ್ಲಿ ತಮಿಳು ಜನಪದ ಗೀತೆ ಹಾಡುತ್ತಾರೆ. ಸಾವಿನ ಸೂತಕ, ಶವಸಂಸ್ಕಾರ, ತಿಥಿ ಮೊದಲಾದ ಶಾಸ್ತ್ರಗಳೆಲ್ಲಾ ಹಿಂದೂಗಳಂತೆಯೇ ನಡೆಯುತ್ತದೆ. ಶವವನ್ನು ಹೂಳುವ ಅಥವಾ ಸುಡುವ ಪದ್ಧತಿ ಇದೆ. ಈರ್ರಬ್ಬ, ಕಿರಿಹಬ್ಬ, ಮುನೇಶ್ವರ, ಯುಗಾದಿ, ಮಾರಮ್ಮನ ಹಬ್ಬಗಳನ್ನು ಆಚರಿಸುತ್ತಾರೆ. ಇರುಳಿಗರ ಗಂಡಸರು ಕ್ರಮಬದ್ಧವಾಗಿ ಕಣಿ ಹೇಳುವುದು ವಾಡಿಕೆ. ತಮಟೆ ಹಿಡಿದುಕೊಂಡು ಕಣಿ ಹೇಳುವುದುಂಟು. ಇರುಳಿಗರು ಜನಪದ ಔಷಧದಲ್ಲಿ ನಿಪುಣರು.

### ಕೊರಚರು

ಕೊರಚರನ್ನು, ಕೊರ್ಚ, ಕೊರ್ಚಿಗರು ಎಂದು ಕರೆಯುತ್ತಾರೆ. ಕೊರಚರಲ್ಲಿ ಶಾಂತಪಾಡಿ, ಕಾವಾಡಿ, ಮೇದ್ರುಗುತ್ತಿ, ದೆಬ್ಬೆಲವರು ಮುಂತಾದ ಬೆಡಗುಗಳಿದ್ದು ಇವುಗಳಲ್ಲಿ ವೈವಾಹಿಕ ಸಂಬಂಧ ನಡೆಯುತ್ತವೆ. ಮೂಲತಃ ಇವರು ಆಂಧ್ರಪ್ರದೇಶದಿಂದ ವಲಸೆ ಬಂದವರು. ಇವರ ಮನೆಯ ಮಾತು ತೆಲುಗು. ಜಿಲ್ಲೆಯ ಪಾವಗಡ, ಶಿರಾ, ಗುಬ್ಬಿ ತಾಲೂಕಿನ ಚೇಳೂರು, ಮಧುಗಿರಿ, ಕೊರಟಗೆರೆ ಇಲ್ಲಿ ಹೆಚ್ಚಿನ ಪ್ರಮಾಣದಲ್ಲೂ, ತುಮಕೂರಿನ ಕ್ಯಾತಸಂದ್ರದ ಸಮೀಪ

ಎಚ್‌ಎಂಟಿ ಬಡಾವಣೆಗೆ ಹೊಂದಿಕೊಂಡಂತೆ ಇವರು ನೆಲೆಸಿದ್ದಾರೆ.ಇವರು ಆರಂಭದಲ್ಲಿ ಅಲೆಮಾರಿಗಳಾಗಿದ್ದು ಹಂದಿ, ಕತ್ತೆಗಳ ಸಾಕಾಣಿಕೆ ಹಾಗೂ ಅದರ ಉತ್ಪತ್ತಿ, ಕತ್ತೆಗಳಿಂದ ಉಪ್ಪು ಮೊದಲಾದ ವಸ್ತುಗಳ ಸಾಗಾಣಿಕೆ ಮಾಡುತ್ತಿದ್ದರು. ಇವರು ಕತ್ತಾಳೆಯನ್ನು ಒಣಗಿಸಿ ಅಥವಾ ಹಸಿ ಕತ್ತಾಳೆಯನ್ನು ನೀರಿನಲ್ಲಿ ಕೊಳೆಸಿ, ಅದರಿಂದ ನಾರು ತೆಗೆದು, ಹಗ್ಗ ತಯಾರಿಸುವುದು ಇವರ ಕಾಯಕ. ಚೇಳೂರು, ಗುಬ್ಬಿ, ಕಡಬ, ತಿಪಟೂರು, ಚಿಕ್ಕನಾಯಕನಹಳ್ಳಿ ಈ ಭಾಗದಲ್ಲಿ ತೆಂಗಿನ ನಾರುಗಳಿಂದ ನೀರು ಸೇದುವ ಹಗ್ಗ, ಹಸು-ಎಮ್ಮೆಗಳ ಹಗ್ಗ ತಯಾರಿಸುತ್ತಾರೆ. ಮಣ್ಣಿನ ಮಡಕೆ, ಕುಡಿಕೆ, ಹರವಿ, ಗಡಿಗೆ ಮೊದಲಾದವುಗಳ ತಳದಲ್ಲಿ ಇಡಲು ಬಳಸುವ ಸಿಂಬೆ ಮುಂತಾದವನ್ನು ಕೊರಚರ ಹೆಂಗಸರು-ಮಕ್ಕಳು ತಲೆಯ ಮೇಲೆ ಹೊತ್ತು ಮಾರುತ್ತಿದ್ದರು. ನಂತರ ಕತ್ತೆಗಳ ಮೇಲೆ ಹೇರು ಹಾಕಿಕೊಂಡು ಮಾರಾಟ ಮಾಡುತ್ತಿದ್ದ ಪರಿಸ್ಥಿತಿಯೂ ಇದ್ದಿತು. ಈಗ ಹಗ್ಗ, ಸಿಂಬೆ ಮಾರಾಟ ಇದೆಯಾದರೂ, ಕತ್ತೆಗಳ ಮೇಲೆ ಹೊತ್ತು ಮಾರುವ ಪರಿಸ್ಥಿತಿ ಇರುವುದಿಲ್ಲ.

ಕಳ್ಳ ಕೊರಚರು ಎಂಬ ಹೆಸರು ಜನಪದೀಯವಾಗಿ ಬಳಕೆಯಲ್ಲಿದ್ದು, ಕೊರಚರು ಪಟ್ಟಣದಿಂದ ಕೊಂಚ ದೂರದಲ್ಲಿ ಪುಟ್ಟ ಪುಟ್ಟ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಮಾಡುತ್ತಿದ್ದರು. ಸಣ್ಣ ಸಣ್ಣ ಮಣ್ಣಿನ ಗೋಡೆ, ತೆಂಗಿನ ಗರಿ, ತಾಳೆಗರಿ, ಈಚಲ ಚಾಪೆಗಳಿಂದ ಗುಡಿಸಲ ಹೊಂದಿಕೆ ಮಾಡಿಕೊಂಡು ಬಿದಿರು ದಬ್ಬೆ, ಗಳಗಳಿಂದ ಸಾಧಾರಣವಾಗಿ ಜೋಪಡಿಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ಅಲೆಮಾರಿಗಳಾದುದರಿಂದ ಇವರು ಒಂದು ಕಡೆಯಿಂದ ಇನ್ನೊಂದು ಕಡೆಗೂ ಸುಲಭವಾಗಿ ಸಂಚಾರ ಮಾಡುತ್ತಿದ್ದುದುಂಟು.ಇವರು ಮೀನು ಹಿಡಿಯುವ ಕೊಡಿಮೆ ಎಂಬ ಬಲೆಯನ್ನು ತೆಂಗಿನ ಗರಿಯ ಕಡ್ಡಿಯಿಂದ ಅಂದವಾಗಿ ನಿರ್ಮಿಸಿ ಬೇಟೆಯಾಡುತ್ತಾರೆ. ಒಂದೊಂದು ಕೊಡಿಮೆಯಲ್ಲಿ ೧೫ ರಿಂದ ೩೦ ಸೇರು ಮೀನು ಸಂಗ್ರಹಿಸುವ ಸಾಮರ್ಥ್ಯ? ಹೊಂದಿರುತ್ತವೆ. ಜೊತೆಗೆ ಕಾಡಹಂದಿ, ಮೊಲ ಮುಂತಾದ ಪ್ರಾಣಿಗಳನ್ನು ಬೇಟೆಯಾಡಲು ಅಗತ್ಯವಾದ ಹತ್ತಿ ಅಥವಾ ನಾರಿನಿಂದ ಭದ್ರವಾದ ದಾರ ಮಾಡಿಕೊಂಡು ಅದನ್ನು ಹುರಿ ಮಾಡಿಕೊಂಡು ನೂರಾರು ಸಣ್ಣ ಸಣ್ಣ ಕಣ್ಣುಗಳುಳ್ಳ ಬಲೆಯನ್ನು ಕುಶಲತೆಯಿಂದ ಹೆಣೆಯುವುದು ಇವರ ವಿಶೇಷ. ಜೊತೆಗೆ ಹಂದಿಯನ್ನು ಸಾಕುವ, ಮಾಂಸ ಮಾರಾಟ, ಹಂದಿಮರಿ ಹಾಗೂ ಸಾಕಿದ ಹಂದಿಗಳನ್ನು ಮಾಂಸಕ್ಕೆ ಮಾರಾಟ ಮಾಡುವ ಮೂಲಕ ಜೀವನ ನಿರ್ವಹಿಸುತ್ತಾರೆ. ಇತ್ತೀಚೆಗೆ ಇವರ ಜೀವನ ವಿಧಾನ ಬದಲಾಗಿದೆ. ಹಿರಿಯರು ಹಗ್ಗ ತಯಾರಿಸುತ್ತಾರಾದರೂ ರೈತರು, ಅಗತ್ಯವಾದವರು ಇವರು ಇರುವ ಕಡೆಯೇ ಬಂದು ಖರೀದಿಸುತ್ತಾರೆ. ಮತ್ತೆ ಸಂತೆಗಳಲ್ಲೂ ಹಗ್ಗ, ಬಲೆ ಮತ್ತಿತರೆ ವಸ್ತುಗಳನ್ನು ಮಾರಾಟಕ್ಕೆ ಇಟ್ಟುಕೊಳ್ಳುತ್ತಾರೆ.

ಕೊರಚ ಹೆಂಗಸರು ಗಟ್ಟಿಗರು, ಗಂಡಸರಂತೆ ಇವರೂ ಹಗ್ಗ ತಯಾರಿಸುವ, ಹೊತ್ತು ಮಾರುವ ಕೆಲಸ ಮಾಡುತ್ತಾರೆ. ಕೆಲವರು ಬಿದಿರುಗಳಿಂದ ಗಳಿಗೆ ಎಂಬ ಚಾಪೆ ಆಕಾರದ ತೆಳ್ಳನೆಯ ವಸ್ತುವನ್ನು ಹೆಣೆದು ನಂತರ ಅದನ್ನು ಬಗ್ಗಿಸಿ ಕೊಳಗದ ಆಕೃತಿಗೆ ಮಾಡಿ, ದವಸ ತುಂಬುವುದಕ್ಕೆ ಸಿದ್ಧಪಡಿಸುತ್ತಾರೆ. ಒಂದು ಗಳಿಗೆಯನ್ನು ೨-೩ ದಿನಗಳಲ್ಲಿ ತಯಾರಿಸುತ್ತಾರೆ. ಒಂದು ಗಳಿಗೆಯ ಬೆಲೆ ೫೦೦ ರಿಂದ ೧೦೦೦ ರೂ.ವರೆಗೆ ಇರುತ್ತದೆ. ಹಿಂದೆ ಇದೇ ಗಳಿಗೆಯನ್ನು ೫ ಸೇರು ರಾಗಿ, ೧೨ ಸೇರು ಬತ್ತಕ್ಕೆ ಮಾಡಿಕೊಡುತ್ತಿದ್ದರಂತೆ. ಜೊತೆಗೆ ಇಂದು ಬಗೆಬಗೆಯ ವಸ್ತುಗಳನ್ನು ಅಂದರೆ ಚಾಪೆ, ಪ್ಲಾಸ್ಟಿಕ್, ಹಿತ್ತಾಳೆ ಪಾತ್ರೆಗಳ ಮಾರಾಟವನ್ನೂ ಮಾಡುವ ಪರಿಸ್ಥಿತಿಯಿದೆ.

ಕೊರಚರು ವಿಲಾಸ ಪ್ರಿಯರಲ್ಲ. ನಾಲ್ಕರಿಂದ ಐದು ಅಡಿ ಎತ್ತರ, ಉದ್ದನೆಯ ಶರೀರ, ಕಪ್ಪು ವರ್ಣ, ಹೊಳೆಯುವ ಕಣ್ಣು, ಕೋಲು ಮುಖ ಇವರ ದೈಹಿಕ ಚಹರೆ. ಹೆಂಗಸರು ಮೂರರಿಂದ ನಾಲ್ಕಡಿ ಎತ್ತರವುಳ್ಳವರಾಗಿರುತ್ತಾರೆ. ಇಂದು ಈ ವರ್ಗವನ್ನೂ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿಸಿರುವುದರಿಂದ ಕೊರಚರು ಹೆಚ್ಚು ಹೆಚ್ಚು ವಿದ್ಯಾವಂತರಾಗುತ್ತಿದ್ದಾರೆ. ಸರ್ಕಾರಿ ಉದ್ಯೋಗಗಳಲ್ಲೂ ನಿರತರಾಗಿದ್ದಾರೆ. ಕೊರಚರ ಕಾಲೋನಿ ನಿರ್ಮಾಣವಾಗುತ್ತಿದ್ದು, ನಗರಗಳಲ್ಲೂ ಪ್ರತ್ಯೇಕ ಬಡಾವಣೆ ಹೊಂದಿ ನಾಗರಿಕ ಜೀವನ ನಡೆಸುತ್ತಿದ್ದಾರೆ. ಇವರ ಆಹಾರ ಕ್ರಮ ವಿಶೇಷವಾಗಿ ಗೋಧಿ, ಜೋಳ, ಅಕ್ಕಿ ಮತ್ತು ರಾಗಿ ಧಾನ್ಯಗಳ ಆಹಾರವನ್ನು ಸೇವಿಸುತ್ತಾರೆ. ಮೊದಲಿಗೆ ಅನ್ನ, ಗಂಜಿ, ರೊಟ್ಟಿ ತಯಾರಿಸುತ್ತಿದ್ದವರು ಇದೀಗ ಮುದ್ದೆ ತಯಾರಿಸುವುದು ಉಪಯೋಗಿಸುವುದು ಸಾಮಾನ್ಯವಾಗಿದೆ. ಹಂದಿಮಾಂಸ, ಬೆಕ್ಕು, ಕುರಿ, ಕೋಳಿ, ಜಿಂಕೆ, ಮೊಲ, ಮುಂಗುಸಿ, ಆಮೆ ಮುಂತಾದ ಪ್ರಾಣಿಗಳ ಆಹಾರ ಸೇವನೆ ಸಹಜವಾಗಿದೆ. ಮದ್ಯಪಾನ ಇವರಲ್ಲಿ ಸಹಜವಾದ ಆಹಾರ. ಮದುವೆ, ಜನನ ಹಾಗೂ ಸಾವಿನ ಸಂದರ್ಭಗಳಲ್ಲಿ ಹೆಂಡದ ಸಮಾರಾಧನೆ ನಡೆಯುತ್ತದೆ. ಈಚಲ ಹೆಂಡ,

ಬಗನಿ ಹೆಂಡ, ಸಾರಾಯಿ ಸೇವನೆ ಹೆಚ್ಚು.

ಕುಳವಾಡಿ ಅಥವಾ ಕುಲದ ನಾಯಕ ಮುಂದೆ ನಿಂತು ಮದುವೆಯ ಕಾರ್ಯ ನಡೆಸುತ್ತಾನೆ. ಪರ್ಯಾಯವಾಗಿ ಹೆಂಡದ ಗಡಿಗೆ, ಅಕ್ಕಿ, ಧಾನ್ಯಗಳನ್ನು ಪಡೆಯುವ ಪದ್ಧತಿ ಇದೆ. ಸ್ವಗೋತ್ರ ವಿವಾಹ ಜಾರಿಯಲ್ಲಿದೆ. ವಿಧವಾ ವಿವಾಹ ಇವರಲ್ಲಿ ರೂಢಿಯಲ್ಲಿದ್ದು ಗಂಡ ಸತ್ತ ಮಹಿಳೆ ತನಗೆ ಇಷ್ಟವಾದ ಪುರುಷನೊಂದಿಗೆ ಇರಬಹುದು ಜೊತೆಗೆ ಮಾತೃಪ್ರಧಾನ ಎಂಬಂತೆ ಹೆರಿಗೆಯಾದ ಹೆಂಗಸಿನ ಪಕ್ಕ ಆಕೆಯ ಪತಿ ಹಾಸಿಗೆಯ ಮೇಲೆ ಸ್ತ್ರೀಯಂತೆ ಸೀರೆ, ಕುಪ್ಪಸ ತೊಟ್ಟು ಹುಟ್ಟಿದ ಮಗುವನ್ನು ೧೨ ದಿನಗಳ ಕಾಲ ಮಗುವಿನ ಶುಶ್ರೂಷೆ ಮಾಡುವ ಮೂಲಕ ಮಡದಿಗೆ ವಿಶ್ರಾಂತಿ ನೀಡುವ ವಿಶಿಷ್ಟ ಸಂಪ್ರದಾಯವಿದೆ.

ಇವರು ಸಾಮಾನ್ಯವಾಗಿ ವೆಂಕಟೇಶ್ವರನ ಭಕ್ತರು. ಹಾಗಾಗಿ ತಮ್ಮ ಹೆಸರುಗಳನ್ನು ನಾರಾಯಣ, ತಿರುಮಲ, ತಿಮ್ಮರಾಯ, ತಿಮ್ಮಣ್ಣ, ವೆಂಕಟ, ವೆಂಕಟರಮಣ ಎಂತಲೂ ಹೆಂಗಸರು ನಾರಾಯಣಮ್ಮ, ರಂಗಮ್ಮ, ತಿಮ್ಮಕ್ಕ, ಕೃಷ್ಣಮ್ಮ, ಚಂದ್ರಮ್ಮ ಮೊದಲಾದ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಆದರೆ ಇತ್ತೀಚೆಗೆ ಈ ಸಾಂಪ್ರದಾಯಿಕ ಹೆಸರುಗಳಲ್ಲೂ ಬದಲಾವಣೆಯಾಗಿದೆ.

ಕೊರಚರಲ್ಲಿ ಮೂರು ಪಂಗಡಗಳಿದ್ದು ಸಕ್ರೆ, ಸಂಪತಿ, ಸಾತುಪಡಿ ಮೊದಲ ವರ್ಗವಾದರೆ ಕಾವಡಿ ಅಥವಾ ಗುಜ್ಜಲ ಎರಡನೇ ವರ್ಗ. ಮೂರನೇ ವರ್ಗಕ್ಕೆ ಮೀನಪಡಿ, ದೇವರಕೊಂಡ ಎಂದು ವರ್ಗೀಕರಿಸಲಾಗಿದೆ. ಸಂಸ್ಕಾರ, ಸಂಸ್ಕೃತಿಯ ಆಧಾರದಲ್ಲಿ ಇವರ ಕ್ರಿಯಾಚಟುವಟಿಕೆಯನ್ನು ನಿರ್ಮಿಸಿದ್ದಾರೆ. ಬಾಲ್ಯವಿವಾಹ, ಅಪಹರಣದ ವಿವಾಹ ಇವರಲ್ಲಿ ಬಳಕೆಯಲ್ಲಿದ್ದು ಕದ್ದು ತಂದ ಹುಡುಗಿಯೊಂದಿಗೆ ಕುಲಸ್ಥರಿಗೆಲ್ಲಾ ಹೆಂಡದ ಸಮಾರಾಧನೆ, ಬಾಡೂಟ ಹಾಕಿಸಿ, ಕಂಬಳಿ ಜಾಡಿ ಹಾಸಿ, ಅದರ ಮೇಲೆ ಗಂಡು-ಹೆಣ್ಣನ್ನು ಕೂರಿಸಿ, ಹಸೆ ಹಚ್ಚುವ ಮೂಲಕ ಮದುವೆ ಕಾರ್ಯವನ್ನು ಕುಲದ ಮುಖಂಡ ನೆರವೇರಿಸುವುದು ಒಂದು ಕಾಲದ ಪದ್ಧತಿ. ಇದೀಗ ಪುರೋಹಿತರು ಛತ್ರಗಳಲ್ಲಿ ಮದುವೆ ನಡೆಸಿಕೊಡುತ್ತಾರೆ. ತಿರುಪತಿ ತಿಮ್ಮಪ್ಪ, ನರಸಿಂಹಸ್ವಾಮಿ, ರಂಗನಾಥ ಈ ಬಗೆಯ ದೇವರುಗಳ ಒಕ್ಕಲಾದ ಇವರು ದುರ್ಗಿ, ಪಾರ್ವತಿ, ಬನಶಂಕರಿ, ಕೊಲ್ಲಾಪುರದಮ್ಮ, ಮಧುಗಿರಿ ದಂಡಿನಮಾರಮ್ಮ ಈ ದೇವತೆಗಳ ಆರಾಧಕರು. ಮಕ್ಕಳಿಗೆ ಕೂದಲು ತೆಗೆಸಲು ಸಾಮಾನ್ಯವಾಗಿ ಶಕ್ತಿ ದೇವತೆಗಳ ಸ್ಥಾನದಲ್ಲಿಯೇ ನಡೆಯುತ್ತದೆ. ತಲೆ ಕೂದಲಿನ ನಂತರ ದೇವರು ಸಾಗಹಾಕುವ ನೆಪದಲ್ಲಿ ಮಾಂಸಾಹಾರ ಹಾಗೂ ಹೆಂಡದ ಸಮಾರಾಧನೆ ಆಪ್ತರಿಗೆ ನಡೆಯುತ್ತದೆ. ಇವರಲ್ಲಿ ಹೂಳುವ ಪದ್ಧತಿ ಮಾತ್ರವಿದ್ದು ಮೂರು ಅಥವಾ ಒಂಬತ್ತು ದಿನಗಳಲ್ಲಿ ದಿವಸ ಅಥವಾ ತಿಥಿಯ ಕಾರ್ಯ ನಡೆಯುತ್ತದೆ. ಅಂದು ಮಾಂಸಾಹಾರ ಹಾಗೂ ಹೆಂಡದ ವ್ಯವಸ್ಥೆ ಕುಲಸ್ಥರಿಗೆ ಸಹಜ ಪ್ರಕ್ರಿಯೆ. ಹೆಣ ಹೊತ್ತವರಿಗೆ ಹೊಸ ಬಟ್ಟೆಯನ್ನು ನೀಡುವ ಸಂಪ್ರದಾಯ. ಇದನ್ನು ಹೆಗಲು ತೊಳೆಯುವ ಶಾಸ್ತ್ರ ಎಂದು ಕರೆಯಲಾಗುವುದು. ನಾಗರಿಕತೆ ಬಂದಂತೆ ಇವರಲ್ಲಿಯೂ ಆಚಾರ-ವಿಚಾರಗಳಲ್ಲಿ ಬದಲಾವಣೆಯಾಗಿದೆ.

**ದೊಂಬರು**

ದೊಂಬರು ಮೂಲತಃ ಅಲೆಮಾರಿ ಸಮುದಾಯ. ಎತ್ತರದ ಆಕೃತಿ, ನೀಳ ಮೂಗು, ಕೆಂಪು ವರ್ಣ, ಹೊಳಪುಳ್ಳ ಕಣ್ಣು ಇವರ ಸಹಜ ಲಕ್ಷಣಗಳು. ಪುರುಷರಂತೆ ಸ್ತ್ರೀಯರೂ ಸಾಹಸಿಗರು. ತೆಲುಗು, ಮರಾಠಿ ಎರಡೂ ಭಾಷೆಗಳನ್ನು ಬಲ್ಲವರು. ತಿರುಪತಿ ತಿಮ್ಮಪ್ಪ, ರಾಮದೇವರು, ಹನುಮಂತ ಇವರು ಆರಾಧಿಸುವ ದೈವಗಳು. ದೊಂಬರು ಗುಂಪಾಗಿ ಇರುವುದಿಲ್ಲ. ಮಡದಿ ಮಕ್ಕಳ ಚಿಕ್ಕ ಚಿಕ್ಕ ಕುಟುಂಬ.

ಚಿಕ್ಕ ಚಿಕ್ಕ ಕಬ್ಬಿಣದ ಬಳೆ, ಪ್ರಾಣಿ ಅಥವಾ ಪಕ್ಷಿಗಳನ್ನು ಪಳಗಿಸಿ ಆ ಬಳೆಯೊಳಗೆ ಸಲೀಸಾಗಿ ನಡೆಯುವುದು, ತಂತಿಯ ಮೇಲಿನ ನಡಿಗೆ, ದಾರದ ಮೇಲೆ ನಿಂತು ಕೋಲು ಹಿಡಿದು ನರ್ತಿಸುವುದು, ಬಂಡೆ ಎತ್ತುವುದು, ಕೋತಿ ಕುಣಿಸುವುದು ಇವರ ಕಾಯಕವಾಗಿದೆ. ಹಾಗಾಗಿಯೇ 'ದೊಂಬ ಅಗಲಿ ಕೆಟ್ಟ, ಕುರುಬ ಕೂಡಿ ಕೆಟ್ಟ' ಎಂಬ ಗಾದೆಯೊಂದು ಜಿಲ್ಲೆಯಾದ್ಯಂತ ಬಳಕೆಯಲ್ಲಿದೆ. ದೊಂಬರು ಸರ್ಕಸ್ ಮೊದಲಾದ ತಮಾಷಾ ಆಟಗಳಿಗೆ ಗುಂಪು ಅಗತ್ಯ. ಆದರೆ ಆ ಗುಂಪು ಈಗ ಕರಗುತ್ತಿದೆ. ಹಾಗಾಗಿಯೇ ಈ ಗಾದೆ ಹುಟ್ಟಿಕೊಂಡಿದೆ.

ಜಿಲ್ಲೆಯ ತುಮಕೂರಿನ ಶ್ರೀರಾಮನಗರ, ಹೊರಪೇಟೆಗಳಲ್ಲಿ ಇವರು ಕಂಡುಬರುತ್ತಾರೆ. ಕೊರಟಗೆರೆ ತಾಲೂಕಿನ ಎಲೆರಾಮಪುರ, ಮಧುಗಿರಿ ತಾಲೂಕಿನ ಐ.ಡಿ. ಹಳ್ಳಿ, ಮಿಡಿಗೇಶಿ, ಕೊರಟಗೆರೆ ತಾಲೂಕಿನ ಜಟ್ಟಿ ಅಗ್ರಹಾರ ಈ ಗ್ರಾಮಗಳಲ್ಲಿ ಕಂಡುಬರುತ್ತಾರೆ. ಇಂದಿಗೂ ಇವರು ವ್ಯವಸಾಯವನ್ನು ಅಷ್ಟಾಗಿ ಇಷ್ಟಪಡುವುದಿಲ್ಲ. ಸರ್ಕಸ್ ಮಾದರಿಯ ಚಮತ್ಕಾರಿಕ ಆಟ, ಕೋತಿ ಕುಣಿತ, ಡಾನ್ಸ್ ಕಾರ್ಯಕ್ರಮ ನೀಡಿ ಹಣಕಾಸು ಸಂಗ್ರಹ ಮಾಡುತ್ತಾರೆ.

ಕೃಷ್ಣ, ಬ್ರಹ್ಮ ದೇವರು, ಗಣಪತಿ ಈ ದೇವರುಗಳ ಮೇಲೆ ಪ್ರೀತಿ. ಪೂಜಿಸುತ್ತಾರೆ. ಬೇವಿನ ಮರ, ಹುತ್ತಗಳ ಆರಾಧನೆಯೂ ಇದೆ. ದಂಡಿನಮಾರಮ್ಮ, ಕೊಲ್ಲಾಪುರದಮ್ಮ, ಪಳೇಕನಮ್ಮ ಈ ಬಗೆಯ ಶಕ್ತಿದೇವತೆಗಳ ಆರಾಧನೆಯೂ ಇದೆ. ತುಮಕೂರು ಪರಿಸರದ ದೊಂಬರು ಕೆಲವರು ಗಾರೆ ಕೆಲಸ, ಮರದ ಕೆಲಸಕ್ಕೂ ಹೋಗುತ್ತಾರೆ. ಜನತಾ ಕಾಲೋನಿಯಲ್ಲಿ ವಾಸಕ್ಕೆ ಮನೆಗಳನ್ನೂ ಮಾಡಿಕೊಂಡಿದ್ದಾರೆ. ತುಮಕೂರಿನಿಂದ ಹೊರ ಊರುಗಳಲ್ಲಿ ದೊಂಬರು ಶಾಲಾ ಆವರಣ, ಬಸ್ ನಿಲ್ದಾಣದ ಆವರಣ ಇಲ್ಲಿ ಪುಟ್ಟ ಜೋಪಡಿ ತಾತ್ಕಾಲಿಕವಾಗಿ ನಿರ್ಮಿಸಿಕೊಂಡು ಅಥವಾ ಸೀರೆಯಿಂದ ಮರೆ ಮಾಡಿಕೊಂಡು ಜೀವಿಸುತ್ತಾರೆ. ಸಾಮಾನ್ಯವಾಗಿ ಹೆಂಗಸರು ಸೀರೆ, ಚೂಡಿದಾರ, ಮೇಲೆ ಸೊಂಟದವರೆಗೂ ಜಾಕೀಟು ಧರಿಸುತ್ತಾರೆ. ಹೆಂಗಸರು ಅಲಂಕಾರಪ್ರಿಯರು. ಸೌಂದರ್ಯವತಿಯರೂ ಹೌದು. ಬಾಲ್ಯವಿವಾಹ, ವಿಧವಾ ವಿವಾಹಕ್ಕೆ ಯಾವೊಂದೂ ಅಡ್ಡಿಯಿಲ್ಲ. ಬೇವಿನಮರ, ಅರಳಿಯ ಮರದ ಬುಡದಲ್ಲಿ ಮದುವೆ ಕಾರ್ಯ ನಡೆಯುತ್ತದೆ. ಇವರ ಜನಾಂಗಿಕ ಮುಖಂಡನೇ ಮದುವೆ ಕಾರ್ಯ ನಿಂತು ನೆರವೇರಿಸುತ್ತಾನೆ. ಗಂಡಿನ ಕಡೆಯವರು ಮದುವೆ ಖರ್ಚು, ಹೆಣ್ಣಿಗೆ ಹೊಸ ಬಟ್ಟೆ ಕೊಡುವುದು ವಾಡಿಕೆ. ಕುದುರೆ ಸಾಕುವುದು, ಪಳಗಿಸುವುದು ಇವರಿಗೆ ರೂಢಿ. ಕುದುರೆಯ ಮೇಲೆ ತಮ್ಮ ಸಾಮಾನು, ಸರಂಜಾಮುಗಳನ್ನು ಹೇರಿಕೊಂಡು ಊರಿಂದ ಊರಿಗೆ ಹೋಗುವುದು ಇವರಿಗೆ ಸಲೀಸು. ಕೋಳಿ, ಕುರಿ, ಮೀನು ಇವುಗಳ ಜೊತೆಗೆ ಕಾಡುಪ್ರಾಣಿಗಳ ಬೇಟೆಯನ್ನೂ ದೊಂಬರು ಮಾಡುತ್ತಾರೆ. ಹೆಚ್ಚಾಗಿ ರೊಟ್ಟಿ ಊಟ ಇವರಿಗೆ ಪ್ರಿಯವಾದ ಆಹಾರ.

ಮಾಟ, ಮಂತ್ರ, ಯಂತ್ರ ತಯಾರಿಕೆಯ ಕೆಲಸವೂ ಇವರಿಗೆ ತಿಳಿದಿದೆ. ಆದರೂ ಇದನ್ನು ಒಂದು ವೃತ್ತಿಯನ್ನಾಗಿ ಇವರು ಮಾಡುವುದಿಲ್ಲ. ದೊಂಬರ ಹೆಂಗಸರು, ಅಂಕೋಲೆ ಕಡ್ಡಿ, ಹೂವರಸಿ ಮರಗಳಿಂದ ಬಾಚಣಿಗೆ, ಸೀರಣಿಗೆ ಮೊದಲಾದ ಮರದ ಸಾಮಾನುಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಗೊಂಬೆ ತಯಾರಿಕೆ, ಮಾರಾಟವೂ ಇವರ ಉಪಕಸುಬು. ಮಧುಗಿರಿ, ಪಾವಗಡ ಈ ಭಾಗದ ದೊಂಬರು ತಮ್ಮನ್ನು ರೆಡ್ಡಿ ಎಂದು ಕರೆದುಕೊಂಡರೆ ಸರ್ಕಾರಿ ದಾಖಲೆಗಳಲ್ಲಿ ದೊಂಬರು, ಪರಿಶಿಷ್ಟ ಜಾತಿ ಎಂದೇ ನಮೂದಿಸಿದ್ದಾರೆ. ದೊಂಬರ ಶವಸಂಸ್ಕಾರ ಹಿಂದೂಗಳ ಮಾದರಿಯಲ್ಲಿಯೇ ನಡೆಯುತ್ತದೆ. ಮರಾಠಿ ಮಾದರಿಯಲ್ಲಿ ಶವವನ್ನು ಅಲಂಕಾರ ಮಾಡಿ ಕೂಡಿಸಿ ಹೂಳುವ ಪದ್ಧತಿಯಿದೆ. ಗರ್ಭಿಣಿ ಸ್ತ್ರೀ ತೀರಿಕೊಂಡರೆ ಅಂತಹ ಶವವನ್ನು ಕಾಡಿನ ಮರದ ಬುಡದಲ್ಲಿ ಒಂದು ಕವೆ ಕೊಟ್ಟು ಕೂರಿಸುವ, ಮುಂದೆ ಒಂದು ಮಡಕೆಯಲ್ಲಿ ನೀರು ತುಂಬಿಸುವ, ಹಣ್ಣು-ಕಾಯಿ ಅರ್ಪಿಸುವ ಪದ್ಧತಿ ಇದೆ. ಕಾಲ ಬದಲಾದಂತೆ ಇವರ ಜೀವನ ಕಾರ್ಯ ವಿಧಾನವೂ ಬದಲಾಗತೊಡಗಿದೆ.

**ಕೊರಮರು**

ಇದೊಂದು ಬುಡಕಟ್ಟು ಜನಾಂಗ. ಮೇದರು ಎಂತಲೂ ಇವರನ್ನು ಕರೆಯುತ್ತಾರಾದರೂ ಕೊರಮರು ಮೇದರಿಗಿಂತ ಭಿನ್ನ ಎಂದೇ ಹೇಳುತ್ತಾರೆ. ಕೊರಮರು ಕಾಡು, ಗಿಡ-ಮರ ಅಥವಾ ಬಿದಿರ ಪೊದೆಗಳ ಸಮೀಪದಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಬಿದಿರು ಉತ್ಪನ್ನಗಳಾದ ಮೊರ, ಗೂಡೆ, ತಟ್ಟಿ, ದವಸ ತುಂಬುವ ಗಳಿಗೆ ಬುಟ್ಟಿ, ಸಿಬ್ಬಲು ಮುಂತಾದ ಈಚಲು, ಬಿದಿರು ಕೆಲಸವನ್ನು ಇವರು ಮಾಡುತ್ತಾರೆ. ಚಾಪೆ ಹೆಣೆಯುವುದು ಈ ವರ್ಗದ ಹೆಂಗಸರ ಕಾಯಕ. ಕಪ್ಪು ವರ್ಣದ, ಎತ್ತರದ, ದುಂಡಾಕೃತಿಯ ನಾಲ್ಕರಿಂದ ಐದೂವರೆ ಅಡಿ ಎತ್ತರದ ಮೈಕಟ್ಟು, ಉದ್ದ ಮೂಗು. ಕತ್ತೆಗಳನ್ನು ಸಾಕುವುದು ಹಾಗೂ ಊರಿಂದ ಊರಿಗೆ ವಲಸೆ ಹೋಗುವುದು ಇವರಿಗೆ ರೂಢಿ. ಹಾಗೆ ಊರಿಂದ ಊರಿಗೆ ವಲಸೆ ಹೋಗುವಾಗ ಕತ್ತೆಗಳ ಮೇಲೆ ದವಸ, ಪಾತ್ರೆ ಸಾಮಾನುಗಳ ಹೇರನ್ನು ಹಾಕಿಕೊಂಡು ಹೋಗಲಾಗುವುದು.

ಇವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋದಾಗ, ಹಳ್ಳಿಗಳ ಸಮೀಪ ಮರದ ನೆರಳು, ಶಾಲೆ, ದೇವಾಲಯದ ಬದಿಯಲ್ಲಿ ವಾಸಿಸುತ್ತಾರೆ. ಕೆಲವರು ಗ್ರಾಮಗಳ ಹಳೆ ಮನೆ, ಹೂಡಿಕೆ ಮನೆಗಳಲ್ಲೂ ವಾಸಿಸುವುದುಂಟು. ಜಿಲ್ಲೆಯಲ್ಲಿ ಕೊರಮರು ಕಾಳಾಪುರದಲ್ಲಿ ಸುಮಾರು ಎಪ್ಪತ್ತು ಮನೆಗಳಲ್ಲಿ ಕೊರಮರು ವಾಸವಾಗಿದ್ದಾರೆ. ಹೊಲ–ಮನೆಗಳನ್ನು ಮಾಡಿಕೊಂಡಿದ್ದಾರೆ. ಶಿರಾದಡ, ಕಳುವೋರಹಳ್ಳಿ, ಗುಳಿಗೇನಹಳ್ಳಿ, ರತ್ನಸಂದ್ರ, ತಾವರೇಕೆರೆ, ಮಂಚೀಹಳ್ಳಿ, ಪೆಂಡಾರನಹಳ್ಳಿ, ಹಲಸಿನಮರದ ನಾಗೇನಹಳ್ಳಿ, ಕೋಡಿ ನಾಗೇನಹಳ್ಳಿ, ಮೂಗನಾಯಕನ ಕೋಟೆ, ಹುಳಿಯಾರು, ಮತಿಘಟ್ಟ, ಹಂದನಕೆರೆ, ಮಧುಗಿರಿ, ಪಾವಗಡ, ಬೆಳ್ಳಿಬಟ್ಲು, ಅರಸೀಕೆರೆ, ನಿಡಗಲ್ಲು, ಕೋಟಗುಡ್ಡ, ಕುಣಿಗಲ್, ಕೊತ್ತಗೆರೆ, ಯಡೆಯೂರು, ನಿಡವಾಣಿ, ತಿಪಟೂರು, ತುರುವೇಕೆರೆ, ಅಮ್ಮಸಂದ್ರ, ದಂಡಿನಶಿವರ, ಹಾಲ್ಕುರಿಕೆ, ಬಿದರೆಗುಡಿ, ಹೊನ್ನವಳ್ಳಿ ಮುಂತಾದಡೆ ಕೊರಮರು ವಿರಳವಾಗಿ ನೆಲೆಸಿದ್ದಾರೆ. ಗ್ರಾಮಕ್ಕೆ ಬೇಕಾಗುವ ಈಚಲು ತೊಟ್ಟಿ, ಮಂಕರಿ, ಗೂಡೆ, ಮೊರ ಮೊದಲಾದ ಸಾಮಗ್ರಿಗಳನ್ನು ತಯಾರಿಸುವ, ಮಾರಾಟ ಮಾಡುವುದು ಇವರ ಕಾಯಕವಾಗಿದೆ.

ಕೊರಮರಲ್ಲಿ ಕುಕ್ಕೆ ಕೊರಮರು, ಗೂಡೆ ಕೊರಮರು, ಕೊರಮ ಶೆಟ್ಟರು, ಮುನ್ನಿನ ಬಳಗದವರು ಎಂದು ಒಳಪಂಗಡಗಳಿವೆ. ಕೊರಮ ಶೆಟ್ಟಿ ಎಂದೇ ಸರ್ಕಾರಿ ದಾಖಲೆಗಳಲ್ಲಿ ನಮೂದಿಸಿಕೊಳ್ಳುತ್ತಾರೆ. ಇವರ ಮನೆಯ ಮಾತು ತೆಲುಗು. ಸಾಮಾನ್ಯವಾಗಿ ಕೊರಮಶೆಟ್ಟರು ವೆಂಕಟರಮಣ, ನಾರಾಯಣ, ತಿಮ್ಮಪ್ಪ, ರಂಗಮ್ಮ, ರಂಗಣ್ಣ, ತಿಮ್ಮಕ್ಕ, ತಿಪ್ಪಣ್ಣ ಈ ಮೊದಲಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಶಿರಾ ತಾಲೂಕಿನ ಕೊರಮರು ಹೆಚ್ಚಾಗಿ ಎಲ್ಲಮ್ಮ, ಏಕನಾಥೇಶ್ವರಿ ದೇವರ ಒಕ್ಕಲಾಗಿದ್ದಾರೆ. ಮರಡಿಗುಡ್ಡ, ಕಾಳಾಪುರದ ರಂಗನಾಥ ದೇವಾಲಯ, ಮಾಗೋಡು ರಂಗನಾಥ ದೇವಾಲಯಗಳಿಗೆ ನಡೆದುಕೊಳ್ಳುತ್ತಾರೆ. ಕೊರಮರ ಹೆಂಗಸರು ಹಚ್ಚೆ ಕಲೆಯನ್ನು ಬಲ್ಲವರಾಗಿದ್ದು ದೀಪದ ಕಾಡಿಗೆ, ಹೆಂಗಸರ ಎದೆಯ ಹಾಲು ಹಾಗೂ ವೀಳೆಯದೆಲೆಯ ರಸ ಹಾಗೂ ಇತರೆ ಗಿಡ ಮೂಲಿಕೆಗಳಿಂದ ಹಚ್ಚೆಯ ಬಣ್ಣವನ್ನು ತಯಾರಿಸುತ್ತಾರೆ. ಅದಕ್ಕೆ ಒಂದು ಚಿಕ್ಕ ಸೂಜಿಯಿಂದ ಮುಳ್ಳು ಮಾಡಿಕೊಂಡು ಮೊದಲಿಗೆ ಕೈಮೇಲೆ ಚಿತ್ರ ಬರೆದು ನಂತರ ಹಾಲಿನಿಂದ ಸೂಜಿಯನ್ನು ಅದ್ದಿಕೊಂಡು ಚುಚ್ಚುತ್ತಾ ಹೋಗುತ್ತಾರೆ. ಇದರಲ್ಲಿ ನಾಗಾವಳಿ, ನಾಗರ, ಸಪ್ತಮಂಡಲ, ಸುರಹೊನ್ನೆ ಹೀಗೆ ಬಗೆಬಗೆಯ ಚಿತ್ರಗಳನ್ನು ಹೆಂಗಸರ ಕೈಮೇಲೆ ಬರೆದು ಹಚ್ಚೆ ಮೂಡಿಸುತ್ತಾರೆ. ಮುಂಗೈ ಹಚ್ಚೆ, ಹಣೆಬೊಟ್ಟು, ಆಪ್ತರ ಹೆಸರುಗಳನ್ನು ಬರೆದು ಹಚ್ಚೆ ರೂಪದಲ್ಲಿ ಮೂಡಿಸುವುದು ವಾಡಿಕೆ. ಹಚ್ಚೆಯನ್ನು ಸೋದರತ್ತೆ, ಮಾವಂದಿರು ಹಾಕಿಸಬೇಕೆಂಬುದು ನಂಬಿಕೆ. ಹಚ್ಚೆಯೊಂದೇ ಸತ್ತಾಗ ನಮ್ಮೊಂದಿಗೆ ಬರುವುದು, ಉಳಿದುದೆಲ್ಲಾ ವ್ಯರ್ಥ ಎಂದು, ಹಚ್ಚೆ ಹಾಕಿಸಿಕೊಂಡರೆ ಮಾತ್ರ ಮುಕ್ತಿ, ಇಲ್ಲದೇ ಹೋದರೆ ನರಕ ಎಂಬ ನಂಬಿಕೆಯೂ ಹಚ್ಚೆ ಸಂಪ್ರದಾಯದಲ್ಲಿದೆ. ಹಚ್ಚೆ ಹುಯಿಸುವಾಗ ಬಗೆಬಗೆಯ ಇಂಪಾದ ಸಂಗೀತ ಹಾಡುವುದು, ಹಚ್ಚೆ ಹುಯ್ಯಿಸಿದವರ ಹೆಸರು ಹಿಡಿದು ಹಾಡುವುದು, ಅವರಿಗೆ ಹರಸುವುದು ಕಂಡುಬರುತ್ತದೆ. ಒಂದು ಹಚ್ಚೆ ಹಾಕಿದರೆ ಎರಡು ಸೇರು ರಾಗಿ, ಮೂರು ಸೇರು ಬತ್ತ, ಕಾಳು–ಕಡಿ ಇಲ್ಲವೇ ಮೂರರಿಂದ ಒಂಬತ್ತು ರೂಪಾಯಿ ಸಂಭಾವನೆಯನ್ನು ಪಡೆಯುತ್ತಿದ್ದರಂತೆ. ಜೊತೆಗೆ ಹೆಂಗಸರು ಬಾಚಣಿಗೆ, ಟೇಪು, ಬಗೆಬಗೆಯ ಹೆಂಗಸರ ಅಲಂಕಾರಿಕ ಸಾಮಗ್ರಿಗಳನ್ನು ಮಾರಾಟ ಮಾಡುತ್ತಾರೆ. ಬಿದಿರು ಇಲ್ಲವೇ ಈಚಲು ಕಡ್ಡಿ ತಂದು ಅದನ್ನು ನೀರಿನಲ್ಲಿ ನೆನೆಸಿ, ನಂತರ ಸೀಳಿ, ಬಿದಿರಿನ ಇಲ್ಲವೇ ಈಚಲು ಕಡ್ಡಿಯಿಂದ ದಿನಬಳಕೆಯ ವಸ್ತುಗಳನ್ನು ತಯಾರಿಸಲಾಗುತ್ತದೆ.

ಕೊರಮರಲ್ಲಿ ನಾಗಸ್ವರ, ಮೃದಂಗ, ಘಟಂ ನುಡಿಸುತ್ತಾರೆ. ಇವರು ಮದುವೆ. ದೇವರು, ಧರ್ಮಕಾರ್ಯಗಳಲ್ಲಿ ಮೇಳ ನಡೆಸಿಕೊಡುತ್ತಾರೆ. ಶಿರಾ ತಾಲೂಕಿನ ಕಾಳಾಪುರದ ತಿಪ್ಪಯ್ಯ, ರಂಗಮ್ಮ, ನರಸಿಂಹಯ್ಯ, ಓಬಳಪ್ಪ ಜಿಲ್ಲೆಯ ಪ್ರಮುಖ ವಾದ್ಯಕಾರರೂ ಹೌದು. ಕೊರಮರು ಜಾತಿ, ಧರ್ಮ, ರಕ್ತಸಂಬಂಧ, ರಕ್ತ ಸೋದರತ್ವಕ್ಕೆ ಸ್ವಜಾತಿ ಮೋಹಿಗಳು. ಅಂತರ್ಜಾತಿ ವಿವಾಹವನ್ನು ನಿಷೇಧಿಸುತ್ತಾರೆ. ಬಾಲ್ಯವಿವಾಹ, ಕೂಡಿಕೆ ವಿವಾಹಕ್ಕೆ ಅವಕಾಶವಿದೆ. ವಧೂವನ್ನು ತೆರ ಕೊಟ್ಟು ತರುವ ಸಂಪ್ರದಾಯವಿದೆ. ಮದುವೆ ಇವರು ವಾಸಿಸುವ ಜಾಗ ಅಥವಾ ಮನೆಯ ಮುಂದೆ ಸಣ್ಣ ಚಪ್ಪರದ ಅಡಿಯಲ್ಲಿ ನಡೆಯುತ್ತದೆ. ದೇವತಾಕಾರ್ಯ, ಧಾರೆ, ನಾಗೋಲಿ ಶಾಸ್ತ್ರ ಮೊದಲಾದ ಶಾಸ್ತ್ರಗಳನ್ನು ನಡೆಸಲಾಗುವುದು. ಮದುವೆ, ನಾಮಕರಣ ಈ ಮುಂತಾದ ಶುಭಕಾರ್ಯಗಳಲ್ಲಿ ಅಪ್ಪಟ ಸಸ್ಯಾಹಾರ ಸ್ವೀಕಾರ ಇವರ ಸಂಪ್ರದಾಯವಾಗಿದೆ. ಕೊರಮರು ಬೇಟೆ ಪ್ರಿಯರು. ವಿಶೇಷವಾಗಿ ಹಕ್ಕಿ ಬೇಟೆ. ಇದರಲ್ಲಿ ಕೊಕ್ಕರೆ, ಗೊರವಂಕ, ಕೋಗಿಲೆ,

ಸೆರಲೆ ಹಕ್ಕಿ ಈ ಮುಂತಾದ ಪಕ್ಷಿಗಳಿಗೆ ಒಂದು ಬಗೆಯ ಉರುಲು ಹಾಕಿ ಹಿಡಿಯುತ್ತಾರೆ. ಕುಂಬಾರಹುಳಕ್ಕೆ ಹಲಸಿನ ಮೇಣ ಮೆತ್ತಿ ಪಕ್ಷಿಯಿರುವ ಜಾಗದಲ್ಲಿ ಬಿಟ್ಟು ಅವು ಈ ಹುಳವನ್ನು ಕುಕ್ಕಿ ತಿನ್ನಲು ಬಂದಾಗ ಹಲಸಿನ ಮೇಣ ಕೊಕ್ಕರೆಯ ರೆಕ್ಕೆ ಪುಕ್ಕಕ್ಕೆ ಅಂಟಿಕೊಂಡು ಹಾರಲು ಪರದಾಡುವ ಸಂದರ್ಭಕ್ಕೆ ಆ ಪಕ್ಷಿಗಳನ್ನು ಹಿಡಿಯುವ ತಂತ್ರ ಒಂದು ಬಗೆಯದಾದರೆ ಬೆಳವನಹಕ್ಕಿ, ಗೊರವಂಕ ಮೊದಲಾದ ಪಕ್ಷಿಗಳು ಮೇಯುವ ಸ್ಥಳದಲ್ಲಿ ಕಬ್ಬಿಣದ ಎರಡು ರೆಕ್ಕೆ ಆಕೃತಿಯ ಗಾಳವನ್ನು ಅಗಲಿಸಿ ಇಟ್ಟು ಅದರ ಮೇಲೆ ಮಣ್ಣು ಹರಡಿ, ಸುತ್ತ ಬತ್ತ, ಗೋಧಿ ಕಾಳುಗಳನ್ನು ಚೆಲ್ಲುತ್ತಾರೆ. ಕಾಳು ತಿನ್ನಲು ಬಂದ ಆ ಪಕ್ಷಿಗಳು ಗಾಳ ಇರುವ ಜಾಗದ ಮೇಲೆ ಕುಳಿತ ಕೂಡಲೇ ಗಾಳ ಸಡಿಲಗೊಂಡು ಕೂಡಿಕೊಳ್ಳುವಾಗ ಅದರ ಮೇಲಿದ್ದ ಪಕ್ಷಿಯ ಕಾಲು, ರೆಕ್ಕೆ ಅಥವಾ ಕತ್ತು ಸುಲಭವಾಗಿ ಸಿಕ್ಕಿಕೊಳ್ಳುತ್ತದೆ. ಸನಿಹದಲ್ಲೇ ಇದ್ದ ಬೇಟೆಗಾರ ತಕ್ಷಣ ಆ ಪಕ್ಷಿಯನ್ನು ಹಿಡಿದು ಚೀಲದೊಳಗೆ ತುಂಬಿಕೊಳ್ಳುವುದು ಹೀಗೆ ಸುಲಭವಾಗಿ ಹಕ್ಕಿ ಬೇಟೆಯಾಡಿದರೆ ಮೀನು, ಮೊಲ ಹಾಗೂ ಇತರ ಪ್ರಾಣಿಗಳ ಬೇಟೆಯನ್ನು ಆಡುತ್ತಾರೆ. ಸಂಪ್ರದಾಯಸ್ಥ ಕೊರಮರು ಹೊಸ ಬಟ್ಟೆಯನ್ನು ನೀರಿನಲ್ಲಿ ನೆನೆಸಿ, ಅದನ್ನು ದೇವರ ಗೂಡಿಗೆ ಇಟ್ಟು ನಂತರ ಹಾಕಿಕೊಳ್ಳುತ್ತಾರೆ. ಸಾಮಾನ್ಯವಾಗಿ ತುಂಬು ತೋಳಿನ ಅಥವಾ ಅರ್ಧ ತೋಳಿನ ಅಂಗಿ ಹಾಗೂ ನಿಕ್ಕರ್ ಪುರುಷರ ಸಾಮಾನ್ಯ ಉಡುಪಾದರೆ ಹೆಂಗಸರು ಇತರೆ ಹೆಂಗಸರಂತೆಯೇ ಸೀರೆ, ಕುಬುಸ ಧರಿಸುತ್ತಾರೆ. ಶವಸಂಸ್ಕಾರ ಹಿಂದೂಗಳ ಮಾದರಿಯಂತೆ ಹೂಳಲಾಗುವುದು. ತಮ್ಮನ್ನು ವೈಶ್ಯ ಮೂಲದವರು ಎಂದು ಹೇಳಿಕೊಳ್ಳುವ ಕೊರಮರು ಉತ್ತಮ ಕಣಿಯನ್ನೂ ಹೇಳುತ್ತಾರೆ. 'ಕೊರವಂಜಿ' ಈ ಜನಾಂಗದ ಮಾಟಗಾರ್ತಿ, ಕಣಿ ಹೇಳುವ ದೇವತೆ ಎಂದೇ ನಂಬುತ್ತಾರೆ.

## ಹಕ್ಕಿಪಿಕ್ಕಿಯವರು

ಇವರು ಜಿಲ್ಲೆಯಲ್ಲಿ ಅತಿ ವಿರಳವಾಗಿ ವಾಸಿಸುವ ಜನಾಂಗ. ಹಕ್ಕಿ ಪಕ್ಷಿಗಳನ್ನು ಹಿಡಿದು ತಿಂದು ಜೀವಿಸುವ ಕಾರಣದಿಂದಲೇ ಇವರನ್ನು ಹಕ್ಕಿಪಿಕ್ಕಿಯವರು ಎಂದು ಕರೆಯಲಾಗಿದೆ. ಇಂದು ಕಾಡಿಲ್ಲ, ಕಾಡಿನ ಭಾಗವಾಗಿದ್ದ ಹಕ್ಕಿಗಳೂ ಇಲ್ಲ. ಹಾಗಾಗಿ ಹಕ್ಕಿ ಹಿಡಿದು ಜೀವಿಸುವ ಈ ಜನಾಂಗದ ಜೀವನ ವಿಧಾನವೂ ಬದಲಾಗಿದೆ.

ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಹೊಳವನಹಳ್ಳಿ, ಗೊರವನಹಳ್ಳಿ, ಇರಕಸಂದ್ರ ಕಾಲೋನಿ, ಮಧುಗಿರಿ ತಾಲೂಕಿನ ಚಿನಕವಜ್ರ, ಐ.ಡಿ. ಹಳ್ಳಿ, ಶಿರಾ ತಾಲೂಕಿನ ಕಳ್ಳಂಬೆಳ್ಳ, ಲಕ್ಷ್ಮೀರಾಮನ ಹನುಮನ ಪಾಳ್ಯ, ಪೂಜಾರ ಮುದ್ದನಹಳ್ಳಿ ಗೇಟ್, ತುಮಕೂರು ಸಮೀಪದ ಬೆಳ್ಳಾವಿ ಇಲ್ಲೆಲ್ಲಾ ಹಕ್ಕಿಪಿಕ್ಕಿ ಜನಾಂಗದವರು ಅತಿ ವಿರಳವಾಗಿ ನೆಲೆಸಿದ್ದಾರೆ. ಇವರು ವಾಸಿಸುವ ಜಾಗಕ್ಕೆ 'ಹಕ್ಕಿಪಿಕ್ಕರ ಕಾಲೋನಿ ಎಂತಲೇ ಕರೆಯಲಾಗುವುದು. ಕೆಲವರು ಮೇಕೆ, ಕುರಿ, ದನ ಮೇಯಿಸುವ ಹೈನುಗಾರಿಕೆಯನ್ನು ಮಾಡುತ್ತಿದ್ದರೆ, ಕೆಲವರು ವ್ಯವಸಾಯ, ಗಾರೆ ಮುಂತಾದ ಕೆಲಸಕ್ಕೆ ಹೋಗುತ್ತಿದ್ದಾರೆ. ಸಂಪ್ರದಾಯಸ್ಥ ಹಕ್ಕಿಪಿಕ್ಕರು, ದನಗಳ ಕೋಡುಗಳನ್ನು ಸಣ್ಣಗೆ ಹೆರೆದು, ಅದರಿಂದ ಕನ್ನಡಕ ಮತ್ತಿತರೆ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡಿ ಜೀವನ ನಡೆಸುತ್ತಿದ್ದಾರೆ. ಕಾಡಿನ ಉತ್ಪತ್ತಿಗಳಾದ ಜೇನುತುಪ್ಪ, ಹವಳ, ಮಣಿಸರ, ಗಿಡಮೂಲಿಕೆ ವಸ್ತುಗಳು, ಮೊಲ–ಜಿಂಕೆಗಳ ಚರ್ಮ ಸುಲಿದು ಅದನ್ನು ಒಣಗಿಸಿ, ಅದಕ್ಕೆ ನೆಲ್ಲುಹುಲ್ಲು ತುಂಬಿ ಮೊಲ, ಜಿಂಕೆ ಮೊದಲಾದ ಗೊಂಬೆ ತಯಾರಿಸಿ ಮಾರಾಟ ಮಾಡುವುದು ಇವರ ಕಾಯಕವಾಗಿದೆ.

ಹಕ್ಕಿಪಿಕ್ಕರು ಸಾಮಾನ್ಯವಾಗಿ ಬುಡಬುಡಿಕೆಯವರಂತೆಯೇ ಕಂಡುಬರುತ್ತಾರೆ. ಇವರ ರೀತಿಯ ದೈಹಿಕ ಚಹರೆ, ಬದುಕಿನ ಕ್ರಮವಿದೆ. ಆದರೆ ಅವರಿಗೂ ಇವರಿಗೂ ಯಾವುದೇ ಸಂಬಂಧ ಇಲ್ಲವೆಂದೂ, ಅವರೊಂದಿಗೆ ವೈವಾಹಿಕ, ಸಾಮಾಜಿಕ ಸಂಬಂಧ ಬೆಳೆಸುವುದಿಲ್ಲ ಎಂದು ಹಕ್ಕಿಪಿಕ್ಕರು ಹೇಳುತ್ತಾರೆ. ಹಕ್ಕಿಪಿಕ್ಕರು ಮಾತೃಪ್ರಧಾನ ಕುಟುಂಬ ವ್ಯವಸ್ಥೆಗೆ ಗೌರವ ಕೊಡುತ್ತಾರೆ. ಮಾಂಸದ ಅಡಿಗೆ ಮೊದಲಾದ ವಿಶೇಷ ಹಾಗೂ ಹಂಚಿ ಉಣ್ಣುವ ಸಂದರ್ಭಗಳಲ್ಲಿ ಗಂಡಸರೇ ಅಡಿಗೆ ತಯಾರಿಸಬೇಕು. ಜೊತೆಗೆ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡಬೇಕು. ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ ಸಾಲಾಗಿ ಕುಳಿತುಕೊಳ್ಳುತ್ತಾರೆ. ಮನೆಯ ಹಿರೀಕ ಮಾಡಿದ ಮಾಂಸಾಹಾರದ ಅಡಿಗೆಯನ್ನು ಕ್ರಮವಾಗಿ ಬಡಿಸುತ್ತಾ ಹೋಗುತ್ತಾನೆ. ಒಂದು ತುಂಡು ಮಾಂಸ ಹಂಚುವುದರಲ್ಲೂ ವ್ಯತ್ಯಾಸ ಮಾಡದೆ ಹಂಚಬೇಕು. ಕೊಂಚ ತಾರತಮ್ಯವಾದರೂ ಉರಿದು ಬೀಳುವ, ಗದ್ದಲ ಎಬ್ಬಿಸುತ್ತಾರೆ.

ಹಕ್ಕಿಪಿಕ್ಕರು ಮಾಂಸಾಹಾರಿಗಳು. ಹಕ್ಕಿ, ಪಿಳ್ಳೆ, ಗೊರವಂಕ, ಬೆಳವ, ಕೋಗಿಲೆ, ಸಾಂಬಾರಕಾಗೆ, ಕಾಗೆ, ಗೀಜಗ, ಗುಬ್ಬಿ, ಗೋಜನಹಕ್ಕಿ ಮೊದಲಾದ ಹಕ್ಕಿಗಳನ್ನು ಚಾಟಿ ಬಿಲ್ಲಿನಿಂದ ದೂರದಿಂದಲೇ ಗುರಿಯಿಟ್ಟು ಹೊಡೆದು ತಿನ್ನುವುದು ಇವರ ವಿಧಾನ. ಸಾಮಾನ್ಯವಾಗಿ ಬಗಲಲ್ಲಿ ಒಂದು ಬ್ಯಾಗ್ ತಗಲ್ಹಾಕಿಕೊಂಡೇ ತಿರುಗಾಡುವ ಇವರು ಅದರಲ್ಲಿ ಒಂದು ಚಾಟಿಬಿಲ್ಲು, ಸಣ್ಣ ಸಣ್ಣ ಕಲ್ಲಿನ ಚೂರು ಇಟ್ಟುಕೊಂಡಿರುತ್ತಾರೆ. ಮರ, ಗಿಡದ ಮೇಲೆ ಕೂತಿರುವ ಹಕ್ಕಿಗೆ ತಕ್ಷಣ ಚಾಟಿಯಿಂದ ಹೊಡೆದು ಕೆಡವುವುದು ಇವರ ಚಾತುರ್ಯ. ಹಕ್ಕಿಪಿಕ್ಕರು ತೆಲುಗು ಮಾತೃಭಾಷೆಯನ್ನು ಆಡುತ್ತಾರೆ. ಹಳೆಯ ಕೋಟು, ತೆಳುವಾದ ದಟ್ಟಿ ಇವರ ಉಡುಗೆ. ಹೆಗಲ ಮೇಲೆ ಒಂದು ವಸ್ತ್ರ ಹಾಕಿಕೊಂಡಿರುತ್ತಾರೆ.

ಸಾಮಾನ್ಯವಾಗಿ ಅಲೆಮಾರಿಗಳಾಗಿ ಊರಿಂದ ಊರಿಗೆ ಅಲೆಯುತ್ತಲೇ ಇರುವ ಇವರಲ್ಲಿ ಹೆಣ್ಣು ಆರಿಸುವುದು ಕಷ್ಟ. ಹಾಗಾಗಿ ಬಾಲ್ಯವಿವಾಹ, ಅಪಹರಣ ವಿವಾಹದಂಥ ಪದ್ಧತಿ ಇದೆ. ಇಂಥ ಸಂದರ್ಭದಲ್ಲಿ ತಮ್ಮ ಬುಡಕಟ್ಟಿನ ನಾಯಕನು ಹೇಳಿದಂತೆ ಕೇಳಬೇಕು. ಕುಲಕ್ಕೆ ಊಟ ಕೊಡುವ ಹೆಂಡದ ಸಮಾರಾಧನೆ ನಡೆಸುವುದು ವಾಡಿಕೆ. ಮಧುಗಿರಿ ದಂಡಿನಮ್ಮ, ಕೊಲ್ಲಾಪುರದಮ್ಮ, ಕೋಟೆ ಆಂಜನೇಯನ ಭಕ್ತರಾದ ಇವರು ಸಾಮಾನ್ಯವಾಗಿ ದೇವಸ್ಥಾನಕ್ಕೆ ಹೋಗುವುದಕ್ಕಿಂತ ತಾವು ಇರುವ ಕಡೆಯಲ್ಲಿಯೇ ದೇವರಿಗೆ ಏದಿರೆತ್ತಿ ಪ್ರಾಣಿಬಲಿಯನ್ನು ಮರದ ಬುಡದಲ್ಲಿ ಮೂರು, ಐದು ಬೆಣಚುಕಲ್ಲಿನಿಂದ ಪ್ರತಿಷ್ಠಾಪಿಸುವ ದೇವರ ಗದ್ದಿಗೆಗೆ ಬಲಿ ಅರ್ಪಿಸಿ, ಅಲ್ಲೇ ಅಡಿಗೆ ಮಾಡಿ ಊಟ ಮಾಡುವುದು ಇವರ ಆಚರಣೆ. ಶವ ಹೂಳುವ ಪದ್ಧತಿಯಿದೆ. ಅಲಂಕಾರಿಕ ವಸ್ತುಗಳ ಮಾರಾಟ, ಕೂಲಿಯಿಂದಲೂ ಜೀವನ ನಡೆಸುತ್ತಿದ್ದಾರೆ. ಶಾಲೆಗೆ ಹೋಗುವವರ ಸಂಖ್ಯೆ ತೀರಾ ಕಡಿಮೆ. ಕೊರಟಗೆರೆ ತಾಲೂಕಿನ ಹೊಳವನಹಳ್ಳಿಯ ಹಕ್ಕಿಪಿಕ್ಕರ ಕಾಲೋನಿ ಮಕ್ಕಳು ಶಾಲೆಗೆ ದಾಖಲಾಗಿದ್ದಾರೆ.

**ಈಡಿಗರು**

ಈಡಿಗ, ಈಡಿಗ ಗೌಡ, ಎಂದು ಜಿಲ್ಲೆಯಾದ್ಯಂತ ಕರೆಯಲ್ಪಡುವ ಈ ಜನಾಂಗ ದಕ್ಷಿಣ ಭಾರತದ ವ್ಯಾಪ್ತಿಯಲ್ಲಿ ಹಣಕಾಸು ನಿರ್ವಹಣೆ, ಉದ್ಯಮಿಗಳಲ್ಲಿ ಪ್ರಬಲರು. ಒಂದು ನಿರ್ದಿಷ್ಟವಾದ ಬದುಕು, ಉದ್ಯೋಗ, ವಾಸ ಇವುಗಳಿಂದ ಗುರುತಿಸಿಕೊಂಡಿರುವ ಈಡಿಗರನ್ನು ಭಾರತ ಸರ್ಕಾರ ಬುಡಕಟ್ಟು ವರ್ಗಗಳೆಂದು ಗುರುತಿಸಿದೆ. ಹೆಂಡ ಇಳಿಸುವ, ಸಾರಾಯಿ ಕಾಯಿಸುವ ಈಡಿಗರೂ ಬುಡಕಟ್ಟು ವರ್ಗಕ್ಕೆ ಸೇರಿದ್ದಾರೆ.

ಈಚಲುಮರ ಹಾಗೂ ತೆಂಗಿನ ಮರಗಳಿಂದ ಹೆಂಡವನ್ನು ಇಳಿಸುವುದು ಇವರ ಪ್ರಧಾನ ವೃತ್ತಿ. ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿಯೂ ವ್ಯಾಪಕವಾಗಿ ನೆಲೆಸಿರುವ ಈಡಿಗರು ಸಹಜವಾಗಿಯೇ ಕಪ್ಪು ವರ್ಣದವರು. ನಾಲ್ಕರಿಂದ ಐದೂವರೆ ಅಡಿ ಎತ್ತರ ದಷ್ಟಪುಷ್ಟವಾದ ಆಕೃತಿ, ದಪ್ಪ ಮುಖ, ಉದ್ದ ಮೂಗು, ಕಪ್ಪಾದ ಕೂದಲು ಹೊಂದಿದ್ದು ಹೊಳಪು ಕಣ್ಣುಗಳಿಂದ ಕೂಡಿದವರು. ಇವರು ಜಿಲ್ಲೆಯಾದ್ಯಂತ ಹೆಂಡ ಕಟ್ಟುವುದು ಹಾಗೂ ಸಾರಾಯಿ ಮಾರಾಟ ಮಾಡುವುದು ಇವರ ಆಜನ್ಮ ಕಾಯಕ ಎಂಬಂತೆ ಬಿಂಬಿಸಿಕೊಳ್ಳುತ್ತಾರೆ. ಹಾಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇವರನ್ನು ಹೆಂಡದವರು, ಸರಾಪಿನವರು ಎಂತಲೂ ಕರೆಯುವುದು ಅಥವಾ ಮನೆತನದ ಹೆಸರನ್ನು ಹೇಳುವಾಗ ಸರಾಪಿನವರ ಮನೆ, ಹೆಂಡದವರ ಮನೆ ಎಂತಲೂ ಕರೆಯುವುದು ವಾಡಿಕೆಯಾಗಿದೆ.

ಈಡಿಗರು ಈಚಲುಮರ, ತೆಂಗಿನಮರ, ಬಗಣಿ ಮರಗಳಿಗೆ ಈಡು ಹೊಡೆದು ಅಥವಾ ಗುನ್ನ ಹಿಡಿದು ಅದರಿಂದ ಒಸರುವ ಅಥವಾ ಬಸಿಯುವ ಹಾಲನ್ನು ಒಂದು ಗಡಿಗೆಗೆ ಶೇಖರಿಸುತ್ತಾರೆ. ಇದೊಂದು ಚಮತ್ಕಾರಿಕ ಕೆಲಸವಾಗಿದ್ದು ಇತರೆ ಯಾವುದೇ ವರ್ಗದವರು ಈ ಕೆಲಸವನ್ನೂ ಮಾಡುವುದಿಲ್ಲ. ಪಾವಗಡ ಭಾಗದಲ್ಲಿ ಈ ಕೆಲಸಕ್ಕೆ 'ಈಚಲು ಮರ ಗೀಚುವುದು' ಎಂದು ಕರೆಯುತ್ತಾರೆ. ಮನೆಯಲ್ಲಿ ಹುಟ್ಟಿದ ಪ್ರತಿ ಗಂಡು ಮಗನಿಗೆ, ಈಚಲು ಮರ ಗೀಚುವ ಅಂದರೆ ಹದ ನೋಡಿ ಹೆಂಡ ಇಳಿಸುವ ತರಬೇತಿ ನೀಡುತ್ತಾರೆ. ಹೀಗಾಗಿ ಇದೊಂದು ಕುಲಮೂಲದ ಕಸುಬಾಗಿ ಪಾರಂಪರಿಕ ಕಲೆಯಾಗಿ ಬೆಳೆದು ಬಂದಿದೆ. ಈಡಿಗರು ತೆಲುಗು ಮಾತೃಭಾಷೆಯನ್ನು ಆಡುತ್ತಾರೆ.

ಜಿಲ್ಲಾ ಕೇಂದ್ರದಲ್ಲಿ ಆರ್ಯ ಈಡಿಗರ ಸಂಘದ ವಿದ್ಯಾರ್ಥಿನಿಲಯವಿದ್ದು, ಆ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯ ಒದಗಿಸುತ್ತಿದ್ದಾರೆ. ಈಡಿಗರು ಇಂದು ಸಂಘಟನಾತ್ಮಕವಾಗಿ ತೊಡಗಿದ್ದು ಸೋಲೂರು (ಬೆಂಗಳೂರು ಜಿಲ್ಲೆ ನೆಲಮಂಗಲ) ಆರ್ಯ ಈಡಿಗರ ಮಠವಿದ್ದು, ಆರ್ಯಶ್ರೀ ರೇಣುಕಾನಂದ ಇವರು ಇದರ ಗುರುಗಳಾಗಿದ್ದಾರೆ. ಆದರೂ ಈಡಿಗರ ಮನೆಯ ಧಾರ್ಮಿಕ ಕಾರ್ಯಗಳಲ್ಲಿ ಕೇರಳದ ಶ್ರೀ ಬ್ರಹ್ಮ ನಾರಾಯಣ ಗುರುಗಳನ್ನು ಪೂಜಿಸುತ್ತಾರೆ. ಇವರನ್ನು ನಮ್ಮ ಧಾರ್ಮಿಕ ಗುರು, ಆ ಪರಂಪರೆಯಲ್ಲಿ ನಾವು ಬಂದವರು ಎಂದು ನಂಬುತ್ತಾರೆ. ಜಿಲ್ಲೆಯ ಗುಬ್ಬಿ ತಾಲೂಕಿನ ಕಾಸೇಗೌಡನಪಾಳ್ಯ, ಚೇಳೂರು ಸಮೀಪದ ಅಂತಃಪುರ, ಸಿ.ನಂದಿಹಳ್ಳಿ, ಶಿರಾ ತಾಲೂಕಿನ ದಾಸರಹಳ್ಳಿ, ಈಡಿಗರ ದಾಸರಹಳ್ಳಿ, ಹಾಲೇನಹಳ್ಳಿ, ಹಾರೋಗೆರೆ, ಕೊರಟಗೆರೆ, ಹೊಳವನಹಳ್ಳಿ, ಪಾವಗಡ, ಅರಸೀಕೆರೆ, ನಿಡಗಲ್ಲು, ಕೋಟಗುಡ್ಡ, ವೈ.ಎನ್. ಹೊಸಕೋಟೆ, ಚಿ.ನಾ.ಹಳ್ಳಿ, ಕಂದಿಕೆರೆ, ಹಂದನಕೆರೆ, ಮತಿಘಟ್ಟ, ಬಿದರೆಗುಡು, ಹೊನ್ನೇನಹಳ್ಳಿ, ಗಂಗನಘಟ್ಟ, ನಾಗರನವಿಲೆ, ತುರುವೇಕೆರೆ, ಮಾಯಸಂದ್ರ ಇಲ್ಲೆಲ್ಲಾ ವ್ಯಾಪಕವಾಗಿ ನೆಲೆಸಿದ್ದಾರೆ.

ಈಡಿಗರಲ್ಲಿ ಎರಡು ಬೆಡಗುಗಳಿವೆ. ೧) ಶ್ಯಾಸ್ಮೇರು ೨) ಬಡ್ಡೀರು – ಈ ಎರಡು ಪಂಗಡಗಳಲ್ಲಿ ಮಾತ್ರ ನೆಂಟಸ್ಥಿಕೆ, ಹೆಣ್ಣು ಕೊಡುವುದು, ತರುವುದು ಕಂಡುಬರುತ್ತದೆ. ಈ ಎರಡು ಕುಲಗಳು ತುಮಕೂರು, ಬೆಂಗಳೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ಹಾಸನ ಮಾತ್ರವಲ್ಲದೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗಳಲಲ್ಲಿದ್ದು, ಕೊಡುವ–ತರುವ ಸಂಪ್ರದಾಯ ಈ ಎರಡು ಕುಲಗಳ ನಡುವೆ ಮಾತ್ರ ನಡೆಯುತ್ತದೆ. ಇವರಲ್ಲಿ ಮದುವೆ ಸಂಪ್ರದಾಯ ಹಿಂದೂ ಸಂಪ್ರದಾಯದ ಪ್ರಕಾರವೇ ನಡೆಯುತ್ತದೆ. ತಾಳಿ ಕಟ್ಟುವಾಗ ಹುಟ್ಟು ತಾಳಿ, ಗಂಡನ ತಾಳಿ ಸಂಪ್ರದಾಯವಿದೆ. ಹೆಣ್ಣಿಗೆ ತೆರ ಕೊಡುವ ಸಂಪ್ರದಾಯವಿದೆ. ಹೆಣ್ಣಿಗೆ ಇಷ್ಟೇ ಪ್ರಮಾಣದ ಚಿನ್ನ ಕೊಡಬೇಕೆಂಬ ನಿರ್ಣಯವೂ ಕುಲಸಂಬಂಧಿ ಕಟ್ಟೆಯಲ್ಲಿ ತೀರ್ಮಾನವಾಗುತ್ತದೆ. ಸಾಮಾನ್ಯವಾಗಿ ಗಂಡಿನ ಮನೆಯ ಮುಂದೆ ಅಥವಾ ಗಂಡಿನ ವ್ಯವಸ್ಥೆಯಲ್ಲಿ ಮದುವೆ ಕಾರ್ಯ ಜರುಗುತ್ತಿದ್ದು ಈಗ ಕಾಲಗತಿಗೆ ಅನುಗುಣವಾಗಿ ಬದಲಾಗಿದೆ. ಇವರಲ್ಲಿ ಪುರೋಹಿತ ಮದುವೆಯ ಕಾರ್ಯ ನಡೆಸಿಕೊಡುತ್ತಾನೆ. ಆದರೂ ಕುಲದ ಮುಖಂಡನ ನಿರ್ದೇಶನದಂತೆ ಉಳಿದ ಕುಲಸಂಬಂಧಿ ಆಚರಣೆಗಳೆಲ್ಲವೂ ನಡೆಯುತ್ತವೆ. ಕರಿಯ ಕಂಬಳಿ ಗದ್ದಿಗೆ ಹಾಕಿ, ಅದರ ಮೇಲೆ ಕಳಸ ಹೂಡಿ ಮದುವೆಯ ಕಾರ್ಯ ಆರಂಭ. ಹಸಿರು ವೀಳ್ಯ ತಿದ್ದುವ ಕ್ರಮದಿಂದ ಮದುವೆಯ ಚಟುವಟಿಕೆ ಆರಂಭವಾಗುತ್ತದೆ. ಮದುವೆಯು ದೇವತಾಕಾರ್ಯ, ಕುಲದೂಟ ಹಾಗೂ ಚಪ್ಪರಶಾಸ್ತ್ರ, ಧಾರೆ ಮುಹೂರ್ತ ಎಂಬ ನಾಲ್ಕು ಪ್ರಮುಖ ಕಾರ್ಯಗಳಲ್ಲಿ ಜರುಗುತ್ತದೆ. ಮದುವೆ ನಿರ್ಣಯವಾದ ದಿನದಿಂದ ಮುಂದಿನ ಒಂಬತ್ತು ದಿನಗಳ ಕಾಲದವರೆಗೆ ಹೆಣ್ಣು ಮತ್ತು ಗಂಡಿನ ಮನೆಗಳಲ್ಲಿ ಮಾಂಸಾಹಾರ ನಿಷೇಧಿಸಲಾಗುವುದು. ನಂತರ ಬೀಗರ ಊಟದ ಸಂದರ್ಭದಲ್ಲಿ 'ಸಂಚಿ ತುಂಬುವುದು ಅಥವಾ ಸಂಚಿ ಊಟಕ್ಕೆ ಮಾತ್ರ ಮಾಂಸದ ಅಡಿಗೆ ಏರ್ಪಡಿಸಲಾಗುವುದು. ಈಡಿಗರು ಹೆಂಡವನ್ನು ದೇವರು, ತಾಯಿ ಎಂದೆಲ್ಲಾ ಭಾವಿಸುತ್ತಾರೆ. ಇವರು ಹೆಂಡವನ್ನು ಕಟ್ಟಿದರೂ ಕುಡಿಯುವುದಿಲ್ಲ. ಹಾಗೆ ಕುಡಿಯಬಾರದು. ಅದೊಂದು ತಾಯಿಯನ್ನೇ ಭೋಗಿಸಿದ ಪಾಪಕೃತ್ಯ ಎಂದೇ ಭಾವಿಸುತ್ತಾರೆ. ಹೊಸ ಗಡಿಗೆ ಅಥವಾ ಚಿಕ್ಕ ಮಗಿಯಲ್ಲಿ ಹೆಂಡವನ್ನು ತುಂಬಿ, ಅದಕ್ಕೆ ಹೊಸಬಟ್ಟೆ, ಆಭರಣ ತೊಡಿಸಿ, ಪೂಜಿಸುವುದು ಇವರಲ್ಲಿ ಸಂಪ್ರದಾಯವಾಗಿದೆ. ಜೊತೆಗೆ ತಿರುಪತಿ ತಿಮ್ಮಪ್ಪ, ವೆಂಕಟೇಶನ ಆರಾಧನೆ ಇವರಲ್ಲಿ ಅಧಿಕವಾಗಿದೆ. ಸ್ಥಳೀಯವಾಗಿ ರಂಗನಾಥ, ನರಸಿಂಹ, ರೊದ್ದ ನರಸಿಂಹ, ಕದಿರೆ ನರಸಿಂಹ, ಆಂಜಿನಯ್ಯ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಇವರ ಪ್ರಮುಖ ಶಕ್ತಿದೇವತೆ ಎಲ್ಲಮ್ಮ ದೇವತೆ. ಈ ದೇವರನ್ನು ರೇಣುಕಾ ಎಲ್ಲಮ್ಮ, ಸೌದತ್ತಿ ಎಲ್ಲಮ್ಮ, ಚಂದ್ರಗುತ್ತಿ ಎಲ್ಲಮ್ಮ, ಏಕನಾಥೇಶ್ವರಿ ಎಲ್ಲಮ್ಮ ಎಂಬ ಹೆಸರುಗಳಲ್ಲಿ ಆರಾಧಿಸುತ್ತಾರೆ. ಈಡಿಗರು ಕಾಡುಮೇಡುಗಳಲ್ಲಿ ವಾಸಿಸುತ್ತಾ, ಹೆಂಡ ಇಳಿಸುವ ಈಚಲು, ಬಗಿನಿ ಮತ್ತು ತೆಂಗಿನ ಮರಗಳಿರುವತ್ತ ವಲಸೆ ಹೋಗುವುದು ಉಂಟು. ಈಚಲು ಮರದಿಂದ ಇಳಿಸಿದ ತಾಜಾ ಹೆಂಡ ಉತ್ತಮ ಔಷಧಿ ಗುಣ ಹೊಂದಿದ್ದು ಕಾಮಾಲೆ, ರಕ್ತಹೀನತೆ ಮೊದಲಾದ ಕಾಯಿಲೆಗೆ ದಿವ್ಯ ಔಷಧವಾಗಿ ಬಳಸುತ್ತಾರೆ. ಇದನ್ನು ಸೀಸೆಗಳಲ್ಲಿ ತುಂಬಿ ಸೂರ್ಯ ಮೂಡುವುದಕ್ಕೆ ಮುಂಚೆ ಕುಡಿಯುವುದು ವಾಡಿಕೆ. ಆ ಬಗೆಯ ತಾಜಾ ಹೆಂಡವನ್ನು ಪ್ರಸಾದ ಎಂದೇ ಈಡಿಗರು ಕರೆಯುತ್ತಾರೆ. ಹಿಂದೆ ಹೆಂಡವನ್ನು ಕತ್ತೆಗಳ ಮೇಲೆ ಹೇರು ಹಾಕಿಕೊಂಡು ಮಾರಾಟ ಮಾಡುತ್ತಿದ್ದರು. ಈಡಿಗರು ಸಾಮಾನ್ಯವಾಗಿ ವ್ಯಾಪಾರಸ್ಥರು. ವ್ಯವಸಾಯವನ್ನು ಮಾಡುತ್ತಾರೆ. ಬೃಹತ್ ಉದ್ದಿಮೆಯನ್ನು ನಡೆಸುತ್ತಾರೆ. ಹಣಕಾಸು ವಿನಿಮಯ, ಬ್ಯಾಂಕಿಂಗ್, ವಿವಿಧ ಮಾರ್ಕೆಟಿಂಗ್‌ನಲ್ಲೂ ಇಂದು ಮುಂದಾಗಿದ್ದಾರೆ. ಈಡಿಗರ ಶವಸಂಸ್ಕಾರ ಪ್ರಾದೇಶಿಕ ಲಕ್ಷಣಕ್ಕೆ ಹೊಂದಿಕೊಂಡಿದೆ. ಹೂಳುವ ಪದ್ಧತಿ ಜಾರಿಯಲ್ಲಿದೆ.

ಸತ್ತ ಸೂತಕವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಜೊತೆಗೆ ತಂದೆ ಸತ್ತರೆ ಹಿರಿಯ ಮಗ, ತಾಯಿಗೆ ಕಿರಿಯ ಮಗ, ಸಂಸ್ಕಾರ ಕಾರ್ಯ ನಡೆಸುವುದು ಇವರ ಸಂಪ್ರದಾಯವಾಗಿದೆ. ದಾಸಯ್ಯನಿಗೆ ಎಡೆ ಹಾಕುವ ಸಂಪ್ರದಾಯ, ಗುಡ್ಡೆ ದಿನದ ಕಾರ್ಯದಲ್ಲಿ ಇರುತ್ತದೆ. ಜಿಲ್ಲೆಯಲ್ಲಿ ಉತ್ತಮ ವಿದ್ಯಾವಂತರು, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹ.ಚ. ರಘುನಾಥ್ ಅವರಂತಹ ಹಿರಿಯ ಲೇಖಕರು, ಪತ್ರಿಕೋದ್ಯಮಿಗಳು, ಈಡಿಗರ ದಾಸರಹಳ್ಳಿ ರಮಾನಂದನಂತಹ ಪ್ರಸಿದ್ಧ ಯಕ್ಷಗಾನ ಭಾಗವತರೂ ಈ ಜಿಲ್ಲೆಯ ಸಾಂಸ್ಕೃತಿಕ ಲೋಕದ ಹಿರಿಮೆಗೆ ಸಾಕ್ಷಿಯಾಗಿದ್ದಾರೆ.

## ಆಕರ ಗ್ರಂಥಗಳು


೧. The Mysore Tribes and Castes. H.V. Nanjundaiah & A.K. Ananthakrishna, Mysore

೨. ಗಿರಿಜನ ಸಂಸ್ಕೃತಿ – ಪ್ರೊ॥ ಕಾಳೇಗೌಡ ನಾಗವಾರ, ಎನ್.ಹುಚ್ಚಪ್ಪ ಮಾಸ್ತರ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦.

೩. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು. ಎ.ಎಸ್. ಪ್ರಭಾಕರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ. ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೧, ಗಡಿನಾಡ ಜಾನಪದ ಸಂಪರ್ಕ ಕೇಂದ್ರ,


## ಶಿರಾ


೫. ವೀರ ಜುಂಜಪ್ಪ: ಸಮಗ್ರ ಕಥಾವಳಿ. ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ, ಶಿರಾ.

೬. ಹೊಳೆದಂಡೆ ಕರಿಕೆ: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ, ಶಿರಾ

೭. ಪ್ರತಿ ಸಂಸ್ಕೃತಿ: ೧೯೯೨: ರಹಮತ್ ತರೀಕೆರೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೮. ಮಾಗೋಡು ಕಂಬದರಂಗನ ಕಾವ್ಯ: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೧, ಗಡಿನಾಡ ಜಾನಪದ ಕೇಂದ್ರ, ಶಿರಾ

೯. ತುಮಕೂರು ಜಿಲ್ಲಾ ಜನಪದ ಕಲಾವಿದರು: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೮, ಜಾನಪದ ಅಕಾಡೆಮಿ, ಬೆಂಗಳೂರು

೧೦ Castes and Tribes of Southern India, Vol.1, 1975, Edgar Thurston

೧೧. ತುಮಕೂರು ಜಿಲ್ಲಾ ಜಾತ್ರೆಗಳು, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ

೧೨. ಜೀಶಂಪ ಅವರ ಬರಹಗಳು: ಪ್ರೊ॥ ಕಾಳೇಗೌಡ ನಾಗವಾರ ಮತ್ತು ಡಾ॥ ಅಂಬಳಿಕೆ ಹಿರಿಯಣ್ಣ (ಸಂ), ೨೦೦೦, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೧೩. ತುಮಕೂರು ಜಿಲ್ಲೆಯ ಜಾನಪದೀಯ ನೆಲೆಗಳು: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ೨೦೧೧, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

೧೪. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ॥ ಎಚ್.ತಿಪ್ಪೇರುದ್ರಸ್ವಾಮಿ, ಮೈಸೂರು, ೧೯೬೮

೧೫. ಕಿನ್ನರಿಯ ಮೇಲೆ ಕಿರುಗೆಜ್ಜೆ, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೧, ಗಡಿನಾಡ ಜಾನಪದ ಕೇಂದ್ರ, ಶಿರಾ

೧೬. ಸಂಸ್ಕೃತಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೨

೧೭. ಚಿತ್ರದೇವರ ಕಾವ್ಯ: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ, ಶಿರಾ, ೧೯೯೮

೧೮. ಉತ್ತರ ಕರ್ನಾಟಕದ ಜನಪದ ಕಥೆಗಳು: ಸಿಂಪಿ ಲಿಂಗಣ್ಣ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,

೨೦೧೧

೧೯. ಬಂಡಿ ಬಂದಾವು ಬಾಳೆ ವನದಾಗೆ: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ, ಶಿರಾ, ೨೦೧೦

೨೦. ಸದನದಲ್ಲಿ ಸಿದ್ದಲಿಂಗಯ್ಯ: ಸಂ.ದೊಡ್ಡಹುಲ್ಲೂರು ರುಕ್ಕೋಜಿ, ಬೆಂಗಳೂರು

೨೧. ಹಾಗಲವಾಡಿ ನಾಯಕರು: ಡಾ॥ ಡಿ.ಎನ್.ಯೋಗೀಶ್ವರಪ್ಪ, ಕನ್ನಡ ವಿ.ವಿ., ಹಂಪಿ, ೧೯೯೯

೨೨. ಸಂಸ್ಕೃತಿ–ಉಪಸಂಸ್ಕೃತಿ, ಪ್ರೊ॥ ಬರಗೂರು ರಾಮಚಂದ್ರಪ್ಪ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೩. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು

೨೪. ಜನಪದ ವಿಶ್ವಕೋಶ, ಕ.ಸಾ.ಪ. ಬೆಂಗಳೂರು, ೧೯೮೬

೨೫. ಗೊರವರ ಸಂಸ್ಕೃತಿ, ಚಕ್ಕೆರೆ ಶಿವಶಂಕರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೬. ಹೊನ್ನಾರು: ಕ.ತ. ಚಿಕ್ಕಣ್ಣ, ಹೆಚ್. ದಂಡಪ್ಪ, ತಳುಕು ಪ್ರಕಾಶನ, ಮೈಸೂರು, ೨೦೦೪

೨೭. ಗ್ರಾಮ ದೇವತೆಗಳು, ಡಾ॥ ಸಿದ್ದಲಿಂಗಯ್ಯ, ಮೂಲ ಭಾರತಿ ಪ್ರಕಾಶನ, ಬೆಂ. ೧೯೭೭

೨೮. ವಜ್ರಮುಖಿ: ಡಾ॥ ಬಂಜಗೆರೆ ಜಯಪ್ರಕಾಶ್, ಡಾ॥ ಹಂಪನಹಳ್ಳಿ ತಿಮ್ಮೇಗೌಡ, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು, ೨೦೦೭

೨೯. ಜಾನಪದ ಪ್ರಶಸ್ತಿ ಪುರಸ್ಕೃತ ಕಲಾವಿದರು: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ, ಶಿರಾ ೨೦೧೦.

***